ಮತ್ತು

ಬಿ. ಎಂ. ಶರ್ಮಾ.

ವಿವೇಕಾಭ್ಯುದಯ ಕಾರ್ಯಾಲಯ,
ವೀರಭವನ, ಮಂಗಳೂರು 3.

ಬೆಲೆ: ಒಂದೂಕಾಲು ರೂಪಾಯಿ.

ದರ್ಶನದ ಕಥೆಗಳು

ಬಿ. ಶಂಕರ ಭಟ್ಟ

ಮತ್ತು

ಬಿ. ಎಂ. ಶರ್ಮಾ.

ವಿವೇಕಾಭ್ಯುದಯ ಕಾರ್ಯಾಲಯ,
ವೀರಭವನ, ಮಂಗಳೂರು.

ಸ[illegible] ವರ್ಕ್ಸ್ ಲಿಮಿಟೆಡ್, ಮಂಗಳೂರು.

ಬೆಲೆ: ಒಂದೂಕಾಲು ರೂಪಾಯಿ.

ಅನುಕ್ರಮಣಿಕೆ

ನಮ್ಮ ಮಾತು

ಈ ದರ್ಶನದ ಕಥೆಗಳು ನಯಸೇನನ ಧರ್ಮಾಮೃತದಲ್ಲಿ ಹೇಳಿದ ದರ್ಶನ ಕತೆಯನ್ನೂ ಮತ್ತು ದರ್ಶನದ ಎಂಟು ಅಂಗಗಳಾದ ನಿಶ್ಶಂಕೆ (ಜೈನ ದರ್ಶನದಲ್ಲಿ ಸಂದೇಹಪಡದಿರುವುದು), ನಿಷ್ಕಾಂಕ್ಷೆ (ಲೋಕದ ಸುಖ ಭೋಗಗಳಿಗೆ ಆಸೆ ಪಡದಿರುವುದು), ನಿರ್ವಿಚಿಕಿತ್ಸೆ (ಶರೀರದ ಪ್ರೀತಿ ದ್ವೇಷ ಗಳಿಲ್ಲದಿರುವುದು), ಅಮೂಢ ದೃಷ್ಟಿತ್ವ (ಜೈನಮಾರ್ಗ ಬಿಟ್ಟು ಇತರ ಮಾರ್ಗಗಳಿಗೆ ತೊಲಗದಿರುವುದು), ಉಪಗೂಹನ (ಜೈನಮತದಲ್ಲಿ ಪೂರ್ಣ ನಂಬಿಕೆ ಹುಟ್ಟಿಸಿ ಸಂಶಯ ನಿವಾರಣೆ ಮಾಡುವುದು), ಸ್ಥಿತಿಕರಣ (ಆತ್ಮನು ಸರಿಯಾದ ವಿಶ್ವಾಸವನ್ನು ಬಿಡದ ಹಾಗೆ ನೋಡಿಕೊಳ್ಳುವುದು), ವಾತ್ಸಲ್ಯ (ಜೈನ ಶ್ರಾವಕರಲ್ಲಿ ಪ್ರೀತಿ ಗೌರವಗಳನ್ನು ತೋರಿಸುವುದು) ಧರ್ಮಪ್ರಭಾ ವನೆ (ಜೈನ ಸಿದ್ಧಾಂತಗಳ ಮಹಿಮೆಯನ್ನು ಸಾರುವುದು), ಈ ವಿಷಯಗಳ ಮೇಲಿನ ಎಂಟು ಕತೆಗಳನ್ನೂ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮ ಚರ್ಯ, ಅಪರಿಗ್ರಹವೆಂಬ ಪಂಚಾಣುವ್ರತಗಳ ಮೇಲಿನ ಐದು ಕತೆ ಗಳನ್ನೂ ಅನುವಾದಿಸಿದ್ದೇವೆ.

ಹನ್ನೆರಡನೆಯ ಶತಮಾನದ ಕವಿಯಾದ ನಯಸೇನನು ಧರ್ಮಾ ಮೃತವೆಂಬ ಚಂಪೂಕಾವ್ಯವನ್ನು ಅತಿ ಸುಲಭವಾದ ಕಂದವೃತ್ತಗಳಿಂದ ರಚಿಸಿ ಸಾಮಾನ್ಯ ಜನರಿಗೂ ಧರ್ಮದ ತಿರುಳಿನ ಅರಿವಾಗುವಂತೆ ಮಾಡಿ ದ್ದಾನೆ. ಅಲ್ಲದೆ ಅವನು ಅಲ್ಲಲ್ಲಿ ವಿಪುಲವಾಗಿ ಬಳಸಿದ ಗಾದೆಗಳನ್ನು ಉಪಮಾನಗಳನ್ನು ನೋಡಿದರೆ ಅವನಿಗೆ ಅಗಾಧವಾದ ಲೋಕಜ್ಞಾನ ವಿತ್ತೆಂದೂ, ಸಾಮಾನ್ಯ ಜನರೊಡನೆ ಬೆರೆತುಕೊಂಡು ಅವರ ಕಷ್ಟಸುಖ ಗಳನ್ನರಿತವನೆಂದೂ ತಿಳಿದುಬರುತ್ತದೆ. ನಯಸೇನನಿಗೆ ಕನ್ನಡದ ಮೇಲೆ ಎಷ್ಟು ಅಭಿಮಾನವಿತ್ತೆಂಬುದಕ್ಕೆ ಅವನ ಇವೆರಡು ಕಂದಗಳನ್ನೋದಿ ದರೆ ಸಾಕು. "ಪೊಸಕನ್ನಡದಿಂ ವ್ಯಾವರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮುಂ ಚಿಂ । ತಿಸಿ ಕೂಡಲಾರದಕ್ಕಟ । ಮಿಸುಕದಸಕ್ಕದಮನಿಕ್ಕು ವಮನುಂ ಕವಿಯೇ ॥ ಸಕ್ಕದಮಂ ಪೇಳ್ವೊಡೆ ನೆರೆಸಕ್ಕದಮಂ ಪೇಳ್

ಸುದ್ದಗನ್ನಡದೊಳ್ ತಂ । ದಿಕ್ಕುವುದೆ ಸಕ್ಕದಮಂ । ತಕ್ಕುದೆ ಬೆರಸಲ್ಕೆ ಘೃತಮುಮಂತೈಲಮುಮಂ ॥

ಧರ್ಮಾಮೃತ ಕಾವ್ಯ ಕೇವಲ ಕತೆಗಳಿಂದ ಧರ್ಮಬೋಧನೆಮಾಡುವ ಕಾವ್ಯ. ಅದು ರಾಜಾಧಿರಾಜರ ಮನರಂಜನೆಗಾಗಿ ಆಸ್ಥಾನದಲ್ಲಿ ಹುಟ್ಟಿದ ಕಾವ್ಯವಲ್ಲ; ಅದು ಸಾಮಾನ್ಯ ಜನರು ಧರ್ಮನೀತಿಗಳನ್ನರಿತು ಸನ್ಮಾರ್ಗದಲ್ಲಿ ನಡೆಯಲೆಂದು ರಚಿತವಾದ ಕಾವ್ಯ.

ಈ ದರ್ಶನ ಕತೆಗಳು ಮೊದಲು 'ವಿವೇಕಾಭ್ಯುದಯ'ದಲ್ಲಿ ಪ್ರಕಟವಾದುವು. ಈಗ ಅವನ್ನೇ 'ವಿವೇಕಾಭ್ಯುದಯ'ದ ಸಂಪಾದಕರು ಶ್ರೀ. ಡಿ. ಪುಟ್ಟುಸ್ವಾಮಿ, ಬಿ. ಎ., ಬಿ. ಎಲ್. ಇವರು ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ಸರಸ್ವತೀ ಪ್ರಿಂಟಿಂಗ್ ಪ್ರೆಸ್ಸಿನ ಶ್ರೀ. ಗಣೇಶ ಶೆಣೈಯವರು ಮುದ್ದಾಗಿ ಮುದ್ರಿಸಿ ಕೊಟ್ಟಿದ್ದಾರೆ. ಕಡೆಯದಾಗಿ ಕನ್ನಡನಾಡಿನ ಸಾಹಿತ್ಯ ಕಲೆಗಳ ಅಭಿವೃದ್ಧಿಗಾಗಿ ಹಲವು ಬಗೆಯ ಪ್ರೋತ್ಸಾಹಗಳನ್ನೀಯುತ್ತಿರುವ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಅವರ ಷಷ್ಠ್ಯಬ್ದಪೂರ್ತಿಯ ಮತ್ತು ಅವರು ಈ ವರ್ಷ ನೆರವೇರಿಸಿ ಮಹಾನಡಾವಳಿಯ ಸವಿನೆನಪಿಗಾಗಿ ಈ ಪುಸ್ತಕವನ್ನು ಶ್ರೀ ಹೆಗ್ಗಡೆಯವರ ಪಾದಗಳಲ್ಲಿ ಸಮರ್ಪಿಸಿದ್ದೇವೆ.

22—2—1951
ಮಹಾನಡಾವಳಿ
ಧರ್ಮಸ್ಥಳ

ಬಿ. ಶಂಕರ ಭಟ್ಟ,
ಬಿ. ಎಂ. ಶರ್ಮಾ.

ದಯಾಮಿತ್ರ

(ದರ್ಶನ)

ವಿಪುಳಾಚಲದಲ್ಲಿ ವರ್ಧಮಾನ ಜಿನೇಂದ್ರರ ಸಮವಸರಣ ಬಂದು ನೆರೆದಿತ್ತು. ಶ್ರೇಣಿಕ ಮಹಾರಾಜ ಚೇಳಿನೀ ದೇವಿಯೊಡಗೂಡಿ ಸ್ವಾಮಿಯ ಅಡಿದಾವರೆಗಳೆಡೆಗೆ ನಡೆತಂದನು. ಗಂಧಕುಟಿಗೆ ಮೂರು ಸುತ್ತು ಬಂದು ಪರಮಜಿನೇಶ್ವರರ ಪಾದಪದ್ಮಗಳನ್ನಾರಾಧಿಸಿ ಸ್ತುತಿಸಹಸ್ರಗಳಿಂದ ಸ್ತುತಿಸಿದನು. ಮತ್ತೆ ಪೂಜ್ಯರಾದ ಗೌತಮಗಣಧರರಿಗೆ ಕೈಜೋಡಿಸಿ "ದೇವಾ! ತಿರ್ಯಕ್, ನಾರಕ, ಮಾನವ, ಅಮರ ಲೋಕಗಳಲ್ಲಿ ಹುಟ್ಟಿ ಸಾಯುವ ಸಂಸ್ಕೃತಿ ದುಃಖವ ಕಳೆದು, ನಿರಂತರ ಸುಖವನ್ನನುಭವಿಸುವ ಪರಿಯಾವುದು ದಯೆಗೈಯಿರಿ" ಎಂದು ಬೇಡಿದನು. ಅದಕ್ಕಾ ಗಣಧರರು ಇಂತೆಂದು ಉಸುರಿದರು; "ನಿನ್ನ ಕೇಳಿಕೆಗೆ, ನಿರಂತರ ಸುಖಕ್ಕೆ ಮುಕ್ತಿಯೊಂದೇ ದಾರಿ. ಅದರಿಂದಲ್ಲದೆ ನಿರಂತರ ಸುಖ ದೊರಕೊಳ್ಳಲಾರದು. ಆ ಮುಕ್ತಿ ತ್ರಿಜಗನ್ಮಾಂಗಲ್ಯವಪ್ಪ ಸಮ್ಯಗ್ದರ್ಶನವಿಲ್ಲದೆ ಕೈಗೂಡದು. ಆ ಸಮ್ಯಗ್ದರ್ಶನ ಕೈಗೂಡಬೇಕಾದರೆ ಕರಣಲಬ್ಧಿಯಿರಬೇಕು. ಸಮ್ಯಗ್ದರ್ಶನವಿಲ್ಲದೆ ಮುಕ್ತಿಶ್ರೀಯ ಪಡೆವೆನೆಂಬವನು ನೀರಿಲ್ಲದೆ ಅನ್ನ ಅಡುವೆನೆಂಬ, ಹರಿಗೋಲಿಲ್ಲದೆ ತೊರೆ ಹಾಯುವೆನೆಂಬ, ಉಗ್ಗನಂತಾಗುವನು. ದೀಪಕ್ಕೆಣ್ಣೆಯಂತೆ, ಮಾಡಕ್ಕೆ ಗೋಡೆಯಂತೆ ಸಕಲಧರ್ಮಕ್ಕೂ ದರ್ಶನ ಮೊದಲಿನದು. ಮರಕ್ಕೆ ಗೆಲ್ಲಿನಂತೆ, ಶರೀರಕ್ಕೆ ಅವಯವದಂತೆ, ನಿಶ್ಯಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ; ಸ್ಥಿತಿಕರಣ, ವಾತ್ಸಲ್ಯ, ಧರ್ಮಪ್ರಭಾವನೆಗಳೆಂಬ ಎಂಟು ಅಂಗಗಳು, ಆ ದರ್ಶನಕ್ಕೆ. ಅಲ್ಲದೆ ಕೊಲ್ಲದ, ಹುಸಿಯದ, ಕಳದ, ಪರವನಿತೆಗಾಸೆಪಡದ, ಪರರೊಡವೆಗಳೆಸೆದ ಪಂಚಾಣುವ್ರತಗಳೂ ಸೇರಿ ಈರೇಳು ಮಹಾರತ್ನಗಳೆನ್ನಿಸಿದುವು. ಈ ರತ್ನಗಳನ್ನು ಸಾಧಿಸಿದ ಮಹಾಪುರುಷರ ಕತೆಗಳನ್ನು ಒಂದೊಂದಾಗಿ ಬಿತ್ತರಿಸುವೆನು ಕೇಳು.

ಜಂಬೂದ್ವೀಪದ ನಡುವೆ ಮೇರು ಪರ್ವತ. ಅದರ ತೆಂಕಲಿಗೆ ಭರತಕ್ಷೇತ್ರದಲ್ಲಿ ಸೌರಾಷ್ಟ್ರ ವಿಷಯವೆಂಬ ನಾಡು. ಅನೇಕ ಜಿನಭವನಗಳಿಂದ, ಉಪವನಗಳಿಂದ, ಕೆರೆಸರೋವರಗಳಿಂದ ಸೊಗಯಿಸಿತು. ಗಿರಿನಗರವೆಂಬುದು ಆ ನಾಡಿನ ತಲೆಯೂರು. ಗಿರಿನಗರದೊಡೆಯನು ವಿಶ್ವಸೇನ ಮಹಾಮಂಡಳಿಕ, ಜಿನಭಕ್ತನೆನಿಸಿದ ದಯಾಮಿತ್ರ ಸೆಟ್ಟಿ ಆ ಊರಿನಲ್ಲಿ ಬಲು ದೊಡ್ಡ ಹರದ. ಆತನ ಭಂಡಾರ ಕುಬೇರನದಕ್ಕೆಣೆ. ಒಮ್ಮೆ ಆ ಹರದ ಹೊರನಾಡಿಗೆ ಹರದಿಗಾಗಿ ಹೋಗಲು ಮನಸು ಮಾಡಿದನು. ಶುಭ ಮುಹೂರ್ತದಲ್ಲಿ ಮನೆಯಿಂದ ಹೊರಟು, ಅನುಚರರೆಲ್ಲ ಬರುವವರೆಗೆ ಊರಹೊರಗೆ ಬೀಡು ಬಿಟ್ಟನು ಅದೇ ಹೊತ್ತು ಕೊರಳಲ್ಲಿ ಜನಿವಾರ, ನೊಸಲಲ್ಲಿ ನಾಮ, ಕೈಯಲ್ಲಿ ದರ್ಭೆ, ಮೈಯಲ್ಲಿ ಕಾವಿ ಶಾಟಿಗಳನ್ನು ಧರಿಸಿದ ವಸುಭೂತಿಯೆಂಬ ಹಾರುವನೊಬ್ಬನು ಅಲ್ಲಿಗೆ ಬಂದನು. ಬಂದವನೇ ಸೆಟ್ಟಿಗೆ ಕೈಮುಗಿದು, "ತೆಂಕು ನಾಡವ ನಾನು. ಉತ್ತರದ ಗಂಗೆಯಲ್ಲಿ ಮಿಾಯಲೆಂದು ಬಡಗಿಗೆ ಪಯಣ ಬೆಳೆಸುತ್ತಿರುವೆ. ಇಲ್ಲಿಂದ ಮುಂದಿನ ಹಾದಿ ಹುಲಿಕರಡಿಗಳ, ಕಳ್ಳಕಾಕರ ಹಾಸು ಹೊಕ್ಕು. ಅದರಿಂದ ಪಯಣಕ್ಕೆ ಅಸಾಧ್ಯವೆನಿಸಿದುದರಿಂದ ನಿಮ್ಮ ನೆರವು ಹಾರೈಸಿ ಬಂದೆ." ಎಂದನು.

"ಅದಕ್ಕೇನು? ನೀನೂ ನಮ್ಮೊಡನೆ ಬರಬಹುದು" ಎಂದು ಸೆಟ್ಟಿ ನುಡಿದನು. ಮರುದಿನ ಹರದರ ಪಡೆಯಲ್ಲಿ ಬಂದು ಸೇರಲು, ಮಡದಿ ಮಕ್ಕಳಿಗೆ ಬುದ್ಧಿಹೇಳಿ ಮನೆಗೆ ಕಳುಹಿಸಿ, ದಯಾಮಿತ್ರ ಸೆಟ್ಟಿ ಪರಿವಾರದೊಡನೆ ಬಡಗಕ್ಕೆ ಪಯಣ ಹೊರಟನು. ದಿನಕ್ಕೆ ಮೂರು ಗಳಿಗೆ ಧರ್ಮಶ್ರವಣ ಗೈಯದೆ ಊಟ ಮಾಡಲಾರೆನೆಂಬುದು ಪರಮಜಿನಭಕ್ತನೆನಿಸಿದ ಆ ದಯಾಮಿತ್ರ ಸೆಟ್ಟಿಯ ನಿಯಮ. ಅಂತೆಯೇ ಪಯಣದವೇಳೆ ಶ್ರಾವಕರನ್ನೆಲ್ಲ ಒಂದುಗೂಡಿಸಿ, ಧರ್ಮಶ್ರವಣಂಗೆಯ್ದು ಮತ್ತೆ ಉಣ್ಣುವನು ಸೆಟ್ಟಿ. ಇದನ್ನು ಕಂಡ ವಸುಭೂತಿ ತನ್ನಲ್ಲೆ ಇಂತೆಂದು ಬಗೆದನು. "ಲಜ್ಜೆಗೆಟ್ಟ ಸವಣರ ಮಾತು ನಂಬಿ ಸೆಟ್ಟಿ ಕೆಟ್ಟ. ಸವಣರನ್ನು ಪೂಜಿಸುವ ಈ ಸೆಟ್ಟಿಗಿಂತ ಹೆಡ್ಡನಾರು?" ಮತ್ತೆ ಆ ಹಾರುವ ಬಾಯಿಬಿಟ್ಟು ಸೆಟ್ಟಿಯೊಡನಿಂತೆಂದನು—"ಉತ್ತಮ ವಸ್ತುಗಳಾವುವೆಂಬುದನ್ನು ಪರೀಕ್ಷಿಸಿ ತಿಳಿವುದರಲ್ಲಿ ಶ್ರೇಷ್ಠರಾದ ನಿಮ್ಮನ್ನು ವಸ್ತುಪುರುಷರೆಂದು ಕರೆವರು. ಹಲವು

ವಿಷಯಗಳನ್ನರಿತ ನೀವು ನಾಸ್ಗೆಟ್ಟ ಈ ಸವಣರ ಮಾತಿಗೆ ಮರುಳಾದುದು ಆಶ್ಚರ್ಯವೇ ಸರಿ. ನಿಮ್ಮ ಸವಣರು ಕೆಲಸಗಳ್ಳ ಸೋಮಾರಿಗಳು; ಮಾಪಬಿಟ್ಟು ಸಿಕ್ಕೆಡೆ ತಿರಿವರು. ವೈಮುರಿಪ್ರವೇಂದರೆ ಏನೆಂದರಿಯರು. ಇಂಥವರ ಮಾತಿಗೆ ಮರುಳಾಗಬಹುದೇ?" ಎಂದು.

"ಕಾಡ ಬೇಡನು ಮಾಣಿಕವ ಕಟ್ಟಿ ಬಿಸಾಡಿದಂತೆ ಅಹಿಂಸಾ ಧರ್ಮದ ನೆಲೆಯು ಈ ಹಾರುವನರಿಯನು. ಕಪ್ಪೆ ಕಡಲುಗಾಣದಿದ್ದರೆ, ಗೂಗೆ ದಿನಮಣಿಯು ದಿಟ್ಟಿಸದಿದ್ದರೆ ಕುಂದಾರಿಗೆ? ಹಾರುವ ಅಹಿಂಸಾ ಧರ್ಮವ ದೂರಿದರೆ ಅದರಿಂದವನಿಗೇ ಕುಂದಲ್ಲದೆ ಸತ್ಯ ಧರ್ಮಕ್ಕೆಲ್ಲಿಯ ಕೊರತೆ? ಕರ್ಮ ಕಟುತ್ವದಿಂದ ಕಣ್ಣುಕುರುಡಾದ ಈ ದ್ವಿಜನಿಗೆ ಸದ್ಧರ್ಮ ವನ್ನುಪದೇಶಿಸಿದರೆ, ಪಿತ್ತಜ್ವರವುಳ್ಳವಗೆ ಹಾಲು ಕುಡಿಸಿದಂತೆ, ಮಗುವಿನ ಕೈಗೆ ಮಸೆದ ಬಾಳಿತ್ತಂತೆ, ಮಂಗನ ಕೊರಳಿಗೆ ಮಾಲೆಹಾಕಿದಂತೆ ಆದೀತು. ಉಪಾಯ ಹೂಡಿ ಈತನಿಗೆ ಧರ್ಮವ ತಿಳಿಸಬೇಕು" ಎಂದು ಮನದಲ್ಲಿ ಬಗೆದನು ಆ ಹರದ. ಹರದ ಮತ್ತೆ ಒಂದು ದಿನ ವಸುಭೂತಿ ಯನ್ನು ಬಳಿಗೆ ಕರೆದು ಕುಳ್ಳಿರಿಸಿಕೊಂಡನು. "ಭಟ್ಟರೆ, ನಿಮ್ಮಂತಹ ಕುಲೀನರೂ, ಶುದ್ಧರೂ ಎನ್ನಿಸಿದವರು ಯಾರೂ ಇಲ್ಲ. ಈಗ ನಮ್ಮ ಕುಟುಂಬದಲ್ಲಿ ತಲೆಮಾರಿನಿಂದ ನಡೆದುಬಂದ ನೋಂಪಿಯೊಂದಿದೆ. ಆ ನೋಂಪಿಯ ದಿನ ಹತ್ತಿರ ಬಂತು. ಅದನ್ನು ಜಿನೇಶ್ವರ ಸಾಕ್ಷಿಯಾಗಿ ಋಷಿಯರ್ಕಗಳಿಂದ ನೆರವೇರಿಸಿ ಅವರು ಬೇಡಿದುದನ್ನೀವುದು ಪದ್ಧತಿ. ಆದರೆ ಈಗ ನಮ್ಮ ಜಿನಮುನಿಗಳಾರೂ ಇಲ್ಲಿಲ್ಲ. ಹಾಲೇ ಅವೃತ ವೆಂಬಂತೆ ನಿಮ್ಮಂತಹ ಪವಿತ್ರರು ಬಳಿಯಲ್ಲಿರಲು ಆ ಸವಣರ ಮಾತೇಕೆ? ಬಾವಿಗೆ ಬಿದ್ದವರನ್ನು ಬಳಗದವರೇ ಮೇಲೆತ್ತಬೇಕೆಂಬ ನಿಯಮವಿಲ್ಲ. ನೀವು ಆ ಋಷಿಗಳಿಗಿಂತ ಸಾವಿರಪಾಲು ಮಿಗಿಲು. ನಿಮಗಿತ್ತ ಕೊಡುಗೆ ಹಾಲುಕ್ಕಿ ಇಮ್ಮಡಿಸುವಂತೆ ಇಮ್ಮಡಿಯೆನಿಸೀತು. ಆದುದರಿಂದ ನೀವಾ ನೋಂಪಿಯ ನೋಂತು ಬೇಕಾದಷ್ಟು ಬೇಡಿಕೊಳ್ಳಿ" ಎಂದಾ ದಯಮಿತ್ರ ಸೆಟ್ಟಿ ವಸುಭೂತಿಗೆ ತಿಳಿಸಿದನು.

ಅರಸುವ ಬಳ್ಳಿ ಕಾಲ್ತೊಡಕಿದಂತೆ ವಸುಭೂತಿ ಹಿಗ್ಗಿದನು. "ಅಶುಚಿ ಗಳಾದ ಸವಣರಿಗೆ ದಾನವೀಯುವ ಈ ಸೆಟ್ಟಿ ನನಗೆ ಬೇಕಾದುದನ್ನು

ಕೊಡುವುದರಲ್ಲೇನಚ್ಚರಿ! ಹಣವೆಂಬುದು ಇವನಲ್ಲಿ ಜೋಳದ ಕಾಳಿಗೆಣೆ! ಬೇಕಾದಷ್ಟು ಬೇಡಿಕೊಂಡು ನಾಡಿಗೆ ನಡೆದು ಮಡದಿಮಕ್ಕಳೊಡನೆ ಸೊಗದಿಂದ ದಿನ ಕಳೆಯುವೆನು" ಎಂದು ಮನದಲ್ಲೆ ಮುಂಡಿಗೆ ಸವಿದನು ಆ ಹಾರುವ. ಮತ್ತೆ ಆ ನೋಂಪಿಯನ್ನು ನಡೆಸುವ ಪರಿಯೆಂತೆಂದು ಹರದನನ್ನು ಕೇಳಿದನು. "ನೋಂಪಿ ತೀರುವ ವರೆಗೂ ಕಳವೆ ಅಕ್ಕಿಯ ಅನ್ನವನ್ನೂ ತಿಳಿ ತುಪ್ಪವನ್ನೂ ಇನ್ನೊಬ್ಬರಿಕ್ಕಲು ಮೌನವಾಗಿ ಉಣಬೇಕು. ಮರುದಿನ ಅಷ್ಟು ಹೊತ್ತಿನ ತನಕ ಅನ್ನ ನೀರು ತಾಂಬೂಲಗಳನ್ನು ಬಿಟ್ಟು ಧ್ಯಾನಮಗ್ನರಾಗಿರಬೇಕು. ಬರಿ ನೆಲದ ಮೇಲೆ ಪವಡಿಸಬೇಕು, ಮಿಾಯಬಾರದು; ಸ್ತ್ರೀ ಚಿಂತೆ ಇರಬಾರದು; ಕಳವಳಿಸಬಾರದು. ಮಂದರದಂತೆ ಧೈರ್ಯಗೊಂಡು, ಲಾಭಪಡೆದ ಹರದನಂತೆ ಹುರುಪುಗೂಡಿ, ತಲೆಯ ಕೂದಲುಗಳನ್ನು ಹರಿಯಿಸಿಕೊಂಡು ಎರಡು ತಿಂಗಳಕಾಲ ಈಪರಿ ವ್ರತ ನಡೆಸಬೇಕು." ಎಂದು ನೋಂಪಿಯ ಪರಿಯನ್ನು ಬಿತ್ತರಿಸಿದನು ಸೆಟ್ಟಿ. ಹರದನ ಮಾತುಕೇಳಿ ಚಂಚಲಚಿತ್ತನಾದ ಹಾರುವ, "ಇಲ್ಲಿ ನಾನೀ ವೃತವನ್ನಾಚರಿಸಿದರೆ ನೋಡುವವರಾರು? ಕೂದಲು ಕೀಳಿಸುವ ಕೆಲಸ ಒಂದು ಗಳಿಗೆಯ ಕಷ್ಟ. ಕೂದಲು ಹೋದರೇನು ಮತ್ತೆ ಬರುವುದಿಲ್ಲವೇ? ಅದಲ್ಲದೆ ಬಗೆದಷ್ಟೂ ಬಂಗಾರ ಸಿಗುವುದು. ಒಂದೂಟ, ಮಿಾಯಣ ವೀಳೆಯಗಳಿಲ್ಲ. ಇದೇನು ದೊಡ್ಡದು? ಎರಡು ತಿಂಗಳೆಂಬುದು ಎರಡು ವರ್ಷವೆ?" ಎಂದು ಮನದಲ್ಲೇ ಬಗೆದನು; ನೋಂಪಿಗೆ ಒಪ್ಪಿದನು.

ದಯಾಮಿತ್ರ ಮರುದಿನವೇ ಪಯಣ ನಿಲ್ಲಿಸಿ ಜಿನಸ್ವಾಮಿಗೆ ಮಹಾಭಿಶೇಕಪೂಜೆಗಳನ್ನು ಮಾಡಿಸಿದನು. ವಸುಭೂತಿಯನ್ನು ಬಡಗು ಮೋರೆ ಮಾಡಿ ಕುಳ್ಳಿರಿಸಿ, ಕೆಲಸಿಗಳು ಚಿಮುಟಿಯಿಂದ ಒಂದೊಂದೇ ಕೂದಲು ಕೀಳ ತೊಡಗಿದರು. ಆಗ ಆ ಹಾರುವ ನೋವು ತಡೆಯಲಾರದೆ ಸುಂಟಿತಿಂದ ಕೋಡಗನಂತೆ ಬಿಸುಸುಯ್ಯ ತೊಡಗಿದನು. ಕುದುರೆಯೇರಿದ ಕುರುಬನಂತೆ ನಡುಗುತ್ತ, ಹೇನು ತುಂಬಿದವನಂತೆ ತಲೆ ತುರಿಸುತ್ತ, ಬಾಳ ಮೋಹಕ್ಕೆ ಮಗುವನ್ನು ಹಿಡಿದರೆಂಬ ನಾಡನುಡಿಯಂತೆ ಮನಗಟ್ಟಿ ಮಾಡಿ ನೋವು ತಿಂದನು. ಹರದನೆಂದಂತೆ ಆ ದಿನ ಉಪವಾಸವಿದ್ದು ಮರುದಿನ ಕರೆದಾಗ ಆತನ ಬೀಡಿಗೆ ಹೋದನು.

ಅಯಾಚಿತ ವ್ರತವಾದುದರಿಂದ ಸೆಟ್ಟಿಕೊಟ್ಟ ಸಕ್ಕರೆ, ಹಾಲು, ಹಲವು ತರದ ಭಕ್ಷ್ಯಗಳು, ತುಪ್ಪಬೆರಸಿದ ಅನ್ನ, ತೋವೆ ಮೊದಲಾದುವನ್ನು ಗಂಟಲ್ಲವರೆಗೂ ನಿಂತಲ್ಲೇ ನಿಂತು ತಿಂದನು. ಮತ್ತೆ ಬಾಳೆ, ಕಿತ್ತಳೆ, ಖರ್ಜೂರ ಮೊದಲಾದ ಹಣ್ಣುಗಳನ್ನು ಮೆದ್ದು, ಬೇಕಾದಷ್ಟು ಕೋಡು ನೀರು ಕುಡಿದು, ದಯಾಮಿತ್ರನೊಡನೆ ವಿಹಾರಕ್ಕೆ ಬಂದನು. ಹುಟ್ಟಿದ ಮೇಲೆ ಕಾಣದ ಊಟಉಂಡ ಹಾರುವನ ಸಂತಸ ಹೇಳಿತೀರದು. ಹಗಲು ಕಳೆದು ಇರುಳು ಬಂತು. ಹಾರುವನ ಗಂಟಲು ಒಣಗತೊಡಗಿತು; ಆಸರು ಹೆಚ್ಚಿತು. ಮಳೆಯನ್ನು ಹಾರಯಿಸುವ ಒಕ್ಕಲಿಗನಂತೆ ಬಾನತ್ತ ನೋಡುತ್ತ ಬಾಯಾರಿಕೆ ತಡೆಯಲಾರದೆ ಬ್ರಾಹ್ಮಣನಿಗೆ ಕಣ್ಣಲ್ಲಿ ಬೆಳ ಗಾಯಿತು. "ಆಸರು ಸೈರಿಸಲಾರೆ; ಹಾಗೆಂದು ವ್ರತವನ್ನು ಬಿಟ್ಟರೆ ಸಿಗುವ ಪತಪು ಸಿಗದು" ಎಂದು ಚಿಂತಿಸಿದನು ಹಾರುವ. ಮರುದಿನ ಮರುಕ ತಡೆಯಲಾರದೆ ಸೆಟ್ಟಿಯಿಕ್ಕಿದ ಊಟ ಒಲ್ಲೆನೆಂದನು. ಆಗ ದಯಾಮಿತ್ರ "ನೀವೇ ಹೇಳಿದಂತೆ ನಾಣ್ಣೆಟ್ಟ ಋಷಿಗಳು ಕೂಡ ಇಕ್ಕಿ ದಂತೆ ಉಣ್ಣುವರೆಂದಮೇಲೆ ಭೂದೇವರೆನಿಸಿದ ನಿಮಗಿದು ದೊಡ್ಡದೆ? ಮರುಮಾತುಗೊಡದೆ ಇಕ್ಕಿದಂತೆ ಉಣ್ಣಿರಿ" ಎಂದನು.

ಹಾರುವನಿಗೆ ಬೇರೆ ದಾರಿ ಕಾಣಲಿಲ್ಲ. ಬಡಿಸಿದಂತೆ ಉಂಡನು. ಈ ಪರಿ ಏಳೆಂಟು ದಿನಗಳು ಸಂದುವು. ಹಾರುವನ ಪಾಡು ಹೇಳಿತೀರದು. ಗಾಳಿಗೊಡ್ಡಿದ ಸೊಡರಂತೆ ನಡುಗಿ, ಹಗಲ ಚಂದ್ರನಂತೆ ಕಳೆಗುಂದಿ, ಬಯ ಲಲ್ಲಿಟ್ಟ ಮೀನಿನಂತೆ ಮಿಡುಕಿ ತಳಮಳಗೊಂಡನು ವಸುಭೂತಿ. "ಹುಲಿಯ ಮೀಸೆಯ ಹಿಡಿದೆಳೆಯಬಹುದು; ಸೊಕ್ಕಿದಾನೆಗೆ ಎದುರಾಗಬಹುದು; ವಿಷದ ರುಚಿ ನೋಡಬಹುದು; ಆದರೀ ನೋಂಪಿಯನ್ನು ಸೈರಿಸಿಕೊಳ್ಳುವ ಅಘಟನಾರು? ಏಳೆಂಟು ದಿನಗಳು ಏಳೆಂಟು ವರ್ಷಗಳಂತಾದುವು. ಈ ಪಾಡು ಯಾರಿಗೆ ಬೇಕು? ಹೊರೆಯ ಮೇಗೆ ಹಾಸರೆ, ಗಾಯದ ಮೇಲೆ ಬಡಿಗೋಲು ಎಂಬಂತೆ ಸಂತಾಪದ ಮೇಲೆ ಸಂತಾಪವುಂಟುಮಾಡುವ ಈ ನೋಂಪಿಯೆಂಬ ಗರಗಸಕ್ಕೆ ತಲೆಯೊಡ್ಡಲಾರೆ. ಈಗಲೆ ಕೆರೆಗೆ ನಡೆದು ಮಿಂದು, ನೀರು ಕುಡಿದು, ಸುತ್ತಾಡಿ ಬರುವಂತೆ ಅಪ್ಪಣೆಕೊಡಿರಿ" ಎಂದು ಸೆಟ್ಟಿಯನ್ನು ಸೆರಗೊಡ್ಡಿ ಬೇಡಿಕೊಂಡನು ಆ ಬಡಹಾರುವ. "ಸಜ್ಜನರು

ಕಲಿತನದಿಂದ ಹುಲಿಯು ಹಿಡಿದರೆ ಅದೇನು ದೊಡ್ಡದೆನ್ನುವರು ದುರ್ಜನರು! ಆದರೆ ತಾವೊಂದು ಇಲಿಯ ಹಿಡಿದರೆ ಸಾಕು; ಅದೇ ಹೆಬ್ಬುಲಿಯು ನಿಸುವುದು! ಇದು ದುರ್ಜನರ ಗುಣ. ಹಾವಿಲ್ಲದೆಡೆ ಕಪ್ಪೆಗಳ ಕಾಟ ಹೇಳತೀರದು. ಹಾವು ಬಂದಾಗ ಅದೇ ಕಪ್ಪೆಗಳು ಸತ್ತಂತೆ ಬೀಳುತ್ತವೆ. ಕುತ್ಸಿತರು ಪರೀಷಹಗಳು ತಮ್ಮ ಮನವನ್ನು ಕದಡದಿರುವವರೆಗೂ ತಾವು ಮಾಡಿದುದೇ ಹಿರಿದೆನ್ನುವರು. ಪರೀಷಹಗಳು ಬಂದಡಸಿದಾಗ ಬಾಯ್ಬಿಟ್ಟು ಮರುಗುವರು. ಆಚರಣೆಗೆ ಅಸಾಧ್ಯವೂ ಫಲದಲ್ಲಿ ಹಿರಿದೂ ಆದ ಅನೇಕ ವ್ರತಗಳನ್ನು ಎಳ್ಳಷ್ಟು ತಪ್ಪದೆ ಆಚರಿಸುವ ಮಹರ್ಷಿಗಳ ಮನದ ಧೈರ್ಯ ನೀವೇನು ಬಲ್ಲಿರಿ? ಒಂದೆರಡು ದಿನಗಳ ಕಷ್ಟಕ್ಕೆ ಬಳಲಿ ಬೆಂಡಾಗಿ ಹಿಂಜರಿದಿರಿ" ಎಂದು ನಗುತ್ತ ನುಡಿದನು ದಯಾಮಿತ್ರ ಸೆಟ್ಟಿ.

"ನಾನು ಮುನಿಗಳನ್ನು ಹಳಿದುದರಿಂದ ಸಿಟ್ಟಿಗೆದ್ದ ಸೆಟ್ಟಿ ಮುನಿಸನ್ನು ಇಂತು ತೀರಿಸಿದನು. ಹೊಳಲು ಕಾಣದವನಿಗೆ ಹಳ್ಳಿಯೇ ಹಿರಿಯೂರಾದಂತೆ ಧೈರ್ಯಾನ್ವಿತರಾದ ಮಹರ್ಷಿಗಳ ತಪೋಮಾರ್ಗವನ್ನರಿಯದ ನನಗೆ ನಮ್ಮ ನಡತೆಯೇ ಹಿರಿದೆನಿಸಿ ತೋರಿತು. ಹರದರೊಳು ಮರುಳರಿಲ್ಲ; ಸೂಳೆ ಸಾಧುವಲ್ಲ–ಎಂಬ ಗಾದೆಯಿದೆ. ಸಾಮಾನ್ಯರಿಂದ ಸಹಿಸಲತಕ್ಕವೆನಿಸಿದ ಪರೀಷಹಗಳ ಸೈರಿಸುವ ಮುನಿಗಳ ಬಳಕೆಯಲ್ಲಿದ್ದ ಜಿನೇಂದ್ರ ಧರ್ಮವನ್ನವಲಂಬಿಸಿರುವವರು ಅನ್ಯಧರ್ಮವನ್ನೇಕೆನಂಬುವರು? ಮೇರುವನ್ನೇರಿದವರಿಗೆ ಕಿರಿದಾಗಿ ತೋರದೆ ಲೋಕ?" ಈ ಪರಿ ಆ ಹಾರುವ ತನ್ನೊಳಗೆ ಬಗೆದನು. ಮತ್ತೆ ಸೆಟ್ಟಿಗೆ ಕೈಮುಗಿದು, "ನಿಮ್ಮ ಧರ್ಮ ನನಗೆ ತಿಳಿಯುವಂತೆ ಹೇಳಿರಿ" ಎಂದು ಬಿನ್ನಯಿಸಿದನು.

"ಹುಳುಕಿಲ್ಲದೆ, ಪಕ್ಷಕ್ಕಾಗಿ ವಾದಿಸದೆ, ಒಮ್ಮನಸ್ಸಿನಿಂದ ಕೇಳಲೆಳಸುವವನಿಗೆ ಧರ್ಮದ ತಿರುಳು ತಿಳಿಯಬಹುದು. ಬಕನಂತೆ ಧೂರ್ತನಾಗದೆ, ಗಿಳಿಯಂತೆ ಹಲವಾರು ಗಳಹದೆ, ಲಂಚಗಾರನಂತೆ ನುಡಿಕೆಡಿಸದೆ, ಒಂದೇ ಮನಸ್ಸಿನಿಂದ ಕೇಳುವಿರಾದರೆ ಹೇಳುವೆನು ಕೇಳಿ. ಕಬ್ಬೆಂದು ನಾಡಕಬ್ಬು ಕಾಡುಕಬ್ಬೆರಡನ್ನು (ಹೀಲಿ) ಹೇಳುವರು. ಕಾಡು ಕಬ್ಬಿಗೆ ಸಿಹಿಯಿದೆಯೇ? ಪೊನ್ ಎಂಬ ಹೆಸರು ಬಂಗಾರಕ್ಕೂ ಉಮ್ಮತ್ತದ ಗಿಡಕ್ಕೂ ಬರುವುದು. ಉಮ್ಮತ್ತದಲ್ಲಿ ಹೊನ್ನಿನ ಗುಣವಿದೆಯೇ?

ಅಂತೆಯೇ ಧರ್ಮವೆಂಬ ಹೆಸರಿದ್ದ ಮಾತ್ರಕ್ಕೆ ಸಕಲ ಧರ್ಮಗಳೂ ಸದ್ಧರ್ಮಗಳಾಗಲಾರವು. ಮರುಳ ಪಯಣಕ್ಕೆ ತರಗೆಲೆಗಳೇ ಸಂಗಡಿಗನೆಂಬಂತೆ ಪಾಪಿಗೆ ಕುಧರ್ಮವೇ ಸುಧರ್ಮವಾಗಿ ತೋರುವುದು. ಅಹಿಂಸಾಧರ್ಮವೇ ಸಕಲ ಸುಖಗಳಿಗೂ ಅಡಿಗಲ್ಲು. ಆ ಕೊಲ್ಲದ ಧರ್ಮವ ಜೈನಾಗಮಗಳಿಂದ ಮಾತ್ರ ತಿಳಿಯಲು ಸಾಧ್ಯ. ನಿರ್ದೋಷಿಯಾದ ಪರಮಾತ್ಮನ ಮೊಗದಾವರೆಯಿಂದ ಆ ಪರಮ ಜೈನಾಗಮ ಸದಾ ಸೂಸುತ್ತಿರುವುದು.

ಮರಣಂ ಚಿಂತೆ ಭಯಂ ಮದಂ ಮುಳಿಸು ಮೋಹಂ ಖೇದ ರೋಗಂ ಬೆಮರ್ ।
ಜರೆ ನೀರಳ್ಕೆ ವಿಷಾದ ಮೂಟ ಜನನಂ ಲೋಭಂ ಮಹಾ ವಿಸ್ಮಯಂ ॥
ಸ್ಮರಬಾಣಾಹತಿ ನಿದ್ರೆಯೆಂಬಿವಿನಿತಂ ಗೆಲ್ದಾತನೇ ತಾಂ ಜಿನೇ-।
ಶ್ವರನಿಂದ್ರಾರ್ಚಿತ ಪಾದನಾತನೆ ನಿಜಂ ಸೌಖ್ಯಕ್ಕೆ ತಾಂ ಕಾರಣಂ ॥

ಇಂತಿರುವ ಪರಮೇಶ್ವರನನ್ನು ತಿಳಿವ ಶಕ್ತಿಯುಳ್ಳವರು ಎಲ್ಲಾದರೊಬ್ಬರು ದೊರಕಬಹುದು. ನಿರ್ದೋಷಿಯಾದಾತನೇ ಪರಮಾತ್ಮ; ಅವನೆಂದುದೇ ಆಗಮ." ಇಂತು ನುಡಿದ ದಯಾಮಿತ್ರನ ನುಡಿಗಳನ್ನು ಕಿವಿಗೊಟ್ಟು ಮನವಿಟ್ಟು ಕೇಳಿದನು ವಸುಭೂತಿ. ಜಿನಧರ್ಮದಲ್ಲಿ ನಂಬಿಕೆಯಿಟ್ಟನು. ಸೆಟ್ಟಿಮಾಡಿದ ಉಪದೇಶಕ್ಕಾಗಿ ಅವನನ್ನು ಹೊಗಳಿದನು.

ಮರುದಿನ ದಯಾಮಿತ್ರ ಸೆಟ್ಟಿ ಬಿಡಾರ ಕಿತ್ತು ಪಯಣ ಹೊರಟನು. ಹೋಗುತ್ತ ಹೋಗುತ್ತ ಒಂದು ಅಡವಿಯೆಡೆ ಬೀಡು ಬಿಟ್ಟನು. ಅಲ್ಲಿ ಕಾಡ ಬೇಡರು ಬಂದು ಸೆಟ್ಟಿಯ ಬೀಡನ್ನು ಮುತ್ತಿದರು. ಆನೆ ಸಿಂಹಗಳ ಹಿಂಡು ತಾಗುವಂತೆ ಕಾಪಿನವರೂ ಬೇಡರೂ ಒಬ್ಬರಿಗೊಬ್ಬರು ಎದುರಾಗಿ ಕಿಚ್ಚು ಕಿಡಿಯಾಗಿ ಕಾದಿದರು. ಅವರ ಕಾದಾಟವನ್ನು ದೂರದಲ್ಲಿದ್ದು ನೋಡುತಿದ್ದ ವಸುಭೂತಿಗೆ ಅಂಬಿಗರಿಗುಲ ಆಯು ತಪ್ಪಿದೊಡೆ ಎಂಬಂತೆ ಒಂದು ಬಾಣತಾಗಿತು. ನೋವು ತಾಳಲಾರದ ಹಾರುವ ನೆಲದಲ್ಲಿ ಬಿದ್ದು ಹೊರಳಿದ ಆಳುಗಳು ಆತನನ್ನು ಎತ್ತಿತಂದು ಬೀಡಿನಲ್ಲಿ ಮಲಗಿಸಿದರು. ಬೇಡರ ಪಡೆ ಸೋತು ಸುಣ್ಣವಾಗಿ ಪಲಾಯನ ಮಾಡಿತು ಗಾಯ ಬಲವಾಗಿದ್ದುದರಿಂದ ವಸುಭೂತಿಯು ಬದುಕುವ ಆಸೆಯಿರಲಿಲ್ಲ. ಆತನ ನೋವಿಗೆ ಸೆಟ್ಟಿಯೂ ಮರುಗಿದನು. ಮತ್ತೆ ಅವನಿಗೆ ಸನ್ಯಾಸವಿತ್ತು ಪಂಚ ನಮಸ್ಕಾರಗಳನ್ನು ಹೇಳತೊಡಗಿದನು. ದಯಾಮೂಲ ಧರ್ಮವೇ ಶ್ರೇಷ್ಠ

ವೆಂದೂ ಜಿನನೆ ಪರಮಾತ್ಮನೆಂದೂ ನೆನೆಯುತ್ತ ದೇಹಬಿಟ್ಟನು. ಸದ್ದರ್ಶನದ ಫಲದಿಂದ ಸೌಧರ್ಮ ಕಲ್ಪದೆಡೆ ಮಣಿಪ್ರಭಾ ವಿಮಾನದಲ್ಲಿ ಮಣಿಕುಂಡಲ ನೆಂಬ ದೇವನಾಗಿ ಜನಿಸಿದನು.

ಇಂತು ದೇವನಾದ ವಸುಭೂತಿ ಒಮ್ಮೆ ತಾನಾರು? ಈ ಭೋಗವೇನು? ಎಂದು, ಕುರುಬನು ಅರಸು ಕಂಡಂತೆ ದೇವಲೋಕದ ವೈಭವವನ್ನು ನೋಡು ತ್ತಿದ್ದನು. ಆಗ ಅತನಿಗೆ ಭವಪ್ರತ್ಯಯ ಜ್ಞಾನವುಂಟಾಗಿ ತನ್ನ ಮೊದಲ ಹುಟ್ಟಿನ ನೆನಹುಬಂತು. "ದಯಾಮಿತ್ರ ಸೆಟ್ಟಿ ಹೊನ್ನಿನ ಆಸೆ ತೋರಿಸಿ ಉಪಾಯದಿಂದ ದರ್ಶನಜ್ಞಾನವನ್ನು ಉಪದೇಶಿಸಿದನು. ಈಪರಿ ಉಪಾ ಯಗಳಿಂದ ಜೀವಜಾಲಕ್ಕೆ ಧರ್ಮೋಪದೇಶ ಮಾಡುವ ಶ್ರಾವಕರಿಗೂ ಋಷಿಗಳಿಗೂ ಮೇಲಾದವರಾರು?" ಎಂದು ಮನದಲ್ಲೇ ಬಗೆದನು. ಮತ್ತೆ ಪರಿವಾರದೊಡಗೂಡಿ ಸೆಟ್ಟಿಯು ಬೀಡಿಗೆ ಬಂದನು. "ನಿನ್ನ ಪ್ರಸಾದದಿಂದ ದೇವನಾದೆನು" ಎಂದು ಉಪಕಾರಸ್ಮರಣೆಗೈದು ದೇವಲೋಕಕ್ಕೆ ಹಿಂದಿರುಗಿ ದನು. ಅಲ್ಲಿ ಆ ಮಣಿಕುಂಡಲದೇವ ಪರಮ ಜಿನಭಕ್ತನೆನಿಸಿ ಹಲವು ಕಾಲ ಕಳೆದನು.

ಲಲಿತಾಂಗ

(ನಿಶ್ಶಂಕೆ)

ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಕಾಶ್ಮೀರ ದೇಶ. ಅಲ್ಲಿದೆ ಅನೇಕ ಕಮಲಾಕರಗಳಿಂದ ಜಿನಮಂದಿರಗಳಿಂದ ಸೊಗಯಿಸುವ ವಿಜಯಪುರವೆಂಬ ಹೊಳಲು. ಜಿನಪಾದಸೇವಾಸಕ್ತನೂ ಗುಣಾಂಬುಧಿಯೂ ಎನ್ನಿಸಿದ ಅರಿ ಮಥನನು ಆ ವಿಜಯಪುರದರಸು. ಸೌಂದರಿ ಆತನ ಪಟ್ಟದರಸಿ. ಲಲಿ ತಾಂಗ ಅರಗುವರ ಬೆಳ್ದಿರುಳ ಚಂದ್ರನಂತೆ ಬೆಳೆಯುತ್ತಿದ್ದನು. ಆ ಅರಸು ಮಗ ತಾಯಿತಂದೆಯರ ಮೇರೆ ಮೀರಿದ ಒಲವು ಅರಗುವರನ ದುರ್ನಡ ತೆಗೆ ಉತ್ತೇಜನವಿತ್ತಿತು. ಲಲಿತಾಂಗ ಪುರಜನರನ್ನು ಪರಿಪರಿಯಾಗಿ

ಪೀಡಿಸುತ್ತಿರುವುದನ್ನು ನೋಡಿ ಆ ಹಿರಿಯರು ನಗುತ್ತಿದ್ದರು. ಬೇವು ಬೆರೆತ ನೀರು ಕಯ್ಪ್ಪಿಯಾಗುವಂತೆ ಕೆಡುಕರೊಡಗೂಡಿ ಅಂಕುಶವಿಲ್ಲದ ಮದ್ದಾನೆಯಂತೆ ಸೊಕ್ಕೇರಿ ಅಡ್ಡಾಡ ತೊಡಗಿದನು ಆ ಅರಗುವರ. ಅವನ ಉಪಟಳ ತಡೆಯಲಾರದೆ ನಾಡಿಗೆ ನಾಡೇ ತಳಮಳಿಸಿತು. ಅವನೆಸಗದ ಅನಾಚಾರವಿಲ್ಲ; ಉಪಟಳವಿಲ್ಲ.

"ಅರಗುವರನ ಉಪಟಳಕ್ಕೆ ಹಾರುವರು ಹಾರಿ ಹೋದರು; ಬಳೆಗಾರರು ಅಳವುಗೆಟ್ಟ ಕುದುರೆಗಳಂತಾದರು; ಕಂಚುಗಾರರು ಮಿಂಚುಕಂಡ ಮಕ್ಕಳಂತೆ ಅಂಜಿದರು. ಬಂಟರು ನಂಟರನ್ನು ಕಂಡ ಬಡವರಂತೆ ಒಳಸರಿದರು; ಕುಂಬಾರರು ಸಂಬಳವಿಲ್ಲದ ದಂಡಿನಾಳಂತೆ ಬೆಚ್ಚಿದರು. ಅರಸರು ದೆಸೆಗೆಟ್ಟರು; ಬೇಡರು ಬೀಡು ಬಿಟ್ಟೋಡಿದರು"—ಈ ಪರಿ ನಾಡುಗರು ಅರಸನಲ್ಲಿ ದೂರಿಟ್ಟರು. ಅರಸು ಸಮಾಧಾನದಿಂದ ದೂರನ್ನಾಲಿಸಿ, ಬಂದ ನೆರವಿಯನ್ನು ಸಂತಯಿಸಿ, ಹಿರಿಕಿರಿಯರೆನ್ನದೆ ಎಲ್ಲರಿಗೂ ಕರ್ಪೂರ ವೀಳೆಯವಿತ್ತು ಮನ್ನಿಸಿ ಬೀಳ್ಕೊಟ್ಟನು.

"ದುಶ್ಶಾಸನ ಶಕುನಿಗಳನೊಡನಾಡಿ ದುರ್ಯೋಧನ ಕೆಟ್ಟನೆಂಬುದೇನು? ತಿಳಿನೀರು ಕಡಲನೀರಿನೊಡಗೂಡಿ ಉಪ್ಪಾಗುವಂತೆ ಸಜ್ಜನರೂ ದುರ್ಜನರ ಸಂಗದಿಂದ ಕೆಡುವರು. ಮಗನೆಂದು ಮೋಹದಿಂದ ನಾವಿವನನ್ನು ಸಡಿಲು ಬಿಟ್ಟೆವು. ಕಳೆಯೊಡನೆ ಬೆಳೆದ ಬೆಳೆಯೂ, ಓದಿಲ್ಲದ ಮಗುವೂ, ಆಲೋಚನೆಯಿಲ್ಲದ ಓದೂ, ಹಲವನ್ನು ಹಂಬಲಿಸುವವನ ತಪವೂ, ಸೊಗಯಿಸುವುವೆ?" ಎಂದು ಚಿಂತಿಸಿದನು ಅರಿಮಥನ.

ಇಂತಿರಲೊಮ್ಮೆ ಮಹಾರಾಜ ಮಗನನ್ನು ಕರೆದು ಬಳಿ ಕುಳ್ಳಿರಿಸಿ "ಶಿಷ್ಟರನ್ನು ರಕ್ಷಿಸಿ, ದುಷ್ಟರನ್ನು ಶಿಕ್ಷಿಸಿ, ಬೇಡಿದವರಿಗೆ ಬೇಕಾದುದನ್ನಿತ್ತು, ಮೋಸಗಾರರ ಬೇರನ್ನೆ ಕಿತ್ತು, ನಾಡನ್ನಾಳಬೇಕು. ತಾಯಿ ಮಗುವನ್ನು, ಒಕ್ಕಲಿಗನು ಬೆಳೆಯನ್ನು, ತಳಾರ ಊರನ್ನು, ಕಾಯುವಂತೆ ಅರಸು ನಾಡುಗರನ್ನು ರಕ್ಷಿಸಬೇಕು. ಚಂದಿರನುದಯಿಸಿದಾಗ ತಾರೆಗಳು ಸೊಗಯಿಸುವಂತೆ ತರಣಿ ಮೂಡುವಾಗ ಸೊಗಯಿಸುವುವೆ? ಮೆದುಮಾತಿಗೆ ಬಗ್ಗುವಂತೆ ಕಕ್ಕಸದ ನುಡಿಗೆ ಬಗ್ಗುವುದೆ ಜನ? ನೀನು ಇಂದಿನತನಕವೆಸಗಿದ ಕೆಡುಕೆಲಸಗಳನ್ನೆಲ್ಲ ಮರೆತು ಬಿಡು. ಪಟಿಕದ ದೋಣಿಯಲ್ಲಿ ತುಂಬಿದ ಹಾಲಿನಂತೆ

ಇಹುದು ನಮ್ಮ ಶುದ್ಧ ಜೈನಧರ್ಮ. ಆ ಧರ್ಮದ ತಿರುಳನ್ನರಿತು ಸರಿ ದಾರಿಯಲ್ಲಿ ಅಡಿಯಿಡು" ಎಂದು ಹಲವು ನೀತಿಗಳನ್ನು ಬೋಧಿಸಿ ಸಂತಯಿಸಿ ಕಳುಹಿಸಿದನು.

ನಾಯಬಾಲ ಡೊಂಕೆಂಬಂತೆ ಲಲಿತಾಂಗನ ಬುದ್ಧಿ ಕೊಂಕಾಗಿಯೇ ಉಳಿಯಿತು. ತಂದೆಯ ಮಾತು ಎಳ್ಳಷ್ಟೂ ಕೇಳದೆ ಮೊದಲಿನಂತೆಯೇ ನಡೆಯುತ್ತಿದ್ದನಾತನು. ಅರಸು ಮತ್ತೊಮ್ಮೆ ಲಲಿತಾಂಗನನ್ನು ಕರೆಯಿಸಿದನು. "ಮಕ್ಕಳಾಗಬೇಕೆಂದು ಮದ್ದು ಕುಡಿದ ಮರುದಿನವೇ ಗಂಡ ಸತ್ತನೆಂಬಂತೆ ಬೇರೆ ಮಕ್ಕಳನ್ನುಳಿದು ನಿನಗೇ ಪಟ್ಟಗಟ್ಟಬೇಕೆಂದಿರುವಾಗ ನೀನಿಂತಾದೆಯಲ್ಲಾ! ಜಾಡು ಹಿಡಿದವನ ಕೈಗೆ ಮಸಿ ತಾಗುವಂತೆ ಕೆಡುಕರ ಸಂಗದಿಂದ ಸುಜನರೂ ದುರ್ಜನರಾಗುವರು. ಆದ್ದರಿಂದ ನೀನೀ ನಾಡನ್ನು ಬಿಟ್ಟು ಬೇಕಾದತ್ತ ನಡೆ." ಎಂದುಸುರಿ ಅರಿಮಥನನು ಲಲಿತಾಂಗನನ್ನು ಮನೆ ಹೊರಡಿಸಿದನು. "ತಂದೆ ನಿನ್ನ ಹಲವು ಹೊಲ್ಲಮೆಗಳನ್ನು ಕಂಡರೂ ಮಗನೆಂಬೊಲವಿನಿಂದ ಸುಮ್ಮನಿದ್ದರು. ಎಷ್ಟು ಹೇಳಿದರೂ ನಿನ್ನ ಒರಟುತನ ಬಿಡಲಿಲ್ಲ. ನೀರೆಷ್ಟು ಕಾದರೂ ಮನೆ ಸುಡದೆಂಬಂತೆ ಎಷ್ಟು ಮುಳಿದರೂ ನಿನಗೆ ಕೇಡೆಣಿಸರು ತಂದೆ " ಎಂದು ತನ್ನ ಬಳಿ ಬಂದ ಕುವರನಿಗೆ ಬುದ್ಧಿ ಹೇಳಿದಳು ಅರಸಿ. ಏನೆಂದರೂ ಲಲಿತಾಂಗ ಕೇಳದಾದನು. ಮತ್ತೆ ಆ ಸೌಂದರಿ ಮಹಾದೇವಿ "ಮಗನೆ, ಓತಿಯಂತೆ ಹಲವು ಬಣ್ಣ ತಾಳುವ, ಅಶೋಕೆಯಂತೆ ನಿಷ್ಫಲನಾದ, ನಿನ್ನ ಕೆಡುಕಿಗೆ ಅತ್ತು ಪ್ರಯೋಜನವಿಲ್ಲ. ನಿನ್ನ ಮನ ಬಂದಲ್ಲಿ ನಡೆ" ಎಂದಳು.

ಇಂತು ವಿಜಯಪುರ ಬಿಟ್ಟ ಲಲಿತಾಂಗ ನೇಪಾಳ ಸೇರಿದನು. ಅಲ್ಲಿ ಹಾವಿನ ನಂಜಿಗಿಂತಲೂ ಕ್ರೂರರೆನಿಸಿದ ಕಳ್ಳರೊಡಗೂಡಿದನು. ಕಳವು, ಕೊಲೆ, ಕೆಡುನಡತೆಗಳಲ್ಲಿ ಕಳ್ಳರೆಲ್ಲರಿಗೆ ಗುರುವಾದನು. ಮೊದಲು ಬಂದ ಕಿವಿಗಿಂತ ಮತ್ತೆ ಬಂದ ಕೋಡು ಹರಿತವಾದುದೆಂಬಂತೆ ಈಗ ಲಲಿತಾಂಗನೇ ಕಳ್ಳರ ಮುಂದಾಳು. ಆ ಕಳ್ಳರಿಂದ ಅಂಜನಗುಟಿಕೆಯ ಪ್ರಯೋಜನವನ್ನರಿತು, ಅಂಜನಪ್ರಯೋಗದಿಂದ ಅದೃಶ್ಯರೂಪನಾಗಿ ಕಳತೊಡಗಿದನು. ಇದರಿಂದಾತನಿಗೆ ಅಂಜನಚೋರನೆಂಬ ಹೆಸರು ಬಂತು. ಕಳವು, ಜೂಜು, ಮದ್ಯ, ಮಾಂಸ, ಸೂಳೆ ಎಂಬ ನರಕಕ್ಕೆಳೆವ ಕೆಡುನಡತೆಗಳಲ್ಲಿ ನಡೆಯುತ್ತ

ಅಳಿದುಳಿದ ಮೊದಲಿನ ಸದಾಚಾರಗಳನ್ನೆಲ್ಲ ಮರೆತನು. ಈಪರಿ ಮನ ಬಂದಂತೆ ಕರಟದ ಕವಿರಂತೆ ತಿರುಗುತ್ತ ಲಲಿತಾಂಗ ಒಮ್ಮೆ ರಾಜಗೃಹಕ್ಕೆ ನಡೆತಂದನು. ಅಲ್ಲಿ ಅನಂಗ ಸೌಂದರಿಯೆಂಬ ಸೂಳೆಯನ್ನಿಟ್ಟುಕೊಂಡನು. ಆಕೆ ಕೇಳಿದಷ್ಟು ಕೊಡುವೆನೆಂದು ಕೆಲದಿನ ವಿನೋದದಿಂದ ಕಳೆದನು. "ಅರಸು ಮಕ್ಕಳಾಗಲಿ, ಹರದ ಕುವರರಾಗಲಿ ನಾನು ಕೇಳಿದಷ್ಟು ಕೊಡುವ ಬಲ್ಲಿದರಾಗಲಿಲ್ಲ. ಈತನಿಗಾದರೂ ಹೊರಗೆ ನಾಡಿಲ್ಲ; ಒಳಗೆ ಭಂಡಾರ ವಿಲ್ಲ. ಇಂತಿರಲು ನಾನು ಕೇಳಿದುದನ್ನು ಇವನು ಕೊಡುವನೆಂತು? ಇದರ ಬಗೆಯರಿಯಬೇಕು" ಎಂದು ಯೋಚಿಸಿದಳು ಅನಂಗ ಸೌಂದರಿ. ಹಲವು ಬಗೆಗಳಿಂದ ಲಲಿತಾಂಗನನ್ನು ಮಂಕಾಡಿಸಿ ಅಂಜನಬಿಜ್ಜೆಯಿಂದ ಹಣ ಗಳಿಸುವುದನ್ನರಿತುಕೊಂಡಳು.

ಒಂದು ದಿನ ಅರಸ ಅರಸಿಯರು ಅರಸು ಬೀದಿಯಲ್ಲಿ ನಡೆತರು ತ್ತಿದ್ದರು. ಅರಸಿಯ ಕೊರಳಲ್ಲಿ ಸೂರ್ಯಪ್ರಭಾವದ ಪದಕವೊಂದು ಜಗಜಗಿಸುತ್ತಿತ್ತು. ಅದನ್ನು ಕಂಡ ಅನಂಗಸೌಂದರಿಗೆ ಆಸೆ ಬೇರೂರಿತು. ಲಲಿತಾಂಗನೊಡನೆ ಆ ಪದಕವನ್ನು ಹೇಗಾದರೂ ತನಗೆ ತಂದೀಯ ಬೇಕೆಂದು ಅತ್ತು ಬೇಡಿ ಕಾಡಿದಳು. ಅದು ನಿನಗೆ ಬೇಡೆಂದು ಲಲಿತಾಂಗನೆಷ್ಟು ಹೇಳಿದರೂ ಕೇಳಲಿಲ್ಲ ಆಕೆ. ಕಡೆಗೆ ಆಕೆಯ ಹಟ ತಡೆಯಲಾರದೆ ತಂದೀವೆನೆಂದನು ಆ ಕಳ್ಳರೊಡೆಯ. ಕಳ್ಳನಿಗೆ ಬೆಳ್ದಿಂಗಳು ಸೊಗಯಿಸದೆಂಬುದರಿಂದ ಕಪ್ಪುದಿನ ಬರುವ ವರೆಗೂ ಕಾದುಕುಳಿತನು. ಕೃಷ್ಣಪಕ್ಷದ ಅಷ್ಟಮಿ ಬಂತು. ಕಣ್ಣಿಗೆ ಅಂಜನ ಹಚ್ಚಿಕೊಂಡನು ಲಲಿತಾಂಗ. ಅದೃಶ್ಯ ರೂಪಹೊಂದಿ ಅರಮನೆಯ ಒಳಹೊಕ್ಕು ಪದಕ ತೆಗೆದುಕೊಂಡು ಹೊರ ಬಂದನು. ಸೂರ್ಯನಂತೆ ಜ್ವಲಿಸುವ ಆ ಹರಳು ಊರನ್ನೆ ಬೆಳಗಿಸುತ್ತಿತ್ತು. ಆ ಕಳವು ದಂಡಕನೆಂಬ ತಳಾರನ ಕಣ್ಣಿಗೆ ಬಿತ್ತು. ಕೂಡಲೇ ಆತನು ಅಂಜನಚೋರನ ಬೆನ್ನುಹಿಡಿದನು. ಓಡು ತ್ತೋಡುತ್ತ, ಕಳ್ಳ ಪದಕವನ್ನಲ್ಲಿ ಬಿಸಾಡಿ, ವಿದ್ಯಾಧರ ಕರಣದಿಂದ ಕೋಟೆ ಯನ್ನು ದಾಟಿ ಮಸಣಕ್ಕೆ ಬಂದನು. ಅಲ್ಲಿ ನೂರೊಂದು ಕಾಲುಗಳ ನೆರವಿ ನಲ್ಲಿ ದೀಪ ಉರಿಸಿ ಒಂದಾಲದ ಮರದ ಕೊಂಬೆಗೆ ತೂಗಾಡಿಸಿ, ಅದರ ಕೆಳಗೆ ಪರಶು, ಬಿಲ್ಲು, ಕೊಂತ, ಅಸಿ, ತೋಮರ, ಶೂಲ, ಸುರಗಿ ಮೊದ

ಲಾದ ಮೂವತ್ತೆರಡಾಯುಧಗಳನ್ನಿಟ್ಟು ಪೂಜಿಸುತ್ತ ನೆಲವಿನ ಕಾಲ್ಗಳ ಕೊಯ್ಯಲಾರದೆ ಮೇಲೇರುತ್ತ ಕೆಳಗಿಳಿಯುತ್ತಲಿರುವ ವ್ಯಕ್ತಿಯೊಂದನ್ನು ಕಂಡನು, ಆ ಅಂಜನಚೋರ.

ವರಸೇನನೆಂಬಾತನು ಗಗನಗಾಮಿನೀ ವಿದೆಯನ್ನು ಸಾಧಿಸುತಿದ್ದನು. ಲಲಿತಾಂಗ 'ಎಲೆ ನೀನಿದೇನೆಸಗುತ್ತಿರುವೆ? ಆರಿದನ್ನು ನಿನಗೆ ಕಲಿಸಿದರು? ಬೇಗನೆ ಹೇಳು. ಇಲ್ಲವಾದರೆ ಈಗಲೆ ನಿನ್ನನ್ನು ತೀರಿಸಿ ಬಿಡುವೆ" ಎಂದು ಕಡಿತಲೆ ಜಳಪಿಸಿದನು. ಆ ಸಾಧಕನು ಹೆದರಿ "ನಾನು ಗಗನಗಾಮಿನೀವಿದ್ಯೆಯನ್ನು ಸಾಧಿಸುತ್ತಿರುವೆನು. ನನಗಿದನ್ನುಪದೇಶಿಸಿದವನು ಜಿನದತ್ತ ಶೆಟ್ಟಿ" ಎಂದನು. ಅದಕ್ಕಾ ಲಲಿತಾಂಗ "ನೀನೇಕೆ ಹೇಡಿಯಂತೆ ಮಾಡುವೆ? ನಾನೀಗಲೇ ನೆಲವಿನ ಕಾಲು ಕೊಯ್ಯುವೆನು, ನೋಡು. ಸುಮ್ಮನೇಕೆ ಮೇಲೇರಿ ಕೆಳಗಿಳಿಯುತ್ತಿರುವುದು?" ಎಂದನು. "ಹೆಡ್ಡತನದಿಂದ ಕೊಯ್ದು ಸತ್ತರೆ ಕನಸಿನ ಬತ್ತಕ್ಕೆ ಗೋಣಿ ತಂದಂತಾದೀತು. ಜೀವವುಳಿದರೆ ಬೇಡಿ ತಿನ್ನಬಹುದು" ಎಂದು ಮರು ನುಡಿದನು ವರಸೇನ. "ಜಿನಭಕ್ತ, ಸಜ್ಜನಚೂಡಾಮಣಿ, ಆಗಮಾನ್ವಿತ, ಅಣುವ್ರತಿ, ವಾತ್ಸಲ್ಯ ರತ್ನಾಕರನೆನ್ನಿಸಿದ ಆ ಜಿನದತ್ತ ಒಂದಿರುವೆಯ ಜೀವಕ್ಕಾದರೂ ತಪ್ಪಿ ನಡೆಯಲಾರನೆಂದ ಮೇಲೆ ನಿನ್ನ ಪ್ರಾಣಕ್ಕೆ ಎರವಾಗುವನೆ? ಎಂದಿಗೂ ಆಗಲಾರ. ನಾನೀಗ ತಳಾರನ ಕೈಯಿಂದ ಸಾಯದೆ ಉಳಿಯಬೇಕು. ಬೇಗನೆ ನನಗಾಮಂತ್ರವನ್ನುಪದೇಶಿಸು. ಇಲ್ಲದಿದ್ದರೆ ನಿನ್ನನ್ನಿಲ್ಲಿಯೇ ಬಲಿಯಿಕ್ಕುವೆನು" ಎಂದವನನ್ನು ಗದರಿಸಿದನು ಅಂಜನ ಚೋರ.

ಹಂದೆಯ ಮೇಲೆ ಹಾವೇರಿದಂತೆ ವರಸೇನ ನಡುಗುತ್ತ ಜಿನದತ್ತನುಪದೇಶಿಸಿದಂತೆಯೇ ಆ ವಿದ್ಯಾಮಂತ್ರವನ್ನು ಕಳ್ಳರೊಡೆಯನಿಗೆ ಬಿತ್ತರಿಸಿದನು. ಅಂಜನಚೋರನಾದ ಲಲಿತಾಂಗನು ಪರಮ ಜಿನೇಶ್ವರನ ಪಾದಗಳನ್ನು ಸ್ಮರಿಸಿ ಜಿನದತ್ತ ಸೆಟ್ಟಿಗೆ ಕೈಮುಗಿದನು. ಮತ್ತೆ ದೃಢಚಿತ್ತದಿಂದ ಪಂಚನಮಸ್ಕಾರಗಳನ್ನು ಹೇಳಿದನು. ಶಂಕೆಯಿಲ್ಲದ ಒಂದೇ ಮನಸ್ಸಿನಿಂದ ನೆಲವಿನ ನೂರೆಂಟು ಕಾಲುಗಳನ್ನು ತುಂಡರಿಸಿದನು. ಕೂಡಲೇ ವಿದ್ಯಾದೇವತೆ ಪ್ರತ್ಯಕ್ಷವಾಗಿ ಬಂದು ಕೈಜೋಡಿಸಿ ಅಪ್ಪಣೆಯೇನೆಂದು ಬೆಸಗೊಂಡಿತು. "ನನ್ನನ್ನೀಗಲೇ ಜಿನದತ್ತನ ಬಳಿಗೆ ಕೊಂಡೊಯ್ಯು" ಎಂದುದೇ ತಡ ಆ

ಆಕಾಶಗಾಮಿನೀ ವಿದ್ಯಾದೇವತೆ ಲಲಿತಾಂಗನನ್ನು ಜಿನದತ್ತನ ಬಳಿಗೆ ಕೊಂಡೊಯ್ದುಬಿಟ್ಟಿತು. ಲಲಿತಾಂಗನು ಆ ವನದ ಸೊಬಗನ್ನೂ, ಅಲ್ಲಿ ನೆರೆದಿರುವ ವಿದ್ಯಾಧರ ಸಮೂಹವನ್ನೂ, ಜಿನಮಂದಿರಗಳನ್ನೂ ಕಂಡು ವೈರಾಗ್ಯಪರನಾದನು. ತುಂಬಿಗಳು ಅಶೋಕೆಯ ಚಿಗುರನ್ನು ಮುಸುಕು ವಂತೆ, ಪಾದಪಲ್ಲವಗಳನ್ನು ಮುಂಗುರುಳು ಮುಸುಕುತ್ತಿರಲು ಲಲಿತಾಂಗ ಜಿನದತ್ತನ ಪಾದಗಳಿಗೆ ವಂದಿಸಿದನು.

ಜಿನದತ್ತನು ತನಗೆ ವಂದಿಸಿದ ಲಲಿತಾಂಗನನ್ನು ಕಂಡು ಬೆರಗಾದನು. "ಮೂಗಿನಿಂದುಳುವವನಿಗೆ ನೇಗಿಲು ದೊರೆತಂತೆ, ಮೊದಲೇ ಅಂಜನಗುಟಿಕೆ ಯಿಂದ ಜನರ ಸರ್ವಸ್ವವನ್ನಪಹರಿಸುವ ಈತನಿಗೆ ಗಗನಗಾಮಿನೀ ವಿದ್ಯೆಯೂ ಸಿದ್ಧಿಯಾಗಿ ಕಿಚ್ಚಿನೊಂದಿಗೆ ಗಾಳಿ ಸೇರಿದಂತಾಯಿತು" ಎಂದು ಜಿನದತ್ತನು ಚಿಂತಿಸಿದನು. "ಈ ವಿದ್ಯೆ ನಿನಗೆಂತು ಸಾಧಿತವಾಯಿತು?" ಎಂದು ಕೇಳಿದ ಜಿನದತ್ತನ ಮಾತಿಗೆ ತನಗೆ ವಿದ್ಯೆ ಸಾಧಿತವಾದ ವಿವರವನ್ನೆಲ್ಲ ತಿಳಿಸಿದನು. "ನಿಮ್ಮ ನುಡಿಯನ್ನು ಸತ್ಯವೆಂದು ನಂಬಿ ಜಿನಪಾದಗಳನ್ನು ನಿಶ್ಶಂಕೆಯಿಂದ ನೆನೆದ ಫಲವಿದು. ನಿಮ್ಮ ಮತ್ತು ಜಿನರ ಪಾದಗಳೇ ನನಗೆ ಶರಣು. ನಾನು ಹೆತ್ತವರ ಪ್ರೀತ್ಯುಪದೇಶಗಳನ್ನು ಕಡೆಗಣಿಸಿ ದುರ್ಮತಿಯಾಗಿ ಕೆಟ್ಟೆನು; ಗುಣವರಿಯದೆ ಪಾತಕಿಯಾದೆನು. ಹುಳು ಹಿಡಿದ ಸಸಿಯಂತೆ ಸೊಗಸಿಲ್ಲದೆ, ನ್ಯಾಯವಿಲ್ಲದ ರಾಜ್ಯದಂತೆ ಮಾನವಿಲ್ಲದೆ, ಕಳ್ಳರ ಕೊಟ್ಟ ದಂತೆ ಧರ್ಮವಿಲ್ಲದೆ, ಹುಟ್ಟುಕುರುಡನಂತೆ ಏನನ್ನೂ ಕಾಣದೆ ಕೆಟ್ಟೆನು" ಎಂದು ಹೇಳಿದನು. ಮತ್ತೆ "ಪಂಚನಮಸ್ಕಾರವನ್ನಲ್ಲದೆ ಇತರ ಮಂತ್ರ ಗಳನ್ನೂ ಅರ್ಹತ್ಪರಮೇಶ್ವರನನ್ನಲ್ಲದೆ ಉಳಿದ ದೈವಗಳನ್ನೂ ಕೈಕೊಳ್ಳದ ನಿಮಗೆ ಈ ವಿದ್ಯೆ ಸಾಧಿಸಿದ ಬಗೆಯನ್ನು ಪ್ರೀತಿಯಿಂದ ನಿರವಿಸಿರಿ" ಎಂದು ಕೈಮುಗಿದು ಬೇಡಿಕೊಂಡನು.

ಜನಪದವೆಂಬ ನಾಡಿನಲ್ಲಿ ಶೋಭಿಸುವ ಭೂಮಿತಿಲಕವೆಂಬ ನಗರ. ವನಪಾಲನು ಆ ನಗರದ ಅರಸು. ಅಲ್ಲಿ ಅರಸಿನ ಪ್ರೀತಿಗೆ ಪಾತ್ರನಾದ ಸೌಂದರನೆಂಬ ಸೆಟ್ಟಿಗೆ ಸುನಂದೆಯೆಂಬ ಮಡದಿ. ಈ ದಂಪತಿಗಳಿಗೆ ಶ್ರೀವರ್ಮ, ಜಯವರ್ಮ, ಜಿನದತ್ತ, ಧನ್ವಂತರಿ ಮೊದಲಾದ ಮಕ್ಕಳು. ಅರಸನ ಪುರೋಹಿತನಾದ ಸೋಮಶೇಖರನಿಗೆ ವಿಶ್ವಾನುಲೋಮನೆಂಬ

ಮಗ. ಧನ್ವಂತರಿ, ವಿಶ್ವಾನುಲೋಮರು ಹಾಲುನೀರಿನಂತೆ ಬೆರಕೆಗೊಂಡಿದ್ದರು. ಇಬ್ಬರೂ ಹೆತ್ತವರ ಮಾತು ಕೇಳದೆ ಬೀದಿಗೆಳೆಯರಾಗಿ ಅಲೆಯುತ್ತಿದ್ದರು. ಸೌಂದರ ಶೆಟ್ಟಿ ಸೋಮಶೇಖರರು ತಮ್ಮ ಮಕ್ಕಳನ್ನು ಸರಿದಾರಿಗೆ ತರಲಾರದೆ ಮನೆಯಿಂದ ಹೊರಗಟ್ಟಿದರು. ಆ ತುಂಟ ಜೋಡಿ ಒಂದಿರುಳು ಅರಮನೆ ಹೊಕ್ಕು ರತ್ನಾಭರಣಗಳನ್ನು ಕಳವು ಮಾಡಿ ಹೊರಗೆ ಬರುತ್ತಿದ್ದರು. ಆಗಲೇ ಎಚ್ಚರಗೊಂಡ ತಳಾರರು ಇಬ್ಬರನ್ನೂ ಹಿಡಿದು ಅರಸಿನ ಬಳಿ ಕೊಂಡೊಯ್ದರು. ತನ್ನ ಸೆಟ್ಟಿಯ ಮತ್ತು ಪುರೋಹಿತನ ಮಕ್ಕಳು ಹೀಗೆ ಮಾಡಿದುದನ್ನು ನೋಡಿ ಅರಸನಿಗೆ ಬಲು ಬೇಸರವೆನಿಸಿತು; ಕೋಪವೂ ಬಂತು. "ನನ್ನರಮನೆಗೇ ಕನ್ನವಿಕ್ಕಿದ ನೀವು ನನ್ನ ರಾಜ್ಯದಿಂದ ಈಗಲೇ ಹೊರಟು ಬಿಡಿರಿ" ಎಂದು ಅರಸು ಅಪ್ಪಣೆಯಿತ್ತನು. ಕೂಡಲೇ ಅವರಿಬ್ಬರೂ ತಂತಮ್ಮ ಹೆಂಡಿರನ್ನು ಕೂಡಿಕೊಂಡು ಜಿನಪದವನ್ನು ತ್ಯಜಿಸಿ ಗಜಪುರವೆಂಬೂರನ್ನು ಸೇರಿದರು.

ಊರ ಬಿಟ್ಟ ವಿಶ್ವಾನುಲೋಮ ಧನ್ವಂತರಿಯರು ಗಜಪುರದಲ್ಲಿ ಯಮದಂಡನೆಂಬ ತಳಾರನನ್ನು ಕಂಡರು. ಮತ್ತಲ್ಲೇ ನೆಲೆನಿಂತು ಇಬ್ಬರೂ ಐನೂರೈನೂರು ಮಂದಿ ಕಳ್ಳರಿಗೆ ಒಡೆಯರೆನಿಸಿ, ಕೊಲೆಕಳವುಗಳಿಂದ ಹೊರನಾಡುಗಳ ಸುಲಿಗೆ ಮಾಡುತ್ತ ಬಾಳತೊಡಗಿದರು. ಒಂದು ದಿನ ಆ ವಿಶ್ವಾನುಲೋಮ ತನ್ನ ಗೆಳೆಯ ಧನ್ವಂತರಿಯೊಡನೆ "ನೀನು ಮೊದಲಿನಂತೆ ಋಷಿಗಳೊಡನೆ ಮಾತಾಡುವುದನ್ನೂ ಧರ್ಮಶ್ರವಣ ಮಾಡುವುದನ್ನೂ ಬಿಡಬೇಕು. ಆ ಋಷಿಗಳು ನಮ್ಮ ಸುಖಭೋಗಕ್ಕೆ ತೊಡಕು ತಂದಿಕ್ಕದೆ ಬಿಡರು" ಎಂದು ಹೇಳಿದನು. ಮತ್ತೊಂದು ದಿನ ಅವರಿಬ್ಬರೂ ಊರ ಹೊರಗಿನ ಕೆರೆಯಲ್ಲಿ ಮೀಯಲಿಕ್ಕೆಂದು ಹೋಗಿದ್ದರು. ಆಗಲೇ ಒಂದು ಮದ್ದಾನೆ ಅವರನ್ನು ಅಟ್ಟಿಕೊಂಡು ಬಂದಿತು. ಅತ್ತಿತ್ತ ನೋಡಿ ಓಡಿ ಹೋಗಲೆಡೆಸಿಕ್ಕದೆ ಇಬ್ಬರೂ ಬಳಿಯಲ್ಲಿದ್ದ ಸಹಸ್ರಕೂಟ ಮಂಡಿತವೆಂಬ ಜಿನಾಲಯವನ್ನು ಹೊಕ್ಕರು; ಆನೆಯಿಂದ ಪಾರಾದರು. ಅಷ್ಟರಲ್ಲಿ ಬಿರುಮಳೆ ಸುರಿಯತೊಡಗಿತು. ಮಳೆ ನಿಂತಾಗ ಹೊತ್ತು ಮುಳುಗಿ ಕತ್ತಲಾಯಿತು. ಊರ ಬಾಗಿಲ ಪಡಿಯನ್ನಿಕ್ಕಿದರು. ಅಂತೂ ಊರಿಗೆ ಹೋಗಲು ಸಾಧ್ಯವಿಲ್ಲ. ಇರುಳನ್ನು ಬಸದಿಯಲ್ಲೇ ಕಳೆಯುವುದೆಂದು ನಿಶ್ಚಯಿಸಿದರು. ಮತ್ತೆ ಆ ಗೆಳೆಯರಿಬ್ಬರೂ ಮಲಗಿ ನಿದ್ರೆ ಹೋದರು.

ಆ ಜಿನಮಂದಿರದಲ್ಲಿ ಅಂದಿರುಳು ಪರ್ವೋಪವಾಸವಿದ್ದ ಭವ್ಯಜನಕ್ಕೆ ವರಧರ್ಮರೆಂಬ ಮುನಿಗಳು ಧರ್ಮೋಪದೇಶ ಮಾಡುತ್ತಿದ್ದರು. ಆ ಧರ್ಮ ಶ್ರವಣವನ್ನಾಲಿಸಿ ಎಚ್ಚರಗೊಂಡ ಧನ್ವಂತರಿ, ವಿಶ್ವಾನುಲೋಮನು ನಿದ್ರಿಸಿರು ವನೋ ಏನೆಂದು ತಟ್ಟಿ ತಿಳಿದು ಎದ್ದು ಕುಳಿತು ಧರ್ಮೋಪದೇಶ ಕೇಳ ತೊಡಗಿದನು. "ಶ್ರೇಷ್ಠ ಧರ್ಮವನ್ನು ಸಂತೋಷದಿಂದಲೂ ಸ್ಥಿರಮನಸ್ಸಿ ನಿಂದಲೂ ಕೇಳಲಾರದವನು ನೀಚನು (ಕಿರಿಯನು) ಧರ್ಮವನ್ನಾಲಿಸಿಯೂ ಮನವನ್ನು ಸ್ಥಿರವಾಗಿರಿಸಲಾರದವನು ಬರಡನು" ಎಂಬ ಋಷಿಗಳ ಮಾತನ್ನು ಕೇಳಿದ ಧನ್ವಂತರಿ ಅವರ ಪಾದಕ್ಕೆರಗಿದನು. ಮತ್ತೆ ತನಗೊಂದು ವ್ರತವನ್ನು ದಯೆಗೆಯ್ಯಿರೆಂದು ಬೇಡಿಕೊಂಡನು. ವರಧರ್ಮ ಭಟ್ಟಾರಕರು ತರಂಟು ತಲೆ (ಬೋಳು ತಲೆ)ಯವನನ್ನು ನೋಡದೆ ಉಣಬೇಡವೆಂದು ಉಪ ದೇಶವಿತ್ತರು. ಆಸನ್ನಭವ್ಯನೆನಿಸಿದ ಧನ್ವಂತರಿ ತರಂಟು ತಲೆ (ಜೈನಯತಿ) ಯವನನ್ನು ಕಾಣದೆ ಉಣ್ಣುತ್ತಿರಲಿಲ್ಲ.

ಹೀಗಿರಲೊಂದು ದಿನ ಆತ ತರಂಟು ತಲೆಯವನನ್ನು ಕಾಣಲು ಮರೆತು ಉಣ್ಣಲು ಕುಳಿತನು. ಕುಳಿತಾಗ ತರಂಟುತಲೆಯ ವಿಚಾರ ನೆನಪಿಗೆ ಬಂತು. ಇನ್ನೇನು ಮಾಡುವುದು? ನೆರೆಮನೆಯ ಕುಂಬಾರನದು ತರಂಟು ತಲೆ. ಆತನನ್ನಾದರೂ ಕಾಣುವ ಎಂದು ನೆರೆಮನೆಗೆ ಹೋದಾಗ ಅವನು ಮಣ್ಣು ಕೀಳಲಿಕ್ಕೆ ಹೋಗಿರುವನೆಂದಾಯಿತು. ಧನ್ವಂತರಿ ಅಲ್ಲಿಗೂ ಹೋಗಿ ದೂರ ದಿಂದಲೇ ಕುಂಬಾರನನ್ನು ಕಂಡು "ಹಾ! ಕಂಡೆನು" ಎನ್ನುತ್ತ ಸಂತೋಷದಿಂದ ಬೊಬ್ಬಿಟ್ಟಾಗ ಅಲ್ಲೊಂದು ನಿಧಿಯನ್ನಗೆಯುತ್ತಿದ್ದ ಕುಂಬಾರ ತಾನು ಮಾಡುವ ಕೆಲಸ ಈತನಿಗೆ ತಿಳಿಯಿತೆಂದು ಹೆದರಿದನು. ಇರುಳಾದ ಕೂಡಲೇ ಆ ನಿಧಿ ಯನ್ನು ತಂದು ಧನ್ವಂತರಿಯ ಮುಂದಿರಿಸಿದನು. ಇದರಲ್ಲಿ ನಿನಗೆ ಬೇಕಾ ದಷ್ಟನ್ನು ತೆಗೆದುಕೊಂಡು ತನ್ನನ್ನುಳಿಸಬೇಕೆಂದು ಬೇಡಿಕೊಂಡನು ಆ ಕುಂಬಾರ. ಅದನ್ನು ಕಂಡ ಧನ್ವಂತರಿ ಋಷಿಗಳುಪದೇಶಿಸಿದ ವ್ರತದ ಪ್ರಭಾವ ಮೆಚ್ಚಿ ಮನಸ್ಸಿನಲ್ಲಿಯೇ ಬೆರಗಾದನು. ಮತ್ತೆ ಆ ನಿಧಿಯಿಂದ ಕುಂಬಾರನಿಗೆ ಬೇಕಾದಷ್ಟು ಕೊಟ್ಟು ಅವನನ್ನು ಕಳುಹಿಸಿದನು; ಮರುದಿನ ಬೆಳಗಾದೊಡ ನೆಯೇ ಬಸದಿಗೆ ಬಂದನು. ಅಲ್ಲಿ ಭಟ್ಟಾರಕರಿಗೆ ವಂದಿಸಿ ತನಗಾದ ಲಾಭ ವನ್ನು ತಿಳಿಸಿದನು. ಮತ್ತೆ ಕೈಜೋಡಿಸಿ ಇನ್ನೊಂದು ವ್ರತವನ್ನು ದಯೆ

ಗೆಯ್ಯಿರೆಂದು ಬೇಡಿಕೊಂಡನು. ಭಟ್ಟಾರಕರು ಧನ್ವಂತರಿಗೆ ಮರೆತಾದರೂ ಹೆಸರರಿಯದ ಫಲಗಳನ್ನು (ಹಣ್ಣುಗಳನ್ನು) ತಿನ್ನಬೇಡವೆಂದು ಎರಡನೆಯ ವ್ರತವನ್ನುಪದೇಶಿಸಿ ಕಳುಹಿಸಿದರು. ಅಂದಿನಿಂದ ಆತ ಆ ಎರಡನೆಯ ವ್ರತವನ್ನು ಕ್ರಮದಿಂದ ಆಚರಿಸತೊಡಗದನು.

ಒಂದು ದಿನ ಧನ್ವಂತರಿವಿಶ್ವಾನುಲೋಮರು ತಮ್ಮ ಪರಿವಾರ ಗಳೊಡನೆ ಪರದೇಶಕ್ಕೆ ಪ್ರಯಾಣಬೆಳೆಸಿದರು. ಅಲ್ಲಿ ಸುಲಿಗೆಮಾಡಿ ಬೇಕಾದಷ್ಟು ಸಂಪತ್ತು ಕೂಡಿಸಿ ಒಂದಿಡಲು ಈ ದಾರಿಯಾಗಿ ಹಿಂದಿರುಗು ತ್ತಿದ್ದರು. ಆ ಅಡವಿಯಲ್ಲಿ ಕುಂಕುಮವರ್ಣದ ಕರ್ಪೂರದಂತೆ ಪರಿಮಳಿ ಸುವ ತುಂಬಾ ಹಣ್ಣುಗಳಿದ್ದುವು. ಸೇವಕರು ಹಸಿವೆಯಿಂದ ಬಳಲಿದ ಧನ್ವಂತರಿ ವಿಶ್ವಾನುಲೋಮರ ಮುಂದೆ ಆ ಹಣ್ಣುಗಳನ್ನು ತಂದಿರಿಸಿದರು. ಧನ್ವಂತರಿ ತನ್ನ ವ್ರತವನ್ನು ನೆನೆದುಕೊಂಡು ಹೆಸರರಿಯದ ಹಣ್ಣುಗಳಾದುದ ರಿಂದ ಮುಟ್ಟಲಿಲ್ಲ. ತನ್ನ ಗೆಳೆಯನು ತಿನ್ನದುದರಿಂದ ವಿಶ್ವಾನುಲೋಮನೂ ರುಚಿನೋಡಲಿಲ್ಲ. ಸೇವಕರು ಮಾತ್ರ ಹೊಟ್ಟೆತುಂಬಾ ತಿಂದರು. ತಿಂದುದೇ ತಡ ಅವರೆಲ್ಲ ಸತ್ತುಬಿದ್ದರು. ಧನ್ವಂತರಿ ವಿಶ್ವಾನುಲೋಮರು ಆ ಸೇವಕರ ಪಾಲಿನ ದ್ರವ್ಯವನ್ನು ತಾವೇ ತೆಗೆದುಕೊಂಡು ಊರಿಗೆ ಬಂದರು. ಧನ್ವಂತರಿ ಮರುದಿನ ಮಂದಿರಕ್ಕೆ ಹೋಗಿ ಕೈಮುಗಿದು ಎರಡನೆಯ ವ್ರತದಿಂದ ಜೀವ ವುಳಿದುದನ್ನೂ ಸಂಪತ್ತು ಇನ್ನಷ್ಟು ಹೆಚ್ಚಿದುದನ್ನೂ ಮುನಿಗಳಿಗೆ ತಿಳಿಸಿದನು. ಇನ್ನೊಂದು–ಮೂರನೆಯ ವ್ರತವನ್ನುಪದೇಶಿಸಬೇಕೆಂದು ಕೈಮುಗಿದು ಬೇಡಿ ಕೊಂಡನು. 'ಹಿಟ್ಟಿನ ಎತ್ತನ್ನೂ ಬಂಡಿಯನ್ನೂ ತಿನ್ನಬೇಡ' (ಹಿಟ್ಟಿನಿಂದ ಮಾಡಿ ದೇವತೆಗಳಿಗೆ ಬಲಿಕೊಡುವ ಎತ್ತು ಬಂಡಿಗಳನ್ನು) ಎಂಬ ಮೂರ ನೆಯ ವ್ರತವನ್ನು ಧನ್ವಂತರಿಗುಪದೇಶಿಸಿ ಕಳುಹಿಸಿಕೊಟ್ಟರು. ಧನ್ವಂತರಿ ಆ ವ್ರತವನ್ನೇ ನೆನೆಯುತ್ತ ತನ್ನ ಬೀಡಿಗೆ ಹಿಂತಿರುಗಿದನು.

ಮತ್ತೊಂದು ದಿನ ಆ ಧನ್ವಂತರಿ ವಿಶ್ವಾನುಲೋಮರು ಪರಿವಾರದ ಜನರನ್ನು ಕೂಡಿಕೊಂಡು ಹೊರನಾಡಿನಲ್ಲಿ ಕಳವುಮಾಡಿ ಹಿಂತಿರುಗು ತಿದ್ದರು. ದಾರಿಯಲ್ಲೊಂದು ಕಾಡಿನಲ್ಲಿ ವಿಶ್ರಾಂತಿಗಾಗಿ ಬೀಡುಬಿಟ್ಟರು. ಸೇವಕರು ಸಮೀಪದ ನಾಗಾಲಯದ ಕೊಳಕ್ಕೆ ನೀರು ಕುಡಿಯಲು ಹೋದರು.

ಅಲ್ಲಿ ಮೊದಲ ರಾತ್ರಿ ನಾಡಿನವರು ಪೂಜಿಸಿ ಬಿಟ್ಟುಹೋಗಿದ್ದ ಹಿಟ್ಟಿನ ಎತ್ತು ಬಂಡಿಗಳನ್ನೆತ್ತಿಕೊಂಡು ತಮ್ಮ ಯಜಮಾನರ ಬಳಿ ಬಂದರು. ಧನ್ವಂತರಿ ತಾನು ಕೈಕೊಂಡ ವ್ರತವನ್ನು ನೆನೆದು ತಿನ್ನಲೊಪ್ಪಲಿಲ್ಲ. ವಿಶ್ವಾನುಲೋಮನೂ ತಿನ್ನಲಿಲ್ಲ. ಸೇವಕರು ಮಾತ್ರ ನಾಲಗೆಯ ಚಾಪಲ್ಯ ತಡೆಯಲಾರದೆ ಹಿಟ್ಟಿನ ಎತ್ತು ಬಂಡಿಗಳನ್ನು ತಿಂದು ಗತಪ್ರಾಣರಾದರು. ಮೊದಲ ರಾತ್ರಿ ಸರ್ಪವೊಂದು ಆ ಹಿಟ್ಟಿನ ಎತ್ತು ಬಂಡಿಗಳ ಮೇಲೆ ವಿಷ ಕಾರಿತ್ತು. ಅದು ಸೇವಕರಿಗೇನು ಗೊತ್ತು? ತಿಳಿಯದೆ ತಿಂದು ಪ್ರಾಣಕ್ಕೆ ಸಂಚಕಾರ ವಾಯಿತು. ಗೆಳೆಯರಿಬ್ಬರೂ ಊರಿಗೆ ಮರಳಿದರು. ಧನ್ವಂತರಿ ಬಸದಿಗೆ ಬಂದು ಭಟ್ಟಾರಕರಿಗೆ ವಂದಿಸಿ ಮೂರನೆಯ ವ್ರತದ ಪರಿಣಾಮವನ್ನು ನಿವೇದಿಸಿದನು. ಮತ್ತೆ ನಾಲ್ಕನೆಯ ವ್ರತವನ್ನುಪದೇಶಿಸಬೇಕೆಂದು ಬೇಡಿಕೊಂಡನು. 'ಹುಣ್ಣಿಮೆ, ಅಮಾವಾಸ್ಯೆಗಳೆಂಬೆರಡು ಪರ್ವಗಳಲ್ಲಿಯೂ, ಅಷ್ಟಮಿ ಚತುರ್ದಶಿಗಳಲ್ಲಿಯೂ ಮದ್ಯಮಾಂಸಗಳನ್ನು ಸೇವಿಸಬೇಡ' ಎಂಬ ನಾಲ್ಕನೆಯ ವ್ರತವನ್ನು ಮುನಿಗಳಿಂದ ಕೈಕೊಂಡು ಮನೆಗೆ ಹಿಂದಿರುಗಿದನು.

ಹೀಗಿರಲೊಮ್ಮೆ ಧನ್ವಂತರಿವಿಶ್ವಾನುಲೋಮರು ಐನೂರು ಸೇವಕರೊಂದಿಗೆ ಕಳವಿಗೆ ಹೋದರು. ಹಿಂದಿರುಗಿ ಬರುವಾಗ ಒಂದು ಗಿರಿತಟದಲ್ಲಿ ಬೀಡುಬಿಟ್ಟರು. ಪ್ರಯಾಣ ಕಾಲದಲ್ಲಿ ಮದ್ಯ ಮಾಂಸ ದೊರಕದೆ ಹಲವು ದಿನಗಳಾಗಿದ್ದುವು. ಸಮೀಪದ ಬೇಡರ ಕೊಟ್ಟಕ್ಕೆ ಹೋಗಿ ಮಾಂಸ ಮದ್ಯಗಳನ್ನು ತನ್ನಿರೆಂದು ವಿಶ್ವಾನುಲೋಮು ಸೇವಕರನ್ನು ಕಳುಹಿಸಿದನು. ಹಾಗೆ ಹೋದ ನಾಲ್ವರು ಸೇವಕರೂ ಕಳ್ಳು ತೆಗೆದುಕೊಂಡು ಹಿಂದಿರುಗಿದರು. ಆ ಕಳ್ಳಿಗೆ ವಿಷ ಬೆರಸಿ ತಮ್ಮ ಗುಂಪಿನವರನ್ನೆಲ್ಲ ಕೊಂದು, ಕದ್ದುತಂದ ಬದುಕನ್ನೆಲ್ಲ ಅಪಹರಿಸಬೇಕೆಂದು ಆ ಸೇವಕರು ಯೋಚಿಸಿ ಕಳ್ಳಿಗೆ ವಿಷ ಸೇರಿಸಿದರು. ಹಾಗೆಯೇ ಮಾಂಸ ತರಲು ಹೋದವರೂ ಮಾಂಸಕ್ಕೆ ವಿಷ ಸೇರಿಸಿದರು. ಆ ದಿನ ಚತುರ್ದಶೀ ತಿಥಿ. ಧನ್ವಂತರಿ ಮಾತ್ರ ಮದ್ಯ ಮಾಂಸ ಮುಟ್ಟಲಾರ. ಗೆಳೆಯನಿಗೆ ಬೇಡವಾದುದರಿಂದ ವಿಶ್ವಾನುಲೋಮನಿಗೂ ಬೇಡ. ಸೇವಕರು ತಂದ ಮದ್ಯಮಾಂಸಗಳನ್ನು ಪರಿವಾರದವರೆಲ್ಲ ತಿಂದು ಕುಡಿದರು. ತಿಂದು ಕುಡಿದುದೇ ತಡ ಎಲ್ಲರೂ ವಿಷವೇರಿ ಅಸುವ ನೀಗಿದರು. ಮುನಿಗಳ ವ್ರತದಿಂದ ತನ್ನ ಪ್ರಾಣ ಉಳಿಯಿತೆಂದು ಧನ್ವಂತರಿ

ಸಂತಸಗೊಂಡನು. ಊರಿಗೆ ಬಂದ ಮರುದಿನವೇ ಭಟ್ಟಾರಕರನ್ನು ಕಂಡು ನಡೆದುದನ್ನೆಲ್ಲ ವಿವರಿಸಿದನು.

ಮತ್ತೆ ಇನ್ನೊಂದು ವ್ರತವನ್ನು ತನಗೆ ದಯಪಾಲಿಸಿರೆಂದು ಬೇಡಿ ಕೊಂಡನು. 'ನೀನು ಯಾರಮೇಲಾದರೂ ಕೋಪಗೊಂಡರೆ ಏಳು ಹಜ್ಜೆ ಹಿಂದೆ ಮುಂದೆ ನಡೆದು ಮತ್ತೆ ನಿನಗೆ ಮನಸ್ಸು ಬಂದಂತೆ ವರ್ತಿಸು' ಎಂದು ಐದನೆಯ ವ್ರತವನ್ನುಪದೇಶಿಸಿ ಭಟ್ಟಾರಕರು ಧನ್ವಂತರಿ ಯನ್ನು ಕಳುಹಿಸಿದರು. ಹಲವು ದಿನಗಳು ಸಂದುವು. ಹೀಗಿರಲೊಮ್ಮೆ ತಾನು ಪರಸ್ತ್ರೀಯರನ್ನಪೇಕ್ಷಿಸಿ ದುರ್ಮಾರ್ಗದಲ್ಲಿ ನಡೆದಂತೆ ತನ್ನ ಮಡದಿಯೂ ನಡೆಯುವಳೋ ಎಂಬ ಸಂಶಯ ಉಂಟಾಯಿತು ಧನ್ವಂತರಿಗೆ. ಇದನ್ನು ಪರೀಕ್ಷಿಸಬೇಕೆಂದು ಬಗೆದನು. ತಾನು ಪರದೇಶಕ್ಕೆ ತೆರಳುವೆ ನೆಂದು ಹೇಳಿ ಒಂದು ಸಂಜೆ ಮನೆಯಿಂದ ಹೊರಟನು. ನಟ್ಟಿರುಳಿನ ತನಕವೂ ಊರ ಹೊರಗಿನ ಜಿನಾಲಯದಲ್ಲಿ ಪೂಜೆ ನೋಡುತ್ತ ಕುಳಿತನು. ಮತ್ತೆ ಪುನಃ ಮನೆಗೆ ಹಿಂದಿರುಗಿದನು. ಧನ್ವಂತರಿ ಮತ್ತೆ ತನ್ನ ವಿದ್ಯಾ ಬಲದಿಂದ ಬಾಗಿಲು ತೆರೆದು ಮಲಗುವ ಮನೆಗೆ ಹೋದನು.

ಅಲ್ಲಿ ತನ್ನ ಮಡದಿ ಇನ್ನೊಂದು ವ್ಯಕ್ತಿಯೊಡನೆ ಮಲಗಿದ್ದುದು ಕಂಡು ಬಂತು. ಪರಪುರುಷರೊಡನೆ ಮಲಗಿರುವಳೆಂದು ಧನ್ವಂತರಿಯ ಮನಸ್ಸಿ ನಲ್ಲಿ ಕೋಪವೇರಿತು. ಆಗಲೇ ಋಷಿಗಳುಪದೇಶಿಸಿದ ವ್ರತದ ನೆನಪಾ ಯಿತು. ಕೂಡಲೇ ಏಳು ಹಜ್ಜೆ ಹಿಂದೆ ಮುಂದೆ ನಡೆದನು. ಮಡದಿ ಎಚ್ಚರ ಗೊಂಡಳು. ಬಳಿಯಲ್ಲಿ ಮಲಗಿದ್ದ ಅತ್ತೆಯನ್ನು ತುಸು ಆಚೆ ಸರಿಯಿರಿ ಎಂದಳು. ಆ ಮಾತು ಧನ್ವಂತರಿಗೆ ಕೇಳಿಸಿತು. "ಹಾ! ನಾನೆಂತಹ ಅನ್ಯಾಯ ಮಾಡುತಿದ್ದೆನು! ಗರ್ಭಿಣಿಯಾದ ಮಡದಿಯನ್ನೂ, ತಾಯಿಯನ್ನೂ ಕೊಂದು ಪಾಪಭಾಜನನಾಗುತಿದ್ದೆನು. ಋಷಿಗಳುಪದೇಶಿಸಿದ ವ್ರತದ ಪ್ರಭಾವದಿಂದ ಈ ಮಹಾಪಾತಕದಿಂದ ಪಾರಾದೆನು. ಆ ವ್ರತದ ಮಹಿಮೆಯನ್ನೇ ನೆನ್ನಲಿ?" ಎಂದು ಧನ್ವಂತರಿಯು ಆ ಭಟ್ಟಾರಕನನ್ನು ಮನಸ್ಸಿನಲ್ಲಿಯೇ ವಂದಿಸಿದನು.

ಮರುದಿನ ಬೆಳಕು ಹರಿಯಿತು. ತಾನಿಷ್ಟರ ತನಕ ಸಂಪಾದಿಸಿಟ್ಟ ಸಂಪತ್ತಿನಲ್ಲಿ ತಾಯಿಗೂ ಹೆಂಡತಿಗೂ ಹಂಚಿಕೊಟ್ಟು, ಉಳಿದುದನ್ನು ಜಿನ

ಮಂದಿರಗಳಿಗೂ ಬಡಬಗ್ಗರಿಗೂ ಉಂಬಳಿ ಬಿಟ್ಟನು. ವರಧರ್ಮ ಭಟ್ಟಾರಕರ ಬಳಿ ಬಂದು ನಡೆದುದನ್ನೆಲ್ಲ ತಿಳಿಸಿದನು. ತನಗೆ ದೀಕ್ಷೆ ಕೊಡಬೇಕೆಂದು ಬೇಡಿಕೊಂಡನು. "ನೀನು ಊರಲ್ಲಿದ್ದು ದೀಕ್ಷಿತನಾಗುವುದು ಅಷ್ಟು ಹಿತಕರವಲ್ಲ. ಆದುದರಿಂದ ಧರಣೀಭೂಷಣ ಪರ್ವತಕ್ಕೆ ನಡೆ. ಅಲ್ಲಿ ನನ್ನ ಸಹಧರ್ಮಿಗಳಾದ ಶ್ರೀಧರ್ಮ ಭಟ್ಟಾರಕರಿರುವರು. ಅವರಿಂದ ದೀಕ್ಷಿತನಾಗು" ಎಂದು ಹೇಳಿ ವರಧರ್ಮ ಭಟ್ಟಾರಕರು ಧನ್ವಂತರಿಯನ್ನು ಬೀಳ್ಕೊಟ್ಟರು. ಕೂಡಲೇ ಆತನು ಮನೆಗೆ ಬಂದು ಗೆಳೆಯನಾದ ವಿಶ್ವಾನುಲೋಮನನ್ನು ತನ್ನ ಬಳಿಗೆ ಕಳುಹೆಂದು ತಾಯಿಗೆ ಹೇಳಿ ತಾನು ಧರಣೀಭೂಷಣ ಪರ್ವತಕ್ಕೆ ನಡೆದನು. ಹಿಂದೆ ನಡೆದ ವೃತ್ತಾಂತಗಳನ್ನೆಲ್ಲ ಶ್ರೀಧರ್ಮ ಭಟ್ಟಾರಕರಿಗೆ ಅರಿಕೆಮಾಡಿ ಅವರಿಂದ ದೀಕ್ಷಿತನಾಗಿ ತಪಕ್ಕೆ ನಿಂತನು

ತನ್ನ ಗೆಳೆಯನು ತಪಸ್ವಿಯಾಗಲು ಹೋದನೆಂಬುದನ್ನು ಕೇಳಿದ ವಿಶ್ವಾನುಲೋಮನೂ ಧರಣೀಭೂಷಣಗಿರಿಗೆ ಗೆಳೆಯನ ಬಳಿಗೆ ಬಂದನು. ಆಗ ಧನ್ವಂತರಿ ಸೂರ್ಯಪ್ರತಿ ನಿಂದು ಧ್ಯಾನಮಗ್ನನಾಗಿದ್ದನು. ವಿಶ್ವಾನುಲೋಮನು ಎಷ್ಟು ಮಾತನಾಡಿಸಿದರೂ ಆತನು ಮಾತನಾಡಲಿಲ್ಲ. ಅದರಿಂದ ಕುಪಿತನಾದ ವಿಶ್ವಾನುಲೋಮನೂ ಬಳಿಯಲ್ಲಿದ್ದ ಸಹಸ್ರಜಟಿಯೆಂಬ ತಾಪಸನ ಶಿಷ್ಯನಾಗಿ ತಪಕ್ಕೆ ತೊಡಗಿದನು. ಮರುದಿನ ಧನ್ವಂತರಿಯೇ ವಿಶ್ವಾನುಲೋಮನ ಬಳಿ ಬಂದು ಮಾತನಾಡಿಸಿದಾಗ ಅವನೂ ಮಾತನಾಡಲಿಲ್ಲ. "ಗೆಳೆಯನೇ, ನಿನ್ನ ತಪಸ್ಸಿನ ಫಲವನ್ನೂ ನನ್ನ ತಪಸ್ಸಿನ ಫಲವನ್ನೂ ಕಡೆಗೆ ತಿಳಿಯಬಹುದು. ನೀನೀಗ ಮಾತಾಡಲೊಲ್ಲೆಯಾದರೆ ನಾನೇನು ಮಾಡಲಿ?" ಎಂದು ಹೇಳಿ ಧನ್ವಂತರಿ ತನ್ನ ಸ್ಥಾನಕ್ಕೆ ಹಿಂತಿರುಗಿದನು. ಮತ್ತನೇಕ ಕಾಲ ಉಗ್ರ ತಪಸ್ಸನ್ನಾಚರಿಸಿ ಸಮಾಧಿ ಮರಣದಿಂದ ದೇಹತೊರೆದು ಅಚ್ಯುತ ಕಲ್ಪದಲ್ಲಿ ಅಮಿತಪ್ರಭನೆಂಬ ಅಹಮಿಂದ್ರನಾಗಿ ಜನಿಸಿದನು. ವಿಶ್ವಾನುಲೋಮನೂ ತಪಸ್ಸನ್ನಾಚರಿಸಿ ಶರೀರ ತೊರೆದು ವ್ಯಂತರ ಲೋಕದಲ್ಲಿ ವಿದ್ಯುತ್ಪ್ರಭನೆಂಬ ವಾಹನ ದೇವನಾಗಿ ಹುಟ್ಟಿದನು.

ಒಮ್ಮೆ ನಂದೀಶ್ವರ ದ್ವೀಪದಲ್ಲಿ ಅಮಿತಪ್ರಭ (ಧನ್ವಂತರಿ)ನು ವಿದ್ಯುತ್ಪ್ರಭ (ವಿಶ್ವಾನುಲೋಮ)ನನ್ನು ತನ್ನ ಬಳಿಗೆ ಕರೆದನು. "ನಾನು

ಧನ್ವಂತರಿಯಾಗಿದ್ದಾಗ ನೀನು ವಿಶ್ವಾನುಲೋಮನಾಗಿದ್ದುದು ನೆನಪಿದೆಯೇ? ನೀನು ತಪದ ಫಲವನ್ನು ಈಗಲಾದರೂ ತಿಳಿದೆಯಲ್ಲ?" ಎಂದು ಹೀಯಾಳಿಸಿ ನುಡಿದನು. "ನಿಮ್ಮಲ್ಲೇನಿಂದೇನು? ನಮ್ಮಲ್ಲಿಯೂ ಉತ್ತಮರಾದ ಋಷಿಗಳಿರುವರು. ಬೇಕಾದರೆ ನನ್ನೊಂದಿಗೆ ಬಂದು ನೋಡು." ಎಂದು ಹೇಳಿ ವಿದ್ಯುತ್ಪ್ರಭನು ಅಮಿತಪ್ರಭನನ್ನು ಚಂದ್ರಿಕಾರಣ್ಯದಲ್ಲಿ ತಪಸ್ಸು ಮಾಡುತ್ತಿದ್ದ ಜಮದಗ್ನಿ ಎಂಬ ಋಷಿಯ ಬಳಿಗೆ ಕೊಂಡೊಯ್ದನು.

ಆ ಜಮದಗ್ನಿ ಋಷಿಯ ಸುತ್ತಲೂ ಹುಲ್ಲು ಬೆಳೆದಿತ್ತು; ಹುತ್ತ ಕಟ್ಟಿತ್ತು. ಇಂತಹ ತಪಸ್ವಿಗಳೆಲ್ಲಿಯಾದರೂ ಇರುವರೆ ಎಂದು ವಿದ್ಯುತ್ಪ್ರಭನನ್ನು ಕೇಳಿದನು. ಆಗ ಅಮಿತಪ್ರಭನು ತನ್ನ ತಪಃಪ್ರಭಾವದಿಂದ ಎರಡು ಹೆಣ್ಣು ಗಂಡು ಗೀಜಗ ಹಕ್ಕಿಗಳನ್ನು ನಿರ್ಮಿಸಿದನು. ಅವುಗಳು ಜಮದಗ್ನಿಯ ಗಡ್ಡದಲ್ಲಿ ಗೂಡು ಕಟ್ಟಿಕೊಳ್ಳುವಂತೆ ಪ್ರೇರೇಪಿಸಿದನು. ಆ ಹಕ್ಕಿಯ ಜೋಡಿ ಋಷಿಯ ಗಡ್ಡದಲ್ಲಿ ಗೂಡು ಕಟ್ಟಿ ವಾಸಿಸತೊಡಗಿದುವು. ಆಗ ಅಲ್ಲಿಗೆ ಇನ್ನೊಂದು ಗೀಜಗ ಹಕ್ಕಿ ಬಂದಿತು. "ಮೇರುಗಿರಿಯಲ್ಲಿರುವ ವೈನತೇಯನಿಗೆ ಮದುವೆ; ನೀವೂ ಬರುವಿರಾ?" ಎಂದು ಕೇಳಿತು. ಗರ್ಭಿಣಿಯಾದ ಹೆಣ್ಣು ಗೀಜಗ ತಾನೂ ಬರುವೆನೆಂದಿತು. ಅದಕ್ಕೆ ಗಂಡು ಗೀಜಗ "ನೀನು ಗರ್ಭಿಣಿ; ಮದುವೆಗೆ ಬರುವುದು ಬೇಡ." ಎಂದಿತು. ಅಲ್ಲಿ ಹೋಗಿ ಇನ್ನೊಬ್ಬಳನ್ನು ಮದುವೆಯಾಗುವೆನೆಂಬ ಆಸೆಯೇ ನಿನಗೆ?" ಎಂದು ನುಡಿಯಿತು ಹೆಣ್ಣು ಹಕ್ಕಿ, "ಇಲ್ಲ. ಹಾಗೆ ಮಾಡಲಾರೆ; ನನಗೆ ನೀನಲ್ಲದೆ ಉಳಿದವರೆಲ್ಲ ಅಕ್ಕ ತಂಗಿಯರು" ಎಂದು ನುಡಿಯಿತು. ಗಂಡು "ನನ್ನನ್ನು ಬಿಟ್ಟು ಬೇರೆ ಹೆಣ್ಣನ್ನು ನೆನೆದೆಯಾದರೆ ಈ ತಾಪಸನಗತಿಯೇ ನಿನಗೂ ಒದಗಬಹುದು." ಎಂದು ಹೇಳಿದ ಹೆಣ್ಣಿನ ಮಾತನ್ನು ಕೇಳಿದ ಗಂಡು ತನ್ನ ರೆಕ್ಕೆಗಳಿಂದ ಕಿವಿ ಮುಚ್ಚಿಕೊಂಡಿತು. "ನಾನೀ ಮುನಿಯನ್ನು ಹೊಂದಲಾರೆನಪ್ಪಾ!" ಎಂದಿತು.

ಇದನ್ನು ಕೇಳಿದ ಜಮದಗ್ನಿ ಕೋಪ ದಿಂದ ಉರಿದನು. ಅವುಗಳನ್ನು ಕೊಂದಿಕ್ಕಲೆಂದು ಗಡ್ಡದ ಗೂಡಿಗೆ ಕೈಯಿಕ್ಕಿದನು. ಆಗ ಗೀಜಗ ಪಕ್ಕಿಗಳು ಮಾಯವಾಗಿ ದೇವತೆಗಳ ರೂಪದಿಂದ ಮುನಿಯ ಮುಂದೆ ಬಂದು ನಿಂತವು. "ನೀವೇಕೆ ನನ್ನ ಗತಿಗೆ ಹೋಗಲಾರಿರಿ? ನಾನೆಸಗಿದ

ದೋಷವೇನು?" ಎಂದು ದೇವತೆಗಳೊಡನೆ ಜಮದಗ್ನಿ ಕೇಳಿದನು. "ಅಪುತ್ರಸ್ಯ ಗತಿರ್ನಾಸ್ತಿ" ಎಂಬಂತೆ "ಮಕ್ಕಳನ್ನು ಪಡೆಯದೆ ತಪಕ್ಕೆ ನಿಂತ ನಿನಗೆ ಸುಗತಿ ದೊರೆಕೊಳ್ಳದು." ಎಂದು ಆ ದೇವತೆಗಳು ಹೇಳಿದುವು. ಆ ಮಾತನ್ನು ಕೇಳಿದ ಜಮದಗ್ನಿ ತಪಸ್ಸನ್ನಲ್ಲಿಯೇ ಬಿಟ್ಟು ತನ್ನ ಸೋದರಮಾವನಾದ ಅಸೂತಿ ಮಹಾರಾಜನಲ್ಲಿಗೆ ಬಂದು ಆತನ ಮಗಳನ್ನು ಮದುವೆಯಾದನು. ಆಗ ಅಮಿತಪ್ರಭನು ವಿದ್ಯುತ್ಪ್ರಭನನ್ನು ನೋಡಿ "ಹೇಗಿದೆ ನಿನ್ನ ಋಷಿಗಳ ಮನದ ಧೈರ್ಯ? ಒಂದೇ ಒಂದು ಮಾತಿನಿಂದ ಹಲಗಾಲದ ತಪಸ್ಸು ಹೋಯಿತಲ್ಲವೆ? ಆದುದರಿಂದ ಅಜ್ಞಾನಿಗಳ ತಪಸ್ಸಿನಿಂದ ಫಲವಿಲ್ಲ. ಋಷಿಗಳ ತಪಸ್ಸನ್ನು ಕೆಡಿಸುವುದು ಹಾಗಿರಲಿ, ಗೃಹಸ್ಥರ ತಪವನ್ನಾದರೂ ಕೆಡಿಸಲಾರೆ ನೀನು! ಸಾಧ್ಯವಿದ್ದರೆ ಈಗ ಈ ಗೃಹಸ್ಥನ ತಪವನ್ನು ಕೆಡಿಸು." ಎಂದು ರಾಜಪ್ರತಿಮಾಯೋಗದಲ್ಲಿದ್ದ ನನ್ನನ್ನು (ಜಿನದತ್ತ ಸೆಟ್ಟಿಯನ್ನು) ತೋರಿಸಿದನು.

ವಾಹನದೇವನಾದ ವಿದ್ಯುತ್ಪ್ರಭನು ಸಿಡಿಲು ಮಿಂಚು ಬಿರುಗಾಳಿಗಳಿಂದಲೂ, ಹಾವು ಚೇಳು ಹುಲಿಗಳಿಂದಲೂ, ಭೂತ ಪಿಶಾಚಿಗಳಿಂದಲೂ ನನ್ನನ್ನು ಪೀಡಿಸಿ ಬೆದರಿಸಿದನು. ಈ ಉಪಸರ್ಗಗಳನ್ನೆಲ್ಲ ನಾನು ಸಹಿಸಿದೆನು. ನನ್ನ ಮನೆಯವರ ರೂಪಿನ ಕೊಲೆ ಬಂದು ಮನೆ ಸುಟ್ಟಿತೆಂದೂ ಮಗನು ಸತ್ತನೆಂದೂ ಹಲವು ಭೇದೋಪಾಯಗಳನ್ನು ಹೂಡಿದರೂ ನಾನು ವಿಚಲಿತನಾಗಲಿಲ್ಲ. ಇದನ್ನು ಕಂಡ ವಿದ್ಯುತ್ಪ್ರಭನು "ಶ್ರಾವಕ ಗುಣಗಳೇ ಹೀಗಿದ್ದ ಮೇಲೆ ಇನ್ನು ಮುನಿಗಳ ಗುಣ ಹೇಗಿರಬಹುದು?" ಎಂದೆಣಿಸಿ ಮಿಥ್ಯಾಭಿಮಾನ ತೊರೆದು ಸದ್ದೃಷ್ಟಿಯಾದನು. ನನ್ನ ಸ್ಥೈರ್ಯಕ್ಕಾಗಿ ಸಂತೋಷಗೊಂಡನು. ಮತ್ತೆ ಗಗನ ಗಾಮಿನೀ ವಿದ್ಯೆಯನ್ನುಪದೇಶಿಸಿದನು. ನಾನೀ ವಿದ್ಯೆಯನ್ನು ಪರ್ವದಿನಗಳಲ್ಲಿ ಜಪಿಸಿ ಮಂದಿರ ದರ್ಶನಗಳಿಗೆ ಹೋಗಲು ಉಪಯೋಗಿಸುವೆನು" ಎಂದು ಜಿನದತ್ತನು ತನಗೆ ಗಗನಗಾಮಿನೀ ವಿದ್ಯೆ ದೊರಕಿದ ಬಗೆಯನ್ನು ಲಲಿತಾಂಗನಿಗೆ ತಿಳಿಸಿದನು. "ಜಿನದತ್ತನು ಪ್ರಾಣಿಜೀವನಕ್ಕೆ ತಪ್ಪನು" ಎಂಬ ನಿಶ್ಶಂಕೆಯಿಂದ ಕೂಡಿದ ಒಂದು ನಂಬಿಗೆಯಿಂದಲೇ ತನಗಿಷ್ಟು ಫಲ ದೊರಕಿತೆಂದ ಮೇಲೆ "ಜನ ಪೂಜ್ಯಂ ಜಿನನಂ ಜಿನಾಗಮಮುಮಂ ನಿಶ್ಶಂಕೆಯಿಂ ನಂಬುವಾ।

ತನ ಸೌಖ್ಯೋನ್ನತಿಯಂ ಮಹಾಮಹಿಮೆಯಂ ಪೇಲ್ಪಣ್ಣಿಸಲ್ಬಕ್ಕುಮೇ?" ಎಂದು ದರ್ಶನದಲ್ಲಿ ನಿಶ್ಶಂಕನಾದನು. ಮತ್ತೆ ದೇವರ್ಷಿಯೆಂಬ ಚಾರಣರ ಬಳಿ ಜಿನದೀಕ್ಷೆ ಕೈಕೊಂಡನು; ಕರ್ಮಗಳನ್ನು ಕೆಡಿಸಿ ಲೋಕಶಿಖರಿಶೇಖರ ನಾದನು. "ಸುಖಮಂ ಮಾಡುವೊಡರ್ಹತ್ಪದಾಂಬುಜಮೇ ಮಾಳ್ಕುಂ, ಎಂದು ನಂಬುವಾತನೇ ಕೃತಾರ್ಥನಂ" ಎಂದು ಗೌತಮ ಗಣಧರರು ಕತೆ ಮುಗಿಸಿದರು.

ಅನಂತಮತಿ

(ನಿಷ್ಕಾಂಕ್ಷೆ)

ಅಂಗದೇಶದಲ್ಲಿ ಚಂಪಾಪುರ ಸೊಗಯಿಸುತ್ತಿದೆ. ಅಲ್ಲಿ ಜಿನಪಾದ ಭಕ್ತನೆನಿಸಿದ ಪ್ರಿಯದತ್ತನೆಂಬ ಹರದನು ಮಡದಿ ಮನೋರಮೆಯೊಂದಿಗೆ ಬಾಳುವನು. ಆ ದಂಪತಿಗಳ ಮಗಳು ಗುಣಭೂಷಣೆಯಾದ ಅನಂತಮತಿ. ಆಕೆಗೆ ಹಲವು ಮಂದಿ ಒಡನಾಡಿಗಳಿದ್ದರು. ಒಮ್ಮೆ ಅನಂತಮತಿ ತನ್ನ ಒಡನಾಡಿಗಳೊಂದಿಗೆ ಗೊಂಬೆಗಳ ಮದುವೆಯಾಟ ಆಡಿದಳು. ಒಂದು ಗಂಡು ಗೊಂಬೆಗೆ ವಸ್ತ್ರಾಭರಣ ತೊಡಿಸಿ ಆ ಗೆಳತಿಯರು ಮದುವಣಿಗನ ನ್ನಾಗಿ ಮಾಡಿದರು. ಅನಂತಮತಿಯೇ ಮದುಮಗಳಾದಳು. ಗೆಳತಿಯ ರೆಲ್ಲಾ ಕೈಪರೆಗುಟ್ಟುತ್ತ ಹಾಡಿ ಕುಣಿದರು. ಆಗಲೇ ಬಸದಿಗೆ ಹೊರಟಿದ್ದ ಪ್ರಿಯದತ್ತ ಸೆಟ್ಟಿ ಇದನ್ನು ಕಂಡನು. "ಮಗಳೇ, ನೆಂಟರಿಷ್ಟರೂ ಬಂಧು ಬಳಗದವರೂ ಇಲ್ಲದೆ ನೀನೇ ಗುಟ್ಟಿನಲ್ಲಿ ಮದುವೆಮಾಡಿಕೊಳ್ಳುವುದೇ?" ಎಂದು ಮಗಳನ್ನು ಪ್ರೀತಿಯಿಂದಪ್ಪಿಕೊಂಡು ಮುದ್ದಾಡಿದನು. ಮತ್ತೆ ಆಕೆಯನ್ನು ಕೂಡಿಕೊಂಡು ಬಸದಿಗೆ ನಡೆದನು.

ಬಸದಿಯಲ್ಲಿ ಆ ಸೆಟ್ಟಿ ಜಿನಸ್ವಾಮಿಗೆ ವಂದಿಸಿ, ಭಟ್ಟಾರಕರಿಗೆ ನಮಸ್ಕರಿಸಿ ಧರ್ಮಶ್ರವಣ ಮಾಡಿದನು. "ಈ ನನ್ನ ಮಗಳು ಅನಂತ ಮತಿ ನಮಗಾರಿಗೂ ತಿಳಿಯದಂತೆ, ಜಿನಪೂಜೆ ಮಾಡದೆ ನೆಂಟರಿಷ್ಟರಿಲ್ಲದೆ

ಗೆಳತಿಯರೊಡಗೂಡಿ ಗುಟ್ಟಿನಲ್ಲಿ ಆಟದ ಮದುವೆ ಮಾಡಿಕೊಂಡಳು. ಇವಳಿಗೆ ಬ್ರಹ್ಮಚರ್ಯವನ್ನು ಉಪದೇಶಿಸಿರಿ." ಹೀಗೆ ಆ ಸೆಟ್ಟಿ ಭಟ್ಟಾರಕರನ್ನು ಕೇಳಿಕೊಂಡನು. ಆಗಲೇ ಭಟ್ಟಾರಕರು ಅನಂತಮತಿಯೊಡನೆ "ಇಂದಿನಿಂದ ನಿನಗೆ ಬ್ರಹ್ಮಚರ್ಯ ಕೊಟ್ಟೆನು; ಸ್ವೀಕರಿಸಿ ನಡೆಸು" ಎಂದು ನುಡಿದರು. ಅನಂತಿಮತಿ ಆ ವ್ರತವನ್ನು ಕೈಕೊಂಡಳು. "ತನಗೆ ಈ ವ್ರತವು ಪುಣ್ಯದಿಂದ ಲಭಿಸಿತು; ಇನ್ನು ಎಂದಿಗೂ ಇದನ್ನು ಬಿಡಲಾರೆನು" ಎಂದು ಮನಸ್ಸು ಗಟ್ಟಿಮಾಡಿಕೊಂಡಳು. ಅಂದಿನಿಂದ ಆಕೆಯನ್ನು ಮನೆಯವರೂ ಗೆಳತಿಯರೂ "ಬ್ರಹಚಾರಿಣಿ" ಎಂಬ ಅಡ್ಡ ಹೆಸರಿನಿಂದಲೇ ಕರೆಯತೊಡಗಿದರು. ಶಿಶುವನ್ನು ತಾಯಿಯೂ, ಸಸಿಯನ್ನು ಒಕ್ಕಲಿಗನೂ, ಧನವನ್ನು ಲೋಭಿಯೂ, ಶೀಲವನ್ನು ಸತಿಯೂ ರಕ್ಷಿಸಿಕೊಂಡು ಬರುವಂತೆ ಅನಂತಮತಿ ತನ್ನ ಬ್ರಹ್ಮಚರ್ಯವನ್ನು ಕಾಪಾಡತೊಡಗಿದಳು. ಐದನೆಯ ಹರೆಯದಿಂದ ತೊಡಗಿದ ಆಕೆಯ ಬ್ರಹ್ಮಚರ್ಯಕ್ಕೆ ಹನ್ನೆರಡು ಕಾಲ ಸಂದಿತು.

ಅದೊಂದು ವಸಂತಋತುವಿನಲ್ಲಿ ಅನಂತಮತಿ ತನ್ನ ಗೆಳತಿಯರೊಡಗೂಡಿ ಊರ ಹೊರಗಿನ ಉದ್ಯಾನಕ್ಕೆ ನಡೆದಳು. ಅಲ್ಲೊಂದು ಮಾವಿನ ಮರಕ್ಕೆ ಉಯ್ಯಾಲೆ ಕಟ್ಟಿ ಅದರಲ್ಲಿ ಕುಳಿತುಕೊಂಡಳು. "ಅಳಿನಿನಾದಮುಂ, ಉಯ್ಯಲಧ್ವನಿಯುಂ, ಮನೋಹರಮಪ್ಪಿನಂ, ಜಳಜ ನೇತ್ರೆಯರೊಯ್ಯನೆ ತೂಗುತುಂ, ಕೋಮಳ ನಿನಾದದಿಂ, ದೇವರ ವಸ್ತುರೂಪವಗುಣಸ್ತವಂಗಳನೆ ಪಾಡೆ ವಿನೋದದಿಂದಾ ತರಳಾಕ್ಷಿ ನೋಡುತಿರ್ದಳು."

ಅದೇ ಹೊತ್ತಿಗೆ ಕುಂತಳಮಂಡಿತನೆಂಬ ವಿದ್ಯಾಧರನು ಸುಕೇಶಿ ಎಂಬ ವಿದ್ಯಾಧರಿಯೊಂದಿಗೆ ವಿಮಾನವೇರಿ ಆಕಾಶದಲ್ಲಿ ಸಂಚರಿಸುತ್ತಿದ್ದನು. ಉದ್ಯಾನದಲ್ಲಿ ಉಯ್ಯಲಾಡುತ್ತಿದ್ದ ಅನಂತಮತಿ ಅತನ ಕಣ್ಣಿಗೆ ಬಿದ್ದಳು. ಅವಳ ರೂಪಕ್ಕೆ ಮನಸೋತ ಕುಂತಳಮಂಡಿತನು ಆಕೆ ತನ್ನವಳಾಗಬೇಕೆಂದು ಬಯಸಿದನು. ಸುಕೇಶಿ ತನ್ನೊಡನಿದ್ದುದು ಅವನ ಬಯಕೆಗೆ ಅಡ್ಡಿಯಾಯಿತು. ಆದುದರಿಂದ ಆಗ ಅವನು ಸುಮ್ಮನಿದ್ದು ತನ್ನ ನಿವಾಸಕ್ಕೆ ಹಿಂದಿರುಗಬೇಕಾಯಿತು. ಮತ್ತೆ ಆ ವಿದ್ಯಾಧರನು ಪ್ರಿಯೆಯೊಡನೆ ತಾನು ಮೇರು ಪ್ರಾಂತಕ್ಕೆ ಹೋಗಿ ಬರುವೆನೆಂದು ಹೇಳಿ ವಿಮಾನವೇರಿ ಚಂಪಾ

ಪುರದ ಉದ್ಯಾನಕ್ಕೆ ಬಂದನು. ಬಂದವನೇ ಅನಂತಮತಿಯನ್ನೆತ್ತಿ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಆಕಾಶಕ್ಕೆ ಹಾರಿದನು. ಆಕೆ ಭಯದಿಂದ ವಿಹ್ವಲೆಯಾಗಿ ಜಿನೇಂದ್ರನನ್ನೇ ನೆನೆಯುತ್ತ ವಿಮಾನದ ಒಂದು ಮೂಲೆಯಲ್ಲಿ ಮುರುಟಿ ಕುಳಿತು "ನನ್ನ ಬ್ರಹ್ಮಚರ್ಯವನ್ನೆಂತು ರಕ್ಷಿಸಲಿ!" ಎಂಬ ಚಿಂತೆಯಿಂದ ಆಕುಲೆಯಾಗಿದ್ದಳು.

ಇತ್ತ ತನ್ನ ಪತಿ ಮನೆಗೆ ಹಿಂದಿರುಗಲು ತಡವಾದುದನ್ನು ಕಂಡ ಸುಕೇಶಿ, ಅವಲೋಕಿನೀ ವಿದ್ಯೆಯನ್ನು ಕರೆದು "ಗಂಡನೆಲ್ಲಿರುವನೆಂದು ತಿಳಿದು ಬಾ" ಎಂದು ಕಳುಹಿಸಿದಳು. ಆ ವಿದ್ಯೆ ಹಿಂದಿರುಗಿ ಬಂದು ವಿದ್ಯಾಧರನು ಅನಂತಮತಿಯೊಂದಿಗೆ ವಿಮಾನದಲ್ಲಿ ಹಾರಾಡುತ್ತಿರುವನೆಂದು ಸುಕೇಶಿಗರುಹಿತು. ತನ್ನ ಪ್ರಿಯಕರನು ಅನ್ಯಳಲ್ಲಿ ಅನುರಕ್ತನಾಗಿರುವನೇ? ನಾನವನನ್ನು ಪ್ರೀತಿಸಿದುದು ವ್ಯರ್ಥವಾಯಿತೇ? ಎಂದು ಆ ವಿದ್ಯಾಧರಿ ಹಲುಬಿದಳು. ಸಿಟ್ಟಿನಿಂದ ಉರಿದಳು. ಕೂಡಲೇ ಬಿಚ್ಚುಗತ್ತಿ ಹಿಡಿದುಕೊಂಡು ಗಂಡನಿರುವಲ್ಲಿಗೆ ಧಾವಿಸಿ ಬಂದಳು. ತನ್ನ ಮಡದಿ ಕತ್ತಿ ಹಿಡಿದು ಬರುವುದನ್ನು ಕಂಡ ಕುಂತಳ ಮಂಡಿತನು ಭಯದಿಂದ ನಡುಗಿದನು. ಪರ್ಣಲಘುವೆಂಬ ವಿದ್ಯೆಯನ್ನು ಕರೆದು "ಅನಂತಮತಿಯನ್ನು ಆದಷ್ಟು ಬೇಗನೆ ಕೆಳಗಿಳಿಸಿ ಬಾ" ಎಂದು ಅಪ್ಪಣೆಮಾಡಿದನು. ಆ ವಿದ್ಯೆ ರೆಪ್ಪೆ ಮುಚ್ಚಿ ತೆರೆಯುವುದರೊಳಗೆ ಭೀಮಾರಣ್ಯವೆಂಬ ಅಡವಿಯ ಮಾವಿನ ತೋಪಿನಲ್ಲಿ ಅನಂತಮತಿಯನ್ನು ತಂದಿಳಿಸಿತು.

ಆ ಭೀಮಾರಣ್ಯ ಹೆಸರಿಗೆ ತಕ್ಕಂತೆ ಭಯಂಕರವಾಗಿಯೇ ಇದ್ದಿತು. ಆದರೂ ಅನಂತಮತಿ ಧೈರ್ಯಗೆಡಲಿಲ್ಲ. "ತನಯರ್, ತಾಯ್ತಂದೆ ಸುಹೃಜ್ಜನಂ, ಇಷ್ಟಬಂಧುವರ್ಗಂ, ಅಜ್ಜಂ, ಪಜ್ಜಂ, ತನುಜರ್, ಕಾಂತೆಯರೊಡವುಟ್ಟಿನವರ್, ಬೇರೆಂಬ ಜನಮತಂ ತಪ್ಪುಗುಮೇ?" ಎಂದು ಭಾವಿಸಿದಳು. "ಧರೆ, ರಾಜ್ಯ, ರೂಪು, ವೀರ, ಮಹಿಮೆ, ತನು, ವಿಲಾಸ ಜೀವಿತ, ಸಿರಿ, ಸೌಭಾಗ್ಯ, ಧನ, ಯೌವನ, ಅಳವು, ಬಲ, ಸೌಖ್ಯ ಇವೆಲ್ಲ ಸುರಚಾಪದಂತೆ, ದರಿಯ ಮರದಂತೆ ಅಸ್ಥಿರವಾದುದು" ಎಂಬ ಜಿನ ವಚನದ ಮಹಿಮೆಯನ್ನು ನಾನಿಂದರಿತೆನು. ಕರ್ಮವಶದಿಂದ ನನಗೀ ದುಃಖ ಬಂದೊದಗಿತು. ಈಗ ಜಿನಪಾದಗಳೇ ಶರಣು" ಹೀಗೆ ಅನಂತಮತಿ

ತನ್ನಲ್ಲಿ ನಿಶ್ಚಯಮಾಡಿಕೊಂಡಳು. ಆನೆಯು ಕಾಡನ್ನೂ, ತುಂಬಿ ತಾವರೆಯನ್ನೂ, ಶಿಶು ತಾಯನ್ನೂ, ಗಂಡನು ಹೆಂಡತಿಯನ್ನೂ ಸದಾ ನೆನಸುತ್ತಿರುವಂತೆ ಅನಂತಮತಿ "ಇಂದ್ರ ನರೇಂದ್ರ ವಂದ್ಯನಂ ಪರಮ ಜಿನೇಂದ್ರನಂ ನೆನೆಯುತುಂ ಜೈನ ಗುಣಸ್ತವಂಗಳಂ ಭಾವಿಸುತುಂ" ಇದ್ದಳು. ಆ ವನದ ಹುಲಿ, ಸಿಂಹ, ಜಿಂಕೆ, ಆನೆ, ಹಾವು, ಮುಂಗಿಸಿ ಮೊದಲಾದ ಜಂತುಗಳು ತಮ್ಮೊಳಗಿನ ವೈರವನ್ನು ಮರೆತು ಆಕೆಯನ್ನು ಸೇವಿಸುತ್ತಿದ್ದುವು. ವನವೆಲ್ಲಾ ಶಾಂತಿರಸದಿಂದ ತುಂಬಿ ತುಳುಕಾಡಿತು.

ತುಸು ಹೊತ್ತಿನಲ್ಲಿ ಬೇಡನೊಬ್ಬನು ತನ್ನ ಬೇಡತಿಯೊಡನೆ ಆ ದಾರಿಯಾಗಿ ಬಂದನು. ಆತನು ಅನಂತಮತಿಯನ್ನು ದೇವತೆಯೆಂದೇ ಭಾವಿಸಿದನು. ತಾನು ತಂದ ಇಪ್ಪೆಯ ಹೂವನ್ನೂ ಬೇಲದ ಹಣ್ಣನ್ನೂ ಅಕೆಯ ಪಾದತಲದಲ್ಲಿಟ್ಟು ವಂದಿಸಿ ಹಿಂದಿರುಗಿ ನೆಟ್ಟಗೆ ತನ್ನೂರಾದ ಶಂಕರಪುರಕ್ಕೆ ಬಂದನು. ದೇವತೆಯೊಬ್ಬಳು ಭೀಮಾರಣ್ಯಕ್ಕೆ ಬಂದಿರುವಳೆಂದು ಆ ಊರೊಡೆಯನಿಗೆ ನಿವೇದಿಸಿದನು. ಬೇಡರ ಅರಸು ತಡೆಯದೆ ಪರಿವಾರದೊಡಗೂಡಿ ಅರಣ್ಯಕ್ಕೆ ನಡೆದನು. ಅವನು ಅನಂತಮತಿಯನ್ನು ಕಂಡು, ಈಕೆ ರೆಪ್ಪೆ ತೆರೆದು ಮುಚ್ಚುತ್ತಿರುವುದರಿಂದ ಮಾನುಷಿಯೇ ಅಗಿರಬೇಕಲ್ಲದೆ ದೇವತೆಯಲ್ಲ ಎಂದು ನಿಶ್ಚಯಿಸಿದನು. ಮತ್ತೆ ಅನಂತಮತಿಯ ರೂಪಕ್ಕೆ ಮನಸೋತ ಆ ಬೇಡರ ದೊರೆ ಆಕೆಯನ್ನು ತನ್ನರಮನೆಗೆ ಕರದೊಯ್ದನು. ತನ್ನ ವೈಭವ ಸಂಪತ್ತುಗಳನ್ನು ತೋರಿಸಿ "ನಿನ್ನಂತಹ ಪುಣ್ಯವಂತೆ ಯಾರಿರುವರು? ಈ ವೈಭವಸಂಪತ್ತುಗಳಿಗೆಲ್ಲಾ ನೀನೇ ಒಡತಿಯಾಗುವೆ; ಅಷ್ಟೊಂದು ದಯೆತೋರು" ಎಂದು ಬೇಡಿಕೊಂಡನು. ತಾನು ಕೈಕೊಂಡ ವ್ರತವನ್ನು ಬಿಡುವುದಕ್ಕಿಂತ ಸಾಯುವುದೇ ಮೇಲೆಂದೆಣಿಸಿದ ಅನಂತಮತಿ ಮೌನವಾಗಿ ಪಂಚನಮಸ್ಕಾರಗಳನ್ನುಚ್ಚರಿಸುತ್ತಲೇ ಇದ್ದಳು.

ಆಕೆ ಬೇಕುಬೇಕೆಂದೇ ಮೌನವಾಗಿರುವಳೆಂದು ಆ ದೊರೆ ಸಿಟ್ಟಾದನು. "ಈ ನನ್ನ ಸಂಪತ್ತನ್ನು ಪ್ರೀತಿಯಿಂದ ಸ್ವೀಕರಿಸು: ಇಲ್ಲವಾದರೆ ಬೀದಿಯ ಭಿಕಾರಿಯಾಗು. ನಿನ್ನೊರಟುತನ ಬಿಡೆಯಾದರೆ, ನಾಳೆ ಬೆಳಗಾಗುವಾಗ ಅದಕ್ಕೆ ತಕ್ಕ ಮದ್ದೆರೆಯುವೆನು, ನೋಡು" ಎಂದು ಗರ್ಜಿಸಿದನು." ನಾನೀ ವ್ರತವನ್ನು ಬಿಡದಿದ್ದರೆ ಈ ಮೂರ್ಖನು ನನ್ನನ್ನು

ಕೊಲ್ಲದೆ ಉಳಿಯನು. ಜಿನಪಾದ ಪದ್ಮಗಳೇ ಈಗ ನನಗೆ ಗತಿ. ಕಳೆಯು ಬಾರದ ಉಪಸರ್ಗ (ಕಷ್ಟ) ಇಂಗಿಹೋಗುವ ವರೆಗೂ ಆಹಾರವನ್ನು ಸ್ವೀಕರಿಸಲಾರೆ" ಎಂದು ಅನಂತಮತಿಯು ಪರಿಚ್ಛೇದಿಸಿದಳು.

ಆಗಲೇ ನಗರ ಯಕ್ಷಿಗೆ ಆಸನಕಂಪವಾಯಿತು. ಆ ಯಕ್ಷಿದೇವತೆ ಅನಂತಮತಿಯನ್ನು ಪರೀಕ್ಷಿಸಬೇಕೆಂದೆಣಿಸಿದಳು. ಕಿರಾತರಾಜನ ರೂಪ ಧರಿಸಿ ಅನಂತಮತಿಯ ಸನಿಯಕ್ಕೆ ಬಂದಳು. ಹಲವು ತೆರದ ಸುಖ ದಾಸೆ ತೋರಿಸಿ ಆಕೆಯ ಮನಸೆಳೆಯಲು ಬಯಸಿದಳು. ಆದರೇನು? ಯಾವ ಆಸೆ ತೋರಿಸಿದರೂ ಪ್ರಯೋಜನವಾಗಲಿಲ್ಲ. ಜಿನಪಾದ ಭಕ್ತಿ ಯಿಂದ ದೊರಕುವ ಮೋಕ್ಷಶ್ರೀಯನ್ನು ಬಿಟ್ಟು ಉಳಿದ ಸಂಪತ್ತು ಗಳನ್ನು ಅನಂತಮತಿ ಕಾಲಕಸವಾಗೆಣಿಸಿದಳು. ಆಕೆಯ ದೃಢಚಿತ್ತವನ್ನು ಕಂಡು ಯಕ್ಷಿಣಿಗೂ ಅಚ್ಚರಿ ಎನಿಸಿತು, ಪ್ರತ್ಯಕ್ಷಳಾಗಿ "ಜಿನಭಕ್ತೆ ಯಾದ ನಿನ್ನನ್ನು ಈ ವನಚರ ಪೀಡೆಯಿಂದ ಪಾಲಿಸಲು ಬಂದಿರುವೆನು" ಎಂದು ಯಕ್ಷಿಣಿ ಅನಂತಮತಿಯನ್ನು ಸಮಾಧಾನಪಡಿಸಿದಳು. ಮತ್ತು ಯಕ್ಷಿಣಿ ಮಲಗಿ ನಿದ್ರಿಸುತ್ತಿದ್ದ ಬೇಡರ ದೊರೆಯ ಬಳಿಗೆ ಹೋಗಿ ಅವನನ್ನು ಹೊಡೆದೆಬ್ಬಿಸಿದಳು. ಭಯಂಕರ ರೂಪು ಧರಿಸಿ "ನನ್ನನ್ನು ಮಾನುಷಿ ಎಂದೆಣಿಸಿ ಪೀಡಿಸುವೆಯಾ? ಈಗಲೇ ನಿನ್ನನ್ನು ಮಣ್ಣು ಮುಕ್ಕಿಸುವೆನು ನೋಡು. ಬದುಕಿ ಬಾಳಬೇಕೆಂಬಾಸೆ ಇದ್ದರೆ ಬೆಳಗಾದೊಡನೆಯೇ ನನ್ನನ್ನು ಪೂಜಿಸಿ ಅಯೋಧ್ಯಾನಗರಕ್ಕೆ ದಾರಿ ತೋರಿಸು. ಇಲ್ಲವಾದರೆ ನಿನ್ನ ಅಂತ್ಯವಾಯಿತೆಂದು ತಿಳಿ" ಎಂದು ಹೆದರಿಸಿ ಅದೃಶ್ಯಳಾದಳು. ಕಿರಾತ ರಾಜನು ಹೆದರಿದನು. ಇದು ನಿಜವೆಂದು ನಂಬಿದನು. ನಸುಕು ಹರಿ ದೊಡನೆಯೇ ಅನಂತಮತಿಯನ್ನು ಹಲವಾರು ತೆರದಿಂದ ಅರ್ಚಿಸಿ ವಂದಿಸಿ ಅಯೋಧ್ಯೆಗೆ ದಾರಿ ತೋರಿದನು.

ಅನಂತಮತಿ ಜಿನಪಾದಗಳನ್ನೇ ಧ್ಯಾನಿಸುತ್ತ ಭೀಮಾರಣ್ಯದಿಂದ ಹೊರ ಬಂದಳು. ಅಡವಿಯ ಹೊರಬದಿಯ ಬಸದಿಯನ್ನು ಹೊಕ್ಕು ದೇವಧ್ಯಾನಕ್ಕೆ ತೊಡಗಿದಳು. ಅಯೋಧ್ಯಾ ನಗರದ ಪುಷ್ಪಕನೆಂಬ ಹರದನು ಆ ದಾರಿ ಯಾಗಿ ಹರದಕ್ಕಾಗಿ ಹೋಗುತ್ತಿದ್ದನು. ಆತನು ಅನಂತಮತಿಯ ಜಿನಪಾದ ಭಕ್ತಿಯನ್ನು ಕಂಡು ಬೆರಗಾದನು. ಆ ಹರದನು ಪ್ರೀತಿಯಿಂದ ಮಾತ

ನಾಡುತ್ತ ಅನಂತಮತಿಯೊಡನೆ 'ನಿನ್ನೂರಾವುದು? ತಂದೆ ತಾಯಿಗಳಾರು?' ಎಂದು ಮುಂತಾಗಿ ಬೆಸಗೊಂಡನು. "ಕ್ಷಮೆಯೆ ಕೆಳೆಯಂ ಶೀಲಂ ಪುತ್ರಂ ಸದಾ ಚರಿತಂ ಧನಂ। ವಿಮಲದಯೆ ತಾಯ್ ಸತ್ಯಂ ಪಜ್ಜಂ ಗುಣಂಗಳೆ ಸೋದರರ್ । ಕ್ರಮದೆ ತನಯಳ್ ತತ್ವಂ ಸಮ್ಯಕ್ತ್ವವೊಪ್ಪುವ ತಂದೆ । ಯಮಮೆ ಭವನಂ ದೇಶಂ ಮೋಕ್ಷಂ ಜಿನೋಕ್ತಿಯೆ ಪಟ್ಟಣಂ ।" ಎಂದು ಉತ್ತರಿಸಿದಳು. ಇದನ್ನಾಲಿಸಿದ ಹರದ ಆಕೆ ದರ್ಶನಶುದ್ಧಿಯೆಂದರಿತು ತನ್ನ ಮಂದಿರಕ್ಕೆ ಕರೆದೊಯ್ದನು. ಅಲ್ಲಿ ತನ್ನ ಮಡದಿಯ ವಶವಿತ್ತು ತಾನು ಬರುವ ವರೆಗೂ ಈಕೆಯನ್ನು ಮಗಳಂತೆ ನಡೆಸಿಕೊಳ್ಳುತ್ತಿರು ಎಂದುಸುರಿ ಹರದುಗೆಯ್ಯಲು ನಡೆದನು.

"ಈ ಕನ್ನೆಯಾದರೋ ಸುರಸುಂದರಿಯಂತಿರುವಳು; ನನ್ನ ಹರೆಯ ವೀಗ ಇಳಿಮುಖವಾಗಿದೆ; ಹಾಗಿರಲು ಈಕೆಯನ್ನು ಮನೆಯಲ್ಲಿರಿಸಿಕೊಳ್ಳು ವುದೆಂದರೆ ಹೆಗ್ಗಣವನ್ನೊಳ ಹಾಕಿ ಮುಡಿ ಕಟ್ಟಿದಂತಾದೀತು" ಎಂದು ನೆನೆದ ಆ ಹರದನ ಮಡದಿ ಗುಣವತಿ ಅನಂತಮತಿಯನ್ನು ವ್ಯಾಳಿ ಎಂಬ ಗಣಿಕೆಗೆ ಸಾವಿರ ಹೊನ್ನಿಗೆ ಮಾರಿಬಿಟ್ಟಳು. "ಕರ್ಮವಶದಿಂದಾದ ದುಃಖ ನನ್ನ ಬೆನ್ನು ಬಿಡಲಾರದು; ಏನಾದರೂ ನನ್ನ ಬ್ರಹ್ಮಚರ್ಯ ಬಿಡಲಾರೆ" ಎಂದು ಅನಂತಮತಿ ದೃಢಮನಸ್ಕಳಾಗಿಯೇ ಇದ್ದಳು. ಆಗ ಆ ಗಣಿಕೆ ಅನಂತ ಮತಿಯೊಡನೆ "ಎಲೆ ಮಗಳೆ, ಇಂತೇಕೆ ಉದಾಸೀನಳಾಗಿರುವೆ? ಗಣಿಕೆಯ ರಾದ ನಮ್ಮ ಕಜ್ಜ ನಿನಗರಿಯದೆ? ಬಂದ ಇತರರನ್ನು ಸಂತಸಗೊಳಿಸುವುದೇ ನಮ್ಮ ಧರ್ಮ" ಎಂದು ಮೊದಲಾಗಿ ಹಲವಾರು ರೀತಿಗಳಲ್ಲಿ ಬೋಧಿಸಿ ನೋಡಿದಳು; ಕಡೆಗೆ ಹೆದರಿಸಿಯೂ ನೋಡಿದಳು. ಆದರೆ ಯಾವುದ ರಿಂದಲೂ ಪ್ರಯೋಜನವಾಗಲಿಲ್ಲ. ಅನಂತಮತಿಯ ದೃಢಮನಸ್ಸನ್ನು ಶಿಥಿಲವಾಗಿರಿಸಲು ಯಾರಿಗೆ ತಾನೇ ಸಾಧ್ಯ? ಈ ತರುಣಿ ಯಾವ ಕೆಲಸಕ್ಕೂ ಬಾರದವಳೆಂದು ಆ ಗಣಿಕೆ ತಿಳಿದಳು. ಆದುದರಿಂದ ಕೂಡಲೇ ಆಕೆಯನ್ನು ಊರ ದೊರೆ ಸಿಂಹರಥನಲ್ಲಿಗೆ ಕರೆದೊಯ್ದಳು. "ರಾಜಯೋಗ್ಯವಾದ ವನಿತಾರತ್ನವಿದು. ದೇವರು ಕೈಗೊಳ್ಳಬೇಕು" ಎಂದು ಬಿನ್ನವಿಸಿ ದೊರೆ ಗೊಪ್ಪಿಸಿದಳು.

ಸಿಂಹರಥ ಅನಂತಮತಿಯ ಸೊಬಗಿಗೆ ಮನಸೋತನು. ಆತ ತನ್ನ ಪ್ರಿಯೆಯಾಗಬೇಕೆಂದು ಆಕೆಯ ರೂಪಲಾವಣ್ಯಗಳನ್ನು ಮುಕ್ತಕಂಠದಿಂದ

ಹೊಗಳಿದನು. ಅನಂತಮತಿಯ ದೃಢನಿಶ್ಚಯದ ಮುಂದೆ ದೊರೆಯ ಬೇಡಿಕೆಗಳೆಲ್ಲ ನೀರಿನ ಹೋಮವಾದುವು. "ಗಂಧದ ಕಟ್ಟಿಗೆಯಿಂದ ಜೋಳದ ಕಾಳನ್ನು ಬೇಯಿಸುವ ಏಗ್ಗುಗಳಂತೆ ತಾನೆಂದೂ ಆಗಲಾರೆನು; ಮೋಕ್ಷ ಸುಖವನ್ನೀವ ನನ್ನ ವ್ರತಗಳನ್ನೆಂದಿಗೂ ಬಿಡಲಾರೆನು. ಜಿನಧರ್ಮವನ್ನು ಬಿಟ್ಟು ಕಳೆದು ಇಂದ್ರಿಯಭೋಗಕ್ಕೊಳಗಾಗುವುದೆಂದರೆ ಆವಿನ ಹಾಲನ್ನಿತ್ತು ಕಳ್ಳಿ ಹಾಲು ಕೊಂಡಂತಲ್ಲವೆ? ಸಿರಿಯ ಸೊಕ್ಕಿಗೆ, ರೂಪಿನೇಳ್ಗೆಗೆ ಮೆಯ್ಯನಾಡುವ ಅಳಿಬುದ್ಧಿಯಿಂದ ಇದೇ ಸ್ಥಿರವೆಂದು ಅನೇಕರು ಮನುಷ್ಯ ಜನ್ಮವನ್ನು ನಂಬಿ ಕೆಡುವರು. ಇಂದ್ರಚಾಪದಂತೆ ಬಿಸಿಲ್ಗುದುರೆಯಂತೆ ಇರುವ ಈ ಸಂಸಾರವನ್ನು ನಂಬಿ ದರ್ಶನವ್ರತಗಳನ್ನು ಕೆಡಿಸಿಕೊಳ್ಳುವುದು ಹೆಬಗತನವಲ್ಲವೆ? ಕೈಕೊಂಡ ಬ್ರಹ್ಮಚರ್ಯವ್ರತವನ್ನು ನಾನೆಂದಾದರೂ ಬಿಡುವುದುಂಟೆ?" ಎಂದು ಅನಂತಮತಿ ತನ್ನಲ್ಲೆ ಚಿಂತಿಸುತ್ತಿದ್ದಳು.

ರಾಜನ ಪರಿಜನರು ಬಲು ತೆರನಾಗಿ ಆಕೆಯನ್ನು ಒಡಂಬಡಿಸಲು ಯತ್ನಿಸಿದರೂ ವ್ಯರ್ಥವಾಯಿತು. ಸಿಂಹರಥನು ತಡೆಯಲಾರದ ಕ್ರೋಧದಿಂದ ಕಟುಕರನ್ನೇ ಕರೆಸಿದನು. ಕಟುಕರು ಅನಂತಮತಿಯನ್ನು ಸೆಳೆದೊಯ್ದು ಚಳಿಲ್ ಚಳಿಲನೆ ಹೊಡೆದರು. ಮೈಯ್ಯೊಡೆದು ನೆತ್ತರು ಸೋರಿತು. ಕಟುಕರು ಮತ್ತೂ ಬಿಡಲಿಲ್ಲ; ಕೈ ಬಚ್ಚುವ ವರೆಗೂ ಹೊಡೆದರು. ಆಗಲೂ ಅನಂತಮತಿ ಮಂದರದಂತೆ ಅಚಲಳಾಗಿ "ಶರಣೆನಗೀಯುವಸರದೊಳ್ । ಪರಮ ಜಿನೇಶ್ವರಪಾದಾಂಬುಜಮೆ ಪೆರತೇಂ । ಶರಣಲ್ಲೆಂದುರೆ ಪಿಡಿದಳ್ ಸು । ರುಳಿಲ್ಲದೆ ಬಂದಿವಿಡಿವವೋಲ್ ಜಿನಪದಮಂ ।" ಅನಂತಮತಿಗೆ ಸೆಳೆಯ ನೋವಿಗಿಂತಲೂ ಹೆಚ್ಚಾಗಿ ವ್ರತಭಂಗವಾಗುವುದೆಂತೆಂಬ ನೋವೇ ಹಿರಿದೆನಿಸಿತು. ಆಗ ಆಕೆ ದೇಹದಾಸೆಯನ್ನು ತೊರೆದು ಪಂಚನಮಸ್ಕಾರಗಳನ್ನೇ ಜಪಿಸತೊಡಗಿದಳು. ನಗರದ ದೇವತೆಗಳಿಗೆ ಅನುಕಂಪವಾಯಿತು. ಅವರೆಲ್ಲಾ ಅನಂತಮತಿಯ ಬಳಿ ಓಡಿ ಬಂದರು; ಕಾಲ್ಪಿಡಿದು ವಂದಿಸಿದರು. "ಕುಮಾರಿ ಅನಂತಮತಿ! ಭಯಗೊಳ್ಳದೆ ಧೈರ್ಯದಿಂದಿರು. ಜಿನಭಕ್ತರಿಗೆ ಯಾವ ಹಾನಿಯೂ ತಟ್ಟದು. ನರೆ ಬಂದ ಮಾತ್ರಕ್ಕೆ ಯಾರೂ ಹಿರಿಯರೆನಿಸಲಾರರು. ಜಿನಭಕ್ತರು ಹರೆಯದಲ್ಲಿ ಕಿರಿಯರಾದರೂ ಹಿರಿಯರೆ. ನಿನ್ನ ವ್ರತವನ್ನು ಧೈರ್ಯದಿಂದ ಕಾಪಾಡು" ಎಂದು ದೇವತೆಗಳು ಆಕೆಗೆ ಧೈರ್ಯ ಕೊಟ್ಟರು.

ಆ ದೇವತೆಗಳ ಶಕ್ತಿ ಸಾಮರ್ಥ್ಯಗಳನ್ನೆಂತು ಬಣ್ಣಿಸಲಿ? ನಿಮಿಷದೊಳಗೆ ಅರಸು ಮತ್ತು ಅರಸುಪರಿವಾರದವರ ಮೈಮೇಲೆ ಬಾಸುಂಡೆಗಳೆದ್ದುವು. ಗಾಯದೋರಿ ಕೆನ್ನೀರು ಹರಿಯಿತು. ಅರಮನೆಯಲ್ಲೆಲ್ಲಾ ಗೋಳೇಗೋಳು. ಆಗಲೂ ಅನಂತಮತಿ ಧೈರ್ಯದಿಂದಲೇ 'ಇದ್ದಳು. ದೇವತೆಗಳು ಕೈಪರೆಗುಟ್ಟಿ ನಗುತ್ತಿದ್ದರು. "ಎಂತೆಂತಹ ಪರೀಶಹಂಗಳು ಬಂದು ಪೀಡಿಸಿದರೂ ಓ ಎನ್ನದೆ ಸೈರಣೆಯಿಂದಿರುವ ಜೈನರಿಗಿಂತ ಮೇಲಾರು? ಏನು ಮಾಡಲಿ? ಕಷ್ಟ ಬಂತಲ್ಲಾ! ಎಂದು ಹಂಬಲಿಸದೆ ಧರ್ಮಮಗ್ನರಾದ ಜೈನರಿಗಿಂತ ಮೇಲಾರು? ನಾಶವಾಗುವ ಒಡಲು ಒಡವೆಗಳನ್ನು ಕಡೆಗಣಿಸಿ ನಾಶವಾಗದ ನಿರಂತರ ಸುಖವನ್ನು ಪಡೆದವರು ಜೈನರಲ್ಲದೆ ಮತ್ತಾರು?" ಎಂದು ಆ ದೇವತೆಗಳು ಬಾಯ್ತುಂಬ ಹೊಗಳಿದರು. ಆಗಲೇ ಜಿನಭಕ್ತಿಯಲ್ಲಿರುವ ಮಹಾಮಹಿಮೆಯನ್ನರಿತ ಸಿಂಹರಥ ಮಹಾರಾಜನೂ ಅವನ ಅನುಚರರೂ ಶ್ರಾವಕ ವ್ರತವನ್ನಂಗೀಕರಿಸಿದರು. ಅನಂತಮತಿಯನ್ನು ಸತ್ಕರಿಸಿ ಪೂಜಿಸಿದರು.

ಹೀಗಿರಲು ಅನಂತಮತಿಯ ಜಿನಭಕ್ತಿಯ ಒಸಗೆ ಊರಲ್ಲೆಲ್ಲ ಹಬ್ಬಿತು. ಸಿಂಹರಥನ ರಾಜಶ್ರೇಷ್ಠಿ ಜಿನೇಂದ್ರದತ್ತನು ಅರಮನೆಗೆ ಬಂದು ಅನಂತಮತಿಯನ್ನು ತನ್ನಲ್ಲಿಗೆ ಕರೆದೊಯ್ದು ಬಯಕೆಯನ್ನು ಪ್ರಕಟಿಸಿದನು. ಹಾಗೆ ಆ ಶ್ರೇಷ್ಠಿ ಆಕೆಯನ್ನು ಕರೆದೊಯ್ದು ಮರ್ಯಾದೆಯಿಂದ ತನ್ನ ಮನೆಯ ದೇಹಾರದಲ್ಲಿ ಇರಗೊಳಿಸಿದನು. "ನೀನು ನನ್ನ ತಾಯಂತೆ; ಸುಖವಾಗಿ ಇಲ್ಲಿಯೇ ಇರಬೇಕು" ಎಂದು ಬೇಡಿಕೊಂಡನು. ಜಿನೇಂದ್ರದತ್ತನ ದೇಹಾರದಲ್ಲಿ ಕಮಲ ಶ್ರೀಗಂತಿಯರೆಂಬ ಯತಿಶ್ರೇಷ್ಠರೂ ನೆಲಸಿದ್ದರು. ಅನಂತಮತಿ ಅವರೊಡನೆ ಪರತತ್ವಗಳನ್ನು ವಿಚಾರ ಮಾಡುತ್ತ ಜಿನಭಕ್ತರಾದ ಮಹಾಪುರುಷರ ಕತೆಗಳನ್ನಾಲಿಸುತ್ತ ಹಲವು ನೋಂಪಿಗಳನ್ನಾಚರಿಸಿದಳು. ಯಾವ ವಿಧದ ಸುಖಭೋಗವನ್ನೂ ಅಪೇಕ್ಷಿಸದೆ ಜಿನೇಂದ್ರಪದಪದ್ಮಾರಾಧಕಳಾಗಿ ಸುಖವಾಗಿ ಕಾಲ ಕಳೆಯತೊಡಗಿದಳು. ಜಿನೇಂದ್ರದತ್ತನೂ ಅರಸು ಅರಸಿಯರೂ ಆಕೆಯನ್ನು ತಮ್ಮ ಗುರುವೆಂಬ ಭಕ್ತಿಯಿಂದ ಸೇವಿಸುತ್ತಿದ್ದರು.

ಇತ್ತ ಚಂಪಾಪುರದ ಪ್ರಿಯದತ್ತ ಸೆಟ್ಟಿಯೂ ಆತನ ಮಡದಿಯೂ ಮಗಳು ಮಾಯವಾದುದರಿಂದ ಅತ್ಯಂತ ದುಃಖಿತರಾಗಿದ್ದರು. ರೂಪವತಿ

ಯಾದ ಮಗಳನ್ನು ಯಾವನೋ ವಿದ್ಯಾಧರನು ಕೊಂಡೊಯ್ದಿರಬೇಕೆಂದು ಚಿಂತಿಸಿದರು. "ನಿನ್ನ ರೂಪವನ್ನು ಕಂಡು, ಮೇಲ್ಮಾತುಗಳನ್ನಾಗಲಿ ಆನಂದ ಗೊಳಿಸುತ್ತಿದ್ದ ನಾವು ಇನ್ನೆಂತು ನೀನಿಲ್ಲದೆ ಬಾಳಲಿ? ನಿನ್ನುಡುವ ವಸ್ತ್ರ ಚಯಮಂ। ನಿನ್ನನ್ನತಿನೆತ್ತ ಪಲವು ರತ್ನದ ತೊಡವಂ" ನಿನ್ನುಡುವೆಡೆಗಳ ವಾ। ನೋನ್ನತೆ ನೆನೆದು ದೇಹ ಮುರಿದಪುದಿನ್ನುಂ ॥ ಜಿನಪೂಜೆಗಳಂ ಮಾಡದೆ। ಮುನಿಗಳ್ಗಾಹಾರ ದಾನಮಂ ಮಾಡದೆ ಘೋಂ। ಕನೆ ಪೋಗ ಲಾಗ ಮಗಳೇ। ಮನ ಕತಮಂ ಮಾಡಿ ಪೆತ್ತಮನಮರುಗುವಿನಂ।" ಎಂದು ಮೊದಲಾಗಿ ಆ ದಂಪತಿಗಳು ಮಗಳಿಗಾಗಿ ಮರುಗಿದರು. ವರದತ್ತ ಭಟ್ಟಾರಕರು ಸೆಟ್ಟಿಯ ಮನೆಗೆ ಬಂದು ಸೆಟ್ಟಿಯನ್ನೂ ಆತನ ಮಡದಿಯನ್ನೂ ಸಮಾಧಾನಗೊಳಿಸಿದರು. ಭಟ್ಟಾರಕರ ಉಪದೇಶಾಮೃತದಿಂದ ಆ ದಂಪತಿ ಗಳ ದುಃಖಾಗ್ನಿ ಕೆಲ ದಿನಕ್ಕೆ ಆರಿತು.

ಪ್ರಿಯದತ್ತ ಸೆಟ್ಟಿ ಮಗಳ ಅಗಲಿಕೆ ಸಹಿಸಲಾರದೆ, ಊರಲ್ಲಿ ನಿಲ್ಲಲು ಮನಸ್ಸಿಲ್ಲದೆ ಅಯೋಧ್ಯೆಗೆ, ತನ್ನ ತಂಗಿ ವಸುಮತಿಯ ಮನೆಗೆ ಬಂದನು. ತಂಗಿಗೂ ಭಾವ ಜಿನೇಂದ್ರದತ್ತ ಸೆಟ್ಟಿಗೂ ಮಗಳು ಮಾಯವಾದುದನ್ನು ಹೇಳಿದನು. ಅವರೂ ತುಂಬಾ ನೊಂದರು. ಮರುದಿನ ಪ್ರಿಯದತ್ತ ಸೆಟ್ಟಿ ತಂಗಿಯೊಡನೆ ದೇಹಾರಕ್ಕೆ ನಡೆದನು. ಅಲ್ಲಿ, "ಸುರಮಹೀರುಹಮಾಲಿಯಿಂ ಸಹಕಾರ ಭೂಜನಿಕಾಯದಿಂ। ಸರಸಿಜಾಕರದಿಂ ಲತಾಭವನಂಗಳಿಂ ಧ್ವಜದಿಂ ಫಲೋ। ತ್ಕರದಿನಿಂದ್ರವಿಮಾನದಿಂ ಹರಿಚಂದನಂಗಳ ಜೊಂಪದಿಂ। ಸುರನಗಂಗಳ ಪಂಕ್ತಿಯಿಂದೆಸೆದಿರ್ದ ಪೂವಿನ ಮಾಲೆಯಿಂ ॥" ರಮಣೀಯ ವಾದ ರಂಗವಲ್ಲಿಯನ್ನು ಕಂಡನು. ಇದು ಅನಂತಮತಿಯ ಕೈಚಳಕವಲ್ಲದೆ ಬೇರಾರದೂ ಅಲ್ಲವೆಂದು ಖಂಡಿತ ಮಾಡಿದನು. ಮಗಳ ನೆನಪಿನಿಂದ ಸೆಟ್ಟಿಯ ಕಣ್ಣಲ್ಲಿ ಕಂಬನಿ ತುಂಬಿತು. ಇದೇನೆಂದು ತಂಗಿ ಕೇಳಲು, "ನಾನು ನಿನ್ನೆಯಿಂದ ಊಟದ ರುಚಿಯನ್ನೂ ಈ ರಂಗವಲ್ಲಿಯನ್ನೂ ನೆನೆದಾಗ, ಅನಂತಮತಿಯ ನೆನಹು ಬಂತು; ಈ ರಂಗವಲ್ಲಿ ಅನಂತಮತಿಯ ಕೈಚಳಕವನ್ನು ಹೋಲುತ್ತಿದೆ. ಅದರಿಂದಾಗಿ ಕಂಬನಿ ತುಂಬಿದೆ." ಎಂದನು. ಕೂಡಲೇ ಆ ವಸುಮತಿ ಅನಂತಮತಿ ಕುಮಾರಿಯನ್ನು ಕರೆತಂದು ತನ್ನಣ್ಣನಿಗೆ ತೋರಿಸಿದಳು. ಬಡವನಿಗೆ ಕಟಾರ ಸಿಕ್ಕಿದಂತೆ, ತಿರುಕುಳಿಗೆ

ಪಟ್ಟಮಣೆ ದೊರೆತಂತೆ ಸೆಟ್ಟಿಯ ಸ್ಥಿತಿಯಾಯಿತು. ಅನಂತಮತಿಯೂ ತನ್ನ ವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ಅರುಹಿದಳು. ತನ್ನಣ್ಣನ ಮಗಳು ತನ್ನ ಬಳಿಯಲ್ಲಿಯೇ ಇದ್ದಳೆಂಬುದನ್ನು ತಿಳಿದ ವಸುಮತಿಯ ಸಂತಸಕ್ಕೆಣೆಯಿಲ್ಲ ದಾಯಿತು. ಅಂದು ಅವರೆಲ್ಲ ಬಹು ಸಂಭ್ರಮದಿಂದ ಜಿನೇಂದ್ರಪೂಜೆ ಯನ್ನು ನಿರವಿಸಿದರು.

"ಮಗಳು ಪ್ರಾಯಸಮರ್ಥೆಯಾಗಿರುವಳು; ಇನ್ನಿವಳನ್ನು ಯೋಗ್ಯ ವರನಿಗೆ ಕೊಡಬೇಕು. ಸೋದರಳಿಯನಾದ ಶ್ರುತಸಾಗರನಿಗೇ ಈಕೆ ಯನ್ನು ಈಯುವುದು." ಎಂದು ಸೆಟ್ಟಿ ಮನಸ್ಸಿನಲ್ಲಿ ಯೋಜಿಸಿದನು. ಅಲ್ಲಿಂದಲೇ ಬಂಧುಬಾಂಧವರಿಗೆ ಓಲೆಯಟ್ಟಿದನು. ತಳಿರ ಹಂದರು ತಳತಳಿಸಿತು; ಪತಾಕೆಗಳು ಹಾರಾಡಿದುವು; ಗುಡಿಗೋಪುರಗಳು ಆಗಸ ಮುಟ್ಟಿದುವು; ರಂಗವಲ್ಲಿ ಕುಡಿಬಿಟ್ಟಿತು. ಅನಂತಮತಿಯ ಮದುವೆಯ ಮಂಟಪ ಸೊಗಯಿಸಿತು. ಜಿನಾಭಿಷೇಕಕ್ಕೆಂದು ಹಾಲು ಮೊಸರುಗಳ ಕಂದಲು ಕಂದಲುಗಳನ್ನೇ ತಂದಿರಿಸಿದರು. ಪಟ್ಟೆಬಟ್ಟೆಗಳ ಮೂಟೆಮೂಟೆ ಗಳನ್ನೇ ಹಾಸಿದರು. ಬೇಡಿದವರಿಗೆ ಬೇಕಾದಂತೆ ಕೊಡಲು ವಸ್ತುವೊಡವೆ ಗಳ ರಾಶಿರಾಶಿಗಳನ್ನೇ ಕೂಡಿಸಿದರು. "ಪಿರಿದುತ್ಸವದಿಂದ ಝೇಂ। ಕರಿಸಿ ಬುದರ್ನಚ್ಚಿ ಮೆಚ್ಚಿ ಬಣ್ಣಿಸೆ ಕರಮಾ । ದರದಿಂ ನಂಟರ್ಜಿೀಯೆನೆ । ಸರಸಿಜಮುಖ ನಿನ್ನ ಮದುವೆಯುಂ ನೋಡಿದಪೆಂ!" ಎಂದು ಪ್ರಿಯದತ್ತ ಸೆಟ್ಟಿ ಅನಂತಮತಿಯನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಪ್ರೀತಿಯಿಂದ ನುಡಿದನು.

ಅದಕ್ಕವಳು ನಗುತ್ತ "ವಿಮಲಜಿನೇಂದ್ರ ಸಾಕ್ಷಿಯೊಳು ನೀಮೆ ನಗಂ ಕಿರಿಯಂದು ಮಿಕ್ಕ ಸಂ । ಯಮಜಲರಾಶಿಯಪ್ಪ ವರದತ್ತ ಮುನೀಶ್ವರರಿಂದೆ ಬ್ರಹ್ಮಚ । ರ್ಯಮನನುರಾಗದಿಂ ಕೊಡಿಸಿದರ್ ಮರೆ ಯಲ್ ನಿಮಗಾಗದಾನು ಮ । ಶ್ರಮದೊಳೆ ತಾಳ್ದಿದಂ ಮುದದಿ ನೀಯೆಡೆ ಯೊಳ್ಕಿಡಿಸಲ್ಕೆ ತಕ್ಕುದೇ?" ಎಂದು ತಂದೆಯನ್ನು ಬೆಸಗೊಂಡಳು. "ಪರಮಸುಖವನ್ನೀವ ಪರಮಜಿನೇಂದ್ರ ಧರ್ಮವನ್ನೂ, ಬ್ರಹ್ಮಚರ್ಯವ್ರತ ವನ್ನೂ ಸ್ವೀಕರಿಸಿದ ತನಗೆ ಅಲ್ಪವಾದ ಸಂಸಾರಸುಖ ಬೇಡ; ತಿಳಿದವರಾದ ತಾವು ಮದುವೆಯ ಮಾತೆತ್ತಲಾಗದು" ಎಂದು ಆಕೆ ತಂದೆತಾಯಂದಿರನ್ನು

ಸೆರೆಗೊಡ್ಡಿ ಬೇಡಿಕೊಂಡಳು. ಹೆತ್ತವರ ಉಪದೇಶಗಳೆಲ್ಲ ಆ ಧೀರಮತಿಯ ದೃಢನಿಶ್ಚಯದ ಮುಂದೆ ವ್ಯರ್ಥವಾದುವು. ಮತ್ತೆ ಸೋದರತ್ತೆಯಾದ ವಸುಮತಿಯೂ ಆಕೆಯ ಪತಿಯೂ ಅನಂತಮತಿಯನ್ನು ಒಡಂಬಡಿಸಲು ಯತ್ನಿಸಿದರೂ ಅವರ ಮಾತೂ ನಡೆಯಲಿಲ್ಲ. "ಈ ವ್ರತವನ್ನು ನಾನೆಂದಿಗೂ ಬಿಡಲಾರೆನು. ದೃಢವ್ರತಿಗೆ ನಾಲಗೆಯೊಂದಲ್ಲದೆ ಎರಡಿಲ್ಲ" ಎಂದು ಆಕೆ ಅತ್ತೆಮಾವಂದಿರನ್ನು ಬಾಯಿ ಮುಚ್ಚಿಸಿದಳು.

ಕಡೆಗೆ ಅನಂತಮತಿ ತಂದೆತಾಯಂದಿರ ಬಂಧುಬಳಗದವರ ಸಮ್ಮತಿ ಪಡೆದು ಸಂಭ್ರಮದಿಂದ ಜನ್ಮಾಭಿಷೇಕ ಪೂಜೆ ಮಾಡಿಸಿದಳು. ವರದತ್ತ ಭಟ್ಟಾರಕರನ್ನು ಗುರುಗಳಾಗಿ ಸ್ವೀಕರಿಸಿ ಕಮಲಶ್ರೀಕಂತಿಯರ ಬಳಿಯಲ್ಲಿ ದೀಕ್ಷೆ ಕೈಕೊಂಡಳು. ಇಹಲೋಕದ ಸುಖವನ್ನು ಕನಸಿನಲ್ಲಿಯೂ ನೆನಸದೆ, ತಪದ ತಾಪಕ್ಕೆ ಬೇಯದೆ, ಶಂಕಾರಹಿತಳಾಗಿ ಜಿನಪಾದಪದ್ಮಗಳನ್ನೆ ಧ್ಯಾನಿಸ ತೊಡಗಿದಳು. ಹೀಗೆ ಮಹಾತಪಸ್ವಿನಿಯಾಗಿ ಸಮಾಧಿವಿಧಿಯಿಂದ ಅನಂತ ಮತಿ ಶರೀರತ್ಯಾಗ ಮಾಡಿ, ಮತ್ತೆ ಹನ್ನೆರಡನೆಯ ಸಹಸ್ರಾರಕಲ್ಪದಲ್ಲಿ ಸುಕಾಂತನೆಂಬ ಮಹತ್ತರ ದೇವನಾಗಿ ಜನಿಸಿದಳು.

ಒದ್ದಾಯನ

(ನಿರ್ವಿಚಿಕಿತ್ಸೆ)

ಒಮ್ಮೆ ಸೌಧರ್ಮಕಲ್ಪದಲ್ಲಿ ಸೌಧರ್ಮೇಂದ್ರನು ಒಡ್ಡೋಲಗಗೊಟ್ಟಿದ್ದನು. ಆಗ ಸಭೆಯಲ್ಲಿ ನೆರೆದ ಸುರರು ಸೌಧರ್ಮೇಂದ್ರನಿಗೆ ಕೈಮುಗಿದು, "ಪರಮ ಜಿನಾಗಮವನ್ನು ಕೇಳುವ ಕುತೂಹಲವಿದೆ" ಎಂದು ಬೇಡಿಕೊಂಡರು.

"ಸಕಲ ಜೀವಿಗಳಿಗೂ ಸದ್ಧರ್ಮವೇ ಶರಣು ಅಲ್ಲದೆ ಕುಧರ್ಮವಲ್ಲ. ಹುಸಿಕರನ್ನೂ ಕೊಲೆಗಡಕರನ್ನೂ ಕಳ್ಳರನ್ನೂ ಕಂಡಾಗ ಸಜ್ಜನರು ದೂರ ತೊಲಗುವುದು, ಪಾಪವು ಕಷ್ಟಕರವೆಂದು ಸಾರಲೋಸುಗ; ಧರ್ಮಿಷ್ಠರನ್ನು, ಜ್ಞಾನಿಗಳೂ ಸಜ್ಜನರೂ ಅನುಸರಿಸುವುದು ಸದ್ಧರ್ಮವೇ ಶರಣು ಎಂದು

ತಿಳಿಸಲೋಸುಗ. ಧರ್ಮವು ಸ್ವರ್ಗಸುಖಕ್ಕೂ; ಅಧರ್ಮವು ನರಕ ದುಃಖಕ್ಕೂ ಕಾರಣ. ಕುಲೀನನು ಚರಿತ್ರಹೀನನಾಗಿ ವ್ಯಸನಿಯಾಗಿಯೂ ನಡೆದರೆ ಲೋಕವೇ ಹಳಿವುದು. ಉತ್ತಮ ನಡತೆಯುಳ್ಳ ಧರ್ಮವೇ ನಿಜವಾದ ಧರ್ಮ. ಸುಲಕ್ಷಣನಾದವನಿಗೆ ಕನ್ನಡಿ ತೋರಿಸಿದರೆ ಸಿಡುಕು ಉಂಟಾಗದು; ಬದಲಾಗಿ ಮೂಕೊರೆಯನಿಗೆ ಕನ್ನಡಿ ತೋರಿಸಿದರೆ ಅವನಿಗೆ ಎಲ್ಲಿಲ್ಲದ ಸಿಟ್ಟು ಬರುವುದು. ಅಂತೆಯೇ ಪಾಪರಹಿತನಿಗೆ ಸದ್ಧರ್ಮವು ಹಿತವಾಗಿಯೂ, ಪಾಪಸಹಿತನಿಗೆ ಅಹಿತವಾಗಿಯೂ ತೋರುವುದು ಬಾಳೆಹಣ್ಣು ಇನಿದಾಗಿರುವುದು ಹೇಗೆ ಸಹಜವೋ, ಮಾವಿನಹಣ್ಣು ಸವಿಯಾಗಿರುವುದು ಹೇಗೆ ಸ್ವಭಾವವೋ, ಹಾಗೆ ಸ್ವರ್ಗವೇರುವ ಯೋಗ್ಯತೆಯುಳ್ಳ ಪುರುಷನಿಗೆ ಸದ್ಧರ್ಮದಲ್ಲಿ ನಂಬಿಕೆಯೂ, ದಿವ್ಯ ಮುನಿಗಳಲ್ಲಿ ಭಕ್ತಿ, ಪ್ರೀತಿ, ಕೊಂಡಾಟ, ಭಕ್ತಿಗಳೂ ಸಹಜವಾಗಿರುವುವು. ಮಳೆಯ ನೀರಿನಿಂದ ಕೆರೆತೊರೆಗಳು ತುಂಬುವಂತೆ ಪುಣ್ಯವುಳ್ಳಾತನಿಗೆ ಸಿರಿ ತಾನಾಗಿಯೇ ಬರುವುದು. ಉದ್ದೇಶ ರಹಿತವಾಗಿ ಭಕ್ತಿಯಿಂದ ಮಾಡುವ ದಾನ ನಾಶವಿಲ್ಲದ ಸುಖವನ್ನು ತಂದೊಡ್ಡುವುದು. ರಾಜ್ಯಕ್ಕೆ ಚತುರಂಗ ಸೈನ್ಯವಿದ್ದಂತೆ, ಶಾಸ್ತ್ರ, ಆಹಾರ, ಅಭಯ, ಭೈಷಜ್ಯಗಳೆಂಬ ನಾಲ್ಕು ದಾನಗಳು. ಪರಮಾಗಮದಿಂದ ಪರಮಸುಖ ದೊರಕುವುದು. ಆದುದರಿಂದ ಶಾಸ್ತ್ರದಾನ ಮಾಡಬೇಕು.

ಶ್ರುತವನಿತೆ (ವಿದ್ಯಾದೇವಿ) ನಮ್ಮನ್ನು ಮುಕ್ತಿಶ್ರೀಯ ಬಳಿಗೆ ಕರೆದೊಯ್ಯುವ ದೂತಿ; ಆದುದರಿಂದ ಶಾಸ್ತ್ರದಾನ ಮಾಡಬೇಕು. ಅನ್ನದಾನದ ಮಹಿಮೆ ಅತಿ ದೊಡ್ಡದು. ಮುನಿಯೋರ್ವನಿಗೆ ಅನ್ನದಾನ ಮಾಡಿದ ಫಲವಾಗಿ ಹರಿಷೇಣನು ಶಾಂತೀಶ್ವರನಾಗಿ ಜನ್ಮವೆತ್ತಿದ್ದನು. ಯಾವ ಬಗೆಯ ಬೇಸರವೂ ಇಲ್ಲದೆ ಬಾಗಿಲಿಗೆ ಬಂದವರಿಗೆ ಅನ್ನದಾನ ಮಾಡಬೇಕು. ಅನ್ನವೇ ಸಕಲ ಜೀವಿಗಳಿಗೂ ಮೂಲಾಧಾರ. ತನ್ನಂತೆಯೇ ಇತರರು ಎಂದು ತಿಳಿದು ಆರ್ತರಕ್ಷಣೆ ಮಾಡಬೇಕು. ರೋಗದಿಂದ ನರಳುವವರಿಗೆ ಸದಾ ಔಷಧ ದಾನಮಾಡಬೇಕು. ಆಯುಸ್ಸು, ಕೀರ್ತಿ, ಐಶ್ವರ್ಯ, ಸ್ವರ್ಗಸುಖ ಇವೆಲ್ಲವೂ ಉತ್ತಮದಾನಗಳ ಫಲ" ಎಂದು ಸೌಧರ್ಮೇಂದ್ರನು ವಿವರಿಸಿದನು.

"ದೇವ! ಫಲದಲ್ಲಿ ಹಿರಿದೂ ಅಕ್ಷಯಲಕ್ಷ್ಮಿಗೆ ನೆಲೆಯೂ, ಆಗಿ ನಿರ್ವಿಚಿಕಿತ್ಸೆಯೇ ಉತ್ತಮ ಗುಣವೆಂದು ತಮ್ಮ ಮುಖದಿಂದ ಕೇಳಿದೆವು. ಈ ಕಲಿಕಾಲದಲ್ಲಿ ಕೂಡ ಭರತಕ್ಷೇತ್ರದಲ್ಲಿ ಪಾಪರಹಿತರಾದ ನಿರ್ವಿಚಿಕಿತ್ಸೆಯಲ್ಲಿ ಮನಸ್ಸನಟ್ಟ ಮಹಾಪುರುಷರಾರಾದರೂ ಇದ್ದರೆ ದಯಮಾಡಿ ತಿಳಿಸಬೇಕು" ಎಂದು ದೇವತೆಗಳು ಮತ್ತೊಮ್ಮೆ ಕೈಯೊಡ್ಡಿ ಬೇಡಿಕೊಂಡರು.

"ಭರತಕ್ಷೇತ್ರದ ಇಂದ್ರಕಚ್ಛವಿಷಯದ ರೌರವಪುರವನ್ನು ಜಿನಪಾದ ಮಧುಪಭೃಂಗನಾದ ಒದ್ದಾಯನ ಮಹಾರಾಜನು ಆಳುತ್ತಿರುವನು. ಅವನ ಪಟ್ಟದರಾಣಿ ಪ್ರಭಾವತೀದೇವಿ. ಒದ್ದಾಯನ ಮಹಾರಾಜನಿಗೆ ತನ್ನ ಪ್ರಜೆಗಳು ತನ್ನ ಮಕ್ಕಳಂತೆ! ಅವನು ನಿರ್ವಿಚಿಕಿತ್ಸೆಯಲ್ಲಿ ಮನಸ್ಸುಳ್ಳ ಪರಮ ಧಾರ್ಮಿಕನು" ಎಂದು ಸೌಧರ್ಮೇಂದ್ರನು ದೇವತೆಗಳಿಗೆ ನಿರೂಪಿಸಿದನು.

ಸೌಧರ್ಮೇಂದ್ರನ ಓಲಗದಲ್ಲಿದ್ದ ವಾಸವನೆಂಬ ದೇವನು ಈ ಮೇಲಿನ ಮಾತು ಕೇಳಿ ಆಶ್ಚರ್ಯಗೊಂಡನು. ಸೌಧರ್ಮೇಂದ್ರನ ಮಾತನ್ನು ಪರೀಕ್ಷಿಸಬೇಕೆಂದು ನಿಶ್ಚಯಮಾಡಿದನು; ತಡಮಾಡದೆ ಋಷಿ ರೂಪವನ್ನು ಧರಿಸಿ, ಭರತಕ್ಷೇತ್ರಕ್ಕೆ ಬಂದನು. "ಬಡವಾಗಿ ಒಡಲ್ ಏಳ್ಗೆಗೆಟ್ಟ ನಡು ನೀರ್ ಭೋರೆಂದು ಪಾಯ್ವ ಅಕ್ಷಿ ನೋ । ಳ್ಪೊಡೆ ಕಾವಿಂ ಕೊಳೆಯಿಂ ಮಹಾರಸಿಕೆಯಿಂ ಪೊಂಗಿರ್ದ ಪುಣ್ ಕುಂಟು ಕಾ । ಲೊಡೆ ದೋರಂತಿರೆ ಸೋರ್ವ ರಕ್ತಂ ಅಧಿಕಂ ಕುಂದಿರ್ದ ಮೆಯ್ ತೊನ್ನಿನಿಂ । ದ ಉಡುಗಿರ್ದ ಲಿಂಪ್ರಿಕರದ್ವಯಾಂಗುಲಿಚಯಂ ಕುಂದಿರ್ದ ಹೀನಸ್ವರಂ"॥ ಎಂಬ ತೆರದಲ್ಲಿ ಬೀಭತ್ಸ ವೇಷಧಾರಿಯಾದ ಋಷಿ ರೌರವಪುರದ ಬೀದಿಯಲ್ಲಿ ಚರಿಗೆ ಚರಿಸುತಿದ್ದನು. ಇವನನ್ನು ಕಂಡ ಪುರಜನರು ಕೆಲವರು ಹುಳು ತುಂಬಿದವರಂತೆ ಓಕರಿಸಿದರು; ನೀರಲ್ಲಿ ಮುಳುಗುವವರಂತೆ ಮೂಗು ಮುಚ್ಚಿದರು; ಮುದುಕ ರೋಗಿಯ ಆರೈಕೆಗೆ ಬಂದ ತರುಣಿಯಂತೆ ಹೇಸಿಕೊಂಡರು; ಪೆಟ್ಟಿಗೆಯೊಳಗಿನ ಹಾವಿನಂತೆ ದುರ್ಗಂಧಕ್ಕೆ ಮುದುಕಿದರು. "ಈ ಕೈಕಾಲು ಮುರುಟಿದ ತೊನ್ನನಿಗೆ ಬದುಕುವ ಆಸೆಯೇಕೋ?" ಎಂದು ಹಲವರು ಉದ್ಗರಿಸಿದರು. "ಒಂದು ಕುರುವೆದ್ದರೆ, ಬೊಕ್ಕೆ ಮೂಡಿದರೆ ಸೈರಿಸಲಿಕ್ಕಾಗುವುದಿಲ್ಲವೆನ್ನುವಾಗ ಈ ಸಾವಿರಾರು ಹುಣ್ಣುಗಳ ನೋವನ್ನು

ಇವನು ಸೈರಿಸಿಕೊಳ್ಳುವನೆಂದರೆ, ಜೈನ ಯತಿಗಳ ಮಹತ್ವವೇನೋ!" ಎಂದು ಕರ್ಮನಿರ್ಜರರಾದ ಕೆಲವರು ತಮ್ಮೊಳಗೇ ಆಡಿಕೊಂಡರು.

"ಈ ಮುನಿ ನಮ್ಮ ಊರು ಬಿಟ್ಟು ಆರುತಿಂಗಳಾದರೂ ಇವನು ಹರಡಿದ ವಾಸನೆ ಮಾತ್ರ ಊರು ಬಿಡದು. ಶ್ರಾವಕರು ರುಚಿಯಾದ ಊಟ ಹಾಕಬಹುದೆಂದು ಇವನು ಈ ಋಷಿವೇಷ ಧರಿಸಿರಬೇಕು" ಎಂದು ಮಿಥ್ಯಾವಾದಿಗಳು ಹೇಳಿದರು.

ಪುರಜನರು ಈ ರೀತಿ ತನ್ನನ್ನು ಹಳಿದು ಮಾತಾಡುವುದನ್ನು ಕಿವಿಗೊಟ್ಟು ಕೇಳಿ ಮನಸ್ಸಿನಲ್ಲೇ ನಗುತ್ತ ಕೃತಕ ಋಷಿ "ಹಣ್ಣೆಂಬ ಹೆಸರು ಬಾಳೆಯ ಹಣ್ಣಿಗೂ ಬೇವಿನ ಹಣ್ಣಿಗೂ ಒಂದೇ ಆದರೂ ರುಚಿಯಲ್ಲಿ ಭೇದವಿಲ್ಲವೇ? ಪಾದರಿ ಹೂವಿನ ಸಂಪರ್ಕದಿಂದ ನೀರು ಪರಿಮಳಗೊಳ್ಳುವಂತೆ ಬೇವಿನ ಹೂವಿನ ಸಂಪರ್ಕದಿಂದ ಕೈಪೆಗೊಳ್ಳುವಂತೆ ಈ ನಾಡವರು ಒಬ್ಬೊಬ್ಬರು ಶುಭಾಶುಭ ಕರ್ಮಗಳ ಫಲವಾಗಿ ಒಂದೊಂದು ವಿಧವಾಗಿರುವರು" ಎಂದು ಮನದಲ್ಲೇ ನಗುತ್ತಾ ಒದ್ದಾಯನ ಭೂಪಾಲಕನ ಅರಮನೆಗೆ ನಡೆದನು.

ಅರಮನೆಯಲ್ಲಿ ಒದ್ದಾಯನ ಮಹಾರಾಜನು ರತ್ನಸಿಂಹಾಸನದಲ್ಲಿ ಒಡ್ಡೋಲಗಗೊಟ್ಟಿದ್ದನು. ಚಂದ್ರಮಂಡಲದ ಸುತ್ತಲೂ ಶೋಭಿಸುವ ತಾರಕೆಗಳಂತೆ ಅರಸು ಮಕ್ಕಳು ಮಹಾರಾಜನ ಸುತ್ತಲೂ ನೆರೆದಿದ್ದರು. ಮಂತ್ರಿಗಳು ಅರಸನ ಅನುಜ್ಞೆಯನ್ನು ಎದುರುನೋಡುತ್ತಿದ್ದರು. ವೀರಧೀರ ಯೋಧರಿಂದ ಅರಸನ ಒಡ್ಡೋಲಗ ಗಂಭೀರವಾಗಿ ಶೋಭಿಸುತ್ತಿತ್ತು. ಸಿಂಹಾಸನಾರೂಢನಾಗಿದ್ದ ಮಹಾರಾಜನು ದೂರದಿಂದ ಬರುತ್ತಿರುವ ಕೃತಕ ಋಷಿಯನ್ನು ಕಂಡನು. ಕಂಡವನೇ ಸಿಂಹಾಸನದಿಂದ ಎದ್ದು ಕೈಗಳೆರಡನ್ನೂ ಜೋಡಿಸಿಕೊಂಡು ಬಾಗಿಲ ಬಳಿಗೆ ನಡೆದನು. ಬಾಗಿಲ ಬಳಿ ಸೇರಿದ್ದ ಋಷಿಗೆ ವಂದನೋಪಚಾರ ಮಾಡಿದನು; ಋಷಿಯ ಕೈ ಹಿಡಿದು ಕರಕೊಂಡು ಬಂದು ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ ಉಚಿತೋಪಚಾರದಿಂದ ಸತ್ಕರಿಸಿದನು. ಒಡ್ಡೋಲಗದ ಜನರಲ್ಲಿ ಕೆಲರು ಋಷಿಯ ಮೈಯ ದುರ್ಗಂಧಕ್ಕೆ ಹೇಸಿ ಓಕರಿಸಿದರು; ಕೆಲರು ಮೂಗು ಮುರಿದರು; ಕೆಲರು ಮಾತಾಡಲಾರದೆ ಮೂಕರಾದರು. ಶ್ರೇಷ್ಠ ರತ್ನ ಒಂದು ಕೆಸರಲ್ಲಿ ಬಿತ್ತೆಂದು

ಅಲ್ಲೇ ಬಿಡುವುದೇ? ಋಷಿಗೆ ತೊನ್ನು ಹಿಡಿಯಿತೆಂದು ದೂರವಾಡುವುದೇ? ಒದ್ದಾಯನ ಮಹಾರಾಜನೂ ಪ್ರಭಾವತೀ ಮಹಾದೇವಿಯೂ ಋಷಿ ತಮ್ಮಲ್ಲಿಗೆ ಬಂದುದಕ್ಕಾಗಿ ಸಂತಸದಿಂದ ನಲಿದರು. ತಾವು ಧನ್ಯರಾದೆವೆಂದು ಹಿರಿಹಿಗ್ಗಿದರು.

ಒದ್ದಾಯನ ಮಹಾರಾಜ ಆ ದಿನ ಋಷಿಯನ್ನು ಅರಮನೆಯಲ್ಲಿ ನಿಲ್ಲಿಸಿಕೊಂಡು ಆಹಾರದಾನ ಮಾಡಿದನು. ಋಷಿ ಎಷ್ಟೋ ದಿನಗಳಿಂದ ಅನ್ನ ಕಾಣದವರಂತೆ ಹೊಟ್ಟೆತುಂಬಾ ಉಂಡನು; ಉಂಡುದು ಹೆಚ್ಚಾಯಿತು. ಋಷಿಯ ಕಣ್ಣು ತಿರುಗಿತು; 'ಒಕ್' ಎನ್ನುತ್ತಾ ಉಂಡುದನ್ನೆಲ್ಲಾ ಬಳಬಳನೆ ಕಾರಿಬಿಟ್ಟನು; ಆ ಹೇಸಿಗೆ ಬಳಿಯಲ್ಲಿ ಕುಳಿತಿದ್ದ ಒದ್ದಾಯನ ಮಹಾರಾಜನ ಮೈಗೆ ವಜ್ರಲೇಪದಂತೆ ಅಂಟಿಕೊಂಡಿತು. ಮುನಿ ತನ್ನ ಮೇಲೆ ಕಾರಿದುದಕ್ಕೇನೂ ರಾಜನು ನೊಂದುಕೊಳ್ಳಲಿಲ್ಲ; ಉಂಡುದು ಕಾರಿ ಹೋಯಿತಲ್ಲಾ ಎಂದು ಬೇಸರಗೊಂಡನು; ಮತ್ತು ಮುನಿಯ ಅಂಟಿಕೊಂಡ ಎಂಜಲನ್ನೆಲ್ಲಾ ಜಾಗ್ರತೆಯಾಗಿ ತೊಳೆದನು. ಓಕರಿಕೆಯಿಂದ ಕಣ್ಣುಕತ್ತಲೆಗೊಂಡಿದ್ದ ಮುನಿ ಆಗ ಮೆಲ್ಲಗೆ ಕಣ್ಣು ತೆರೆದನು. ಅರಸು ಮುನಿಯ ಕೈ ಹಿಡಿದು ಮೆಲ್ಲಗೆ ಕರೆತಂದು ತೂಗುಮಂಚದಲ್ಲಿ ಕುಳ್ಳಿರಿಸಿ ಗಾಳಿ ಹಾಕತೊಡಗಿದನು. ಪ್ರಭಾವತೀದೇವಿ ಭಕ್ತಿಪೂರ್ಣ ಮನಸ್ಕಳಾಗಿ ಋಷಿಯ ಪಾದಗಳನ್ನೊತ್ತುತ್ತಾ ಕುಳಿತಳು. ಆಗ ಒಂದು ಅದ್ಭುತ ಚಮತ್ಕಾರ ನಡೆಯಿತು.

"ತನುರುಚಿ ಮಂದರಾಚಲದ ಪೊಂಗೆಣೆಯಾಗಿ ಪಳಂಚಿ ಮಿಂಚೆ ಸೂ । ರ್ಯನ ಕಿರಣಂ ಬೊಲೊಪ್ಪೆ ಪೊಳೆವಾಭರಣಾವಳಿ ದಿವ್ಯ ವಸ್ತ್ರಮಿಂ । ಬಿನೊಳಮರ್ದಪ್ಪಿ ಶೋಭಿಸೆ ಸುರೇಶ್ವರನಾಗಳೆ ದಿವ್ಯ ಮು । ನ್ನಿನ ನಿಜದೇಹಮಂ ನೆರೆಯೆ ತಾಳ್ದು ನರೇಂದ್ರನ ಮುಂದೆ ನಿಲ್ವುದುಂ ।" ಮಹಾರಾಜನೂ ಮಹಾದೇವಿಯೂ ಋಷಿರೂಪವನ್ನು ಬಿಟ್ಟು ದೇವರೂಪವನ್ನು ಹೊಂದಿ ತಮ್ಮ ಮುಂದೆ ನಿಂತ ದಿವ್ಯ ಪುರುಷನನ್ನು ಕಂಡು ಆಶ್ಚರ್ಯಮುಗ್ಧರಾದರು. ಸುರರಾಜನ ಸಭೆಯಿಂದ ಮಹಾರಾಜನನ್ನು ಪರೀಕ್ಷಿಸಲು ಬಂದ ವಾಸವನೆಂಬ ದೇವತೆ ತಾನೆಂದು ಹೇಳಿ ಆ ದಿವ್ಯ ಪುರುಷನು ರಾಜರಾಣಿಯರನ್ನು ಸಂತೋಷಸಾಗರದಲ್ಲಿ ಓಲಾಡಿಸಿದನು. ಸೌಧರ್ಮೇಂದ್ರನು "ನೀನು ದರ್ಶನದ ಮೂರನೆಯ ಅಂಗವಾದ ನಿರ್ವಿ

ಚಿಕಿತ್ಸಾ ಗುಣದಲ್ಲಿ ಸರ್ವಶ್ರೇಷ್ಠನು." ಈ ಮಾತು ಸತ್ಯ. ಇನ್ನು ಈ ಪ್ರಭಾವತಿ ದೇವಿಯ ಮಹತ್ವವನ್ನೀಗ ವಿವರಿಸುವೆನು" ಎಂದು ವಾಸವನು ಪ್ರಭಾವತೀ ದೇವಿಯ ಚರಿತ್ರೆಯನ್ನು ಬಣ್ಣಿಸತೊಡಗಿದನು.

"ಈ ಪ್ರಭಾವತೀ ಮಹಾದೇವಿಯ ಎಳೆಯ ಕಾಲದ ಗೆಳತಿ ನಾರಾಯಣದತ್ತೆ ಎಂಬವಳು ತರ್ಕಶಾಸ್ತ್ರ ಪಾರಂಗತೆ. ತರ್ಕಶಾಸ್ತ್ರದಲ್ಲಿ ತನ್ನನ್ನು ಮೀರುವವರಿಲ್ಲವೆಂಬ ಗರ್ವ ಅವಳಿಗೆ ನೆತ್ತಿಗೇರಿತ್ತು. ಒಮ್ಮೆ ಮಹಾರಾಜನು ಅರಮನೆಯಲ್ಲಿ ಇಲ್ಲದಾಗ ನಾರಾಯಣದತ್ತೆ ಇಲ್ಲಿಗೆ (ಅರಮನೆಗೆ) ಬಂದಳು. ಬಾಲ್ಯದ ಗೆಳತಿ ನಾರಾಯಣದತ್ತೆಯ ಮಿಥ್ಯಾದೃಷ್ಟಿತ್ವವನ್ನು ಕಂಡು ಪ್ರಭಾವತೀ ದೇವಿಗೆ ತುಂಬಾ ಬೇಸರವಾಯಿತು. ಗೆಳತಿಯಾದರೂ ಮಿಥ್ಯಾದೃಷ್ಟಿಯಲ್ಲವೇ? ರಾಣಿ ಅವಳನ್ನೆಂತು ಆದರಿಸುವಳು? ಬಾಲ್ಯದ ಗೆಳತಿ ರಾಣಿ ತನ್ನನ್ನು ತಿರಸ್ಕಾರ ದೃಷ್ಟಿಯಿಂದ ಕಂಡು, ಅನಾದರಣೆ ಮಾಡಿದುದನ್ನು ನೋಡಿ ನಾರಾಯಣದತ್ತೆ ಮನಸ್ಸಿನಲ್ಲೇ ಕುದಿದಳು. ಬುಸುಗುಟ್ಟಿದಳು. ಅರಮನೆಯಲ್ಲಿ ನಿಲ್ಲದೆ ಕೂಡಲೇ ಹೊರಟು ಬಿಟ್ಟಳು. ಹೊರಡುವಾಗಲೇ ತನ್ನನ್ನು ಅನಾದರಿಸಿದ ರಾಣಿಗೆ ಬುದ್ಧಿ ಕಲಿಸಬೇಕೆಂದೂ ಸಂಕಲ್ಪಿಸಿಕೊಂಡಳು.

ಮತ್ಸರಗ್ರಸ್ತಳಾದ ನಾರಾಯಣದತ್ತೆ ಪ್ರಭಾವತೀ ಮಹಾದೇವಿಯ ಚಿತ್ರವೊಂದನ್ನು ಬರೆಸಿಕೊಂಡು, ಕೈಯಲ್ಲಿ ಹಿಡಿದುಕೊಂಡು, ಮಾಳವೇಶ್ವರನಾದ ಚಂಡಪ್ರದ್ಯೋತನಲ್ಲಿಗೆ ಬಂದಳು. ಚಂಡಪ್ರದ್ಯೋತ ಮಹಾಲಂಪಟ. ಹೆಣ್ಣೆಂದರೆ ಸಾಕು; ಅವನಿಗೆ ಬೇಕು. ನಾರಾಯಣದತ್ತೆ ಚಂಡಪ್ರದ್ಯೋತನ ಭೇಟಿಯಾದಳು. ಪ್ರಭಾವತೀದೇವಿಯ ಚಿತ್ರವನ್ನು ಆತನಿಗೆ ತೋರಿಸಿ ಹಲವು ವಿಧವಾಗಿ ವರ್ಣಿಸಿ ಅವನ ಮನಸ್ಸನ್ನು ಕದಡಿದಳು; ಕೆರಳಿಸಿದಳು. ಪ್ರಭಾವತೀದೇವಿಯ ಮೇಲೆ ಆಸೆಗೊಂಡ ಚಂಡಪ್ರದ್ಯೋತನು ರಾಜ್ಯದಲ್ಲಿ ಒದ್ದಾಯನ ಮಹಾರಾಜನಿಲ್ಲವೆಂದು ತಿಳಿದು, ಕೂಡಲೇ ಸೈನ್ಯಸಮೇತನಾಗಿ ಹೊರಟು ಬಂದು, ರೌರವಪುರಕ್ಕೆ ಮುತ್ತಿಗೆ ಹಾಕಿದನು. "ಪ್ರಭಾವತೀದೇವಿ ತನ್ನವಳಾಗಬೇಕೆ"ಂದು ಹೇಳಿ ಹೆಗ್ಗಡೆ ಸಾಳಂಕಾರನನ್ನು ಅರಮನೆಗೆ ಅಟ್ಟಿದನು.

ಸಾಳಂಕಾರನು ಅರಮನೆಯನ್ನು ಪ್ರವೇಶಿಸಿ ಪ್ರಭಾವತೀದೇವಿಯನ್ನು ಕಂಡನು. "ಮಹಾದೇವಿ! ನಮ್ಮ ಅರಸು ಮಾಳವಾಧೀಶ ನಿಮ್ಮನ್ನು ಬಯಸಿ

ಚತುರಂಗಸಮೇತನಾಗಿ ಇಲ್ಲಿಗೆ ಬಂದಿರುವನು. ಅವನು ವೈಭವದಲ್ಲಿ ಇಂದ್ರನು; ರೂಪಿನಲ್ಲಿ ಕಾಮದೇವನು; ತ್ಯಾಗದಲ್ಲಿ ಕಾಮಧೇನು" ಎಂದು ಹಲವು ಹದಿನೆಂಟಾಗಿ ಹೊಗಳಿ ಚಂಡದ್ಯೋತನ ಆಶಯವನ್ನು ತಿಳಿಸಿದನು.

ಇದನ್ನು ಕೇಳಿದ ಪ್ರಭಾವತೀದೇವಿ ದುಗುಡಗೊಂಡಳು; "ನಿಮ್ಮ ಅರಸು ಸನ್ಮಾರ್ಗಿಯಾಗಿದ್ದ ಪಕ್ಷದಲ್ಲಿ ಪರಸ್ತ್ರೀಯರನ್ನು ಆಶಿಸಬಾರದು. ಪರಸ್ತ್ರೀಲೋಲುಪನಿಗೆ ಎಂದಿಗೂ ಶ್ರೇಯಸ್ಸುಂಟಾಗದು" ಎಂದು ಉತ್ತರವಿತ್ತಳು.

"ಸ್ವರ್ಗದಲ್ಲಿ ಸಿಕ್ಕುವುದೆಂಬ ಕಣ್ಣಿಗೆ ಕಾಣದ ಸುಖಕ್ಕಿಂತಲೂ ಈ ಲೋಕದ ಸುಖವೇ ಮೇಲಲ್ಲವೇ?" ಎಂದು ಮರುಮಾತುಗೊಟ್ಟ ಹೆಗ್ಗಡೆ.

"ಮರಣಕ್ಕೆ ಅಂಜದೆ, ಗುಣಮಂ ಪರಿಹರಿಸದೆ, ಶೀಲರತ್ನಮಂ ರಕ್ಷಿಸಿ ಸತ್ತರೆ ಸಾವುಂಸಾವೆ? ಶೀಲಮಂ ಉರವಣೆಯಿಂ ಬಿಟ್ಟ ಖಳರ ಬಾಳುಂ ಬಾಳೆ?" ಎಂದು ಹೆಗ್ಗಡೆಗೆ ಬುದ್ಧಿ ಹೇಳಿ ರಾಣಿ ಮೋರೆ ತಿರುಗಿಸಿದಳು.

"ಮಹಾರಾಣಿ! ನಿನ್ನ ಪ್ರಜೆಗಳಿಗೆ ಪೀಡೆಯಾಗಬಾರದೆಂಬ ಬಯಕೆ ನಿನಗಿದ್ದರೆ ನನ್ನ ಮಾತಿಗೆ ಕಿವಿ ಕೊಡು. ಇಲ್ಲವಾದರೆ ಪಟ್ಟಣದಲ್ಲಿ ನೆತ್ತರ ಹೊನಲು ಹರಿದೀತು; ಪಟ್ಟಣವು ಸುಟ್ಟು ಸುಣ್ಣವಾದೀತು. ಇದರ ಫಲವನ್ನು ನೀನೇ ಅನುಭವಿಸಬೇಕು" ಎಂದು ಬೆದರಿಕೆಯ ಮಾತುಗಳನ್ನಾಡಿ ಅರಮನೆಯಿಂದ ಹೊರಟನು.

ಹೆಗ್ಗಡೆ ಅರಮನೆಯಿಂದ ಹೊರಟು ಹೋಗಿ ಕೆಲವೇ ಸಮಯದೊಳಗೆ ಚಂಡದ್ಯೋತನ ಸೇನಾಪತಿ ಉಗ್ರಸೇನನು ಪಟ್ಟಣಕ್ಕೆ ಮುತ್ತಿಗೆ ಹಾಕಿಯೇ ಬಿಟ್ಟನು. ಈ ಸುದ್ದಿ ರಾಣಿಯ ಕಿವಿಗೆ ಮುಟ್ಟಿತು. ಅರಸು ಒದ್ದಾಯನ ನಗರದಲ್ಲಿರಲಿಲ್ಲ; ಪ್ರಜೆಗಳು ಶತ್ರುವನ್ನು ಎದುರಿಸಲು ಅಸಮರ್ಥರು. ಮಾಡುವುದೇನು? ಈ ಉಪಸರ್ಗ ತೀರುವ ವರೆಗೂ ತಾನು ಅನ್ನ ನೀರು ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಮಹಾರಾಣಿ ಜಿನಪಾದ ಪದ್ಮಪೂಜೆಯಲ್ಲಿ ತೊಡಗಿದಳು.

ಆ ವೇಳೆಯಲ್ಲಿ ನಾನು (ವಾಸವದೇವ) ಹೊನ್ನ ವಿಮಾನವನ್ನೇರಿ ಮೇಗಿರಿಯ ಕಡೆಗೆ ಹಾರುತಿದ್ದೆನು. ವಿಮಾನವು ಈ ಪಟ್ಟಣದ ಮೇಲೆ

ಹಾರುವಾಗ ಕೀಲಿಸಿದಂತಾಗಿ ಅಂತರಾಳದಲ್ಲೇ ನಿಂತುಬಿಟ್ಟಿತು. ಇದೇ ನಾಶ್ಚರ್ಯ! ನಾನು ಅವಧಿಜ್ಞಾನದಿಂದ ಈ ಪ್ರಭಾವತೀ ದೇವಿಗೂ ಪಟ್ಟಣದ ಪ್ರಜೆಗಳಿಗೂ ಒದಗಿದ ಕಷ್ಟಗಳನ್ನು ಅರಿತುಕೊಂಡೆನು. ಕೂಡಲೇ ಮಾಯಾ ಬಲದಿಂದ ಚಂಡದ್ಯೋತನ ಸಮಸ್ತ ಸೈನ್ಯವನ್ನೂ ಗಾಳಿಗೆ ತರಗೆಲೆಯನ್ನು ಹಾರಿಸುವಂತೆ ಹಾರಿಸಿ ಬಿಟ್ಟು, ಉಜ್ಜೈನಿಯಲ್ಲಿ ಇಳಿಸಿದೆನು. ಆದರೂ ಈ ಸತಿ ಪ್ರಭಾವತಿಯ ಶೀಲವನ್ನು ಪರೀಕ್ಷಿಸಬೇಕೆಂದು ಮಾಯಾಸೈನ್ಯ ವನ್ನು ನಿರ್ಮಿಸಿದೆನು; ಪಟ್ಟಣದ ಒಳ ನುಗ್ಗಿಸಿದೆನು. ಭಯಂಕರ ಹೋರಾಟ ನಡೆಸಿದೆನು; ರಕ್ತದ ಕಾಲಿವೆ ಹರಿಯುವಂತೆ ಮಾಡಿದೆನು. ಪಟ್ಟಣದಲ್ಲಿ ಎಲ್ಲಿ ನೋಡಿದರೂ ಭಯದ ಮೋಡ ಹರಡಿತು; ಜನರ ಹಾಹಾ ಕಾರ ಆಕಾಶಕ್ಕೆ ಮುಟ್ಟಿತು. ಅಷ್ಟೇ ಅಲ್ಲ ಚಂಡದ್ಯೋತನ ರೂಪು ಧರಿಸಿ, ಪ್ರಭಾವತೀ ದೇವಿಯ ಬಳಿಗೆ ಹೋಗಿ, "ನನ್ನ ಸೈನಿಕರು ಪಟ್ಟಣ ವನ್ನು ಪುಡಿಗೈದರು. ನಿನ್ನ ಗಂಡನನ್ನು ಹೆಡೆಮುರಿ ಕಟ್ಟಿ ಈಗಾಗಲೇ ಸೆರೆ ಯಲ್ಲಿ ಇಟ್ಟಾಯಿತು; ಇನ್ನಾದರೂ ನನ್ನವಳಾಗು" ಎಂದು ಹೆದರಿಸಿದೆನು. ಈ ರಾಣಿ ಪೊಳ್ಳು ಬೆದರಿಕೆಗೆ ಸೊಪ್ಪು ಹಾಕಿದಳೇ? ಎಂದಿಗೂ ಇಲ್ಲ. ಮನಸ್ಸಿನಲ್ಲಿ ಪಂಚ ನಮಸ್ಕಾರಗಳನ್ನು ಜಪಿಸುತ್ತಾ ಅಚಲಳಾಗಿ ಕುಳಿತು ಬಿಟ್ಟಳು. ಆಗ ಈ ದೇವಿಯ ದೃಢಚಿತ್ತವನ್ನು ಕಂಡು ನನಗಾದ ಆನಂದಕ್ಕೆ ಪಾರವೆಲ್ಲಿ? ನಾನು ಇವಳ ಮುಂದೆ ಪ್ರತ್ಯಕ್ಷನಾಗಿ ನಿಜ ವೃತ್ತಾಂತವನ್ನು ತಿಳಿಸಿ, ಸಂತೋಷಗೊಳಿಸಿ, ಶೀಲವತಿಯೆಂಬ ಬಿರುದಿತ್ತು ಹೊರಟು ಹೋದೆನು."

ಪ್ರಭಾವತಿ ದೇವಿಯ ವೃತ್ತಾಂತವನ್ನು ಹೇಳಿ ಮುಗಿಸಿ, ಕೃತಕ ಋಷಿಯಾಗಿದ್ದ ಆ ವಾಸವದೇವನು, ದೇವದುಂಧುಭಿಗಳು ಮೊಳಗುತ್ತಿರಲು, ದೇವತೆಗಳು ಆಕಾಶದಿಂದ ಹೂ ಮಳೆ ಕರೆಯುತ್ತಿರಲು, ಒದ್ದಾಯನ ಮಹಾ ರಾಜನನ್ನೂ ಪ್ರಭಾವತೀ ಮಹಾದೇವಿಯನ್ನೂ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ ಸಂಭ್ರಮದಿಂದ ಪೂಜಿಸಿ, ಅವರಿಂದ ಬೀಳ್ಕೊಂಡು ನಿಜನಿವಾಸಕ್ಕೆ ಸೌಧರ್ಮಕಲ್ಪಕ್ಕೆ ವಿಮಾನವೇರಿದನು.

ಮುಂದೆ ಹಲಕಾಲ ರಾಜ್ಯವಾಳಿ ಒದ್ದಾಯನ ಮಹಾರಾಜನು ಹಿರಿಯ ಮಗನಿಗೆ ಪಟ್ಟ ಕಟ್ಟಿ ತಾನೂ ರಾಣಿಯೂ ಸನ್ಯಾಸಗೊಂಡು ಉಗ್ರೋಗ್ರ

ತಪಸ್ಸನ್ನಾಚರಿಸಿ ಇಹಲೋಕವನ್ನು ತ್ಯಜಿಸಿದನು. ಒದ್ದಾಯನ ಮಹಾರಾಜನು ಕರ್ಮನಿರ್ಜರ ಮಾಡಿ ಮುಕ್ತಿಶ್ರೀಯೊಡನೆ ಕೂಡಿದನು. ಪ್ರಭಾವತೀ ಮಹಾದೇವಿ ತಪಃಫಲವಾಗಿ ಬ್ರಹ್ಮಕಲ್ಪದಲ್ಲಿ ಮಹರ್ಧಿಕ ದೇವನಾಗಿ ಹುಟ್ಟಿದಳು.

ರೇವತಿ ರಾಣಿ
(ಅಮೂಢದೃಷ್ಟಿತ್ವ)

ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯಲ್ಲಿ ಮೇಘಕೂಟ ಪರ್ವತ. ಆ ಪರ್ವತದಲ್ಲಿ ಚಂದ್ರಾಭನೆಂಬ ಖೇಚರನು ಸುಮತಿ ಮಹಾದೇವಿಯೊಡನೆ ಸುಖಸಂಕಥಾ ವಿನೋದದಿಂದ ಕಾಲ ಕಳೆಯುತ್ತಿದ್ದನು.

ಒಮ್ಮೆ ಚಂದ್ರಾಭ ಖೇಚರನು ಅನೇಕ ಮಂದಿ ಖೇಚರ ಸ್ತ್ರೀಪುರುಷರಿಂದ ಸುತ್ತುವರಿದವನಾಗಿ ತನ್ನ ಮಹಾಮಂದಿರದ ಮೇಲ್ಮಾಡದಲ್ಲಿ ಒಡ್ಡೋಲಗ ಕೊಡುತ್ತಿದ್ದನು. ಮೇಲ್ಮಾಡದ ಮೇಲೆ ಕುಳಿತು ಆಕಾಶದ ಕಡೆಗೆ ಕಣ್ಣಿಟ್ಟಾಗ,—ಕರಿ ಘಟೆ ಒಡ್ಡಿನಂತೆ, ಮೃಗಸಂಕುಲದಂತೆ, ಕೇಸರಿಗಳ ಹಿಂಡಿನಂತೆ, ವನದಂತೆ, ನವಿಲ್ಗಳ ತಂಡದಂತೆ ಕೇಸುರಿಗಳ ಬಂಬಲಂತೆ, ನರರಂತೆ, ವಾನರರಂತೆ, ಗೋಸಿವಹದಂತೆ, ಹಲವು ರೂಪಾಗಿ ಶೋಭಿಸುವ ಮೋಡಗಳು ಕಾಣಿಸಿದುವು. ಆ ಮೋಡಗಳು ಈ ಸಂಸಾರವು ಅನಿತ್ಯ ಎಂದು ಖೇಚರನಿಗೆ ತಿಳಿಸಲೋ ಎನ್ನುವಂತೆ ಕ್ಷಣಾರ್ಧದಲ್ಲಿ ರೂಪ ಬದಲಿಸಿ ಮುಟ್ಟ ಮಾಯುವಾದುವು. ಮೋಡಗಳ ಮಾಯಾರೂಪವನ್ನು ಕಂಡ ಖೇಚರನಿಗೆ ಮನದಲ್ಲಿ ವೈರಾಗ್ಯ ಮೈದೋರಿತು. "ಸಿರಿ ಸುರಚಾಪದಂತೆ, ಪೊಸ ಜವ್ವನ ಇದ್ದಿಲ ಬೂದಿಯಂತೆ, ಸಂಸಾರ ಸುಖ ಬಯಲ್ ತೊರೆಯಂತೆ, ಮಹೋನ್ನತಿಗಳ್ ಮಳಲೇರಿದಂತೆ, ಮೈ ದರಿಯ ಮರದಂತೆ ಕೆಡುವುದಲ್ಲವೆ? ಸ್ಥಿರವಾಗಿರಬಲ್ಲುವೆ? ಅರಳೆಯ ಕಿಚ್ಚಿನಂತೆ ಧನ, ವಸಂತದ ಶೋಭೆಯಂತೆ ಆಯು, ಮೋಡದ ಗುಂಪಿನಂತೆ ನಂಟರ ಕೂರ್ಮೆ, ಅಸ್ಥಿರಗಳಲ್ಲವೇ" ಎಂದು ಚಿಂತಿಸಿದ ಖೇಚರರಾಜ.

“ಪತಂಗ, ಜಿಂಕೆ, ತುಂಬಿ, ಮೀನು ಮೊದಲಾದ ಜಂತುಗಳು ಕಣ್ಣು, ಕಿವಿ, ಮೂಗು, ನಾಲಗೆ, ಮೊದಲಾದ ಒಂದೊಂದೇ ಇಂದ್ರಿಯಗಳಿಗೆ ಸೋತು ನಾಶವನ್ನು ಹೊಂದುವವೆನ್ನುವಾಗ ಪಂಚೇಂದ್ರಿಯಗಳೂ ಪೂರ್ಣವಾಗಿರುವ ನರರ ಅವಸ್ಥೆಯನ್ನು ಏನು ಹೇಳಲಿ?” ಎಂದು ಚಿಂತಿಸಿ, ಸಂಸಾರಸುಖಕ್ಕೆ ಹೇಸಿ, ಸೀಮಂತಪುತ್ರ ಚಂದ್ರಶೇಖರನನ್ನು ಬಳಿಗೆ ಕರೆಸಿದನು ಚಂದ್ರಾಭ ಖೇಚರ. “ಸಿರಿಯಿಂದ ಮೈ ತಿಳಿಯದೆ, ಪರತ್ರೆಯನ್ನು ಕೆಡಿಸಿ, ರಾಜ್ಯಕ್ಕೆ ಮರುಳಾಗಿ ಮಂದಬುದ್ಧಿಯಾಗಿ ಕೆಟ್ಟೆನು. ಆದುದರಿಂದ ಇನ್ನು ನಾನು ಮುಕ್ತಿಶ್ರೀಯನ್ನೊಲಿಸುವ ಜಿನರೂಪವನ್ನು ಶರಣುಹೋಗಬೇಕು. ಈ ರಾಜ್ಯಭಾರವನ್ನು ನೀನು ಕೈಕೊಳ್ಳಬೇಕು” ಎಂದು ಮಗನಿಗೆ ಹೇಳಿದನು. ಅದಕ್ಕೆ ಮಗ ಚಂದ್ರಶೇಖರ “ಕೇಡಿಲ್ಲದ ಸುಖವನ್ನು ನೀವೆತ್ತಿಕೊಂಡು, ದುರ್ಗತಿಗೆ ದಾರಿಯಾದ ರಾಜ್ಯಭಾರವನ್ನು ನನ್ನ ಕೈಗೀಯುವಿರೇ? ಪ್ರೀತಿಯಿಂದ ಕೊಡುವ ವಸ್ತು ಉತ್ತಮ ವಸ್ತುವಾಗಿರಬೇಕಲ್ಲವೇ? ಆದುದರಿಂದ ಶಾಶ್ವತ ಶಾಂತಿಯನ್ನೀವ ಮುಕ್ತಿಶ್ರೀಯನ್ನು ನನಗೂ ದಯೆಗೈಯಿರಿ. ಈ ರಾಜ್ಯದ ಹಂಬಲು ನನಗೆ ಬೇಡ” ಎಂದು ಕೈಯೊಡ್ಡಿ ನಿವೇದಿಸಿಕೊಂಡನು.

“ನೀನೆಂದುದೇನೋ ನಿಜ. ಆದರೆ ಈ ಖೇಚರರಾಜ್ಯಕ್ಕಾರು ಗತಿ? ಇದನ್ನು ನಡೆಸುವವರಾರು? ಈ ರಾಜ್ಯವನ್ನಾಳಲು ಯೋಗ್ಯನಾದ ಕುಮಾರನೊಬ್ಬನನ್ನು ಪಡೆದು, ಅನಂತರ ನೀನೂ ತಪೋಭೂಮಿಗೆ ತೆರಳು” ಎಂದು ಮಗನನ್ನು ಒಡಂಬಡಿಸಿ, ಮಂತ್ರಿ ಪರಿವಾರಸಮೇತನಾಗಿ, ಅತಿ ಸಂಭ್ರಮದಿಂದ ಮಗನಿಗೆ ಪಟ್ಟ ಕಟ್ಟಿದನು; ಮತ್ತು “ಚಾರುಚರಿತ್ರನಪ್ಪುದು, ಗುಣಾನ್ವಿತನಪ್ಪುದು, ಧರ್ಮದೊಳ್ಸರ್ವಾಚಾರನೆನಿಪ್ಪುದು, ಉಜ್ವಲ ಜಿನೇಂದ್ರಪದದ್ವಯಭಕ್ತನಪ್ಪುದು, ಇನ್ನಾರುಮಂ ಉರ್ಕಿ ಸೊರ್ಕಿ ಸಲೆ ನೋಯಿಸದಿರ್ಪುದು, ಜೈನ ಯೋಗಿ ವೃಂದಾರಕರಲ್ಲಿ ಭಕ್ತಿಭರಮಂ ನೆರೆ ತೋರುವುದು, ಅಲ್ಲದೆ, ತಾವರೆಯೆಲೆಯ ನೀರಂತೆ ಸಂಸಾರದ ಸುಖದುಃಖಗಳನ್ನು ದೂರವಿರಿಸಿ, ಧರ್ಮ, ನೀತಿ, ಜಿನಭಕ್ತಿಗಳಲ್ಲಿ ಮಿಗಿಲೆನಿಸಿ ವರ್ತಿಸಬೇಕು” ಎಂದು ಹಲವು ಹದಿನೆಂಟು ನೀತಿಗಳನ್ನು ಉಪದೇಶ ಮಾಡಿದನು. ಆ ಮೇಲೆ ಸಕಲ ರಾಜ್ಯಸುಖವನ್ನು ತೊರೆದು, ವಿಮಾನಾರೂಢನಾಗಿ ಪಾಂಡ್ಯದೇಶದ ದಕ್ಷಿಣ ಮಧುರೆಗೆ ನಡೆತಂದನು.

ಮುತ್ತಿನ ರಂಗವಲ್ಲಿಗಳಿಂದ, ರತ್ನಖಚಿತ ಮಹಾದ್ವಾರಗಳಿಂದ, ಮಕರ ತೋರಣಗಳಿಂದ ಶೋಭಿಸುತ್ತಿದ್ದ ಜಿನಾಲಯಗಳನ್ನು ನೋಡುತ್ತ ವಂದಿಸುತ್ತ ಮುಂದುವರಿದನು ಚಂದ್ರಾಭ ಖೇಚರ. ಆ ವೇಳೆಗೆ ಸರಿಯಾಗಿ ಮಧುರಾಪುರದ ಚಿತ್ರವಾಹನ ಮಹಾರಾಜ ಪರಿವಾರಸಮೇತನಾಗಿ ಬಸದಿಗಳ ವಂದನೆಗಾಗಿ ಅಲ್ಲಿ ನಡೆತಂದನು. ನಿತ್ಯಕ್ರಮದಂತೆ ಕ್ರಮವಾಗಿ ಬಸದಿಗಳನ್ನೆಲ್ಲಾ ಸಂದರ್ಶಿಸಿದ ಮೇಲೆ ತನ್ನ ಸ್ವಂತ ಬಸದಿಯಾದ ಭೂತ ಹಿತವೆಂಬ ಜಿನಗೃಹಕ್ಕೆ ನಡೆತಂದು ಭಕ್ತಿಭಾವದಿಂದ ಜಿನಗೃಹವನ್ನು ಮೂರು ಬಾರಿ ಸುತ್ತಿ, ಇರುವಂತೆ, ಜಾಜಿ, ಪಾದರಿ, ಮೊದಲಾದ ಹಲವು ಬಗೆಯ ಹೂಗಳಿಂದ ಜಿನಪಾದಪದ್ಮಗಳನ್ನು ಪೂಜಿಸಿ, ಕೈಮುಗಿದು, ಸ್ತುತಿ ಸಹಸ್ರಗಳಿಂದ ವಂದಿಸಿ, ಸಾಷ್ಟಾಂಗವೆರಗಿದನು. ಸಿದ್ಧಸೇವೆಯನ್ನು ಪಡೆದು ಅರಮನೆಗೆ ಹಿಂದಿರುಗಿದನು.

ಪಾಂಡ್ಯ ಭೂಪತಿಯ ಮತ್ತು ಅವನ ಪ್ರಜೆಗಳ ಭಕ್ತಿಯನ್ನು ಕಂಡು ಚಂದ್ರಾಭ ಖೇಚರ ಬೆರಗಾದ. ಆಶ್ಚರ್ಯಗೊಂಡ ತಾನೂ ಭಕ್ತಿಭಾವದಿಂದ ಜಿನಮಂದಿರಕ್ಕೆ ಪ್ರದಕ್ಷಿಣೆ ಬಂದು, ಒಳಹೋಗಿ, ಜಿನಸ್ವಾಮಿಯ ದರ್ಶನ ಮಾಡಿ, ಅಲ್ಲಿದ್ದ ಭಟಾರರಿಗೆ ವಂದಿಸಿ, ಅವರ ಬಳಿ ಕುಳಿತು, ತನ್ನ ವೃತ್ತಾಂತವನ್ನು ಅವರಿಗೆ ನಿವೇದಿಸಿಕೊಂಡನು.

"ವೈರಾಗ್ಯವಿಲ್ಲದ ತಪಸ್ಸು ಎಂದಿಗೂ ಸುಖವೀಯದು. ಕಿಚ್ಚು, ನೀರು, ಕಟ್ಟಿಗೆ, ಮಡಕೆ, ಅಕ್ಕಿ ಮೊದಲಾದವಲ್ಲಿ ಯಾವುದಾದರೊಂದು ಬಗೆ ಕಡಮೆಯಾದರೆ ಹೇಗೆ ಅಡುಗೆಯಾಗದೋ ಹಾಗೆ ಚಾರಿತ್ರ ದರ್ಶನಗಳಲ್ಲಿ ಯಾವುದಾದರೊಂದು ಕಡಮೆಯಾದರೂ ತಪಸ್ಸು ಸಿದ್ಧಿಸದು; ತಪಸ್ವಿಗೂ ಸುಖವಾಗದು. ಶಾಸ್ತ್ರಗಳನ್ನೋದುವುದರಿಂದ ಮಾತ್ರ ಖುಷಿಯಾಗಲು ಸಾಧ್ಯವೇ ಇಲ್ಲ. ತನ್ನವರನ್ನು ಹೊಗಳಿ ಅನ್ಯರನ್ನು ದೂಷಿಸುವವನೂ, ನಾಲಗೆಯ ದಾಸನೂ ಖುಷಿಯಾಗನು. ಬಯಲ ನೀರಂತೆ ದಾರಿ ಬಿಟ್ಟು ಹರಿಯದೆ, ಕೋಣನಂತೆ ಇದ್ದ ಕೆರೆಯನ್ನೇ ಕದಡದೆ, ನೀರಲ್ಲಿದ್ದ ಎಣ್ಣೆಯಂತೆ ಪರರ ದೋಷವನ್ನು ಹರಡದೆ, ಮುಗಿಲಂತೆ ಹೊತ್ತಿಗೊಂದು ಬಣ್ಣವಾಗದೆ, ಕೋಡಗದಂತೆ ಕಂಡ ಕಂಡವರನ್ನು ಅಣಕಿಸದೆ, ನಾಯಿಯಂತೆ ಗೋತ್ರಕಲಹಂ ಮಾಡದೆ, ಮರಕುಟಿಗ ಹಕ್ಕಿಯಂತೆ

ಜಾಯಿ ಬಡಿಯದೆ, ಹಂಸೆಯಂತೆ ಸಾರಗ್ರಾಹಿಯಾಗಿ, ಶರತ್ಕಾಲದ ತೊರೆಯಂತೆ ನಿರ್ಮಲನಾಗಿ, ಸಹಸ್ರಕಿರಣನಂತೆ ಏಕರೂಪನಾಗಿ, ಕಂಗಿನಂತೆ ವಕ್ರಗುಣ ರಹಿತನಾಗಿ, ಮಂದರದಂತೆ ಕ್ಷಮಾಗುಣರಹಿತನೂ, ಚಂದ್ರನಂತೆ ಶಾಂತನೂ, ಆಗಿ ವರ್ತಿಸಬೇಕು ಋಷಿಯಾಗಬೇಕಾದರೆ. 'ಮುನಿಯದಿಪ್ಪುದು ಧರ್ಮದೊಳ್ ದೃಢನಿಪ್ಪುದಾಗಮುದಂಡಮುಂ । ನೆನೆಯುತಿರ್ಪುದು ಪೊಲ್ಲರೊಳ್ಕೆಳೆಗೊಳ್ಳದಿರ್ಪುದು ಶಿಷ್ಯರೊಳ್ । ವಿನಯಮುಂ ಪ್ರತಿಪಾಲಿಸಿರ್ಪುದು ಜೀವರಕ್ಷಕನಪ್ಪುದಾಗಮುವನೋವದೆ ಮೆಚ್ಚಿ ಚರ್ಚಿಸದಿರ್ಪುದೊಯ್ಯನೆ ಪಾಪದೊಳ್ ।' ಮತ್ತೆ ಮುನಿಯಾದವನು ಇತರರನ್ನು ದೂರಬಾರದು; ಇತರರ ದೂರಿಗೆ ಕಿವಿಗೊಡಬಾರದು; ರಾಗದ್ವೇಷಗಳನ್ನು ಬಿಟ್ಟು ಸರ್ವಸಮಭಾವದಿಂದಿರುವವನೇ ನಿಜವಾದ ಋಷಿ. ಆದುದರಿಂದ ತಪಸ್ಸೆಂಬುದು ಸಾಮಾನ್ಯವಲ್ಲ. ನೀನು ನಿನ್ನ ವಿದ್ಯಾಧರ ರಾಜ್ಯಕ್ಕೆ ಹಿಂದಿರುಗು" ಎಂದು ಮುನಿಗುಪ್ತ ಭಟ್ಟಾರಕರು ಚಂದ್ರಾಭ ಖೇಚರನಿಗೆ ನಿರೂಪಿಸಿದರು.

"ಅಗಿದು ಬಿಟ್ಟ ಕೊಜಟಿಯನ್ನು ಮತ್ತೊಮ್ಮೆ ಅಗಿಯುವರೇ? ಅಂತೆಯೇ ಒಮ್ಮೆ ಬಿಟ್ಟ ರಾಜ್ಯವನ್ನು ನಾನು ಮತ್ತೊಮ್ಮೆ ಕೈಕೊಳ್ಳೆನು" ಎಂದು ನುಡಿದ ಚಂದ್ರಾಭನ ಮನದ ವೈರಾಗ್ಯಕ್ಕೆ ಮುನಿ ಮೆಚ್ಚಿದರು. "ಹಾಗಾದರೆ ನಿನ್ನ ಮನದ ಪರಿಗ್ರಹಗಳನ್ನೆಲ್ಲಾ ತೊರೆದು ಬಿಡು" ಎಂದು ಹೇಳಿದರು. ಆಗ ಚಂದ್ರಾಭನು ಸಕಲ ಪರಿಗ್ರಹಗಳನ್ನು ತೊರೆದು, ಆಕಾಶಚಾರಿಣಿ ವಿದ್ಯೆಯೊಂದನ್ನು ಮಾತ್ರ ತೊರೆಯಲಿಲ್ಲ; ಮಾತ್ರವಲ್ಲ "ಆ ವಿದ್ಯೆಯ ಬಲದಿಂದ ಯಾವಾಗಲೂ ಮೇರುಪರ್ವತದಲ್ಲಿರುವ ಜಿನಾಲಯಗಳಿಗೆ ದರ್ಶನವೀಯಬೇಕೆಂಬ ಆಸೆಯಿದೆ" ಎಂದೂ ನಿವೇದಿಸಿದನು.

ಖೇಚರನ ಮನದ ಆಸೆ ಇನ್ನೂ ಸಂಪೂರ್ಣವಾಗಿ ಅಳಿದು ಹೋಗದುದನ್ನು ಕಂಡು ಭಟಾರರು "ಮಗನೇ, ನಿನಗೆ ಮಹಾವ್ರತಗಳ ಹಂಬಲು ಬೇಡ, ನೀನು ಶ್ರಾವಕ ವ್ರತಗಳನ್ನು ಸ್ವೀಕರಿಸು. ಅದರಿಂದಲೇ ನಿನಗೆ ಶ್ರೇಯಸ್ಸು" ಎಂದರು. ಚಂದ್ರಾಭನು ಹನ್ನೊಂದನೆಯ ಶ್ರಾವಕವ್ರತವಾದ 'ಉದ್ದಿಷ್ಟ ವಿರತಿ' ಎಂಬ ವ್ರತವನ್ನು ಸ್ವೀಕರಿಸಿ ಹಲಗಾಲ ಗುರುಸೇವೆಯಲ್ಲಿದ್ದನು.

ಒಮ್ಮೆ ಚಂದ್ರಾಭನು ಮುನಿಗುಪ್ತರೊಡನೆ ತನಗೆ ಉತ್ತರ ಮಧುರೆಗೆ ಹೋಗಿ ಜಿನಭವನಗಳನ್ನು ಸಂದರ್ಶಿಸಿ ಬರಬೇಕೆಂಬ ಆಸೆಯಿದೆ, ಅಪ್ಪಣೆಯಾಗಬೇಕು ಎಂದು ನಿವೇದಿಸಿಕೊಂಡ. "ಆಗಬಹುದು. ನೀನು ಉತ್ತರ ಮಧುರೆಗೆ ಹೋದಾಗ ಅಲ್ಲಿ ವರುಣ ಮಹಾರಾಜನ ರಾಣಿಗೆ ನನ್ನ ಆಶೀರ್ವಾದವನ್ನೂ ಉಂಡುರುಳಿ ಭಟ್ಟಾರಕರಿಗೆ ನನ್ನ ವಂದನೆಯನ್ನೂ ತಿಳಿಸಿಬಿಡು" ಎಂದು ಹೇಳಿ ಪ್ರಯಾಣಕ್ಕೆ ಅಪ್ಪಣೆ ಇತ್ತರು. ಆಗ ಚಂದ್ರಾಭನು, "ಗುರುಗಳೇ, ಉತ್ತರ ಮಧುರೆಯಲ್ಲಿ ನೂರಾರು ಮಂದಿ ಶ್ರೇಷ್ಠ ಶ್ರಾವಕರೂ ಯತಿಗಳೂ ಇರುವಾಗ ವರುಣರಾಜನ ರಾಣಿ ರೇವತಿದೇವಿಗೆ ಮತ್ತು ಉಂಡುರುಳಿ ಭಟ್ಟಾರಕರಿಗೆ ಮಾತ್ರ ಆಶೀರ್ವಾದ, ವಂದನೆಗಳನ್ನು ಕಳುಹಿಸಲು ಕಾರಣವೇನು?" ಎಂದು ಬೆಸಗೊಂಡನು.

" 'ಬೇವಿನ ಗಿಡವಂ ತಂದು ಆವಿನ ಸೊರೆವಾಲ ಎರೆದು ನಡಪಿದೊಡಂ ಬೇವಿಂಗೆ ಕೈಪೆ ಪಿಂಗದು' ಎಂಬಂತೆ ಆ ನಾಡವರು ಸತ್ಯಧರ್ಮಾನುಯಾಯಿಗಳಾದರೂ ಸಂಶಯ ತುಲಾರೂಢರಾದುದರಿಂದ ರೇವತೀದೇವಿ ಮತ್ತು ಉಂಡುರುಳಿ ಭಟ್ಟಾರಕರಿಗಲ್ಲದೆ ಉಳಿದವರಿಗೆ ಹರಕೆಯನ್ನಾಗಲೀ, ವಂದನೆಯನ್ನಾಗಲೀ ಕಳುಹಿಸಲಿಲ್ಲ" ಎಂದು ಮುನಿಯುತ್ತರವಿತ್ತು ಚಂದ್ರಾಭನನ್ನು ಬೀಳ್ಕೊಟ್ಟರು.

ಚಂದ್ರಾಭನು ವಿದ್ಯಾಬಲದಿಂದ ಮನೋವೇಗದಲ್ಲಿ ಉತ್ತರ ಮಧುರೆಯನ್ನು ಸೇರಿದನು. ಅಲ್ಲಿ ಸಕಲ ಜನವಂದಿತರಾದ ಭವಸೇನಾಚಾರ್ಯರನ್ನು ಕಂಡು ವಂದಿಸಿ ಹರಕೆಗೊಂಡನು; ಮತ್ತು "ಆಚಾರ್ಯ, ಪರಲೋಕ ಸುಖಕ್ಕೆಂದು ಇಹಲೋಕದಲ್ಲಿ ಶ್ರಾವಕರು ಹಲವು ಕಷ್ಟಗಳನ್ನು ಅನುಭವಿಸುವರಲ್ಲವೇ? ಇದರ ಮರ್ಮವೇನು? ತಿಳಿಸಬೇಕು" ಎಂದೂ ಕೇಳಿಕೊಂಡನು. "ಧರ್ಮದಿಂದ ಸುಖವುಂಟೆಂದು ಶಾಸ್ತ್ರಗಳಲ್ಲಿ ಹೇಳಿದೆ. ಅಲ್ಲದೆ ನಾವೇನೂ ಅದನ್ನು ಕಂಡರಿಯೆವು" ಎಂದು ಭಟ್ಟಾರಕರು ಸಂಕ್ಷೇಪವಾಗಿ ಉತ್ತರಿಸಿ ಸುಮ್ಮನಾದರು.

ಹೊಳೆಯಲ್ಲಿ ತಾವರೆಯನ್ನೂ, ಬೇವಿನಲ್ಲಿ ಸಿಹಿಯನ್ನೂ, ಸೂರ್ಯನಲ್ಲಿ ತಂಪನ್ನೂ, ಅಭವ್ಯರಲ್ಲಿ ಭವ್ಯತೆಯನ್ನೂ, ಹುಡುಕುವವನು ಹೆಡ್ಡನು. ತಾಮ್ರದಿಂದ ಮಾಡಿದ ಪ್ರತಿಮೆಯು ಕಿಲುಬನ್ನು ಬಿಡದೆಂಬಂತೆ ಅಭವ್ಯರು

ಜಿನಸ್ವಾಮಿಯನ್ನು ಪೂಜಿಸಿದರೂ ವ್ಯರ್ಥ ಎಂದು ಚಿಂತಿಸಿ ಉಂಡುರುಳಿ ಭಟ್ಟಾರಕರಲ್ಲಿಗೆ ಬಂದ ಚಂದ್ರಾಭ ಖೇಚರ ಅಲ್ಲಿ ತನ್ನ ವಿದ್ಯಾಬಲದಿಂದ, ಇರುವೆ, ನೊಣ ಮೊದಲಾದ ಕ್ರಿಮಿ, ಕೀಟಗಳನ್ನು ನಿರ್ಮಿಸಿ, ನಿರ್ದಯ ನಾಗಿ ಅವುಗಳನ್ನು ಕೊಲ್ಲ ತೊಡಗಿದನು. ಇದನ್ನು ಕಂಡು ಉಂಡುರುಳಿ ಭಟ್ಟಾರಕರಿಗೆ ತುಂಬಾ ಬೇಸರವಾಯಿತು. ಅವರು ಚಂದ್ರಾಭನನ್ನು ಕುರಿತು, "ದಯೆಯಿಲ್ಲದ ಧರ್ಮವೂ, ನಯವಿಲ್ಲದ ಸತಿಯೂ, ಆತ್ಮನಿಲ್ಲದ ತನುವೂ, ಜಯವಿಲ್ಲದ ಕಾಳಗವೂ ಶೋಭಿಸಲಾರವು. ಜಿನಧರ್ಮವೆಂಬುದು ಜೀವ ಕಾಯಕ್ಕೆ ಜೀವಕವಚ. ನೀನು ಹೀಗೆ ವರ್ತಿಸಲಾಗದು. ನೀನು ಸತ್ಪುರುಷರ ಬಳಿ ಆಗಮಗಳನ್ನೋದಿ, ಸದ್ಧರ್ಮವೇನೆಂದು ತಿಳಿಯಬೇಕು. ಸದ್ಧರ್ಮವೇನೆಂದು ಅರಿಯದೆ ಸುಖದ ಸ್ವರೂಪ ಗೊತ್ತಾಗದು. ನಿನಗೀ ಪ್ರಾಣಿಹಿಂಸೆ ಸಲ್ಲದು" ಎಂದು ಉಪದೇಶಿಸಿದರು.

ಆಗ ಚಂದ್ರಾಭ "ತಪಸ್ಸೆಂದು ಶರೀರವನ್ನು ಕೆಡಿಸಿ, ಇಹಸುಖವನ್ನು ತೊರೆದು, ಕಣ್ಣಿಗೆ ಕಾಣದ ಪರಲೋಕ ಸುಖಕ್ಕಾಗಿ ಆಸೆಪಡುವವನು ಮೂಢನಲ್ಲವೇ?" ಎಂದು ಭಟ್ಟಾರಕರನ್ನು ಪ್ರಶ್ನಿಸಿದುದಕ್ಕೆ ಭಟ್ಟಾರಕರು, "ನಮ್ಮ ಬೆನ್ನು ನಮಗೆ ಕಾಣುವುದಿಲ್ಲವೆಂದು ನಾವು ಬೆನ್ನೇ ಇಲ್ಲವೆಂದರೆ ಹೇಗೆ? ಹಾಗೆಯೇ ಕಣ್ಣಿಗೆ ಕಾಣದ ಮಾತ್ರದಿಂದ ಪರಲೋಕವಿಲ್ಲ ವೆಂಬುದರಲ್ಲಿ ಅರ್ಥವಿಲ್ಲ! ಅಲ್ಲದೆ ಪರಲೋಕವನ್ನು ಕಂಡು ಬಂದವ ರಿದ್ದಾರೆಯೇ ಎಂದು ನೀನು ಕೇಳಬಹುದು. ಆದರೆ ದೂರದಲ್ಲಾಗುವ ಗ್ರಹಣವನ್ನು ಇಂತಹ ದಿನವೇ ಆಗುವುದೆಂದು ಕಂಡು ಬಂದವರಾರಿದ್ದಾರೆ? ಆದರೆ ಭೂಮಿಯಲ್ಲೇ ಇದ್ದುಕೊಂಡು ಇಂತಹ ದಿನವೇ ಗ್ರಹಣವಾಗುವು ದೆಂದು ಹೇಳುವ ಜೋಯಿಸರಿಲ್ಲವೇ? ಅಮವಾಸ್ಯೆಯ ದಿನ ಚಂದ್ರನು ಕಾಣದಿದ್ದರೂ ಚಂದ್ರನಿಲ್ಲವೇ? ಅಂತೆಯೇ ಪರಲೋಕಗಳೂ, ಪರಮ ಜಿನರೂ ಇರುವರು." ಎಂದು ಪರಲೋಕದ ಅಸ್ತಿತ್ವವನ್ನು ತಿಳಿಯ ಹೇಳಿದರು.

ಚಂದ್ರಾಭ ಖೇಚರ ಉಂಡುರುಳಿ ಭಟ್ಟಾರಕರ ಪ್ರವಚನಕ್ಕೆ ಮೆಚ್ಚಿ ಅವರನ್ನು ಮನಸ್ಸಿನಲ್ಲೇ ವಂದಿಸಿದನು. ಮತ್ತೊಮ್ಮೆ ಭಟ್ಟಾರಕನನ್ನು ಪರೀ ಕ್ಷಿಸಲೆಂದು, ಮಲಗಿ ನಿದ್ದೆ ಹೋಗುತ್ತಿದ್ದ ಭಟ್ಟಾರಕರನ್ನು ಕುರುಡರಂತೆ

ನಟಿಸಿ ತುಳಿದೇ ಬಿಟ್ಟನು. ಆಗ ಭಟ್ಟಾರಕರು ಅಯ್ಯೋ! ಕಾಲಿಗೆ ನೋವಾಯಿತೆ?" ಎಂದು ನೊಂದುಕೊಂಡರು. ಆಗ ಚಂದ್ರಾಭ ಭಟ್ಟಾರಕರ ಕ್ಷಮೆ ಕೇಳಿ ತನ್ನ ವೃತ್ತಾಂತವನ್ನು ತಿಳಿಸಿ, ಮುನಿಗುಪ್ತ ಭಟ್ಟಾರಕರ ವಂದನೆಯನ್ನು ನಿವೇದಿಸಿ, ಹರಕೆಗೊಂಡು ಬೀಳ್ಕೊಂಡನು.

ಉಂಡುರುಳಿ ಭಟ್ಟಾರಕರನ್ನು ಬೀಳ್ಕೊಂಡ ಚಂದ್ರಾಭನು ರೇವತೀ ಮಹಾದೇವಿಯನ್ನು ಪರೀಕ್ಷಿಸಬೇಕೆಂದು ಬಗೆದನು. ಮರುದಿನ ಪ್ರಾತಃ ಕಾಲದಲ್ಲಿ, "ವರಕಮಂಡಲವೊಪ್ಪೆ ಹಸ್ತದೊಳೋಜೆವೆತ್ತ ಬೆಳ್ಳಿಯು । ತ್ತರಿಗೆ ಜನ್ನಿವರಂ ಬೆಡಂಗಳವಟ್ಟು ಬಾಲದಿನೇಶನಂ । ದೆಣೆ ತನುಚ್ಛವಿ ನಾಡೆ ಶೋಭಿಸೆ ಹಂಸೆ ರಂಜಿಸಿ ತೋರೆ ಬಾ । ಸುರ ಚತುರ್ವದನಂ ವಿರಾಜಿಸೆ ಧಾತ್ರಿಗಚ್ಚರಿಯಪ್ಪಿನಂ "। ಚತುರ್ಮುಖ ಬ್ರಹ್ಮನ ವೇಷವನ್ನು ಧರಿಸಿ, ನಗರದ ಪೂರ್ವದಿಕ್ಕಿನ ಉದ್ಯಾನದಲ್ಲಿ ಉಳಕೊಂಡನು.

ಸತ್ಯಲೋಕವಾಸಿಯಾದ ಬ್ರಹ್ಮದೇವನೇ ತಮ್ಮ ನಗರದ ಪೂರ್ವ ಉದ್ಯಾನದಲ್ಲಿರುವನೆಂದು ಕೇಳಿ ನಗರವಾಸಿಗಳೆಲ್ಲಾ ಸಂತೋಷಪುಳಕಿತರಾದರು. ಅವರ ಕೋಲಾಹಲಕ್ಕೆ ಮೇರೆಯಿಲ್ಲವಾಯಿತು. ವರುಣ ಮಹಾರಾಜನ ಕಿವಿಗೂ ಈ ಸುದ್ದಿ ಮುಟ್ಟಿತು.

ವರುಣ ಮಹಾರಾಜನು ಪತ್ನಿಯಾದ ರೇವತೀ ಮಹಾದೇವಿಯನ್ನು ಬಳಿಗೆ ಕರೆದು, "ಸಾಕ್ಷಾತ್ ಬ್ರಹ್ಮದೇವನೇ ನಮ್ಮ ನಗರಕ್ಕೆ ಬಂದನೆಂದ ಮೇಲೆ ನಮ್ಮ ಭಾಗ್ಯಕ್ಕೆ ಎಣೆಯುಂಟೇ?" ಎಂದು ಪ್ರಶ್ನಿಸಿದನು. ಅದಕ್ಕೆ ರೇವತೀ ಮಹಾದೇವಿ ಗಹಗಹಿಸಿ ನಕ್ಕು, "ನಿಮ್ಮ ಬುದ್ಧಿಹೀನತೆಗೆ ಏನು ಹೇಳಲಿ? ಅದೊಬ್ಬ ಖೇಚರನ ಮಾಯೆ, ಅವನನ್ನು ಬ್ರಹ್ಮದೇವನೆಂದು ತಿಳಿದಿರೇ? ಆದಿಬ್ರಹ್ಮನೆಂದೆನಿಸಿದ ಪ್ರಥಮ ತೀರ್ಥೇಶ್ವರರು ಎಂದೋ ಮೋಕ್ಷಸಾಮ್ರಾಜ್ಯವನ್ನು ಸೇರಿರುವರು. ಇವನೊಬ್ಬ ಕೃತಕ ಬ್ರಹ್ಮ" ಎಂದು ಸುಮ್ಮನಾದಳು. ಬ್ರಹ್ಮದರ್ಶನಕ್ಕೆ ಅವಳು ಹೋಗಲಿಲ್ಲ. ರೇವತೀ ಮಹಾದೇವಿಯ ಮನದ ದೃಢತೆಯನ್ನು ಕಂಡು ವಿಸ್ಮಯಗೊಂಡ ಚಂದ್ರಾಭ ಮರುದಿನ ವಿಷ್ಣುವಿನ ವೇಷವನ್ನು ಧರಿಸಿ ನಗರಕ್ಕೆ ಬಂದ. ರೇವತೀ ದೇವಿ ಅಂದೂ ಆತನಾದರೋ ಕೃತಕ ವಿಷ್ಣುವೆಂದೇ ಅಲ್ಲಗಳೆದಳು; ಆದರ

ಮರುದಿನ ಶಿವನ ವೇಷಧರಿಸಿ ಬಂದ. ಆಗಲೂ ಹಾಗೆಯೇ. ರೇವತೀ ದೇವಿಯ ಮನಸ್ಸು ಚಂಚಲವಾಗಲಿಲ್ಲ.

ಹೀಗಿದ್ದರೂ ಚಂದ್ರಾಭನಿಗೆ ರೇವತೀದೇವಿಯನ್ನು ಪರೀಕ್ಷಿಸಬೇಕೆಂಬ ಆಸೆ ಹೋಗಲಿಲ್ಲ. "ಮಿಳಿರ್ವಶೋಕೆಯ ವೃಕ್ಷದಿಂ ಹರಪೀಠದಿಂ। ಪೊಳೆವ ಚಾಮರದೋಳಿಯಿಂ ನೆರೆದಿವ್ಯನಿಸ್ವನದಿಂ ಸುರರ್। ತಳಿವ ಪುಷ್ಪ ಸಮೂಹದಿಂದೊದವಿರ್ದ ಮುಕ್ಕೊಡೆಯಿಂ ಪ್ರಭಾ। ವಳಯದಿಂ ರಮಣೀಯಮಾಗಿರೆ ಧಾತ್ರಿಗಚ್ಚರಿಯಪ್ಪಿನಂ।" ಶ್ರೀ ವರ್ಧಮಾನಸ್ವಾಮಿಯ ರೂಪವನ್ನು ಧರಿಸಿ, ಲೋಕವೇ ಆಶ್ಚರ್ಯಗೊಳ್ಳುವಂತೆ ಪ್ರಾತಃಕಾಲದಲ್ಲಿ ನೇಸರು ತಳತಳನೆ ಉದಯಿಸುತ್ತಿರುವಾಗ ಬಡಗುದಿಕ್ಕಿನಲ್ಲಿ ಕಾಣಿಸಿಕೊಂಡನು.

ಊರಜನರೆಲ್ಲರೂ ಒಟ್ಟು ಸೇರಿ ಬಹಳ ಸಂಭ್ರಮದಿಂದ ವರ್ಧಮಾನಸ್ವಾಮಿಯ ಸಂದರ್ಶನಕ್ಕೆ ನಡೆತಂದರು. ವರುಣ ಮಹಾರಾಜನು ರೇವತೀ ಮಹಾದೇವಿಯೊಡನೆ, "ಈಗ ನಿನ್ನ ಕುಲಸ್ವಾಮಿಯಾದ ವರ್ಧಮಾನ ದೇವರೇ ಪ್ರತ್ಯಕ್ಷ ವೈತೋರಿದ್ದಾರೆ. ನಾವು ಅವರನ್ನು ಪೂಜಿಸಬೇಡವೇ?" ಎಂದು ಕೇಳಿದನು. "ಸ್ವಾಮಿಾ? ಇವನು ಜಿನೇಂದ್ರನಲ್ಲ. ಯಾರೋ ಕಪಟಿ. ನಮ್ಮ ಆಗಮದಲ್ಲಿ ಹೇಳಿದ ಇಪ್ಪತ್ತನಾಲ್ಕು ಮಂದಿ ತೀರ್ಥಂಕರರೂ ಮುಕ್ತಿಶ್ರೀಯಲ್ಲಿ ಕೂಡಿರುವಾಗ ಇಲ್ಲಿಗೆ ಬರುವುದೆಂತು? ಈಗ ಬಂದಿರುವ ಕಪಟಿಯನ್ನು ಊರವರು ಪೂಜಿಸುವರಲ್ಲಾ! ಎಂದರೆ, ಅವರು ದೈವವಿಮೂಢತೆ, ಲೋಕವಿಮೂಢತೆ, ಸಮಯವಿಮೂಢತೆಗಳೆಂಬ ಮೂರು ಬಗೆಯ ಮೂಢತ್ವದಿಂದ ಕೂಡಿದವರು. ಆದುದರಿಂದಲೇ ಇವರು "ಸಮ್ಯಕ್‌ದೃಷ್ಟಿಗಳಲ್ಲ" ಎಂದು ನಿರೂಪಿಸಿದಳು. ಇತ್ತ ಕೃತಕಜಿನನು ರೇವತೀ ಮಹಾದೇವಿ ಮೂಢತ್ವದಿಂದ ತನ್ನನ್ನು ಪೂಜಿಸಲು ಬಾರದಿರುವುದನ್ನು ಕಂಡು, ಆಕೆಯ ದೃಢತೆಗೆ ಮೆಚ್ಚಿ, ತನ್ನ ಕೃತಕರೂಪವನ್ನು ಬಿಟ್ಟು ಬಿಟ್ಟನು. ಮತ್ತೆ ರೇವತೀ ಮಹಾದೇವಿಯ ಬಳಿಗೆ ಬಂದು ನಾನೇ ನಿನ್ನನ್ನು ಪರೀಕ್ಷಿಸಲು ಇಷ್ಟೆಲ್ಲಾ ನಡೆಸಿದೆನೆಂದು ಹೇಳಿ, ಕ್ಷಮೆಯನ್ನು ಬೇಡಿ, ಮುನಿಗುಪ್ತರು ಕಳುಹಿಸಿದ ಆಶೀರ್ವಾದಗಳನ್ನು ಆಕೆಗೆ ತಿಳಿಸಿದನು. ಮತ್ತು ತಾನು ಬಂದ ಕೆಲಸವನ್ನೂ ಜಿನಾಲಯ ದರ್ಶನವನ್ನೂ ಮುಗಿಸಿ ದಕ್ಷಿಣಮಧುರೆಗೆ ಹಿಂದಿರುಗಿದನು.

ಮುನಿಗುಪ್ತರು ರೇವತೀ ಮಹಾದೇವಿಗೆ ಆಶೀರ್ವಾದ ಕಳುಹಿಸಿದ್ದನ್ನು ಕಂಡು ವರುಣ ಮಹಾರಾಜನು ಆಕೆಯಿಂದ ಮೇಲಾದ ಶ್ರಾವಕಿಯರು ತನ್ನ ರಾಜ್ಯದಲ್ಲಿ ಯಾರೂ ಇಲ್ಲವೆಂದೇ ತಿಳಿದನು. "ಪರಮ ಗುಣನಿಲಯೇ ಜಿನಮತಸರೋಜಿನೀ ರಾಜಹಂಸೆ ಶಿಲಾಂಬುಧಿ ಸ । ಚ್ಚರಿತವಿಭೂಷಣೆ ಭವ್ಯೋ । ತ್ಕರಪೂಜಿತೆ ನಿಷ್ಕಲಂಕೆ ನಿರ್ಮಲೆ ಜಗದೊಳ್ !" ಎಂದು ಚಿಂತಿಸಿ, ಆಕೆಗೆ ಅಭಿವಂದಿಸಿ, ತನ್ನಲ್ಲಿದ್ದ ಮೂಢತ್ವವನ್ನು ತೊರೆದನು. ಆ ಮೇಲೆ ಹಿರಿಯ ಮಗನಿಗೆ ಪಟ್ಟ ಕೊಟ್ಟು, ತಾನು ದೀಕ್ಷೆ ಪಡೆದನು. ರೇವತೀ ಮಹಾದೇವಿ ದಾನ, ಪೂಜೆ, ಉಪವಾಸಗಳಿಂದ ಹಲಗಾಲ ಕಳೆದು, ಮುನಿ ಗುಪ್ತ ಭಟ್ಟಾರಕರನ್ನು ಗುರುಗಳಾಗಿ ಮುಂದಿಟ್ಟು, ಸುವ್ರತೆಕಂತಿಯರಿಂದ ದೀಕ್ಷೆ ಹೊಂದಿದಳು; ಆ ಮೇಲೆ ಏಕಾದಶಾಂಗಧಾರಿಣಿಯಾಗಿ ತಪಸ್ಸು ಮಾಡಿದಳು. ಹೀಗಿರಲು ಅವಳು ಒಮ್ಮೆ ದಕ್ಷಿಣ ಮಧುರೆಗೆ ಬರಬೇಕೆಂದು ಯೋಚಿಸಿ ದಕ್ಷಿಣಕ್ಕೆ ಪ್ರಯಾಣ ಬೆಳೆಸಿದಳು. ದಾರಿಯಲ್ಲಿ ಕರಹಾಟ ನಗರಕ್ಕೆ ಮುಟ್ಟುವಾಗ ಆಕೆಗೆ ದೇಹಾಲಸ್ಯವುಂಟಾಯಿತು. ಅವಳು ತನ್ನ ಅವಸಾನ ಸಮೀಪಿಸಿತೆಂದು ತಿಳಿದು ಸನ್ಯಸನವನ್ನು ಕೈಕೊಂಡು ಸಮಾಧಿ ಮರಣದಿಂದ ದೇಹವನ್ನು ತೊರೆದಳು; ಹದಿನಾರನೆಯ ಅಚ್ಚುತಕಲ್ಪದಲ್ಲಿ ಮಹರ್ಧಿಕದೇವನಾಗಿ ಹುಟ್ಟಿದಳು. ರೇವತೀ ಮಹಾದೇವಿ ದೇಹ ಬಿಟ್ಟ ಸ್ಥಳ "ರೇವತೀ ತೀರ್ಥ" ಎಂಬ ಹೆಸರಿನ ಪ್ರಸಿದ್ಧ ತೀರ್ಥವಾಯಿತು.

ಜಿನೇಂದ್ರ ಭಕ್ತ

(ಉಪಗೂಹನ)

ಮಗಧ ದೇಶದ ಪಾಟಲೀಪುತ್ರದಲ್ಲಿ ವೀರಧ್ವಜನೆಂಬ ದೊರೆ ಆಳುತ್ತಿದ್ದನು. ಆತನ ಪ್ರೀತಿಯ ಪುತ್ರ ದುರ್ವ್ಯಸನಿಯಾಗಿ ನೀತಿಗೆಟ್ಟು ಕಳ್ಳಕಾಕರೊಡಗೂಡಿ ಊರಲ್ಲೆಲ್ಲ ಹಾವಳಿಯೆಸಗುತ್ತಿದ್ದನು. ಅದೊಮ್ಮೆ ಆತನು ಕಳ್ಳರ ನಡುವೆ ಮಂಡಿಸಿ ಮಾತನಾಡುತ್ತಿದ್ದಾಗ, ಆ ಗುಂಪಿನ ಗುರಿಕಾರನು ಅರಸುಮಗನಿಗೆ ಕೈಮುಗಿದು, "ದೇವಾ! ನಾನು ಆಲೆದಾಡದ ನಾಡಾಗಲೀ

ಕಳದ ವಸ್ತುವಾಗಲೀ ಈ ಸೃಷ್ಟಿಯಲ್ಲೇ ಕಾಣೆ. ಗೊಲ್ಲವಿಷಯದ ಕಾಮಲಿಪ್ತಿಪುರವನ್ನು ಮನೋಹರನೆಂಬ ದೊರೆ ಆಳುತ್ತಿರುವನು. ಅವನ ರಾಜಶ್ರೇಷ್ಠಿಯ ಹೆಸರು ಜಿನೇಂದ್ರ ಭಕ್ತ. ಆ ಸೆಟ್ಟಿ ರೂಪಗುಣಸಂಪತ್ತು ಗಳಿಂದ ಕೂಡಿದ ಮಹಾಮಹಿಮ. ಸಂಪತ್ತಿನಲ್ಲಿ ಕುಬೇರನಿಗೂ, ಭೋಗದಲ್ಲಿ ಇಂದ್ರನಿಗೂ, ಜಿನಭಕ್ತಿಯಲ್ಲಿ ಶ್ರೇಯಾಂಸನಿಗೂ, ಸರಿಯೆನಿಸಿದವನು. ಜಿನೇಂದ್ರಭಕ್ತ. ಅವನ ದೇಹಾರ ಮೂರುಲೋಕಗಳ ವಸ್ತುಒಡವೆಗಳಿಂದ ತುಂಬಿ ಸೊಗಯಿಸುವುದು. ಆ ದೇಹಾರದ ದೇವರಿಗೆ ವಜ್ರವೈಢೂರ್ಯ ಮೊದಲಾದ ಅನರ್ಘ್ಯರತ್ನಗಳಿಂದ ರಚಿತವಾದ ಒಂದು ಮುಕ್ಕೊಡೆ ಇದೆ. ಆ ಕೊಡೆಯಲ್ಲಿ ಕುಳ್ಳಿರಿಸಿದ ಅದೊಂದು ಅನರ್ಘ್ಯ ರತ್ನಕ್ಕೆ ಬೆಲೆ ಕಟ್ಟಿದವರಿಲ್ಲ; ಮೂರುಲೋಕವನ್ನೇ ಮಾರಿದರೂ ಆ ರತ್ನದ ಬೆಲೆ ಬಾರದು. ಅಂತಹ ರತ್ನವನ್ನು ನಾನೆಂದಿಗೂ ಕಂಡಾಗಲೀ ಕೇಳಿಯಾಗಲೀ ಇಲ್ಲ". ಎಂದು ಬಿನ್ನಯಿಸಿದನು.

ಆಗ ರಾಜಕುಮಾರನು "ನೀನೇಕೆ ಆ ಅನರ್ಘ್ಯ ರತ್ನವನ್ನು ಪಡೆಯಲು ಪ್ರಯತ್ನಿಸಲಿಲ್ಲ? ಸೂಜಿಯ ತೂತಿನಲ್ಲಿ ಹೊಕ್ಕು ಹೊರಡುವ ತಂತ್ರಗಾರನಾದ ನೀನೇ ಅದನ್ನು ಕಳಲಾರಿಯಾ? ಹೇಗಾದರೂ ಸರಿಯೆ ಆ ಮಣಿಯನ್ನು ಪಡೆಯಲೇಬೇಕು. ತಂದೊಪ್ಪಿಸುವಾತನಿಗೆ ನನ್ನ ಅರ್ಧ ರಾಜ್ಯವನ್ನಾದರೂ ಕೊಡಲು ಸಿದ್ಧನಿರುವೆನು" ಎಂದು ನುಡಿದನು. ಅರಗುವರನ ಆಣತಿಯನ್ನಾಲಿಸಿದ ಕಳ್ಳರ ಗುರಿಕಾರನು "ಒಡೆಯಾ, ಹನ್ನೆರಡು ಕಡೆಯಿಂದಲೂ ಕಾವಲುಗಾರರಿಂದ ಕಾಯಲ್ಪಡುವ ಆ ಜಿನ ಮಂದಿರವನ್ನು ಹೊಗುವುದಾದರೂ ಎಂತು ಸಾಧ್ಯ? ಅಲ್ಲದೆ ಆ ಜಿನೇಂದ್ರ ಸೆಟ್ಟಿ ಜಿನನನ್ನರ್ಚಿಸುತ್ತ, ಜಿನಕತೆಗಳನ್ನಾಲಿಸುತ್ತ, ಇರುಳೆಲ್ಲ ಮಂದಿರ ದಲ್ಲಿಯೇ ಕಳೆಯುವನು. ಹಾಗಿರುವಾಗ ಆ ರತ್ನದ ಕಡೆಗೆ ಕಣ್ಣೆತ್ತಿ ನೋಡುವುದಾದರೂ ಹೇಗೆ? ನನ್ನಿಂದ ಎಂದಿಗೂ ಸಾಧ್ಯವಾಗದ ಕಾರ್ಯ ವಿದು" ಎಂದು ಕೈಜೋಡಿಸಿ ನುಡಿದನು. ಆಗಲೇ ಆ ಕಳ್ಳರ ಕೂಟ ದಿಂದ ಶೂರ್ಪನೆಂಬಾತ-ಚೋರಶಿಖಾಮಣಿ ಎದ್ದು ಬಂದು ಕೈಜೋಡಿಸಿ ರಾಜಕುಮಾರನಿಗೆ ವಂದಿಸಿ "ದೇವಾ! ಅಪ್ಪಣೆಯಾದರೆ ಆ ರತ್ನವನ್ನು ನಾನು ಹೇಗಾದರೂ ತಂದೊಪ್ಪಿಸುವೆನು" ಎಂದು ಬಿನ್ನವಿಸಿದನು. ಕೂಡಲೇ

ರಾಜಪುತ್ರನು ಆತನಿಗೆ ಕರ್ಪೂರವೀಳೆಯವನ್ನಿತ್ತು ರತ್ನಾಪಹಾರಕ್ಕೆ ಅಣತಿಯಿತ್ತು ಕಳುಹಿಸಿ ಕೊಟ್ಟನು.

"ಸೆಟ್ಟಿಯ ಮನೆಯಿಂದ ರತ್ನವನ್ನು ಹೇಗೆ ಅಪಹರಿಸಲಿ? ಕಳವಿಗೆ ಹೋಗಿ ಸಿಕ್ಕಿಬಿದ್ದುದೇ ಆದರೆ ಕಟುಕನ ಕೈಯ ಕುರಿಯಂತೆ ಸಾಯಬೇಕು; ಅಥವಾ ಸಿಕ್ಕಿಬಿದ್ದರೂ ಜೀವವುಳಿಯಲೂ ಬಹುದು; ಏಕೆಂದರೆ ಆ ಸೆಟ್ಟಿ ಮಹಾ ಶ್ರಾವಕನಾಗಿದ್ದಾನೆ. ಜೀವಹಿಂಸೆ ಮಾಡಲಾರೆ. ಕನ್ನವಿಕ್ಕಿ ಕಳವು ಮಾಡುವವರನ್ನೆಲ್ಲಾ ಕಳ್ಳರೆನ್ನಬಹುದೆ? ನಾವು ನೋವು ಒಂದೂ ಆಗದಂತೆ ಉಪಾಯದಿಂದ ಕದಿಯುವವನೇ ನಿಜವಾದ ಕಳ್ಳನು. ಆದುದರಿಂದ ಈಗ ಅವಸರ ಮಾಡುವುದು ತರವಲ್ಲ. ಕೆಲಗಾಲ ತಡೆದರೂ ಚಿಂತಿಲ್ಲ. ಸಮಾಧಾನದಿಂದ ಕೆಲಸ ಸಾಧಿಸಬೇಕು. ಜಿನೇಂದ್ರ ಸೆಟ್ಟಿ ಧರ್ಮದಲ್ಲಿ ಸ್ಥಿರಚಿತ್ತನಾಗಿದ್ದಾನೆ. ಆತನಿಗೆ ಋಷಿಗಳ ಮೇಲೆ ತುಂಬಾ ಭಕ್ತಿ. ಆದುದರಿಂದ ಈಗ ತಾನು ತಪಸ್ವೀ ವೇಷಧರಿಸಿ ಆ ಕಾಮಲಿಪ್ತಿ ನಗರಕ್ಕೆ ನಡೆಯಬೇಕು. ಮತ್ತಲ್ಲಿ ಸೆಟ್ಟಿಯ ದೇಹಾರವನ್ನು ಹೊಕ್ಕು ಆತನನ್ನು ನಂಬಿಸಿ ರತ್ನವನ್ನು ವಶಪಡಿಸಿಕೊಳ್ಳಬೇಕು"–ಈ ರೀತಿ ಆ ಚೋರ ಶಿಖಾಮಣಿ ಚಿಂತಿಸುತ್ತಾ ಕಾರ್ಯಸಾಧನೆಗಾಗಿ ಊರುಬಿಟ್ಟನು.

ಊರಿನಿಂದ ಹೊರಟ ಶೂರ್ಪನು ಮೂಡಣ ಕಡೆ ಪಯಣ ಬೆಳೆಯಿಸಿ ಬೇರೊಂದು ಊರನ್ನು ಪ್ರವೇಶಿಸಿದನು. ಅಲ್ಲಿಯೊಂದು ಬಸದಿಯನ್ನು ಪ್ರವೇಶಿಸಿ ಕೃತಕ ವೈರಾಗ್ಯವನ್ನು ನಟಿಸುತ್ತಾ ಕೃತ್ರಿಮ ಋಷಿಯಾಗಲೆಳಸಿ ಕಪಟಬುದ್ಧಿಯಿಂದ ಋಷಿಗಳಿಗೆ ವಂದಿಸಿದನು. ತಾನು ಸಂಸಾರದ ಅಸಾರತೆಯನ್ನು ಕಂಡು ಊರುಬಿಟ್ಟು ಬಂದಿರುವೆನೆಂದು ಹೇಳಿ ಋಷಿಗಳ ರೀತಿನೀತಿಗಳನ್ನು ಅಭ್ಯಾಸ ಮಾಡುತ್ತ ಕೆಲ ದಿನಗಳನ್ನು ಅಲ್ಲೇ ಕಳೆದು ಮತ್ತಲ್ಲಿಂದ ಹೊರಡುವಾಗಲೇ ತಲೆ ಬೋಳಿಸಿ ಬ್ರಹ್ಮಚಾರಿ ವೇಷವನ್ನಳ ಪಡಿಸಿಕೊಂಡನು. ಅರ್ಧರಾಜ್ಯದಾಶೆಯಿಂದ ಕಳವಿನ ಋಷಿಯಾದ ಶೂರ್ಪನು ಊರೂರು ಅಲೆದಾಡತೊಡಗಿದನು. ಅವನು ಹೋದಲ್ಲೆಲ್ಲಾ ಜನರು ಈತನಾರೋ ಮಹರ್ಷಿಯಿರಬೇಕೆಂದೆಣಿಸಿ ಪೂಜೆ ಪುರಸ್ಕಾರ ಗಳನ್ನೆಸಗಿದರು. ಈಗ ಶೂರ್ಪನ ಕೀರ್ತಿ ದೇಶದ ಮೂಲೆಮೂಲೆಗೂ ಮುಟ್ಟಿತು.

ಹೀಗಿರಲೊಮ್ಮೆ ಆ ಚೋರಶಿಖಾಮಣಿ—ಈಗ ಋಷಿಗಳ ಮೌಳಿಮಣಿ—ತಾಮ್ರಲಿಪ್ತಿಪುರವನ್ನು ಪ್ರವೇಶಿಸಿದನು. ಈ ದೇಹವೇ ತನ್ನದಲ್ಲವೋ ಎಂಬಂತೆ ಸಕಲ ಸುಖಗಳನ್ನು ಬಿಟ್ಟು ವ್ರತೋಪವಾಸಗಳನ್ನೆಸಗುತ್ತ ನಾಡಾಡುವ ಋಷಿಯನ್ನು ಕಂಡ ಊರವರೆಲ್ಲ ಮಹಾಮಹಿಮನೆಂದು ತಿಳಿದು ಹೊಗಳಲಾರಂಭಿಸಿದರು. ಜಿನೇಂದ್ರ ಸೆಟ್ಟಿ ಪರಮಸಂತೋಷದಿಂದ ಋಷಿಯು ಬಳಿಗೈದಿ ಭಕ್ತಿಯಿಂದ ಪೂಜಿಸಿದನು. ಕೂಡಲೇ ಋಷಿಗಳನ್ನು ಪ್ರಾರ್ಥಿಸಿ ತನ್ನ ದೇಹಾರಕ್ಕೆ ಕರೆದೊಯ್ದನು. ಮಹಾಋಷಿಯೆನಿಸಿದ ಆ ಮಾಯಾಕರ್ಮಿ ತನ್ನ ಕಾರ್ಯ ಕೈಗೂಡಿತೆಂದು ಮನದಲ್ಲೇ ಹಿಗ್ಗಿದನು. "ಪೊನ್ನತೋರಣದಿಂ ದುಕೂಲದ ಸೂಸಕಂಗಳಿನೊಪ್ಪುವ। ತುಂಗ್ಯನ್ನತ ಧ್ವಜದೋಳಿಯಿಂ ಬಿಡು ಮುತ್ತಿನಿಂ ಕಡು ಶೋಭಿಪ॥ ತ್ತುನ್ನಯಂ ಬಡೆದಿರ್ದ ಚೆಲ್ವಿನ ರಂಗವಲ್ಲಿಯನೆಲ್ಲಿಯುಂ। ರನ್ನದಿಂ ಪಿಡಿದುನ್ನತಿಕ್ಕೆಯಿನಿರ್ದದೀ ಜಿನಮಂದಿರಂ॥" ಎಂದು ಮಾಯಾ ಮುನೀಂದ್ರನು ಜಿನಮಂದಿರವನ್ನು ಹೊಗಳಿದನು. ಮತ್ತೆ ಸೆಟ್ಟಿಯೊಡನೆ "ನನ್ನಂತಹ ವಿರಾಗಿಗಳು ಇಂತಹ ರತ್ನ ಮಂದಿರದಲ್ಲಿ ನೆಲಸುವುದು ತರವಲ್ಲ; ನಿನಗೆ ನನ್ನನ್ನಿರಿಸಿಕೊಳ್ಳುವ ಬಯಕೆ ಇದ್ದರೆ ಯಾವುದಾದರೊಂದು ಶೂನ್ಯ ಗೃಹವನ್ನು ತೋರಿಸು" ಎಂದನು. ಆಗ ಸೆಟ್ಟಿ "ಅದಾಗದು; ತಾವಿಲ್ಲಿಯೇ ಇದೇ ಮಂದಿರದಲ್ಲಿ ನೆಲಸಬೇಕು" ಎಂದು ಕಾಲಿಗೆ ಬಿದ್ದು ಬೇಡಿಕೊಂಡನು. ತನ್ನ ವೈರಾಗ್ಯದ ನಟನೆ ಇನ್ನೂ ಬಲಗೊಂಡಿತೆಂದು ಮನಸ್ಸಿನಲ್ಲಿಯೇ ಹಿಗ್ಗಿದ ಮಾಯಾ ಮುನೀಂದ್ರನು ಅಲ್ಲೇ ಇರಲು ಒಪ್ಪಿಕೊಂಡನು.

"ಈ ಸೆಟ್ಟಿಯ ಮಂದಿರಕ್ಕೆ ಕಳವು ಮಾಡಲು ಹೊಕ್ಕು ಹಿಂದಿರುಗಲುಂಟೇ? ನಾಲ್ಕು ಕಡೆಗಳಿಂದಲೂ ವಜ್ರಕಾವಲಿದೆ. ಆದುದರಿಂದಲೇ ನಮ್ಮ ಗುರಿಕಾರನು ರತ್ನದ ಕಳವಿಗೆ ಅಂಜಿದನು. ನಾನಾದರೋ ಈ ಉಪಾಯದಿಂದ ಒಳ ಸೇರಿದೆನು. ಇನ್ನು ಕೆಲವು ದಿನ ಇಲ್ಲಿಯೇ ನೆಲಸಿ ಸೆಟ್ಟಿಗೂ ಕಾಪಿನಾಳುಗಳಿಗೂ ನಂಬುಗೆಯುಂಟಾಗುವಂತೆ ವ್ರತೋಪವಾಸಗಳನ್ನೆಸಗಿ ಮತ್ತೆ ರತ್ನವನ್ನಪಹರಿಸುವೆನು"—ಹೀಗೆ ಆ ಕೃತಕಋಷಿ ಮನಸ್ಸಿನಲ್ಲಿಯೇ ನಿಶ್ಚಯಿಸಿ ಮೌನಿಯಾಗಿ ಕುಳಿತನು. ಯಾರಾದರೂ ಶ್ರಾವಕರು ಬಂದು ಪ್ರಶ್ನೆ ಕೇಳಿದರೆ ಧರ್ಮಶಾಸ್ತ್ರಗಳ ಗಂಧವನ್ನೇ ತಿಳಿಯದ ಅವನು ಏನುತ್ತರ ಕೊಡಬೇಕು? ಅದಕ್ಕಾಗಿಯೇ ಮೌನಧಾರಿಯಾದನು.

ಹೀಗಿರಲೊಮ್ಮೆ ಜಿನೇಂದ್ರಭಕ್ತ ಸೆಟ್ಟಿ ಹರದಿಗಾಗಿ ಹೊರನಾಡಿನ ಪಯಣಕ್ಕೆ ಹೊರಡಲನುವಾದನು. ಆದೊಂದು ಶುಭದಿನದಲ್ಲಿ ಜಿನೇಂದ್ರಾಭಿಷೇಕ ಮಹಾಪೂಜಾದಿಗಳನ್ನು ನೆರವೇರಿಸಿ ಹರಕೆಗೊಂಡು ಸಮಸ್ತ ಪರಿವಾರದೊಡಗೂಡಿ ಊರ ಹೊರಗೆ ಬೀಡುಬಿಟ್ಟನು. ಮತ್ತೆ ದೇಹಾರಕ್ಕೆ ನಡೆತಂದು ಮುನೀಂದ್ರರಿಗೆ ಭಕ್ತಿಯಿಂದ ವಂದಿಸಿ, "ಸ್ವಾಮಿ, ಒಂದೆಡೆ ಸ್ಥಿರವಾಗಿ ನಿಲ್ಲದೆ ಅಲೆದಾಡುತ್ತಿರುವುದೇ ನನ್ನ ಕರ್ಮ. ಈಗ ನಾನು ಹಲವು ದಿನಗಳ ತನಕ ಪೊರನಾಡಿನಲ್ಲಿ ಅಲೆದಾಡಬೇಕಾಗಿದೆ. ನಾನು ಹಿಂದಿರುಗಿ ಬರುವ ತನಕವೂ ದೇವರು ಇದೇ ದೇಹಾರದಲ್ಲಿದ್ದು ವ್ರತೋಪವಾಸಗಳನ್ನು ಸುಗಮವಾಗಿ ನೆರವೇರಿಸುತ್ತಿರಬೇಕು" ಎಂದು ವಿನಯದಿಂದ ಬೇಡಿಕೊಂಡನು.

ಆಗ ಆ ಮಾಯಾಮುನಿ ತನ್ನ ಕಾರ್ಯಸಿದ್ಧಿಯ ಸಮಯವೊದಗಿತೆಂದು ಮನಸ್ಸಿನಲ್ಲಿಯೇ ಸಂತಸಗೊಂಡು "ಮಡದಿ ಮಕ್ಕಳು ಬಂಧುಬಾಂಧವರು ಮೊದಲಾದವರನ್ನು ಬಿಟ್ಟು ತಪಸ್ವಿಯಾದಾತನು ಒಂದೇ ಕಡೆ ಸ್ಥಿರವಾಗಿ ನೆಲಸಿರುವುದು ತರವಲ್ಲ; ನಮ್ಮಂತಹ ನಿಸ್ಪೃಹರು ಕೂಳಿನಾಸೆಯಿಂದ, ವೈಸೊಗವ ಬಯಸಿ ನಿಂತಲ್ಲೇ ನಿಲ್ಲುವುದೆಂತು ಸಾಧ್ಯ? ನೀನೇ ನಮಗೆ ಪ್ರಿಯ ಶಿಷ್ಯನಾದುದರಿಂದ ನಿನ್ನ ಶ್ರೇಯೋಭಿವೃದ್ಧಿಗಾಗಿ ಇಷ್ಟು ದಿನ ಇಲ್ಲಿ ತಡೆದೆನು." ಎಂದು ಗಂಭೀರವಾಗಿ ಮಾತನಾಡಿದನು. "ತಾವರೆಯು ನೀರಿನಲ್ಲಿದ್ದರೂ ನೀರಿಗಂಟಿಕೊಳ್ಳದಿರುವಂತೆ ಉತ್ತಮ ಚರಿತ್ರರಾದ ತಮ್ಮಂತಹರು ಎಲ್ಲಿ ಹೋದರೂ ಸ್ಥಿರಚಿತ್ತರೇ ಆಗಿರುವರು. ದೇವರಿಗೆ ನನ್ನ ಮೇಲೆ ಕರುಣೆಯಿರುವುದಾದರೆ, ನಾನು ಹಿಂದಿರುಗಿ ಬರುವ ವರೆಗೆ ನನ್ನ ಮಡದಿ ಮಕ್ಕಳಿಗೆ ಹಿತೋಕ್ತಿಗಳನ್ನಾಡುತ್ತ ದಾನಧರ್ಮಗಳು ನಿಯಮದಿಂದ ನೆರವೇರುವಂತೆ ವ್ಯವಸ್ಥೆ ನಡೆಸುತ್ತ ಇಲ್ಲಿಯೇ ನೆಲಸಿರಬೇಕೆಂದು ಬೇಡಿಕೊಳ್ಳುತ್ತೇನೆ". ಎಂದು ನುಡಿದು ಮಾಯಾಮುನೀಂದ್ರನನ್ನು ಅಲ್ಲೇ ನೆಲಸಿರಲು ಒಪ್ಪಿಸಿ ಜಿನೇಂದ್ರಭಕ್ತ ಸೆಟ್ಟಿ ಊರ ಹೊರಗಿನ ಬೀಡಿಗೆ ಬಂದನು.

'ರತ್ನದಾಸೆಯಿಂದ ಬಾರದ ಭವಗಳನ್ನನುಭವಿಸಿದೆ. ಈಗ ಈ ಸೆಟ್ಟಿಯೂ ಊರೊಳಗಿಲ್ಲ; ಇದೇ ತಕ್ಕ ಸಮಯ' ಎಂದೆಣಿಸಿದ ಆ ಚೋರಶಿಖಾಮಣಿ ನಟ್ಟಿರುಳಿನ ವೇಳೆ, ಕಾಪಿನವರೆಲ್ಲ ನಿದ್ರಿಸುತ್ತಿರುವುದನ್ನು ನೋಡಿ, ಮೆಲ್ಲನೆ ಗರ್ಭಗೃಹವನ್ನು ಹೊಕ್ಕನು. ಅಲ್ಲಿ ಮುಕ್ಕೊಡೆಯಲ್ಲಿ

ಕೀಲಿಸಿದ್ದ ಆ ಮಹಾರ್ಘ ರತ್ನವನ್ನು ಕಿತ್ತು ಕೈಯೊಳವಮಾಡಿದನು. ರತ್ನ ತನ್ನ ಕೈಸೇರಿದಾಗ ಆತನಿಗಾದ ಆನಂದದೋತ್ಸಾಹಕ್ಕೆ ಮಿತಿಯುಂಟೆ? “ಈಗಲೇ ನಾಡಿಗೆ ನಡೆದು ರಾಜಪುತ್ರನಿಗೀ ರತ್ನವನ್ನರ್ಪಿಸಿ ಅರ್ಧ ರಾಜ್ಯ ವನ್ನೇ ಪಡೆದು ಸುಖಸಂಪತ್ತಿನಲ್ಲಿ ಓಲಾಡುವೆ”ನೆಂದು ಬಗೆದನು. ಹೊಳೆ ಯನ್ನು ಕಾಣುವ ಮೊದಲೆ ಎಕ್ಕಡ ಕಳಚಿ ಕೈಯಲ್ಲಿ ಹಿಡಿದು ನಡೆಯುವ ಎಗ್ಗನಂತೆ ದೇಹಾರವನ್ನು ಬಿಟ್ಟು ಹೊರ ಹೊರಟನು. ಕಾರಿರುಳಕಗ್ಗತ್ತಲೆ ಯಲ್ಲಿ ಆ ಮಹಾರತ್ನ ಚಕಚಕ ಹೊಳೆಯುತ್ತಿದೆ. ರತ್ನದ ಬೆಳಕನ್ನು ಕಂಡ ತಳಾರರು “ಹೋ! ಕಳ್ಳ! ಕಳ್ಳ!! ಎಂದು ಬೊಬ್ಬಿಟ್ಟರು. ಆ ಗಲಭೆಗೆ ದೇಹಾರದ ಕಾಪಿನಾಳುಗಳೂ ಎಚ್ಚರಗೊಂಡರು.

ಮಂದಿರವೊಳಹೊಕ್ಕು ನೋಡುವಾಗ ದೀಪವೂ ಇಲ್ಲ. ದೀಪ ತಂದು ನೋಡಿದಲ್ಲಿ ವೈಡೂರ್ಯ ರತ್ನವೂ ಮಾಯವಾಗಿದೆ! ಋಷಿಯ ಸುಳಿವೂ ಇಲ್ಲ! ಋಷಿಯೇ ಮೋಸ ಕೊಟ್ಟನೆಂದು ಕಾಪಿನವರೆಲ್ಲಾ ಊರಿನ ಸಂದುಗೊಂದುಗಳಿಗೆ ಓಡಿದರು. ಕಂಡಲ್ಲಿ ಕಂಡುದಕ್ಕೆ ಹೊಡೆ ದರು; ಸಿಕ್ಕಸಿಕ್ಕವರನ್ನೆಲ್ಲ ಹಿಡಿದರು. ‘ಈಗೇನು ಮಾಡುವುದು? ಇಷ್ಟೆಲ್ಲಾ ಉಪಾಯ ಹೂಡಿದರೂ ಕಡೆಗೆ ಸಿಕ್ಕಿಬೀಳುವಂತಾಯಿತಲ್ಲ!’ ಎಂದಾ ಕಪಟಸನ್ಯಾಸಿ ನಾಯಿಗಳ ನಡುವಿನ ಹುಲ್ಲೆಯಂತೆ ನಡುಗಿದನು. ‘ಸಿಕ್ಕಿಬಿದ್ದರಂತೂ ಈ ಕಾಪಿನವರ ಕೈಯಲ್ಲಿ ಕಡಿಸಿಕೊಳ್ಳುವುದು ನಿಶ್ಚಯ. ಆದುದರಿಂದ ಹೇಗಾದರೂ ತಲೆಯುಳಿಸುವ ಉಪಾಯ ನೋಡ ಬೇಕು. ಜಿನೇಂದ್ರಭಕ್ತನ ಮರೆಹೊಗುವುದಲ್ಲದೆ ಬೇರೆ ಉಪಾಯವೇ ತೋರದು’ ಎಂದೆಣಿಸುತ್ತಾ ಆ ಕಳ್ಳಮುನಿ ಹೇಗೋ ಕಾಪಿನವರ ಕಣ್ಣು ತಪ್ಪಿಸಿ ಸೆಟ್ಟಿಯ ಹೊರಬೀಡನ್ನು ಹೊಕ್ಕನು.

ಮುನಿಯನ್ನು ಕಂಡ ಜಿನೇಂದ್ರಭಕ್ತ ಸೆಟ್ಟಿಗೆ ಹೇಗಾಗಿರಬೇಕು? ಈತನ ಮೊದಲಿನ ಸಾಧುತ್ವವೆಲ್ಲಿ? ಈಗಿನ ಚೋರ ಬುದ್ಧಿ ಎಲ್ಲಿ? “ವ್ಯಸ ನಿಯ ಸತ್ಯ, ಮೂರ್ಖನ ಧರ್ಮ, ಹುಸಿಕನ ಶೌಚ, ಬಡವನ ಭೋಗ, ವಿಟನ ಶೀಲ, ಜಿನಾಗಮವನ್ನರಿಯದಾತನ ಓದು, ಇಹಲೋಕಸುಖ ವನ್ನಪೇಕ್ಷಿಸುವಾತನ ನಿಯಮ,—ಇವೆಲ್ಲ ಎಂದಿಗಾದರೂ ಸೊಗಯಿಸ ಬಹುದೆ?” ಎಂದು ಮುಂತಾಗಿ ಆ ಸೆಟ್ಟಿ ಚಿಂತಿಸುತ್ತಿರುವಲ್ಲಿ ತಳಾರನೂ

ದೇಹಾರದ ಕಾಪಿನವರೂ ಒಳಹೊಕ್ಕು ಬಂದರು. ಪಾಪಿಯಾದ ಈ ಮುನಿಯ ಕಾರಣದಿಂದ ಜನರು ಸದ್ಧರ್ಮವನ್ನೇ ಹಳಿಯುವಂತಾಯಿತು. ಅಂತಾಗಲು ಬಿಡುವುದು ಸರಿಯಲ್ಲ' ಎಂದಾಲೋಚಿಸಿದ ಸೆಟ್ಟಿ ಕೃತಕ ಮುನಿಯನ್ನು ಮಣೆಯಲ್ಲಿ ಮಂಡಿಸುವಂತೆ ಕೇಳಿಕೊಂಡನು. ಅದನ್ನು ಕಂಡ ತಳಾರನು "ಇದೇಕೆ ಕಳ್ಳನನ್ನು ಪೂಜಿಸುವಿರಿ? ಈತನು ದೇಹಾರದ ರತ್ನವನ್ನು ಕೊಂಡೊಯ್ಯಲು ನಾವು ಹುಡುಕುತ್ತ ಬಂದೆವು. ಈಗ ಇಲ್ಲಿ ಬೆಣ್ಣೆ ತಿಂದ ಬೆಕ್ಕಿನಂತೆ ಸುಮ್ಮನಿರುವನು. ಇವನನ್ನೀಗಲೇ ನಮಗೊಪ್ಪಿಸಿ ಬಿಡಿರಿ" ಎಂದು ನುಡಿದನು. "ನೀವೀಗ ಅವಸರ ಮಾಡಬೇಡಿರಿ; ಈ ಋಷಿ, ಕಳ್ಳತನಕ್ಕಿಳಿದರೆ ಕದ್ದ ವಸ್ತುವನ್ನಿಟ್ಟುಕೊಂಡು ಈ ನನ್ನ ಬೀಡಿಗೆ ಬರುವರೆ? ಅಯ್ಯೋ! ನಿಮ್ಮ ಬುದ್ಧಿಗೇನೆನ್ನಬೇಕು? ಬಡ ಸಾಧುವನ್ನು ಕಳ್ಳನೆಂದೆಣಿಸಿ ವ್ಯರ್ಥವಾಗಿ ಬೆನ್ನಟ್ಟಿದಿರಲ್ಲಾ!" ಎಂದು ನುಡಿದು ಆ ಸೆಟ್ಟಿ ತಳಾರನನ್ನೂ ಕಾಪಿನವರನ್ನೂ ಹಿಂದೆ ಕಳುಹಿಸಿದನು. 'ಜಿನೇಂದ್ರ ಭಕ್ತ ಸೆಟ್ಟಿ ನುಡಿದುದೇ ಸರಿಯಾಗಿರಲೂಬಹುದು: ಈ ಮುನಿ ಕಳ್ಳನಾದರೆ ಸೆಟ್ಟಿಯ ಬೀಡಿಗೆ ಬರಲು ಕಾರಣವಿಲ್ಲ; ನಾವೇ ಮೋಸಹೋಗಿರಬೇಕು' – ಎಂದೆಣಿಸಿದ ತಳಾರನು ನಗರಕ್ಕೆ ನಡೆದನು. ಮತ್ತೆ ಜಿನೇಂದ್ರಸೆಟ್ಟಿ ಮಾಯಾಮುನಿಯನ್ನು ಏಕಾಂತದಲ್ಲಿ ಕುಳ್ಳಿರಿಸಿಕೊಂಡು ಸದ್ಧರ್ಮಸ್ವರೂಪ ವನ್ನು ವಿವರಿಸತೊಡಗಿದನು.

"ಪುರಜನವೆಲ್ಲ ನಿಮ್ಮನ್ನು ಪರಮಋಷಿಯೆಂದು ಕೊಂಡಾಡುತ್ತಿರುವಂದು ನೀವೀಗ ದುರ್ಗುಣಿಯಾಗಿ ಹುರಿಯೋಡಿನಂತಾದಿರಲ್ಲ! ಆನೆಯ ಮೇಲೇರಿ ಬೆರಟಿ ಹೆಕ್ಕಿದಿರಿ. ಬೆಕ್ಕು ಹಾಲನ್ನಲ್ಲದೆ ಬಡಿಗೆಯನ್ನು ಕಾಣದೆಂಬಂತೆ ನೀವಿಲ್ಲಿಯ ಸೊಗವನ್ನೇ ನಂಬಿದಿರಿ ಹೊರತು ಮರುಹುಟ್ಟಿನ ಬವಣೆಯನ್ನು ಯೋಚಿಸಲೇ ಇಲ್ಲ. ಕೆಡುಕುತನದಿಂದ ಸಂಪಾದಿಸಿದ ದ್ರವ್ಯ ಹಲಗಾಲ ನಿಲ್ಲದು. ಪುಣ್ಯವಂತನಾದುದರಿಂದ ಈ ರತ್ನ ನನ್ನ ಕೈಸೇರಿತು. ನಿಮ್ಮಂತಹ ಕುತ್ಸಿತರು ಎಷ್ಟೊಂದು ಹೆಣಗಾಡಿದರೂ, ಬಾರದ ಬವಣೆ ಕೈಸೇರುವುದಲ್ಲದೆ ರತ್ನ ಕೈಸೇರದು. ನೆಲದ ಮೇಲೆ ಮಳೆಯಾಗಿ ಸುರಿದ ನೀರೆಲ್ಲಾ ಒಂದೇ ಕಡೆ ಸೇರುವಂತೆ ಲೋಕದ ದ್ರವ್ಯರಾಶಿಯೆಲ್ಲ ಪುಣ್ಯವಂತರನ್ನೇ ಸೇರುವುದು. ನೀವೀಗ ಆ ತಳಾರನ ಕೈಯಲ್ಲಿ ಸಿಕ್ಕಿ

ಬೀಳುತ್ತಿದ್ದರೆ ಆನೆಯು ಕಾಲಡಿ ಬೀಳಬೇಕಾಗುತ್ತಿತ್ತು. ಅಸತ್ಯವೆಂಬುದು ದುಃಖದ ಮೂಲ. ಪಾಪದಲ್ಲಿ ಸೇರಿಕೊಂಡು ಪರದಲ್ಲಿ ಸುಖವನ್ನನು ಭವಿಸುವೆನೆಂಬಾತನು ಜೋಳವನ್ನು ಬಿತ್ತಿ ಕಳವೆಯನ್ನು ಬಯಸುವ ಮೂರ್ಖನನ್ನೂ, ಬೇವಿನ ತೋಟವನ್ನು ಬೆಳೆಯಿಸಿ ಮಾವಿನ ಹಣ್ಣುಗಳನ್ನು ಹುಡುಕುವ ಗಾವಿಲನನ್ನೂ, ಕೋಣನನ್ನು ಸಾಕಿ ಹಾಲನ್ನಪೇಕ್ಷಿಸುವ ಗಾಂಪನನ್ನೂ, ಉಮಿಯನ್ನು ಕುಟ್ಟಿ ಅಕ್ಕಿಯನ್ನು ಬಯಸುವ ಬೆಳ್ಪನನ್ನೂ ಮಳಲನ್ನು ಹಿಂಡಿ ಎಣ್ಣೆಯನ್ನು ಕಾಯುವ ನಿರ್ಬುದ್ಧಿಯನ್ನೂ ಹೋಲು ವನು. ಮೋಕ್ಷದಾಸೆಯಿರುವುದಾದರೆ ಧರ್ಮಮಾರ್ಗಿಯಾಗಿರಿ. ಎಷ್ಟು ಎತ್ತರದ ತಾಳಿಮರವನ್ನೇರಿದರೂ ಕಡೆಗೆ ಕಾಲು ಕೆಳಗೆಂಬಂತೆ ಧರ್ಮ ದರಿದ್ರನೆನಿಸಿದವನು ಎಷ್ಟು ಕಷ್ಟಪಟ್ಟರೂ ಸುಖ ಕೈ ಸೇರದು. ಜಿನೇಂದ್ರ ಧರ್ಮವನ್ನು ಹರಿದವರು, ಅನ್ನದಾನವನ್ನು ಕೆಡಿಸಿದವರು, ತಪಸ್ಸು ಹಾಳುಮಾಡಿದವರು, ಶಾಸ್ತ್ರಗಳಿಗೆ ತಡೆಮರಿದವರು, ಹುಟ್ಟುಗುರುಡರಾಗಿ, ಕಿವುಡರಾಗಿ, ಕುಷ್ಠರೋಗಿಗಳಾಗಿ, ಹೆಳವರಾಗಿ ಹುಟ್ಟಿ, ಬಾರದ ಭವಣೆ ಗಳಿಗೀಡಾಗಿ, ನರಕದುಃಖವನ್ನನುಭವಿಸುವರು. ಜಿನಪೂಜೆಗೆ ಅಡ್ಡಿ ಮಾಡಿದವನ ಸಂಪತ್ತು ಮಂಜಿನ ಹನಿಯಂತೆ ಹೇಳ ಹೆಸರಿಲ್ಲದಾಗುವುದು".

ಜಿನೇಂದ್ರದತ್ತ ಸೆಟ್ಟಿಯ ಸುದೀರ್ಘವಾದ ಧರ್ಮಬೋಧೆಯನ್ನಾಲಿ ಸಿದ ಕೃತಕಋಷಿ ಶೂರ್ಪನ ಹೃದಯದಲ್ಲಿ ಪಶ್ಚಾತ್ತಾಪ ತಲೆದೋರಿತು. ತಾನು ಅತ್ಯಾಸೆಯಿಂದ ರತ್ನವನ್ನು ಕಳಲು ಬಂದರೂ ಸೆಟ್ಟಿಯ ಧರ್ಮ ಬುದ್ಧಿಯಿಂದ ಬದುಕಿದೆನೆಂದು ತಿಳಿದುಕೊಂಡನು. ರಾಜಕುಮಾರನ ಮಾತಿ ಗೊಡಂಬಟ್ಟು ಋಷಿವೇಷವನ್ನು ತಾಳಿದುದೇಕೆ? ಮಾಯಾವಿತನದಿಂದ ಸೆಟ್ಟಿಯ ದೇಹಾರವನ್ನು ಹೊಕ್ಕು ರತ್ನವನ್ನು ಕಳವು ಮಾಡಿ ಮತ್ತೆ ಅತನನ್ನೆ ಮರೆಹೊಕ್ಕುದೇಕೆ? ಮತ್ತೀ ಧಾರ್ಮಿಕನು ಧರ್ಮವನ್ನುಪದೇಶಿ ಸಿದುದೇಕೆ? 'ಉಪದೇಶಂಗೊಟ್ಟರ್ ಗುಣಂಗೊಟ್ಟರ್' ಎಂಬ ನಾಣ್ಣುಡಿ ಯುಂಟು. ಆದುದರಿಂದ ಎಂದೆಂದಿಗೂ ದೊರೆಕೊಳ್ಳಲಾರದ ಜಿನಧರ್ಮವು ಇವನಿಂದೆನಗೆ ದೊರಕಿತಾದುದರಿಂದ ನನ್ನ ಜೀವವೂ ಕಣ್ಣೂ ಮತಿಯೂ ಇವನಲ್ಲದೆ ಬೇರೆಯಿಲ್ಲ—ಹೀಗೆ ಚಿಂತಿಸಿದ ಆ ಮಾಯಾಮುನಿ ಸೆಟ್ಟಿಯ ಪಾದಗಳಿಗೆರಗಿದನು. "ಕಣ್ಣಾಗಿಯುಂ ಮತಿಯಾಗಿಯುಂ ನೀ ಶರಣೆನಗೆ ಇನ್ನು ಮುನ್ನಿನ ಪೊಲ್ಲಮೆಗಳಂ ಕೊಳ್ಳೆಂ ಧರ್ಮದ ಅಭಿಪ್ರಾಯಮುಂ

ಇನ್ನುಂ ಲೇಸಾಗಿ ಪೇಳ್ದು, ಶಾಶ್ವತ ಸುಖಕ್ಕೆ ಕಾರಣಮಪ್ಪ ವ್ರತರತ್ನಮಂ ದಯಗೆಯ್ವುದು" ಎಂದು ಕೈಯೊಡ್ಡಿ ಬೇಡಿದನು.

"ಚತುರನಾದವನು ಮಿಥ್ಯಾತ್ವವನ್ನು ಕೈಕೊಳ್ಳದೆ, ಸೌಮ್ಯನೆಸಿಸಿ ಶುದ್ಧ. ದರ್ಶನವನ್ನು ತಿಳಿದು ಆ ಮೇಲೆ ಶ್ರಾವಕ ಧರ್ಮವನ್ನು ಅನುವರ್ತಿಸಿ ನಡೆಯಬೇಕು. ಯತಿಧರ್ಮದಲ್ಲಿ ನಡೆಯಲೆಳಸುವಾತನು ಮೂಲಗುಣ ಗಳನ್ನು ಹಿಡಿದು ನಡುಗಡಲಲ್ಲಿ ಹರಿಗೋಲನ್ನು ಹರಿಯಿಸುವ ಅಂಬಿಗ ನಂತೆ ದುರ್ಮಾರ್ಗಗಳೆಂಬ ತೆರೆಗಳನ್ನು ತಪ್ಪಿಸಿ, ಮಿಥ್ಯಾತ್ವವೆಂಬ ಸುಳಿ ಗಳನ್ನು ವಂಚಿಸಿ, ವಿಷಯಗಳೆಂಬ ಬಯ್ಲುಗಳನ್ನು ಹತ್ತಿರ ಸುಳಿಯ ಗೊಡದೆ ಶುಭಧ್ಯಾನದಿಂದ ಸಂಸಾರವೆಂಬ ಮಹಾನದಿಯನ್ನುತ್ತರಿಸಬೇಕು. ಪ್ರಸಿದ್ಧವಾದ ಶ್ರಾವಕಧರ್ಮದಲ್ಲಿ ನಡೆವಾತನು ದಾನ, ಪೂಜೆ, ಶೀಲ ಉಪಚಾರಗಳನ್ನು ಕುಂದದಂತೆ ನಡೆಯಿಸಿ ದೃಢಾಚಾರದಿಂದ ಸಾಗರದಲ್ಲಿ ಛೈತ್ರ ನಡೆಯಿಸುವವನಂತೆ, ದುಶ್ಯಂಕಿತಗಳೆಂಬ ಕಳ್ಳರನ್ನೂ ದುರಾಚಾರ ಗಳೆಂಬ ತೆರೆಗಳನ್ನೂ, ತಪ್ಪಿಸಿ, ಅಳಿನೆಗಳ್ತೆಯೆಂಬ ಮೊಸಳೆಯನ್ನಡಗಿಸಿ, ಸಂಶಯವೆಂಬ ಮಹಾಮತ್ಸ್ಯವನ್ನು ದೂರಮಾಡಿ, ಜಿನಾಗಮ ಮಾರ್ಗ ದಲ್ಲಿ ನಡೆದು, ಸಂಸಾರಸಾಗರವನ್ನು ಉಪಾಯದಿಂದ ಕಡೆಹಾಯಬೇಕು. ದಾನಚತುಷ್ಟಯಗಳಿಂದ ಪುಣ್ಯವೂ, ಪುಣ್ಯದಿಂದ ನಿರ್ವಾಣವೂ ದೊರೆ ಕೊಳ್ಳುವುದು. ದರ್ಶನಶುದ್ಧರಾಗಿ ತಪಸ್ಸು ಮಾಡಿದರೆ ಅಷ್ಟವಿಧ ಕರ್ಮ ಗಳನ್ನು ನಿರ್ಮೂಲಗೊಳಿಸುವ ಶಕ್ತಿಯೂ, ಆ ಶಕ್ತಿಯಿಂದ ಕೈವಲ್ಯ ಲಕ್ಷ್ಮಿಯೂ ಕೈಸಾರ್ವವು". ಈ ರೀತಿ ಜಿನೇಂದ್ರಭಕ್ತ ಸೆಟ್ಟಿ ಶೂರ್ಪನಿಗೆ ಧರ್ಮಸ್ವರೂಪವನ್ನು ಸಂಕ್ಷೇಪಿಸಿದನು.

ಇದನ್ನು ಕೆಳಿ ಚೋರಶಿಖಾಮಣಿ ಶೂರ್ಪನು ಸೆಟ್ಟಿಯ ಉಪದೇಶ ದಂತೆ ಸದ್ಧರ್ಮ ನಿರತನಾಗಿ ದೈವಗತಿಯನ್ನು ಪಡೆದನು.

ವಾರಿಷೇಣ

(ಸ್ಥಿತಿಕರಣ)

ಪರಮ ಜಿನಭಕ್ತೆಯಾದ ಚೇಳಿನಿದೇವಿಗೂ, ಶ್ರೇಣಿಕ ಮಹಾರಾಜ ನಿಗೂ ವಾರಿಷೇಣನೆಂಬ ಕುಮಾರನು ಉದಿಸಿ ಪರಮಶ್ರಾವಕನಾಗಿ ತಪಸ್ವಿಗಳ ಪಾದಸೇವೆಯಲ್ಲಿ ನಿರತನಾಗಿ ಕಾಲ ಕಳೆಯುತ್ತಿದ್ದನು. ಹೀಗಿರಲೊಮ್ಮೆ ಮುಂಡಿಯಪುತ್ರಾಚಾರ್ಯರೆಂಬ ಆಚಾರ್ಯವರ್ಯರು ಅಯೋಧ್ಯೆಗೆ ಬಂದು ನಗರದ ಮೂಡಣ ಬಲಾಹಕ ಪರ್ವತದಲ್ಲಿ ಇಳಿದರು. ಈ ವರ್ತಮಾನ ಕೇಳಿದ ಶ್ರೇಣಿಕ ಮಹಾರಾಜ ಆನಂದಭೇರಿಯನ್ನು ಹೊಡೆಸಿ ಮಹಾರಾಣಿಯಾದ ಚೇಳಿನೀದೇವಿ, ಪುತ್ರ ವಾರಿಷೇಣ, ಮಂತ್ರಿ, ಪರಿವಾರ ಸಮೇತನಾಗಿ, ತುಂಬಿಗಳು ತಾವರೆಯೆಡೆಗೆ ಹರಿದಾಡುವಂತೆ ಬಲಾಹಕಗಿರಿಗೆ ಬಂದನು. ಅಲ್ಲಿ ಆಚಾರ್ಯರನ್ನು ಪೂಜಿಸಿ, ವಂದಿಸಿ, ಹರಕೆಗೊಂಡು ಸಂತಸದಿಂದ ಅರಮನೆಗೆ ಹಿಂದಿರುಗಿದನು.

ವಾರಿಷೇಣಕುಮಾರನೊಬ್ಬನು ಮಾತ್ರ ರಾಜನೊಡನೆ ಹಿಂದಿರುಗಲಿಲ್ಲ. ಅವನು ಋಷಿಪಾದಸೇವೆಯಲ್ಲಿ ನಿರತನಾಗಿ, ತನಗೆ ಧರ್ಮ, ದಾನ, ಪೂಜೆಗಳ ಮಹತ್ವವನ್ನು ತಿಳಿಸಬೇಕೆಂದು ಬೇಡಿಕೊಂಡನು.

"ಹಂಸೆ ನೀರನ್ನು ಬಿಟ್ಟು ಹಾಲನ್ನು ಹೀರುವಂತೆ ಕುಧರ್ಮವನ್ನು ಬಿಟ್ಟು ಸದ್ಧರ್ಮವನ್ನು ಕೈಕೊಳ್ಳಬೇಕು. ಭವ್ಯನಾದವನು ನಿರ್ದೋಷಿಯಾದ ದೇವನನ್ನು ಆಶ್ರಯಿಸಬೇಕು. ಕಲ್ಲದೋಣಿಯಿಂದ ತೊರೆಯನ್ನು ಕಡೆಹಾಯುವೆನೆಂಬವನೂ ಕ್ರೂರಕರ್ಮಿಯನ್ನಾಶ್ರಯಿಸಿ ಮೋಕ್ಷಗಳಿಸುವೆನೆಂಬವನೂ ಸಮಾನಮೂರ್ಖರು. ಕಬ್ಬಿಣ ಎಷ್ಟು ಬಿಸಿಯಾದರೂ ಕಮ್ಮಾರರಿಲ್ಲದೆ ಆಯುಧರೂಪಕ್ಕೆ ತಿರುಗದು. ಅಂತೆಯೇ ನಿರ್ದೋಷಿಯಾದ ಪರಮಾತ್ಮನನ್ನು ಆಶ್ರಯಿಸದೆ ಆತ್ಮಶುದ್ಧಿಯಾಗದು. ನೀರಿಲ್ಲದ ಬೆಳಸೂ, ಕ್ರೂರರ ಗೆಳೆತನವೂ, ವಿವೇಕವಿಲ್ಲದವನ ಅರಸಾಳಿಕೆಯೂ, ನಾಯಕನಿಲ್ಲದ ರಣವೂ, ಮೋಸಗಾರನ ವ್ಯಾಪಾರವೂ, ನಿರ್ದಯನ ತಪವೂ ಸೊಗಸಲಾರವು. ದರ್ಶನಶುದ್ಧನಾಗದೆ ಕರ್ಮಗಳನ್ನು ಕಳೆಯ

ಲಾಗುವುದಿಲ್ಲ. ಸಕಲ ದುಃಖಗಳಿಗೂ ಕೊಲೆಯೇ ಕಾರಣ. ಆದುದರಿಂದ ಅದನ್ನು ಸರ್ವಥಾ ವರ್ಜಿಸಲೇಬೇಕು. ಸೊಗಸಾದ ಸುಖ ಬೇಕೆಂಬಾಸೆ ಯಿದ್ದರೆ ನಂಬುಗೆಯಿಂದ ಜೈನಮಾರ್ಗವನ್ನು ಅನುಸರಿಸಬೇಕು. ಆಗ ಮಗಳನ್ನು ಓದಿ ಕುಮತ ಯಾವುದು, ಸುಮತ ಯಾವುದು ಎಂದು ಅರಿತುಕೊಳ್ಳಬೇಕು." ಎಂದು ಆಚಾರ್ಯರು ವಾರಿಷೇಣ ಕುಮಾರನಿಗೆ ಉಪದೇಶಿಸಿದರು.

ಆಚಾರ್ಯರ ಉಪದೇಶ ಕೇಳಿದ ವಾರಿಷೇಣನ ಹರ್ಷ ಮುಮ್ಮಡಿ ಸಿತು. ಅವನು ಅಂದು ಚತುರ್ದಶಿಯಾದುದರಿಂದ ಉಪವಾಸ ನಿಂದನು. ನೇಸರು ಮುಳುಗಿದಾಗ ಸ್ಮಶಾನಭೂಮಿಗೆ ನಡೆದು ಅಲ್ಲಿ ಪ್ರತಿಮಾಯೋಗ ದಲ್ಲಿ ನಿಂದನು.

ಅಂದಿನಿರುಳೇ ಮೃಗವೇಗನೆಂಬ ಕಳ್ಳನು ನಗರದ ರಾಜಶ್ರೇಷ್ಠಿಯ ಮಡದಿ ಕೀರ್ತಿಮತಿಯ ಕೊರಳ ಹಾರವನ್ನು ಕದ್ದು ಸ್ಮಶಾನದ ದಾರಿ ಯಾಗಿ ಓಡಿ ಬಂದನು. ತಳಾರರು ತನ್ನನ್ನು ಹಿಡಿಯುವರೆಂಬ ಹೆದರಿಕೆ ಯಿಂದ ಆ ಹಾರವನ್ನು ಅಲ್ಲೇ ವಾರಿಷೇಣ ಕುಮಾರನ ಬಳಿ ಬಿಸುಟು "ಬೀಸಿದ ಕೈ ತಪ್ಪಿದರೆ ಸಹಸ್ರಕಾಲ" ಎನುತ್ತಾ ಅಲ್ಲಿಂದ ತಲೆ ತಪ್ಪಿಸಿದನು. ತಳಾರರು ಅಲ್ಲಿ ಇಲ್ಲಿ ಸುತ್ತಾಡಿ ಸ್ಮಶಾನಕ್ಕೆ ಬಂದರು. ಅಲ್ಲಿ ರಾಜಕುಮಾರ ನನ್ನೂ ಕೀರ್ತಿಮತಿಯ ಹಾರವನ್ನೂ ಕಂಡರು. ರಾಜಕುಮಾರನೇಕೆ ಹಾರವನ್ನು ಕದ್ದನೊ ಎಂದು ಯೋಚಿಸುತ್ತಾ ಆ ಹಾರವನ್ನೆತ್ತಿಕೊಂಡು, ಶ್ರೇಣಿಕ ಮಹಾರಾಜನಿಗೆ ತಂದೊಪ್ಪಿಸಿದರು. ವಾರಿಷೇಣನೇ ಕಳ್ಳನಿರ ಬೇಕೆಂದು ಅರಸನಿಗೆ ದೂರಿತ್ತರು. ದುಷ್ಟನಿಗ್ರಹ ಶಿಷ್ಟಪರಿಪಾಲನೆಯೇ ಕ್ಷತ್ರಧರ್ಮವೆಂದು ನಂಬಿದ ಶ್ರೇಣಿಕ ಮಹಾರಾಜನು ಮಾಲೆಗಳ್ಳನನ್ನು ಶೂಲಕ್ಕೇರಿಸಿಬಿಡಿರಿ ಎಂದು ತಳಾರರಿಗೆ ಅಪ್ಪಣೆಯಿತ್ತನು.

ತಳಾರರು ಅರಸನ ಅಪ್ಪಣೆಯನ್ನು ಮಿೂರಲಾರದೆ ಸ್ಮಶಾನಕ್ಕೆ ಬಂದರು. "ರಾಜಕುಮಾರಾ! ನೀನೇಕೆ ಈ ಕಳ್ಳತನ ಮಾಡಿದೆ? ರಾಜ ಕುಮಾರನನ್ನು ಯಾರೂ ಶಿಕ್ಷಿಸರೆಂದು ಯೋಚಿಸಿದೆಯೊ? ಈಗ ಮಹಾ ರಾಜರು ನಿನಗೆ ಮರಣದಂಡನೆಯನ್ನು ವಿಧಿಸಿರುವರು. ನೀನೇನು ಹೇಳುವೆ?" ಎಂದು ರಾಜಭಟರು ನುಡಿದರು. "ಮೃತ್ಯು ಯಾರನ್ನೂ ಬಿಟ್ಟಿಲ್ಲ; ಸುಡುವ

ಕಿಚ್ಚಿಗೆ ತುಪ್ಪವೆರೆದರೆ ಕಿಚ್ಚು ಹೆಚ್ಚುವುದು; ನೀರೆರೆದರೆ ಕಿಚ್ಚು ತಗ್ಗುವುದು. ಅಂತೆಯೇ ಪೂರ್ವಕರ್ಮದ ಫಲವಾಗಿ ಬರುವ ಸಾವುನೋವುಗಳಿಗೆ ಅಂಜಿದರೆ ಅವು ಮತ್ತಷ್ಟು ಹೆಚ್ಚುವುವು; ದೃಢಭಕ್ತಿಯಿಂದ ಜಿನಪಾದ ಪದ್ಮಗಳನ್ನು ಸೇವಿಸಿದರೆ ಕರ್ಮಫಲ ಕುಂದಿ ಕದಲುವುವು. ಆದುದರಿಂದ ಜಿನಪಾದಸೇವೆಯೇ ತನಗೆ ಕರ್ತವ್ಯ" ಎಂದು ಪರಮಾತ್ಮಧ್ಯಾನದಲ್ಲೇ ಮಗ್ನನಾಗಿದ್ದನು.

ರಾಜಕುಮಾರ ವಾರಿಷೇಣನು ತಳಾರರ ಯಾವ ಗದರಿಕೆಗೂ ಕಿವಿಗೊಡದಿರಲು, ಅವರು ಆತನನ್ನು ನಾನಾ ಬಗೆಯ ಚಿತ್ರಹಿಂಸೆಗಳಿಂದ ಹಿಂಸಿಸತೊಡಗಿದರು. ರಾಜಕುಮಾರನು ಒಂದನ್ನೂ ಗಣಿಸದೆ ಶುಭ ಧ್ಯಾನದಲ್ಲೇ ಮಗ್ನನಾಗಿದ್ದನು. ತಳಾರರು ಕುಮಾರನನ್ನು ಹೀಗೆ ಹಿಂಸಿಸುತ್ತಿರಲು, ಅಲ್ಲುಂಟಾದ ಆಶ್ಚರ್ಯವನ್ನು ಏನು ಹೇಳಲಿ? ತಳಾರರ ಕತ್ತಿಯು ಪೆಟ್ಟು ಕುಮಾರನ ತಲೆಯ ಮೇಲೆ ಬಿದ್ದುದೇ ತಡ ಅಲ್ಲೊಂದು ಜಗಜಗಿಸುವ ಕಿರೀಟ ಮೂಡಿತು. ಕೊರಳನ್ನು ಕೊಯ್ಯಲು ಕತ್ತಿ ಇಟ್ಟಾಗ ಅಲ್ಲಿ ತಳತಳಿಸುವ ಹಾರ! ಕೈಗಳನ್ನು ಕಡಿಯಲು ಯೋಚಿಸಿದಾಗ ಕೈಗಳೆರಡರಲ್ಲೂ ರತ್ನಕಂಕಣಗಳು! ಕಿವಿಹಿಂಡಲು ಹೋದಾಗ ಮಕರ ಕುಂಡಲಗಳು ಶೋಭಿಸಿದ್ದುವು! ರಾಜಕುಮಾರನು ಈ ಬಗೆಯ ಯಾವ ಉಪಸರ್ಗಗಳಿಂದ ಬೆದರದೆ ಧ್ಯಾನಾಸಕ್ತನಾಗಿದ್ದುದನ್ನೂ, ಅವನ ಸರ್ವಾಂಗವೂ ದಿವ್ಯಾಭರಣಭೂಷಿತವಾದುದನ್ನೂ ಕಂಡು ದೇವತೆಗಳೂ, ಆಶ್ಚರ್ಯಗೊಂಡರು. ಅವರು ಅಲ್ಲಿ ಬಂದು ಕೈಜೋಡಿಸಿ ಹೊಗಳಿದರು. ಆಗ ಆ ತಳಾರರು ಇದೇನು ಅದ್ಭುತವೆಂದು ಹೆದರಿ ಶ್ರೇಣಿಕ ಮಹಾರಾಜನ ಬಳಿಗೋಡಿ ಆತನೊಡನೆ ನಡೆದುದನ್ನೆಲ್ಲಾ ಅವಸರ ಅವಸರವಾಗಿ ವಿವರಿಸಿದರು.

ಕೂಡಲೇ ಶ್ರೇಣಿಕಮಹಾರಾಜನು ಈ ಅದ್ಭುತವನ್ನು ನೋಡಲೋಸುಗ ಸ್ಮಶಾನಭೂಮಿಗೆ ತೆರಳಿದನು. ಆಗ ಸ್ವರ್ಗದ ದೇವತೆಗಳು ಅಲ್ಲಿ ಬಂದು, ರಾಜಕುಮಾರನನ್ನು ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ, ಕಲ್ಪವೃಕ್ಷ ಪ್ರಸೂನಗಳಿಂದ ಪೂಜಿಸಿ, "ಜಯ, ಜಯ," ಎಂದು ಹೊಗಳುತ್ತಿದ್ದರು. ಶ್ರೇಣಿಕ ಮಹಾರಾಜನೂ ಪರಿವಾರಸಮೇತನಾಗಿ ರಾಜ

ಕುಮಾರನನ್ನು ಹಲವು ಬಗೆಯಿಂದ ಪೂಜಿಸಿದನು. ಇಷ್ಟಾಗುವಾಗ ವಾರಿಷೇಣ ಕುಮಾರನ ಮಹತ್ತ್ವವನ್ನು ನೋಡಲೋ ಎನ್ನುವಂತೆ ಮೂಡ ಲಲ್ಲಿ ತಳತಳನೆ ನೇಸರು ಮೂಡಿತು. ವಾರಿಷೇಣ ಕುಮಾರನೂ ಯೋಗ ಸಮಾಧಿಯಿಂದ ಹೊರಬಂದನು. ಶ್ರೇಣಿಕಮಹಾರಾಜನ ಅಪೇಕ್ಷೆಯಂತೆ ಅರಮನೆಗೆ ನಡೆದನು.

"ಈ ಸಂಸಾರವೆಂಬುದು ದುಃಖದ ಸಾಗರ. ಇದರಲ್ಲಿ ಮುಳುಗಿ ದವನು ಮೇಲೇಳುವುದು ಪ್ರಯಾಸ. ಈ ರಾಜ್ಯಭೋಗವನ್ನು ನಂಬಿ ಸಂಸಾರಸಾಗರವನ್ನು ದಾಟುವುದೆಂಬುದು ನಾಯಿ ಬಾಲವನ್ನು ಹಿಡಿದು ತೊರೆಯನ್ನು ದಾಟಿದಂತೆ." ಎಂದು ರಾಜಕುಮಾರನು ದೃಢಮಾಡಿದನು. ಮತ್ತು ತನ್ನ ನಿಶ್ಚಯವನ್ನು ತನ್ನ ತಾಯಿ ಚೇಳಿನೀದೇವಿಗೂ ತಿಳಿಸಿ, ಸುರಸುಂದರಿಯರಾದ ಪತ್ನಿಯರನ್ನೂ ತೊರೆದು, ಪುಷ್ಪಗಿರಿಯೆಂಬ ಪರ್ವ ತಕ್ಕೆ ನಡೆದನು. ಅಲ್ಲಿ ಸುರೇಂದ್ರಾಚಾರ್ಯರಿಂದ ದೀಕ್ಷೆ ಪಡೆದು, ತಪಸ್ಸು ಮಾಡಿ ಸಿದ್ಧಿಯನ್ನು ಪಡೆದನು.

ವಾರಿಷೇಣ ಕುಮಾರನಿಗೆ ಸಕಲ ಶಾಸ್ತ್ರಗಳಲ್ಲಿ ನಿಷ್ಣಾತನಾದ ಪುಷ್ಪ ದಾಡನೆಂಬ ಬಾಹ್ಮಣ ಗೆಳೆಯನೊಬ್ಬನಿದ್ದನು. ಅವನು ಸಂಸಾರಸುಖ ಲೋಲುಪನಾಗಿದ್ದನು. ಇದನ್ನು ಕಂಡು ವಾರಿಷೇಣ ಕುಮಾರನಿಗೆ ತುಂಬಾ ಬೇಸರ. ಏನಾದರೂ ಮಾಡಿ ಈ ಗೆಳೆಯನನ್ನು ಸರಿಯಾದ ದಾರಿಗೆ ಹಚ್ಚಬೇಕೆಂದು ವಾರಿಷೇಣಕುಮಾರನು ಖಂಡಿತಮಾಡಿದನು. ಮತ್ತು ಪುಷ್ಪದಾಡನನ್ನು ಉದ್ಧರಿಸಲೋಸುಗ ತನ್ನ ಗುರುಗಳ ಬಳಿಗೆ ಕರೆತಂದನು. ಗುರುಗಳಿಂದ ಗೆಳೆಯನಿಗೆ ಜಿನದೀಕ್ಷೆ ಕೊಡಿಸಿದನು. ಗೆಳೆಯನ ಒತ್ತಾಯ ಕ್ಕಾಗಿ ಪುಷ್ಪದಾಡನೇನೋ ಜಿನದೀಕ್ಷೆಯನ್ನು ಸ್ವೀಕರಿಸಿದನು. ಆದರೆ ನಾಡಿಗೆ ಬಂದು ಬಂಧನದಲ್ಲಿ ಸಿಲುಕಿದ ಕಾಡಾನೆ ಕಾಡನ್ನೇ ನೆನೆಯುವಂತೆ ಅವನ ಮನಸ್ಸು ಸದಾ ಸಂಸಾರಕಾನನದಲ್ಲೇ ತೊಳಲುತ್ತಿತ್ತು. ಮಗು ಹಾಲು ಬೇಡವೆಂದರೆ ತಾಯಿ ಬಿಡುವಳೇ? ಏನಾದರೂ ಮಾಡಿ ಹಾಲು ಕುಡಿಸಿಯೇ ಬಿಡುವಳು. ಅಂತೆಯೇ ವಾರಿಷೇಣನು ಹಲವು ಉಪಾಯ ಗಳಿಂದ ಪುಷ್ಪದಾಡನ ಮನಸ್ಸು ವೈರಾಗ್ಯದಲ್ಲಿ ನೆಡುವಂತೆ ಹಲವು ಹದಿನೆಂಟು ಪ್ರಯತ್ನಮಾಡಿದನು. ಸಂಸಾರದ ಅನಿತ್ಯತೆಯನ್ನು ಕುರಿತು

ಹದಿನೆರಡು ವರ್ಷಕಾಲ ಎಡೆಬಿಡದೆ ಬೋಧಿಸಿದನು. ಆದರೇನು? ಅದೆಲ್ಲಾ ಗೋರ್ಕಲ್ಲ ಮೇಲೆ ಸುರಿದ ಮಳೆಯಾಯಿತು. ಪುಷ್ಪದಾಡನ ಮನಸ್ಸು ಮಾತ್ರ ಮನೆಯನ್ನೇ ನೆನೆಯುತ್ತಿತು. ಆದರೂ ವಾರಿಷೇಣ ಕುಮಾರನು ಯಾವ ಬಗೆಯ ಬೇಸರವೂ ಇಲ್ಲದೆ ಪುಷ್ಪದಾಡನನ್ನು ಸನ್ಮಾರ್ಗಕ್ಕೆ ತರುವ ಪ್ರಯತ್ನದಲ್ಲೇ ತತ್ಪರನಾಗಿದ್ದನು.

ಹೀಗಿರಲು ಒಮ್ಮೆ ವಾರಿಷೇಣನು ಪುಷ್ಪದಾಡನನ್ನು ಒಬ್ಬನನ್ನೇ ಬಿಟ್ಟು, ಶ್ರೀ ವರ್ಧಮಾನ ಸ್ವಾಮಿಗಳ ಪಾದಕಮಲಗಳನ್ನು ವಂದಿಸ ಲೋಸುಗ ಹೋಗಿದ್ದನು. ಇದೇ ತಕ್ಕ ಸಮಯವೆಂದು ಪುಷ್ಪದಾಡನೂ ತನ್ನ ಊರ ಕಡೆಗೆ ಹೊರಟನು. ವಾರಿಷೇಣನು ಸ್ವಾಮಿಗಳ ಪಾದಪೂಜೆ ಗೈದು ಹಿಂದಿರುಗುವಾಗ ಪುಷ್ಪದಾಡನಿಲ್ಲ! ಅವನು ಊರಿಗೆ ಹಿಂದಿರುಗಿದ್ದ ನೆಂದು ತಿಳಿದ ಕೂಡಲೇ ವಾಯುವೇಗದಿಂದ ಓಡಿ ಅವನನ್ನು ದಾರಿಯಲ್ಲೇ ಸಂಧಿಸಿ, ಹಿಂದಿರುಗಿಸಿದನು. ಮತ್ತು ಗೆಳೆಯನಿಗೆ ಇನ್ನೂ ಬುದ್ಧಿಕಲಿಸ ಬೇಕೆಂಬ ಆಸೆಯಿಂದ ಶ್ರೇಣಿಕಮಹಾರಾಜನ ಅರಮನೆಯ ಕಡೆಗೆ ಗೆಳೆಯ ನೊಡನೆ ಹೊರಟನು.

ಅರಮನೆಯ ಕಡೆಗೆ ಬರುತ್ತಿದ್ದ ವಾರಿಷೇಣಕುಮಾರನನ್ನು ಚೇಳಿನೀ ದೇವಿ ದೂರದಿಂದಲೇ ಕಂಡಳು. ಇದೇನು ಹೊತ್ತಲ್ಲದ ಹೊತ್ತಿನಲ್ಲಿ ಈತನು ಮನೆಗೆ ಬಂದನು. ತಪಸ್ಸಿಗೆ ಬೇಸತ್ತು ಹಿಂದಿರುಗಿದನೆ? ಅಲ್ಲ ರಾಜ್ಯಸುಖಕ್ಕೆ ಆಶಿಸಿ ಬಂದನೆ? ಕೊರಳಲ್ಲಿ ಬಲವಿಲ್ಲದವರು ಒರಳನ್ನು ನುಂಗಿದರೆಂಬಂತಾಯಿತೇ?" ಎಂದು ಚಿಂತಿಸಿದಳು. ಮತ್ತು ವಾರಿಷೇಣ ನನ್ನು ಪರೀಕ್ಷಿಸಲೆಂದು 'ಸರಾಗಾಸನ' 'ವಿರಾಗಾಸನ'ಗಳೆಂಬ ಎರಡು ಬಗೆಯ ಆಸನಗಳನ್ನು ತಂದಿರಿಸಿದಳು. ವಾರಿಷೇಣನು ಸರಾಗಾಸನವನ್ನು ಬಿಟ್ಟು ವಿರಾಗಾಸನದಲ್ಲೇ ಮಂಡಿಸಿದನು. ಚೇಳಿನೀದೇವಿ ವಿವಿಧ ಪುಷ್ಪ ಗಳಿಂದ ವಾರಿಷೇಣ ಮುನಿಯ ಪಾದಗಳನ್ನು ಅರ್ಚಿಸಿದಳು; ಏನು ಬೇಕೆಂದು ಕೈಮುಗಿದಳು. "ಅಬ್ಬೆ! ನಿನ್ನ ಸೊಸೆಯರನ್ನು ಸಿಂಗಾರಗೈದು ಇಲ್ಲಿಗೆ ಬರಮಾಡು" ಎನ್ನಲು, ರಾಣಿ ಚೇಳಿನಿ ಸುರಸುಂದರಿಯರಾದ ಸೊಸೆಯರನ್ನು ಅಲ್ಲಿಗೆ ಕರೆಸಿದಳು. ಆ ಸೊಸೆಯರೆಲ್ಲರೂ ಹಾವಭಾವ ವಿಲಾಸಗಳಿಂದ ಕೂಡಿದವರಾಗಿ ಅಲ್ಲಿಗೆ ಬಂದರು. ಆ ಮೇಲೆ ವಾರಿಷೇಣ

ಮುನಿ ಪುಷ್ಪದಾಡನ ಪತ್ನಿಯನ್ನೂ ಕರೆಸಹೇಳಿದನು. ಅವಳೂ ಬಂದಳು. ಅವಳ ಮೋರೆ ಸುಕ್ಕುಗಟ್ಟಿ ಮೈ ಕಡ್ಡಿಯಂತೆ ಕಂಗಾಲಾಗಿತ್ತು. ರೂಪ ಕುರೂಪವಾಗಿತ್ತು.

ಆಗ ವಾರಿಷೇಣನು ಗೆಳೆಯ ಪುಷ್ಪದಾಡನಿಗೆ ತನ್ನ ಮಡದಿಯರ ಸೌಂದರ್ಯವನ್ನೂ ಅವನ ಮಡದಿಯ ಕುರೂಪವನ್ನೂ ತೋರಿಸಿ, ಸಂಸಾರದ ಸುಖವನ್ನು ನಂಬಿ ಕೆಡಬಾರದೆಂದು ಬೋಧಿಸಿದನು. "ನಿನಗೆ ನಾನೆಷ್ಟು ಬೋಧಿಸಿದರೂ ನೀನು ಸಂಸಾರವನ್ನು ನೆನೆದೆಯಲ್ಲವೇ? ಇನ್ನು ನಿನಗಿಂತ ಮೂಢನಾರು?" ಎಂದು ಕೇಳಿದನು. ಇದನ್ನೆಲ್ಲಾ ಕಂಡು ಕೇಳಿ ಪುಷ್ಪದಾಡನ ಮನಸ್ಸು ನಿಜವಾಗಿಯೂ ಸಂಸಾರಕ್ಕೆ ಹೇಸಿತು; ತಪಕ್ಕೆ ಎರಗಿತು. ಅವನು ಕೂಡಲೇ ವಾರಿಷೇಣನ ಪಾದಗಳಿಗೆ ಎರಗಿ ತನಗೆ ಇನ್ನೊಮ್ಮೆ ಜಿನದೀಕ್ಷೆಯನ್ನೀಯಬೇಕೆಂದು ಬೇಡಿಕೊಂಡನು. ಅಂತೆಯೇ ವಾರಿಷೇಣನು ತನ್ನ ಗುರುಗಳಿಂದ ಪುಷ್ಪದಾಡನಿಗೆ ದೀಕ್ಷೆ ಕೊಡಿಸಿದನು. ಪುಷ್ಪದಾಡನು ಸಂಸಾರ ತೊರೆದು ದೃಢಮನಸ್ಸಿನಿಂದ ತಪಸ್ಸಿಗೆ ತೊಡಗಿದನು. ಹಲವುಗಾಲ ಸಂದ ಮೇಲೆ ಸಮಾಧಿವಿಧಿಯಿಂದ ಮುಡಿಪಿ ದೇವಗತಿಯನ್ನು ಹೊಂದಿದನು. ವಾರಿಷೇಣನೂ ಗುರುಗಳ ಉಪದೇಶದಂತೆ ಏಕವಿಹಾರಿಯಾಗಿ ಸಂಚರಿಸುತ್ತ ತಪಸ್ಸಿದ್ಧಿ ಪಡೆದು ಕಡೆಗೆ ಸರ್ವಾರ್ಥಸಿದ್ಧಿಯಲ್ಲಿ ದೇವನಾಗಿ ಹುಟ್ಟಿದನು.

ಸೋಮದತ್ತ

(ವಾತ್ಸಲ್ಯ)

ಜಂಬೂದ್ವೀಪದ ಭರತಕ್ಷೇತ್ರದ ಪಾಂಚಾಲವಿಷಯದಲ್ಲಿ ಅಹಿಚ್ಛತ್ರ ಪುರ ಮನೋಹರವಾಗಿ ಶೋಭಿಸುವುದು. ಅಹಿಚ್ಛತ್ರಪುರದ ಅರಸನಿಗೆ ಸಕಲಶಾಸ್ತ್ರಪರಿಣತನಾದ ಸೋಮದತ್ತನೆಂಬ ಬ್ರಾಹ್ಮಣ ಪುರೋಹಿತನಿದ್ದನು. ಆತನ ಪತ್ನಿ ಯಜ್ಞದತ್ತೆ. ಆ ಪತಿಪತ್ನಿಯರು ಸುಖವಾಗಿ ಕಾಲ ಕಳೆಯುತ್ತಿದ್ದರು.

ಪುರೋಹಿತಪತ್ನಿ ಯಜ್ಞದತ್ತೆ ಗರ್ಭಿಣಿಯಾದಳು. ಆಕೆಗೆ ಜಿನ ಭವನಗಳನ್ನು ಸಂದರ್ಶಿಸಬೇಕೆಂಬ ಬಯಕೆಯುಂಟಾಯಿತು. ಆದರೂ ಆಕೆ ಆ ಬಯಕೆಯನ್ನು ಬಯಲುಗೊಳಿಸಲಿಲ್ಲ. ಆಕೆ ತನ್ನ ಬಯಕೆಯನ್ನು ಕಿವುಡರು ಕಂಡ ಕನಸಂತೆ ಯಾರಿಗೂ ತಿಳಿಸಲಿಲ್ಲ.

ಗರ್ಭಿಣಿಯಾದ ಯಜ್ಞದತ್ತೆ ದಿನದಿಂದ ದಿನಕ್ಕೆ ಬಚ್ಚಿ ಬಡವಾಗುವುದನ್ನು ಕಂಡು, ಅವಳ ತಾಯಿತಂದೆಯರು ಅವಳನ್ನು ಬಳಿಗೆ ಕರೆದು, "ಮಗಳೇ, ನಿನಗೇನಾಗಿದೆ? ನೀನೇಕೆ ಹೀಗೆ ದಿನದಿಂದ ದಿನಕ್ಕೆ ಬಳಲಿ ಬೆಂಡಾಗುವೆ? ಒಳಗೊಳಗೆ ಆವಿಗೆಯಂತೆ ಬೇಯುವೆಯೇಕೆ? ಮನದ ಬಯಕೆಯೇನೆಂದು ಹೇಳವ್ವಾ" ಎಂದು ಬೆಸಗೊಂಡರು.

ತಂದೆ ತಾಯಿ ಒತ್ತಾಯಿಸಿ ಕೇಳಿದರೂ ಹೇಳಲಿಕ್ಕೆ ಮನಸ್ಸಿಲ್ಲದ ಯಜ್ಞದತ್ತೆ ತನಗೆ ಮಾವಿನಹಣ್ಣು ತಿನ್ನಬೇಕೆಂಬ ಆಸೆಯಾಗಿದೆ ಎಂದು ಹುಸಿ ಬಯಕೆಯನ್ನು ತಿಳಿಸಿದಳು. ತಂದೆತಾಯಂದಿರೂ ಸೋಮದತ್ತನೂ ಯಜ್ಞದತ್ತೆಯ ಬಯಕೆಯನ್ನು ಕೇಳಿ ಬೆರಗಾದರು. ಆ ಕಾಲದಲ್ಲಿ ಮಾವಿನ ಹಣ್ಣನ್ನಾದರೂ ಎಲ್ಲಿಂದ ತರಲಿ? ಹಾಗೆಂದು ಬಸುರಿಯ ಬಯಕೆಯನ್ನು ಬಗೆಗೊಳಿಸದಿರುವುದಾದರೂ ಹೇಗೆ? ಒಕ್ಕ ತುಪ್ಪವನ್ನು ಉಡುಗಲು ಬಾರದೆಂಬಂತಾದೀತು. ಆದುದರಿಂದ ಎಲ್ಲಿಂದಾದರೂ, ಏನಾದರೂ ಮಾಡಿ ಮಾವಿನಹಣ್ಣನ್ನು ತಂದೇ ಕೊಡಬೇಕೆಂದು ನಿಶ್ಚಯಿಸಿದರು; ಸಿಕ್ಕಸಿಕ್ಕಲ್ಲಿ ಹಣ್ಣಿಗಾಗಿ ಅಲೆದಾಡಿದರು. ಎಲ್ಲೆಲ್ಲಿ ಅಲೆದರೇನು? ಮಾವಿನ ಹಣ್ಣಿಲ್ಲ. ಕಡೆಗೆ ಹಣ್ಣು ಹುಡುಕಿ ಹುಡುಕಿ ಬಳಲಿ ಬೇಸತ್ತು ಸೋಮದತ್ತನು ಬಲವಾಹಿನಿಯೆಂಬ ಹೊಳೆಯ ತೀರದಲ್ಲಿದ್ದ ಒಂದು ಬೇಡರ ಹಳ್ಳಿಗೆ ಬಂದನು. ಅಲ್ಲಿ ಬೇಡರ ಗುರಿಕಾರನನ್ನು ಕಂಡು ಎಲ್ಲಿಯಾದರೂ ಮಾವಿನಹಣ್ಣು ದೊರಕಬಹುದೇ ಎಂದು ಬೆಸಗೊಂಡನು. ಅದಕ್ಕಾ ಬೇಡನು ಅಲ್ಲೇ ಸಮೀಪದಲ್ಲಿ ಒಂದು ಮಾವಿನತೋಪು ಇದೆಯೆಂದೂ ಆ ತೋಪಿನಲ್ಲಿ ಒಂದು ಮರದಲ್ಲಿ ಮಾತ್ರ ಸದಾಕಾಲವೂ ಮಾವಿನಹಣ್ಣು ತುಂಬಿದೆಯೆಂದೂ, ಆ ಮರದ ಬುಡದಲ್ಲಿ ಒಬ್ಬ ನಗ್ನ ಸನ್ಯಾಸಿ ತಪಸ್ಸು ಮಾಡುತ್ತಿರುವನೆಂದೂ ಹೇಳಿ ಅಲ್ಲಿಗೆ ಹೋಗುವ ದಾರಿಯನ್ನು ತೋರಿಸಿದನು.

ಸೋಮದತ್ತನು ಬೇಡರ ಗುರಿಕಾರನು ತೋರಿದ ದಾರಿಯಾಗಿ ನಡೆದು ಮಾವಿನ ತೋಪನ್ನು ಸೇರಿದನು. ಅಲ್ಲಿ ಫಲಭಾರದಿಂದ ಬಾಗಿ ಬಳುಕುವ ಮಾವಿನಮರವನ್ನೂ ಅದರ ಕೆಳಗೆ ಕುಳಿತ ಮುನಿವರ್ಯರನ್ನೂ ಕಂಡು ಆಶ್ಚರ್ಯಚಕಿತನಾದನು. "ಈ ಮುನಿಯ ತಪಃಪ್ರಭಾವದಿಂದಲ್ಲದೆ ಈ ಮರದಲ್ಲಿ ಹಣ್ಣೆಲ್ಲಿಂದ?" ಎಂದು ಮನಸ್ಸಿನಲ್ಲೇ ನೆನಸುತ್ತಾ ಮುನಿಯ ಬಳಿಗೆ ಬಂದು ಆತನ ಪಾದಗಳಿಗೆ ವಂದಿಸಿದನು. ಆ ಸಮಯದಲ್ಲಿ ಆ ಮುನಿಗಳು "ತ್ರಿಲೋಕಪ್ರಜ್ಞಪ್ತಿ"ಯನ್ನು ಪಾರಾಯಣ ಮಾಡುತ್ತಿದ್ದರು.

ವ್ಯಾಕರಣಾದಿ ಶಾಸ್ತ್ರಗಳಲ್ಲಿ ಪರಿಣತನಾದ ಸೋಮದತ್ತ ಮುನಿಗಳ ಪಾರಾಯಣಕ್ಕೆ ಕಿವಿಗೊಡುತ್ತಾ ಒಂದೆಡೆ ನಿಂತ. ಮುನಿಗಳು ಸ್ವರ್ಗಲೋಕದ ವರ್ಣನೆಮಾಡುತ್ತ ಹನ್ನೆರಡನೆಯ ಸಹಸ್ರಾರ ಕಲ್ಪದ ಸೂರ್ಯಾಭ ವಿಮಾನವನ್ನು ವರ್ಣಿಸತೊಡಗಿದರು. ಆ ವರ್ಣನೆಯನ್ನು ಕೇಳುತ್ತಿದ್ದ ಸೋಮದತ್ತನಿಗೆ ತಾನು ಮೊದಲ ಹುಟ್ಟಿನಲ್ಲಿ ಸೂರ್ಯಾಭ ವಿಮಾನದಲ್ಲಿ ಸೂರ್ಯವರನೆಂಬ ಮಹರ್ಧಿಕ ದೇವನಾಗಿದ್ದುದು ನೆನಪಾಯಿತು. ನೆನಪಾದದ್ದೇ ತಡ ಬ್ರಾಹ್ಮಣ ಬವಳಿ ಬಂದು ಅಲ್ಲೇ ನೆಲಕ್ಕೊರಗಿದ. ಕೂಡಲೇ ಅಲ್ಲಿದ್ದ ಶಿಷ್ಯರು ಸಮೀಪದ ಕೊಳದಿಂದ ತಿಳಿನೀರನ್ನು ತಂದು ಶೈತ್ಯೋಪಚಾರ ಮಾಡಿದರು. ಶಿಷ್ಯರ ಶೈತ್ಯೋಪಚಾರದಿಂದ ಮೂರ್ಛೆ ತಿಳಿದು ತನ್ನ ಮುನ್ನಿನ ಭವವನ್ನೇ ಚಿಂತಿಸಿ, ತನ್ನ ಮೊದಲಿನ ಭವದ ವಿಚಾರವೇನೆಂದು ಸುಮತಿ ಭಟ್ಟಾರಕರೊಡನೆ (ಅಲ್ಲಿದ್ದ ಆ ಮುನಿಗಳೊಡನೆ) ಕೇಳಬೇಕೆಂದು ಯೋಚಿಸುತ್ತಿರುವಾಗಲೇ ಸುಮತಿ ಭಟ್ಟಾರಕರು ಬ್ರಾಹ್ಮಣನನ್ನು ಬಳಿಗೆ ಕರೆದರು. ಮತ್ತು "ಬ್ರಾಹ್ಮಣೋತ್ತಮಾ! ಜಾತಿಸ್ಮರಣೆಯಿಂದ ಮೊದಲ ಹುಟ್ಟನ್ನು ಅರಿತ ನೀನು ನನ್ನನ್ನು ಪರೀಕ್ಷಿಸಬೇಕೆಂದು ಯೋಚಿಸಿರುವೆ? ನಿನಗೆ ಬೇಕಾದ ಪ್ರಶ್ನೆಯನ್ನು ಕೇಳಬಹುದು" ಎಂದು ಬೆಸಸಿದರು.

ಆಗ ಸೋಮದತ್ತನು ಭಟಾರರ ಅರಿತಕ್ಕೆ ಬೆರಗಾಗಿ ಕೈ ಜೋಡಿಸಿಕೊಂಡು, ತನ್ನ ಮಡದಿ ಅಕಾಲದಲ್ಲಿ ಮಾವಿನ ಹಣ್ಣನ್ನು ಬಯಸಿದುದೇಕೆಂಬುದನ್ನು ದಯಮಾಡಿ ತಿಳಿಸಬೇಕೆಂದು ಬೇಡಿಕೊಂಡನು.

"ಬ್ರಾಹ್ಮಣಾ! ನಿನ್ನ ಪತ್ನಿ ಯಜ್ಞದತ್ತೆಯ ಉದರದಲ್ಲಿರುವಾತನು ಜಿನಸಮಯಪ್ರಾಕಾರನಾಗಿರುವನು. ಆದುದರಿಂದಲೇ ನಿನ್ನ ಪತ್ನಿಗೆ ಜಿನ

ಮಂದಿರಗಳನ್ನು ಸಂದರ್ಶಿಸಬೇಕೆಂಬ, ಜಿನಾಗಮಗಳನ್ನು ಕೇಳಬೇಕೆಂಬ ಬಯಕೆಯುಂಟಾಗಿದೆ. ಆಕೆ ನಿನಗೆ ದಿಟವನ್ನು ಹೇಳದೆ ಮಾವಿನಹಣ್ಣು ಬೇಕೆಂದು ಸಟೆ ಹೇಳಿದಳು" ಎಂದು ಭಟಾರರು ನಿರೂಪಿಸಿದರು.

"ಮುನಿಗಳ ಮಾತು ದಿಟ. ಈ ಸಂಸಾರದ ಭ್ರಮಣೆ ಇನ್ನು ಸಾಕು" ಎಂದು ದೃಢನಿಶ್ಚಯ ಮಾಡಿದ ಸೋಮದತ್ತನು ಮಾವಿನಹಣ್ಣನ್ನು ಶಿಷ್ಯರ ಕೈಯಲ್ಲಿ ಕೊಟ್ಟು ಊರಿಗೆ ಕಳುಹಿಸಿ ತಾನು ಮುನಿಗಳ ಬಳಿಯಲ್ಲೇ ಉಳಕೊಂಡನು.

"ಬೀದಿಯಲ್ಲಿ ದೊರಕಿದ ರತ್ನದಂತೆ, ಮನೆಗೆ ಬಂದ ನಿಕ್ಷೇಪದಂತೆ, ಬಿತ್ತದೆ ಬೆಳೆದ ಪೈರಂತೆ, ಮಳೆಯಿಲ್ಲದೆ ತುಂಬಿದ ಕೆರೆಯಂತೆ, ಪೂರ್ವಪುಣ್ಯ ದಿಂದ ದೊರೆತ ಈ ಜೈನಧರ್ಮವನ್ನು ಬಿಟ್ಟೆನಾದರೆ, ಹೆರವರ ಬೆಳಸನ್ನು ನಂಬಿ ಕೆಲಸಮಾಡದ ಒಕ್ಕಲಿಗನನ್ನು, ಕಳ್ಳನ ನುಡಿಯನ್ನು ಕೇಳಿ ತಳಾರ ನನ್ನು ಕೊಲ್ಲುವ ಗ್ರಾಮಣಿಯನ್ನು ಹೋಲುವೆನು" ಎಂದು ಸೋಮದತ್ತನು ಖಂಡಿತಗೈದನು, ಮತ್ತು ಸುಮತಿ ಭಟಾರರಿಂದ ಜಿನೇಂದ್ರಧರ್ಮವನ್ನು ಕೇಳಿ ಜಿನದೀಕ್ಷೆಯನ್ನು ಪಡೆದನು. ಗುರುಸೇವೆ ಮಾಡಿದನು. ಮತ್ತೆ ಏಕವಿಹಾರಿಯಾಗಿ ಸಂಚರಿಸುತ್ತ ಬಂದು ಮಗಧವಿಷಯದ ಸೌಪಾಳಪುರದ ಮೂಡಣದಿಕ್ಕಿನ ನಾಭಿಗಿರಿಯಲ್ಲಿ ಆತಪಯೋಗದಲ್ಲಿ ನಿಂತನು.

ಇತ್ತ ಸೋಮದತ್ತನ ಶಿಷ್ಯರು ಮಾವಿನಹಣ್ಣನ್ನು ತಂದು ಯಜ್ಞದತ್ತೆಗೆ ಕೊಟ್ಟು ಸಕಲ ವೃತ್ತಾಂತವನ್ನೂ ತಿಳಿಸಿದರು. ಯಜ್ಞದತ್ತೆ ನವಮಾಸ ತುಂಬಿ ಶುಭಮುಹೂರ್ತದಲ್ಲಿ ಗಂಡುಮಗುವನ್ನು ಹೆತ್ತಳು. ಬಂಧುಗಳು ಮಗುವಿಗೆ ಶ್ರೀದತ್ತನೆಂದು ನಾಮಕರಣ ಮಾಡಿದರು. ಮಗು ತಾಯ ಬಳಿಯಲ್ಲಿ ಸೊಗಸಾಗಿ ಬೆಳೆಯುತ್ತಿತ್ತು.

ಒಮ್ಮೆ ಸೋಮದತ್ತನು ಸೌಪಲಪುರದ ನಾಭಿಗಿರಿಯಲ್ಲಿ ಬಂದಿಳಿದನು. ಈ ಒಸಗೆ ಯಜ್ಞದತ್ತೆಯ ಕಿವಿ ಸೇರಿತು. ಆಕೆ ತನ್ನ ಪತಿಯನ್ನು ಹೇಗಾದರೂ ಮಾಡಿ ಮನೆಗೆ ಹಿಂದಿರುಗಿಸಬೇಕೆಂದು ಯೋಚಿಸಿದಳು. ಹಾಗೆಯೇ ತನ್ನ ಸನಿಹಪದ ಬಂಧುಗಳನ್ನು ಕೂಡಿಕೊಂಡು ನಾಭಿಗಿರಿ ಯನ್ನೇರಿ ಸೋಮದತ್ತನನ್ನು ಕಂಡಳು.

“ಲೋಕದಲ್ಲಿ ದುರ್ಲಭವಾದ ಬ್ರಾಹ್ಮಣ ಜನ್ಮವನ್ನು ಪಡೆದ ಸಕಲ ಶಾಸ್ತ್ರಗಳನ್ನು ತಿಳಿದ ನೀನು ಈ ಜಿನದೀಕ್ಷೆಯನ್ನೇಕೆ ಸ್ವೀಕರಿಸಿದೆ? ಕುಲವನ್ನೂ ಶಾಸ್ತ್ರವನ್ನೂ ತೊರೆದು ಸವಣರ ಮಾತಿಗೇಕೆ ಮರುಳಾದೆ?” ಎಂದು ಹಲವು ವಿಧದಲ್ಲಿ ಯಜ್ಞದತ್ತೆಯೂ ಆಕೆಯ ಬಂಧುಗಳೂ ಸೋಮದತ್ತನನ್ನು ಮೂದಲಿಸಿದರು. “ಇನ್ನಾದರೂ ಆ ಕೊಳೆಧರ್ಮವನ್ನು ಬಿಟ್ಟು ಬ್ರಾಹ್ಮಣಧರ್ಮವನ್ನೇ ಹಿಡಿ” ಎಂದು ಬೇಡಿದರು; ಕಾಡಿದರು.

ಇವರ ಯಾವ ಮಾತೂ ಸೋಮದತ್ತನಿಗೆ ನಾಟಲಿಲ್ಲ. ಅವನು ಮಾತ್ರ ಬೂದಿ ಮುಚ್ಚಿದ ಕೆಂಡದಂತೆ, ಜ್ಞಾನಿಯ ಮೌನದಂತೆ ಜಿನಾಗಮಗಳನ್ನೆ ನೆನಸುತ್ತಿದ್ದನು. ಅವನ ಮನ ಕದಡಲಿಲ್ಲ; ಕದಲಲಿಲ್ಲ. ಯಜ್ಞದತ್ತೆ ಸೋಮದತ್ತನು ಮಗುವನ್ನು ನೋಡಿಯಾದರೂ ಮನವನ್ನು ಕದಲಿಸಿಯಾನೆಂದು ಯೋಚಿಸಿ ಮಗುವನ್ನು ಅಲ್ಲೇ ಬಿಟ್ಟು ಊರಿಗೆ ಮರಳಿದಳು.

ವಿಜಯಾರ್ಧಗಿರಿಯ ತೆಂಕುಸಾಲಿನ ಅಮರಾವತಿಪುರವನ್ನು ಶಂಭು ವಿದ್ಯಾಧರನು ಮಂಗಳಮಹಾದೇವಿಯೊಡನೆ ಆಳುತ್ತಿದ್ದನು. ಭಾಸ್ಕರದೇವ ಮಂದರರಾಜರೆಂಬ ಇಬ್ಬರು ಗಂಡುಮಕ್ಕಳೂ, ಸುದೇವಿಯೆಂಬ ಹೆಣ್ಣು ಮಗಳೂ ಆ ವಿದ್ಯಾಧರನ ಸಂತಾನ. ಹಲಗಾಲ ವಿದ್ಯಾಧರ ಲೋಕವನ್ನಾಳಿದ ಶಂಭುವಿದ್ಯಾಧರನಿಗೆ ಸಂಸಾರದಲ್ಲಿ ವೈರಾಗ್ಯ ಹುಟ್ಟಿತು. ಅವನು ತನ್ನ ಅಧಿಕಾರವನ್ನು ಹಿರಿಯಮಗ ಭಾಸ್ಕರದೇವನಿಗೊಪ್ಪಿಸಿ, ತಾನು ಸುಪ್ರಭಾ ಚಾರಣರ ಬಳಿ ಜಿನೇಂದ್ರದೀಕ್ಷೆಯನ್ನು ಕೈಕೊಂಡು ತಪಸ್ವಿಯಾದನು.

ತಂದೆ ತಪಸ್ವಿಯಾದುದೇ ತಡ, ತಮ್ಮ ಮಂದರರಾಜನು ವಿದ್ಯಾಬಲದಿಂದ ಅಣ್ಣ ಭಾಸ್ಕರದೇವನನ್ನು ರಾಜ್ಯದಿಂದ ಓಡಿಸಿ ತಾನೇ ಮೊದಲಿಗನಾದನು. ರಾಜ್ಯ ಕಳಕೊಂಡ ಭಾಸ್ಕರದೇವನು ತನ್ನ ಮಡದಿ ಮಣಿಯಾಲೆಯೊಡನೆ ಕನಕಪುರಕ್ಕೆ ನಡೆದು, ಅಲ್ಲಿ ತನ್ನ ಭಾವಮೈದುನ ವಿಮಲವಾಹನನ ಮನೆಯಲ್ಲಿ ಉಳಕೊಂಡನು.

ಒಮ್ಮೆ ಭಾಸ್ಕರದೇವನು ತೀರ್ಥಾಟನೆ ಮಾಡುವ ಇಚ್ಛೆಯಿಂದ ಮಡದಿ ಮಣಿಮಾಲೆಯೊಡನೆ ವಿಮಾನವನ್ನೇರಿ ಭರತಕ್ಷೇತ್ರಕ್ಕೆ ಬಂದನು. ತೀರ್ಥದರ್ಶನ ಮಾಡುತ್ತ ನಾಭಿಗಿರಿಗೆ ಬಂದನು. ಅಲ್ಲಿ ಬಂದು ಸೋಮದತ್ತ ಮುನಿಗಳ ದರ್ಶನಮಾಡಿದನು. ಆಗ ಅಲ್ಲಿ ಯಜ್ಞದತ್ತೆ

ಬಿಟ್ಟು ಹೋದ ಮಗುವೂ ಮುನಿಯ ಬಳಿಯಲ್ಲಿ ಕಳಕಳಿಸಿ ನಗುತ್ತಾ ಆಟ ವಾಡುತ್ತಾ ಇತ್ತು. ಭಾಸ್ಕರದೇವನು ಈ ಮಗು ಜಿನಧರ್ಮಪ್ರಸಾದದಿಂದ ತನಗೆ ದೊರಕೊಂಡಿತೆಂದು ಕೈಗೆ ಎತ್ತಿಕೊಂಡು ಮಡದಿ ಮಣಿಮಾಲೆಯ ಕೈಗಿತ್ತನು; ಮತ್ತು ಮಡದಿಯೊಡನೆ ವಿಮಾನವನ್ನೇರಿ ಕನಕಪುರವನ್ನು ಸೇರಿದನು. ಅಲ್ಲಿ ವಿಮಲವಾಹನನಿಗೂ ಆತನ ಮಡದಿ ಸುದೇವಿಗೂ ಮಗುವನ್ನು ಕಂಡು ಹಿಡಿಸಲಾರದ ಸಂತೋಷವಾಯಿತು. ಅವರು ಆ ಮಗುವಿಗೆ ವಜ್ರಕುಮಾರನೆಂದು ನಾಮಕರಣ ಮಾಡಿದರು. ವಜ್ರಕುಮಾ ರನು ಅಲ್ಲಿ ವಿದ್ಯಾಬುದ್ಧಿಯುತನಾಗಿ ಬೆಳೆದನು. ಪ್ರಾಯಕ್ಕೆ ಬಂದನು. ವಿಮಲವಾಹನನಿಗೆ ಇಂದುಮತಿಯೆಂಬ ಮೋಹದ ಮಗಳಿದ್ದಳು. ವಜ್ರ ಕುಮಾರನಿಗೆ ಇಂದುಮತಿಯನ್ನು ಕೊಟ್ಟು ಸಂಭ್ರಮದಿಂದ ಮದುವೆಮಾಡಿ ದರು. ಆ ದಂಪತಿಗಳು ಸುಖವಾಗಿ ಕಾಲ ಕಳೆಯುತ್ತಿದ್ದರು.

ಒಮ್ಮೆ ವಜ್ರಕುಮಾರನು ವಿಜಯಾರ್ಧಪರ್ವತದ ಸಿದ್ಧಕೂಟ ಚೈತ್ಯಾಲಯವನ್ನು ವಂದಿಸಲೆಂದು ವಿಮಾನಾರೂಢನಾಗಿ ಹೋಗುತ್ತಿದ್ದನು. ಹೇಮಗಿರಿಯ ದಾರಿಯಲ್ಲಿ ವಿದ್ಯಾಧರಿಯೊಬ್ಬಳನ್ನು ಹೆಬ್ಬಾವೊಂದು ನುಂಗು ವುದನ್ನು ಕಂಡನು. ತನ್ನ ವಿದ್ಯಾಬಲದಿಂದ ಹೆಬ್ಬಾವನ್ನು ಸೋಲಿಸಿ ವಿದ್ಯಾ ಧರಿಯನ್ನು ರಕ್ಷಿಸಿ ಆಕೆ ಯಾರೆಂದು ವಿಚಾರಿಸಿದನು.

ಅದಕ್ಕಾ ವಿದ್ಯಾಧರಿ “ಚಂದ್ರಪುರದರಸಿ ಅನಂತಮತಿಯ ಸುಪುತ್ರಿ ಚಂದ್ರವೇಗೆ ನಾನು. ಬಹುರೂಪಿಣೀ ವಿದ್ಯೆಯನ್ನು ಪಡೆಯಲೋಸುಗ ಇಲ್ಲಿ ಬಂದೆ. ಆ ವಿದ್ಯೆ ನನ್ನ ವಶವಾಗಲೊಲ್ಲದೆ ಹೆಬ್ಬಾವಾಗಿ ನನ್ನನ್ನು ನುಂಗ ತೊಡಗಿತು” ಎಂದು ತನ್ನ ವೃತ್ತಾಂತವನ್ನು ತಿಳಿಸಿದಳು. ಮತ್ತು ತನ್ನನ್ನು ಕಾಪಾಡಿದ್ದಕ್ಕಾಗಿ ವಜ್ರಕುಮಾರನಿಗೆ ಪ್ರಜ್ಞಪ್ತಿ ವಿದ್ಯೆಯನ್ನು ಕಲಿಸಿಕೊಟ್ಟಳು. ವಜ್ರಕುಮಾರನು ಆಕೆಯನ್ನು ಬೀಳ್ಕೊಟ್ಟು ಸಿದ್ಧಕೂಟ ಚೈತ್ಯಾಲಯಕ್ಕೆ ಹೋಗಿ ದರ್ಶನಶುದ್ಧನಾಗಿ ಹಿಂದಿರುಗಿದನು.

ವಜ್ರಕುಮಾರನ ರಾಜ್ಯವನ್ನು ಅವನ ಚಿಕ್ಕತಂದೆ ಮಂದರದೇವನು ಅಪಹರಿಸಿದ್ದನು. ಅದನ್ನು ಹಿಂದೆ ಪಡೆಯಬೇಕೆಂಬ ಆಸೆಯಿಂದ ಅಮ ರಾವತಿಗೆ ಮುತ್ತಿಗೆ ಹಾಕಿ ಮಂದರದೇವನನ್ನು ಸೋಲಿಸಿ, ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಮತ್ತು ತನ್ನ ತಂದೆತಾಯನ್ನೂ ಪ್ರಿಯಪತ್ನಿ

ಯನ್ನೂ ಅಲ್ಲಿಗೆ ಕರೆಸಿ ಸುಖವಾಗಿ ವಾಸಿಸತೊಡಗಿದನು. ಇದೇ ಕಾಲದಲ್ಲಿ ವಜ್ರಕುಮಾರನು ತಾನು ಮೊದಲು ತಾನು ಹೆಬ್ಬಾವಿನ ಬಾಯಿಂದ ರಕ್ಷಿಸಿದ್ದ ಚಂದ್ರವೇಗೆಯೂ ಸ್ವಯಂವರದಲ್ಲಿ ಅತನನ್ನು ವರಿಸಿದಳು.

ಒಮ್ಮೆ ವಿಶೇಷ ಸಂದರ್ಭದಲ್ಲಿ ವಜ್ರಕುಮಾರನು ಪಟ್ಟದಾನೆಯೇರಿ ಬೀದಿಯಲ್ಲಿ ಮೆರವಣಿಗೆ ಹೋಗುತ್ತಿದ್ದನು. ಆಗ ವಜ್ರಕುಮಾರನ ತಾಯಿ ಮಣಿಮಾಲಾದೇವಿ ಸೊಸೆಯರೊಡನೆ ಮಣಿಮಾಡದಲ್ಲಿ ಕುಳಿತು ಮೆರವಣಿಗೆಯ ಸೊಗಸನ್ನು ನೋಡುತ್ತಿದ್ದಳು. ಆ ಕಾಲದಲ್ಲಿ ಉಕ್ಕಿಬರುವ ಸಂತಸವನ್ನು ತಡೆಯಲಾರದೆ ಮಣಿಮಾಲಾದೇವಿ ವಜ್ರಕುಮಾರನು ದೊರಕಿದ ಬಗೆಯನ್ನು ಸೊಸೆಯರಿಗೆ ಅರುಹಿದಳು. ಸೊಸೆ ಇಂದುಮತಿ ಅಂದಿನಿರುಳೇ ಆ ಸುದ್ದಿಯನ್ನು ತನ್ನ ಗಂಡ ವಜ್ರಕುಮಾರನಿಗೆ ಹೇಳಿದಳು. ಆ ಸುದ್ದಿ ಕೇಳಿದ ವಜ್ರಕುಮಾರನ ಮನದಲ್ಲಿ ವೈರಾಗ್ಯ ತಲೆದೋರಿತು. ಮರುದಿನ ಬೆಳಗಾದೊಡನೆ ಅವನು ತನ್ನ ತಾಯ ಬಳಿ ಬಂದು ಸಕಲ ವೃತ್ತಾಂತವನ್ನೂ ಅರಿತುಕೊಂಡನು. ಮಗನು ಸಂಸಾರವನ್ನು ತೊರೆದು ಬಿಡಬಹುದೆಂಬ ಯೋಚನೆ ತಾಯ ಮನದಲ್ಲಿ ಬೇರೂರಿತು. ಮಗನನ್ನು ಹೇಗಾದರೂ ಮಾಡಿ ಸಂಸಾರದಲ್ಲಿರಿಸಬೇಕೆಂಬ ಆಸೆ ನಿರಾಸೆಯಾಯಿತು. ಕಡೆಗೆ ಮಗನೊಡನೆ ವಿಮಾನವೇರಿ ದಕ್ಷಿಣ ಮಥುರೆಗೆ ಬಂದಳು. ಅಲ್ಲಿ ಸೋಮದತ್ತ ಭಟಾರರನ್ನು ಸಂದರ್ಶಿಸಿ, ಅವರಿಂದ ಮಗನಿಗೆ ಜಿನದೀಕ್ಷೆ ಕೊಡಿಸಿದಳು. ವಜ್ರಕುಮಾರನು ಜಿನದೀಕ್ಷೆ ಹೊಂದಿ ಸಕಲಾಗಮಕುಶಲನೂ ಚಾರಣಋದ್ಧಿಸಂಪನ್ನನೂ ಆಗಿ ಅಭಿವೃದ್ಧಿಗೊಳ್ಳುತ್ತಿದ್ದನು.

ಆ ಕಾಲದಲ್ಲಿ ಪಾಂಡ್ಯದೇಶದ ಮಥುರಾಪುರವನ್ನು ಪೂತಿವಾಹನ ಮಹಾರಾಜನು ಮಡದಿ ಓಹಿಲಾದೇವಿಯೊಡನೆ ಆಳುತ್ತಿದ್ದನು. ಆ ನಗರದ ರಾಜಶ್ರೇಷ್ಠಿ ಸಮುದ್ರ ದತ್ತ. ಆತನ ಮಡದಿ ಧನವೆ. ಸಮುದ್ರ ದತ್ತನ ಸಂಪತ್ತು ಅಪಾರವಾದುದು. ಅದಕ್ಕೆ ಎಣೆಯಿಲ್ಲ. ಆದರೇನು? ಸೆಟ್ಟಿಯ ಸಂಪತ್ತಿಗೂ ಕಡೆಗಾಲ ಬಂತೋ ಎನ್ನುವಂತೆ ಸೆಟ್ಟಿಯ ಹೆಂಡತಿಯು ಗರ್ಭಿಣಿಯಾದಳು. ಹೆಂಡತಿ ಗರ್ಭಿಣಿಯಾದುದೇ ತಡ, ಸೆಟ್ಟಿಯ ಮನೆಯಲ್ಲಿ ದಾರಿದ್ರ್ಯ ತಾಂಡವವಾಡ ತೊಡಗಿತು. ಹೆಂಡತಿ ಹೆರುವ ಮೊದಲೇ ಸೆಟ್ಟಿ ಇಹಲೋಕವನ್ನೂ ಬಿಟ್ಟನು. ತಿಂಗಳು ತುಂಬಿ ಸೆಟ್ಟಿತಿ ಹೆಣ್ಣು

ಕೂಸೊಂದನ್ನು ಹೆತ್ತು ತಾನೂ ಗಂಡನ ದಾರಿ ಹಿಡಿದಳು. ದಿಕ್ಕಿಲ್ಲದ ಕೂಸು ಕಂಡವರ ಕೈಕೂಸಾಯಿತು.

ಒಂದು ದಿನ ಅಭಿನಂದನ ನಂದನರೆಂಬ ಮುನಿಗಳಿಬ್ಬರು ಚರಿಗೆಗೆ ಹೋಗುತ್ತಾ ದಾರಿಯಲ್ಲಿ ದಿಕ್ಕಿಲ್ಲದೆ ಅಲೆದಾಡುತ್ತಿದ್ದ ಕೂಸನ್ನು ಕಂಡರು. ಅವರು ಈ ಕೂಸು ಈ ನಾಡಿನರಸನ ರಾಣಿಯಾಗುವಳೆಂದು ತಮ್ಮೊಳಗೆ ಆಡಿಕೊಂಡರು. ಈ ಮಾತನ್ನು ಅಲ್ಲೇ ಬಳಿಯಲ್ಲಿ ಹೋಗುತ್ತಿದ್ದ ಬೌದ್ಧ ಸನ್ಯಾಸಿಯೊಬ್ಬನು ಕೇಳಿದನು. ಅವನು ಮಗುವನ್ನೆತ್ತಿಕೊಂಡು ಆಶ್ರಮಕ್ಕೆ ಕೊಂಡು ಹೋಗಿ ಬುದ್ಧದಾಸಿಯೆಂದು ಹೆಸರಿಟ್ಟು ಆ ಮಗುವನ್ನು ಸಾಕಿದನು. ಕಾಲಕ್ರಮೇಣ ಕೂಸು ಬೆಳೆದು ಸುಂದರ ಯುವತಿಯಾದಳು; ಊರ ಜನರ ಕಣ್ಮನಗಳನ್ನು ತನ್ನ ಕಡೆ ಸೆಳೆಯತೊಡಗಿದಳು.

ಒಮ್ಮೆ ಬೀದಿಯಲ್ಲಿ ಸಂಚರಿಸುತ್ತಿದ್ದ ಪೂತಿವಾಹನ ಮಹಾರಾಜನು ಆಶ್ರಮದ ಬಾಗಿಲಲ್ಲಿ ನಿಂತಿದ್ದ ಬುದ್ಧ ದಾಸಿಯನ್ನು ಕಂಡನು; ಕಂಡು ಮನಸೋತನು. ಮತ್ತು ತನ್ನ ಅಂತರಂಗವನ್ನು ಆಶ್ರಮದ ಹಿರಿಯನಿಗೆ ತಿಳಿಸಿದನು. ಆಶ್ರಮದ ಹಿರಿಯನು ಬುದ್ಧದಾಸಿ ವಿಮಲವಾಹನನ ಪ್ರಿಯ ವಲ್ಲಭೆಯಾಗಲು ಸಮ್ಮತಿಸಿದನು. ಅರಸನು ಬುದ್ಧದಾಸಿಯನ್ನು ಸ್ವೀಕರಿಸಿ ಅವಳೊಡನೆ ಸೊಗಬಾಳುತ್ತಿದ್ದನು.

ಪ್ರತಿ ವರ್ಷದಂತೆ ಫಾಲ್ಗುಣದ ನಂದೀಶ್ವರದ ಅಷ್ಟಾಹ್ನಿಕ ಸಮೀಪಿಸಿತು. ಜಿನಪಾದಭಕ್ತೆ ಹಿರಿಯರಸಿ ವ್ರತವನ್ನಾಂತಳು. ಇದನ್ನರಿತ ಬುದ್ಧದಾಸಿಗೆ ಮತ್ಸರ ಮರುಕಳಿಸಿತು. ರಾಜನ ಪ್ರೀತಿಯ ಕಿರಿಯರಸಿಯಲ್ಲವೆ? ತಾನು ಬುದ್ಧೋತ್ಸವವನ್ನು ಆಚರಿಸಬೇಕೆಂದು ಹಟಹಿಡಿದಳು. ಅರಮನೆಯ ಪರಿವಾರವೆಲ್ಲಾ ಬುದ್ಧೋತ್ಸವಕ್ಕೆ ಬರಬೇಕೆಂದು ಕಟ್ಟಪ್ಪಣೆಯಿತ್ತಳು. ಇದನ್ನು ಕೇಳಿದ ಓಹಿಲಾದೇವಿಗೆ ಏನು ಮಾಡುವುದೆಂದು ತಿಳಿಯಲಿಲ್ಲ. ಅವಳು ಸೋಮದತ್ತ ಭಟಾರರ ಬಳಿಗೆ ಹೋಗಿ ತನ್ನ ಧರ್ಮಸಂಕಟವನ್ನು ಅವರಿಗೆ ನಿವೇದಿಸಿಕೊಂಡಳು.

ಸೋಮದತ್ತ ಭಟಾರರು “ಅಮ್ಮಾ! ಚಿಂತೆಗೆ ಕಾರಣವಿಲ್ಲ. ನೀನು ವಜ್ರಕುಮಾರ ಮುನಿಗಳನ್ನು ಸಂದರ್ಶಿಸು. ಅವರು ನಿನ್ನ ಸಂಕಷ್ಟಗಳನ್ನು ನಿವಾರಿಸಿಯಾರು” ಎಂದು ಸಮಜಾಯಿಸಿದರು. ಓಹಿಲೆ ಕೂಡಲೇ

ವಜ್ರಕುಮಾರ ಮುನಿಗಳ ಬಳಿಗೈದಿ ತಾನು ಬಂದ ವಿಷಯವನ್ನು ನಿವೇದಿಸಿಕೊಂಡಳು. ವಜ್ರಕುಮಾರ ಮುನಿಗಳು "ಲೋಕದಲ್ಲಿ ಸಮಸ್ತ ವಸ್ತು ವಿಷಯಗಳಿಂದಲೂ ವಾತ್ಸಲ್ಯವೆಂಬುದು ಅತಿ ಮುಖ್ಯ. ಆದುದರಿಂದ ತಾನು ಉದಾಸೀನನಾಗಬಾರದು" ಎಂದು ಯೋಚಿಸಿ, "ಅಮ್ಮಾ! ನೀನೇಕೆ ಕೊರಗುವೆ? ನಿನ್ನ ವ್ರತ ಪೂಜೆ ಸರ್ವಾಂಗಸುಂದರವಾಗುವಂತೆ ವಿದ್ಯಾಧರ ಸಮೂಹವನ್ನೇ ಕರತರಸುವೆನು; ಚಿಂತಿಸಬೇಡ" ಎಂದು ಸಮಾಧಾನಗೊಳಿಸಿ ಓಹಿಲೆಯನ್ನು ಅರಮನೆಗೆ ಹಿಂದಿರುಗಿ ಕಳುಹಿಸಿದರು.

ವಜ್ರಕುಮಾರ ಮುನಿ ಕೂಡಲೆ ಉತ್ತರಕ್ಕೆ ಪ್ರಯಾಣಿಸಿ ಅಮರಾವತೀಪುರವನ್ನು ಪ್ರವೇಶಿಸಿ, ರಾಜಮಂದಿರವನ್ನು ಸೇರಿದರು. ಅಲ್ಲಿ ಭಾಸ್ಕರದೇವನನ್ನು ಕಂಡು "ನೀನು ಸಕಲ ವಿದ್ಯಾಧರ ಬಲದೊಡನೆ ದಕ್ಷಿಣ ಮಥುರೆಗೆ ಬಂದು ಓಹಿಲಾದೇವಿಯು ಆಚರಿಸುವ ವ್ರತೋತ್ಸವದಲ್ಲಿ ಭಾಗವಹಿಸಬೇಕು" ಎಂದು ಅನುವದಿಸಿದರು. ಕೂಡಲೇ ವಿದ್ಯಾಧರಸಮೂಹ ಸಂಭ್ರಮದಿಂದ ಹೊರಟು ವಿಮಾನವೇರಿ ದಕ್ಷಿಣ ಮಥುರೆಗೆ ಬಂದು ಓಹಿಲಾದೇವಿಯ ಮನೆ ಸೇರಿತು. ಮಥುರಾನಗರದಲ್ಲಿ ಎಲ್ಲಿ ನೋಡಿದರೂ ವಿದ್ಯಾಧರ ವಿದ್ಯಾಧರಿಯರು ತುಂಬಿ ಹೋದರು! ಪುರಜನರೂ ಪರಿಜನರೂ ಇದನ್ನು ಕಂಡು ವಿಸ್ಮಿತರಾಗಿ ಓಹಿಲೆಯ ಜಿನಭಕ್ತಿಯನ್ನು ಮನಸಾರೆ ಹೊಗಳಿದರು; ಮತ್ತು ಅವರೆಲ್ಲರೂ ಓಹಿಲೆಯ ಜಿನಪೂಜೆಯನ್ನು ಕಾಣಲು ಅರಮನೆಯಲ್ಲಿ ಕಿಕ್ಕಿರಿದು ನೆರೆದರು. ಜಿನಪೂಜೆ ಸಾಂಗವಾಗಿ ಸಂಭ್ರಮದಿಂದ ನಡೆಯಿತು. ಇದಕ್ಕೆಲ್ಲಾ ವಜ್ರಕುಮಾರ ಮುನಿಗಳನ್ನು ಜಯಜಯಕಾರದಿಂದ ಹೊಗಳಿದರು.

ವಿಷ್ಣುಕುಮಾರ ಮುನಿ

(ಪ್ರಭಾವನೆ)

ಕುರುಜಾಂಗಣದಲ್ಲಿ ಹಸ್ತಿನಾಪುರ ಅತಿ ಮನೋಹರವಾದುದು. ಆ ಪುರವನ್ನು ಮಹಾ ಪದ್ಮರಾಜನು ಲಕ್ಷ್ಮೀಮತಿಯೆಂಬ ಅರಸಿಯೊಡನೆ ಸೊಗ

ಸಾಗಿ ಆಳುತಿದ್ದನು. ಮಹಾಪದ್ಮನಿಗೆ ಪದ್ಮಕುಮಾರ, ವಿಷ್ಣುಕುಮಾರ ಎಂಬೀರ್ವರು ಮಕ್ಕಳು. ಅವರು ಸಕಲ ಶಾಸ್ತ್ರಪರಿಣತರು.

ಹೀಗಿರಲೊಮ್ಮೆ ಶ್ರುತಿಸಾಗರರೆಂಬ ಆಚಾರ್ಯರು ಐನೂರ್ವರೂ ಮುನಿಗಳೊಡನೆ ವಿಹರಿಸುತ್ತಾ ಹಸ್ತಿನಾಪುರದ ಹೊರಗಿನ ಉದ್ಯಾನದಲ್ಲಿ ಬಂದಿಳಿದರು. ಆಚಾರ್ಯರ ಆಗಮನವನ್ನು ಕೇಳಿದ ಮಹಾಪದ್ಮರಾಜ ಸಂತಸದಿಂದ ನಲಿದಾಡಿದನು. ಮಹಾರಾಜನು ಸಕಲ ವಿಧದ ಅರ್ಚನಾ ದ್ರವ್ಯಗಳನ್ನು ತೆಗೆದುಕೊಂಡು ಪತ್ನೀಪುತ್ರ ಪರಿವಾರದೊಡಗೂಡಿ, ಹಂಸ ಗಳು ಕಮಲ ಸರೋವರದ ಬಳಿ ಸಾರುವಂತೆ, ಶ್ರುತಿಸಾಗರರ ಬಳಿ ಸಾರಿ ದನು. ಮತ್ತು ಆಚಾರ್ಯರಿಗೆ ಮೂರು ಸೂಳು ಬಲವಂದೂ ಕ್ರಮ ಪ್ರಕಾರ ಪೂಜಿಸಿ ಪರಿವಾರ ಸಮೇತನಾಗಿ ವಂದಿಸಿ ಬಳಿಯಲ್ಲಿ ಕುಳಿತನು.

ಆಚಾರ್ಯರ ಬಾಯಿಂದ ಸುರಿದ ಉಪದೇಶಾಮೃತವನ್ನು ಕೇಳಿ ಮಹಾಪದ್ಮನು ಸಂಸಾರದ ಅನಿತ್ಯತೆಯನ್ನು ಮನಗಂಡನು. ಬೇಸಗೆಯ ಮುಗಿಲು, ಮಳೆಗಾಲದ ಬಿಸಿಲು, ಬರಗಾಲದ ಬೆಳಸು; ನದೀ ತೀರದ ಹಳ್ಳಿ; ಗಾಳಿಗೊಡ್ಡಿದ ದೀಪ ಇವುಗಳಿಗೆ ಸಮಾನವಾದ ರಾಜವೈಭವವನ್ನು ತೊರೆಯಲು ನಿಶ್ಚಯಿಸಿದನು. ಹಾಗೆಯೇ ಮಕ್ಕಳನ್ನೂ ಮಂತ್ರಿಪರಿವಾರ ದವರನ್ನೂ ಬಳಿಗೆ ಕರೆದನು. "ನಾನು ನನ್ನ ಧರ್ಮದ ಫಲವಾಗಿ ಇಷ್ಟರ ವರೆಗೆ ರಾಜ್ಯಸುಖವನ್ನು ಅನುಭವಿಸಿದೆ. ಬಿತ್ತಿದ ಬಿತ್ತಿನಿಂದಾಗಿ ಬೆಳೆ ಯಿಂದಲೇ ಒಕ್ಕಲಿಗನು ಮುಂದಿನ ಬೇಸಾಯಕ್ಕೆ ಬಿತ್ತು ಕಟ್ಟುವಂತೆ ನಾನಿನ್ನು ಮುಂದಿನ ಯೋಚನೆ ಮಾಡಬೇಕು. ಆದುದರಿಂದ ಈ ಸಂಸಾರ ವನ್ನು ತೊರೆದು ಜಿನಪಾದಪದ್ಮಾರಾಧಕನಾಗಲು ನಿಶ್ಚಯಿಸಿರುವೆನು." ಎಂದು ಹೇಳಿ ಪದ್ಮಕುಮಾರನಿಗೆ ರಾಜ್ಯಭಾರವನ್ನೂ ವಿಷ್ಣುಕುಮಾರನಿಗೆ ಯುವರಾಜ ಪದವಿಯನ್ನೂ ಒಪ್ಪಿಸಿದನು. ಆದರೆ ವಿಷ್ಣುಕುಮಾರನು ತಂದೆಯ ಮಾತಿಗೆ ಒಡಂಬಡಲಿಲ್ಲ. ಅವನು ತನ್ನ ತಂದೆಯೊಡನೆ ಹೊರ ಟನು. ತಂದೆ ಮಕ್ಕಳಿಬ್ಬರು ಶ್ರುತಿಸಾಗರರ ಬಳಿಗೆ ಹೋಗಿ ಜಿನದೀಕ್ಷೆ ಯನ್ನು ಸ್ವೀಕರಿಸಿದರು. ಕೆಲಕಾಲ ಕಳೆದಾಗ ಮಹಾಪದ್ಮರಾಜನು ಮಹಾ ತಪಸ್ವಿಯಾಗಿ ಸುಗತಿಯನ್ನು ಹೊಂದಿದನು; ವಿಷ್ಣುಕುಮಾರನು ತಪೋ ನಿರತನಾಗಿ ಕಾಲ ಕಳೆಯುತಿದ್ದನು.

ಆ ಕಾಲದಲ್ಲಿ ಅವಂತಿ ದೇಶದ ಉಜ್ಜಯಿನೀ ನಗರವನ್ನು ಜಯವರ್ಮ ಮಹಾರಾಜನು ಆಳುತಿದ್ದನು. ಜಯವರ್ಮ ಮಹಾರಾಜನಿಗೆ ಮಂತ್ರಿಯಾಗಿ ಬಲಿಯೆಂಬ ಬ್ರಾಹ್ಮಣನಿದ್ದನು. ಆ ಬ್ರಾಹ್ಮಣ ಬಲಿಗೆ ಶುಕ್ರ, ಬೃಹಸ್ಪತಿ, ಪ್ರಹ್ಲಾದರೆಂಬ ಮೂವರು ತಮ್ಮಂದಿರು ಇದ್ದರು. ಒಮ್ಮೆ ಅಕಂಪನರೆಂಬ ಆಚಾರ್ಯರು ಐನೂರ್ವರು ಶಿಷ್ಯರೊಡನೆ ಉಜ್ಜಯಿನಿಗೆ ಬಂದರು ಜಯವರ್ಮರಾಜನು ಈ ಸುದ್ದಿ ಕೇಳಿದ ಕೂಡಲೇ ಮಂತ್ರಿಬಲಿಯ ಮುಖ ನೋಡಿ, “ಮಂತ್ರೀ! ನಾವು ಆಚಾರ್ಯರ ದರ್ಶನ ಮಾಡಿ ಬರಬೇಡವೇ?” ಎಂದನು. ಅದಕ್ಕೆ ಮಂತ್ರಿ ಬಲಿಯು “ಮಹಾರಾಜ! ಶುಭಾಶುಭ ಕರ್ಮಗಳಿಗೆ ಫಲವುಂಟೆಂಬುದನ್ನು, ಸ್ವರ್ಗ ನರಕಗಳನ್ನೂ ಕಂಡವರಾರು? ಅವೆಲ್ಲಾ ಗಾಳಿಯ ಗಂಟು. ಇವನ್ನೆಲ್ಲಾ ನೀನು ನಂಬಿ ಈ ರಾಜ್ಯಸುಖವನ್ನು ಕಳೆದುಕೊಳ್ಳಬೇಡ” ಎಂದು ಉಪದೇಶಿಸಿದನು.

ಆದರೇನು! ಅರಸು ಬಲಿಯ ಮಾತಿಗೆ ಕಿವಿಕೊಡುವನೆ? ಅಷ್ಟೆ ಅಲ್ಲ. ಮಂತ್ರಿಯ ಮಿಥ್ಯಾತ್ವವನ್ನು ಕಳೆಯಬೇಕೆಂದು ನಿಶ್ಚಯಿಸಿದನು. ಹಾಗೆಯೇ ಅರಸಿಯರನ್ನೂ ಪರಿವಾರದವರನ್ನೂ ಹಿಂದಿನಿಂದ ಬರಹೇಳಿ, ತಾನು ಮಂತ್ರಿಯನ್ನು ಕೂಡಿಕೊಂಡು ಕಾಲ್ನಡೆಯಾಗಿ ಋಷಿಗಳ ಬಳಿಗೆ ನಡೆದನು. ಋಷಿಗಳನ್ನೂ ಯಥೋಚಿತವಾಗಿ ವಂದಿಸಿ ಹರಕೆಗೊಂಡು ಬಳಿಯಲ್ಲಿ ಕುಳಿತನು. ಮತ್ತೆ “ಮೊರೆಯಿಲ್ಲಫಮಿಳ್ಳೊಲ್ಪಿ । ಲ್ಲರಸಿಲ್ಲ ಪರತ್ರೆಯಿಲ್ಲ ಜೀವನು ಮಿಲ್ಲೆಂ। ದರಿಯದ ಕೆಮ್ಮನೆ । ಕುಂದಿದವರಾ। ತರುವಲಿತನದಿಂದೆ ಬಾಯ್ಗೆ ಬಂದಂತೆ ಕೆಲರ್ ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲಿರುವ ಶಂಕೆಯನ್ನು ಹೋಗಲಾಡಿಸಬೇಕು” ಎಂದು ಕೇಳಿಕೊಂಡನು.

“ಸಂಬಂಧವೆಂಬುದೇ ಇಲ್ಲವೆಂದಾದರೆ ಹೆಂಡತಿಯ ಮೇಲಿನ ಪ್ರೀತಿಗೂ ತಾಯ ಮೇಲಿನ ಪ್ರೀತಿಗೂ ಭೇದವಿರುತ್ತಿತ್ತೇ? ಈಗ ತಾಯಿ ತಂಗಿಯರ ಮೇಲಿನ ಪ್ರೀತಿಗೂ ಭೇದ ಉಂಟಷ್ಟೆ! ಯಾರಾದರೊಬ್ಬನು ಸುಖವಾಗಿ ಜೀವಿಸುವುದನ್ನು ಕಂಡು ಜನರು ಇದು ಇವನ ಮೊದಲ ಜನ್ಮದ ಪುಣ್ಯಫಲವೆನ್ನುವರಲ್ಲಾ! ಅದೇಕೆ? ಆದುದರಿಂದ ಧರ್ಮವೆಂಬು

ದನ್ನು ಖಂಡಿತ ತಿಳಿಯಲೇ ಬೇಕು" ಎಂದು ಋಷಿ ಸಂಕ್ಷೇಪವಾಗಿ ಉತ್ತರಿಸಿದರು.

ಬಳಿಯಲ್ಲೇ ಕುಳಿತು ಆಲಿಸುತ್ತಿದ್ದ ಮಂತ್ರಿಗೆ ಆಚಾರ್ಯರ ಈ ಉಪದೇಶದಿಂದ ಯಾವ ಬಗೆಯ ಸಮಾಧಾನವೂ ಆಗಲಿಲ್ಲ. "ಜೀವನಿರುವುದು ನಿಜವಾದರೆ ಆ ಜೀವನನ್ನು ಪ್ರತ್ಯಕ್ಷವಾಗಿ ತೋರಿಸಬಹುದಲ್ಲವೇ?" ಎಂದು ಗರ್ವದಿಂದ ನುಡಿದನು. "ಮಾಗಿ ತಿಂಗಳಲ್ಲಿ ಬೇಸಗೆಯನ್ನು, ಬೇಸಗೆಯಲ್ಲಿ ಮಳೆಗಾಲವನ್ನು ತೋರಿಸುವುದಾದರೂ ಹೇಗೆ? ನನ್ನ ಮಾತನ್ನು ಸರಿಯಾಗಿ ಗ್ರಹಿಸದೆ, ಏನಾದರೂ ಎಕ್ಕಸಕ್ಕ ಮಾತನಾಡಬೇಡ. ಹಾಲಲ್ಲಿ ತುಪ್ಪವನ್ನೂ, ಮರದಕೊರಡಲ್ಲಿ ಬೆಂಕಿಯನ್ನೂ ತೋರಿಸಬೇಕಾದರೆ ಹೇಗೆ ಮಥನ ಮಾಡಬೇಕೋ, ಹಾಗೆಯೇ ಕರ್ಮವಶದಿಂದ ದೇಹವನ್ನಾಶ್ರಯಿಸುವ ಜೀವನನ್ನು ತೋರಿಸಬೇಕಾದರೆ ಕರ್ಮಕ್ಷಯರೂಪವಾದ ಮಥನವಾಗಬೇಕು. ಕರ್ಮಕ್ಷಯಕಾರಕಗಳಾದ ತಪಸ್ಸುಗಳಿಂದ ಪಾಪಗಳನ್ನು ಸುಟ್ಟು ಶಾಶ್ವತ ಸುಖದಲ್ಲಿ ಕೂಡಿದಾಗ ಜೀವಸ್ವರೂಪವೇನೆಂದು ತಿಳಿಯುವುದು" ಎಂದು ಉತ್ತರಿಸಿದರು. ಜಯವರ್ಮ ಮಹಾರಾಜನು ಆಚಾರ್ಯರ ಉಪದೇಶ ಕೇಳಿ ಪರಮಾನಂದಭರಿತನಾದನು. ಅಲ್ಲಿ ನೆರೆದವರೆಲ್ಲಾ ಜಯ ಜಯ ಎಂದು ಆಚಾರ್ಯರನ್ನು ಹೊಗಳಿದರು. ಅರಸನ ಈ ವರ್ತನೆ ಮಂತ್ರಿಗೆ ಸೊಗಸಾಗಲಿಲ್ಲ. ತನ್ನ ಮಂತ್ರಿ ಇನ್ನೂ ಕುಧರ್ಮದಲ್ಲಿರುವುದನ್ನು ಕಂಡು ಅರಸನೂ ಕೋಪಗೊಂಡನು; ಮಂತ್ರಿಯನ್ನು ಪರಿವಾರ ಸಹಿತ ದೇಶದಿಂದ ಹೊರದಬ್ಬಿದನು.

ಅಕಂಪನಾಚಾರ್ಯರೇ ತನ್ನ ಈ ಅವನತಿಗೆ ಕಾರಣರೆಂದು ತಿಳಿದ ಮಂತ್ರಿ ಬಲಿಯು ಆಚಾರ್ಯರ ಮೇಲೆ ಹಗೆ ತೀರಿಸಲು ಬಗೆದನು. ಮತ್ತು ಹಲವು ದಿನ ಪ್ರಯಾಣ ಮಾಡಿ ಹಸ್ತಿನಾವತಿಗೆ ಬಂದು ಅಲ್ಲಿ ಮಹಾಪದ್ಮನನ್ನು ಆಶ್ರಯಿಸಿ, ಅಚ್ಚುಮೆಚ್ಚಿನವನಾಗಿ ಕಾಲ ಕಳೆಯತೊಡಗಿದನು.

ಮಹಾಪದ್ಮನಿಗೆ ಸಿಂಹಕೀರ್ತಿಯೆಂಬ ಹಗೆಯಿದ್ದನು. ಮಂತ್ರಿ ಬಲಿಯು ಸೈನ್ಯಸಮೇತನಾಗಿ ಸಿಂಹಕೀರ್ತಿಯೊಡನೆ ಹೋರಾಡಿ ಅವನನ್ನು ಸೋಲಿಸಿ ಹೆಡೆಮುಡಿ ಕಟ್ಟಿ ಮಹಾಪದ್ಮನ ಬಳಿಗೆ ತಂದನು. ಇದನ್ನು ಕಂಡು ಸಂತಸಗೊಂಡ ಮಹಾಪದ್ಮ ಬಲಿ ಮಂತ್ರಿಗೆ ತನ್ನ ಮಹಾಮಂತ್ರಿಪದವಿಯನ್ನು

ಒಪ್ಪಿಸಿದನು. ಬಲಿಯು ತನಗೆ ದೊರೆತ ಪದವಿಯಿಂದ ಗರ್ವಗೊಳ್ಳ ಅರಸನ ವಿಶ್ವಾಸಕ್ಕೆ ಪಾತ್ರನಾಗಿ ನಡೆದುಕೊಳ್ಳುತ್ತಿದ್ದನು.

ಹೀಗಿರಲೊಮ್ಮೆ ಅಕಂಪನಾಚಾರ್ಯರು ಶಿಷ್ಯಸಮೇತರಾಗಿ ಹಸ್ತಿನಾವತಿಗೆ ಬಂದರು. ಹಸ್ತಿನಾವತಿಯ ಬಡಗಣ ಸಿತಗಿರಿಯಲ್ಲಿ ಚಾತುರ್ಮಾಸ ನಿಂತರು. ಅರಸು ಮಹಾಪದ್ಮ ಪರಿವಾರ ಸಮೇತವಾಗಿ ಸಿತಗಿರಿಗೆ ಹೋಗಿ ಆಚಾರ್ಯರ ಪೂಜೆ ಮಾಡಿ ಹಿಂದಿರುಗಿದನು.

ಅರಸುವ ಬಳ್ಳಿ ಕಾಲಿಗೆ ತೊಡರಿದಂತೆ ತಾನು ಹುಡುಕಿ ಹಿಂಸಿಸ ಬೇಕೆಂದಿದ್ದ ಆಚಾರ್ಯರು ಅರಮನೆ ಬಳಿಯಲ್ಲೇ ಇರುವುದನ್ನು ಕಂಡ ಬಲಿ ಮಂತ್ರಿಯು ಸಂತಸದಿಂದ ಹಿಗ್ಗಿ ಹೋದನು. ಮತ್ತು ಅರಸನ ಬಳಿಗೆ ಹೋಗಿ ತಾನು ರಾಷ್ಟ್ರದ ದೋಷದ ಪರಿಹಾರಕ್ಕಾಗಿ ಒಂದು ಮಹಾ ಯಜ್ಞವನ್ನು ಆಚರಿಸಲಿರುವೆನೆಂದೂ ಆ ಯಜ್ಞ ಪೂರ್ತಿಯಾಗುವಷ್ಟು ಕಾಲ ಸಕಲ ರಾಜ್ಯಭಾರವನ್ನು ತನಗೆ ಒಪ್ಪಿಸಬೇಕೆಂದೂ ಕೃತ್ರಿಮ ವಂಚನ ಗಳಿಂದ ಅರಸನ ಮನವೊಲಿಸಿದನು. ಅರಸನೂ ಮಂತ್ರಿಯ ಮಾತನ್ನು ನಿಜವೆಂದು ನಂಬಿ ರಾಜ್ಯಭಾರವನ್ನು ಮಂತ್ರಿಗೆ ಒಪ್ಪಿಸಿ ಅಂತಃಪುರದ ವಿಲಾಸಿನಿಯರೊಡನೆ ವಿಹರಿಸುತ್ತಿದ್ದನು.

ನಗರದಲ್ಲಿ ಯಜ್ಞ ಪ್ರಾರಂಭವಾಗಿದೆ. ಆದುದರಿಂದ ಋಷಿಗಳಾರೂ ನಗರದಲ್ಲಿರಕೂಡದೆಂದು ಡಂಗುರ ಸಾರಿಸಿದನು ಬಲಿ ಮಂತ್ರಿ. ಇದನ್ನು ಕೇಳಿದ ಅಕಂಪನಾಚಾರ್ಯರು "ಅವರವರ ಪಾಪಪುಣ್ಯ ಕರ್ಮಫಲವನ್ನು ಅವರವರೇ ಅನುಭವಿಸಬೇಕು. ಬೇಸಗೆಯ ಬಿಸಿಲು ಎಷ್ಟು ಕಾದರೂ ತಾವರೆ ಹೂವನ್ನು ಬಾಡಿಸಲಾರದು. ಹಾಗೆ ತಪಸ್ಸಿನ ಆವರಣವಿರುವವರನ್ನು ಯಾರಿಂದಲೂ ಏನೂ ಮಾಡಲಾಗುವುದಿಲ್ಲ" ಎಂದು ತನ್ನ ಬಳಿಯಲ್ಲಿರುವ ಋಷಿ ಸಮುದಾಯಕ್ಕೆ ಧೈರ್ಯ ಹೇಳಿದರು. ಮತ್ತೆ "ಈಗ ಬಂದ ಉಪಸರ್ಗ ಹಿಂಗುವ ವರೆಗೂ ಆಹಾರ ಸ್ವೀಕರಿಸುವುದಿಲ್ಲ"ವೆಂದು ಖಂಡಿತ ಮಾಡಿ ಜಿನಪಾದಧ್ಯಾನದಲ್ಲಿ ಮಗ್ನನಾಗಿದ್ದನು.

ತನ್ನ ಘೋಷಣೆಯನ್ನು ಕೇಳಿ ಮುನಿಗಳು ಊರು ಬಿಟ್ಟೋಡುವರೆಂದು ತಿಳಿದನು. ಅದು ವ್ಯರ್ಥವಾಯಿತು. "ಅಲ್ಪನಿಗೆ ಅಧಿಕಾರ ಕೊಟ್ಟರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡಾನು" ಎಂಬ ಮಾತು

ಸತ್ಯವೆಂಬಂತೆ ಬಲಿ ತನ್ನ ಮನಸ್ಸಿಗೆ ಬಂದಂತೆ ವರ್ತಿಸತೊಡಗಿದನು. ಋಷಿಗಳಿಗೆ ಉಪಸರ್ಗ ಮಾಡಲೆಂದೇ ಬಗೆದನು. ಸೇವಕರನ್ನು ಕರೆದು ಋಷಿಗಳು ವಾಸಮಾಡುವ ಪರ್ವತದ ಮೇಲೆ ಅರ್ಧ ಗಾವುದ ವಿಸ್ತಾರದ ಯಜ್ಞಶಾಲೆಯೊಂದನ್ನು ನಿರ್ಮಿಸಲು ಹೆಗ್ಗಡೆಗಳಿಗೆ ಅಪ್ಪಣೆಯನ್ನಿತ್ತನು. ಮಂತ್ರಿಯ ಅಪ್ಪಣೆಯಂತೆ ಯಾಗಶಾಲೆ ಸಿದ್ಧವಾಯಿತು. ಬಲಿ ಯಜ್ಞ ಶಾಲೆಯನ್ನು ನೋಡಲು ಬಂದನು. ಹಾಗೆ ನೋಡುತ್ತಾ ಯಜ್ಞಶಾಲೆಯ ಬಳಿಯ ಗುಹೆಗಳಲ್ಲಿ ಋಷಿಗಳಿರುವುದನ್ನು ತಿಳಿದು, ತನಗೆ ತಿಳಿದೂ ತಿಳಿಯ ದವನಂತೆ ತೋರಿಸಿ, ಸೇವಕರನ್ನು ಬಳಿಗೆ ಕರೆದು "ಈ ಗುಹೆಗಳಲ್ಲಿ ಕ್ರೂರ ಪ್ರಾಣಿಗಳಿರಬಹುದು. ಆದುದರಿಂದ ಈ ಗುಹೆಗಳಿಗೆ ಈಗಲೇ ಹುಲ್ಲು ಕಡ್ಡಿಗಳನ್ನು ತುಂಬಿ ಬೆಂಕಿ ಕೊಟ್ಟು ಬಿಡಿರಿ" ಎಂದು ಸೇವಕರಿಗೆ ಅಪ್ಪಣೆ ಯಿತ್ತನು. ಸೇವಕರು ಮಂತ್ರಿಯ ಅಪ್ಪಣೆಯಂತೆ ಹಾಗೆಯೇ ಹುಲ್ಲು ಕಡ್ಡಿಗಳನ್ನು ಗುಹೆಯ ಬಾಗಿಲಿಗೆ ತುಂಬಿದರು. ಆದರೆ ಆ ದಿನ ಕತ್ತಲೆ ಯಾದುದರಿಂದ ಬೆಂಕಿ ಮಾತ್ರ ಕೊಡಲಿಲ್ಲ. ಮರುದಿನ ಯಜ್ಞಾರಂಭ!

ಇತ್ತ ವಿದೇಹದ ಮಿಥಿಳಾಪುರಾಧಿವಾಸಿಗಳಾದ ಜಿಷ್ಣು ಆಚಾರ್ಯರು ಅಕಂಪನಾಚಾರ್ಯರಿಗುಂಟಾದ ಘೋರ ಉಪಸರ್ಗವನ್ನು ಅವಧಿಜ್ಞಾನ ದಿಂದ ಅರಿತರು. ಮತ್ತು ಬಳಿಯಲ್ಲಿದ್ದ ವಿಷ್ಣುಕುಮಾರ ಆಚಾರ್ಯರನ್ನು ನೋಡಿ, "ಈಗ ಅಕಂಪನಾಚಾರ್ಯರಿಗೆ ಉಪಸರ್ಗ ಉಂಟಾಗಿದೆ. ಅದನ್ನು ನಿವಾರಿಸಲು ಅಣಿಮಾದಿ ಅಷ್ಟಸಿದ್ಧಿಗಳಿಂದ ಸಮೃದ್ಧನಾದ ನಿನಗೆ ಸಾಧ್ಯವಿದೆ. ಅಕ್ಷಯಸುಖವನ್ನು ಅನುಭವಿಸಬೇಕೆಂದಿರುವವನು ಧರ್ಮಪ್ರಭಾವನೆಯನ್ನು ಮಾಡಲೇ ಬೇಕು" ಎಂದು ಹೇಳಿದರು. ವಿಷ್ಣು ಕುಮಾರ ಮುನಿ ಜಿಷ್ಣು ಮುನಿಗಳಿಗೆ ವಂದಿಸಿ, ಮರುದಿನ ನಸುಕಾಗ ಬೇಕಾದರೆ ಹಸ್ತಿನಪುರಕ್ಕೆ ಬಂದು ಮಹಾಪದ್ಮರಾಜನ ಅರಮನೆಯನ್ನು ಸೇರಿದನು. ಅರಮನೆಗೆ ಬಂದ ಮುನಿಗಳನ್ನು ಮಹಾಪದ್ಮನು ಉಚಿತೋ ಪಚಾರದಿಂದ ಪೂಜಿಸಿ ಅಪ್ಪಣೆಯೇನೆಂದು ಬೇಡಿದನು.

"ನಿನ್ನ ಮಂತ್ರಿ ಬಲಿ ಯಜ್ಞದ ನೆವದಿಂದ ಅಕಂಪನಾಚಾರ್ಯರಿಗೂ ಅವರ ಪರಿವಾರಕ್ಕೂ ಉಪಸರ್ಗವನ್ನು ಉಂಟುಮಾಡಿರುವನು. ನೀನು ಇದನ್ನು ಉಪೇಕ್ಷಿಸಿ ಮಿಥ್ಯಾದೃಷ್ಟಿಗಳಂತೆ ಇರುವುದು ಯೋಗ್ಯವಲ್ಲ. ಈಗ

ಮುನಿಗಳಿಗುಂಟಾದ ಉಪಸರ್ಗವನ್ನು ಹೋಗಲಾಡಿಸುವುದು ನಿನ್ನ ಧರ್ಮ” ಎಂದ ವಿಷ್ಣುಕುಮಾರಾಚಾರ್ಯರ ನುಡಿಗಳನ್ನು ಕೇಳಿದ ಮಹಾಪದ್ಮನಿಗೆ ದುಃಖವೂ ಕ್ರೋಧವೂ ಏಕಕಾಲದಲ್ಲಿ ಉಂಟಾಯಿತು. ಈಗಲೇ ಬಲಿಗೆ ಶಿಕ್ಷೆಯನ್ನೀಯುವೆನೆಂದನು. ಅದಕ್ಕೆ ಆಚಾರ್ಯರು “ಪಾಪವನ್ನು ಪಾಪ ದಿಂದ ತೊಳೆಯಲಾಗದು. ನೀನು ಬಲಿಯನ್ನು ಕೊಂದು ಪಾಪ ಕಟ್ಟಿ ಕೊಳ್ಳಬೇಡ. ಅವನಿಗೆ ನಾನೇ ಬುದ್ಧಿ ಕಲಿಸುವೆನು” ಎಂದು ಅರಸನನ್ನು ಸಮಾಧಾನಪಡಿಸಿದರು.

ಬಲಿಗೆ ಬುದ್ಧಿ ಕಲಿಸಬೇಕೆಂದು ನಿಶ್ಚಯಿಸಿದ ವಿಷ್ಣುಕುಮಾರ ಮುನಿ ಗಳು “ಕೊರಳಜನ್ನಿವರಂ ಪೊದಳ್ಕೆಯನೆಯ್ದೆ ಮಿಂಚುವ ಚೆಲ್ವೆಯು । ತ್ರಿರಿಗೆ ಭಾಸುರಮಪ್ಪ ತೇಜಮುಗುರ್ವುಪರ್ವಿರೆ ಚೆಲ್ವಿನಿಂ । ಬೆರಳೊಳೊಪ್ಪುವ ದರ್ಭೆ ಪಿಂಗಲ ನೇತ್ರಮುಟ್ಟದುಕೂಲಮೊ । ಪ್ಪಿರೆ ಧರಾಮರ ವೇಷಮಂ ಮುನಿಕುಂಜರಂ ನೆರೆತಾಳ್ದಿದಂ ॥ ಅಂತು ವಾಮನರೂಪವನ್ನು ಕೈಕೊಂಡು ಬೀದಿಯಲ್ಲಿ ಬರುತ್ತಿದ್ದ ವಿಷ್ಣುಕುಮಾರನನ್ನು ನೋಡಿ ಪುರಜನರು ಮಂ ತ್ರಿಯ ಯಜ್ಞಕ್ಕೆ ವಿಷ್ಣುವೇ ಪ್ರತ್ಯಕ್ಷನಾಗಿ ಬಂದನೆಂದು ಆಡಿಕೊಂಡರು. ಹಾಗೆ ಜನರಾಡಿಕೊಳ್ಳುತ್ತಿರುವಾಗಲೇ ವಿಷ್ಣುಕುಮಾರನು ಬಲಿಯ ಯಜ್ಞ ಮಂಟಪಕ್ಕೆ ಬಂದನು.

ಬಲಿ ಮಂತ್ರಿ ಯಜ್ಞಶಾಲೆಗೆ ಬಂದ ವಾಮನಮೂರ್ತಿಯನ್ನು ಕಂಡು ಸಂತಸ ತಾಳಿದನು. ತನ್ನ ತಮ್ಮಂದಿರೊಡಗೂಡಿ ವಿಷ್ಣುಕುಮಾರನನ್ನು ಭಯಭಕ್ತಿಗಳಿಂದ ಪೂಜಿಸಿದನು. “ದೇವಮಾನವ ರಾಜವಂದಿತ ಪಾದ ಪಂಕಜ ದೈತ್ಯವಿ । ದ್ರಾವಣಾಚ್ಯುತ ವಿಷ್ಣು ಲೋಕದಿನೆನ್ನ ಮಾಡಿದ ಪುಣ್ಯದಿಂ । ದೇವ ನೀನವನೀತಕ್ಕಿಳಿದಿಲ್ಲಿಗುನ್ನತಿಯಿಂದೆ ಸ । ದ್ಭಾವ ದಿಂದಮೆ ಬಂದೆನೆಂದೊಡೆ ನಾನೆ ಧನ್ಯನೆನುರ್ವಿಯೊಳ್” ॥ ಎಂದು ಹೇಳಿ ಹೊಗಳಿದನು. ಮಂತ್ರಿ, ವಿಷ್ಣುಕುಮಾರನು ಕೃತಕ ವಿಪ್ರನೆಂದರಿಯದೆ ನಿಜವಾದ ವಿಷ್ಣುವೆಂದೇ ತಿಳಿದು ವಿನಮಿತಮಸ್ತಕನಾಗಿ, “ದೇವರು ಬಂದುದು ಬಹಳ ಸಂತೋಷ. ದೇವರಿಗೆ ಬೇಕಾದುದೇನು? ಸೇವಕನು ಸೇವೆಗೆ ಸಿದ್ಧನಾಗಿದ್ದಾನೆ” ಎಂದು ಬೇಡಿಕೊಂಡನು. “ನನಗೇನು ಬೇಕು? ಆದರೂ ನಿನ್ನ ಭಕ್ತಿಗಾಗಿ ಮೂರಡಿ ನೆಲವನ್ನು ಕೊಡು. ಅದೇ ಸಾಕು” ಎಂದು

ಕೃತಕ ಮುನಿ ನುಡಿದನು. ಅಂತಾಗಲಿ ಎಂದು ಬಲಿ ಧಾರೆಯೆರೆಯಲು ಚಿನ್ನದ ಗಿಂಡಿಯನ್ನೆತ್ತಿದಾಗ ಬಲಿಯ ಅನುಜ ಶುಕ್ರನು ತಡೆದನು. ಆದರೂ ಬಲಿ ಧಾರೆಯೆರೆದು ಮೂರು ಹೆಜ್ಜೆಯನ್ನು ಕೊಟ್ಟೇ ಬಿಟ್ಟನು. ಮತ್ತೆ ಕೇಳುವುದೇನು? ಒಂದೇ ಹೆಜ್ಜೆಗೆ ಕೃತಕ ಮುನಿ ಲೋಕವನ್ನೆಲ್ಲಾ ವ್ಯಾಪಿಸಿಬಿಟ್ಟನು. ಆಗ ದೇವತೆಗಳಿಗೆ ಆಸನಕಂಪವಾಯಿತು; ಇಂದ್ರನೇ ಮೊದಲಾದ ದೇವತೆಗಳು ಬಂದು ನೆರೆದು ಜಯಜಯ ಎಂದು ಹೊಗಳಿದರು, ಭಕ್ತಿಯಿಂದ ಪೂಜಿಸಿದರು. ಉಪಸರ್ಗವನ್ನು ಕಳೆದಾಡಿದರು. ಮತ್ತೆ ದೇವತೆಗಳು ವಿಷ್ಣುಕುಮಾರ ಮುನಿಯನ್ನೂ ಮುನಿಯ ಧರ್ಮ ಪ್ರಭಾವನೆಯನ್ನೂ ಹೊಗಳಿದರು. ಮಹಾಪದ್ಮನು ಧರ್ಮಪ್ರಭಾವನೆಯನ್ನು ಅರಿತು, ಮುನಿಗಳನ್ನು ಪೂಜಿಸಿ ಧರ್ಮದಲ್ಲಿ ದೃಢಚಿತ್ತನಾದನು.

ಅಹಿಂಸಾವ್ರತ

ಮಾಳವದೇಶದ ರಾಜಧಾನಿ ಉಜ್ಜಯಿನೀ ನಗರ. ಆ ನಗರವನ್ನು ವಿಶ್ವಂಭರನೆಂಬ ಅರಸು ಆಳುತ್ತಿದ್ದನು. ಆ ಅರಸನಿಗೆ ಬೇಕುಬೇಕಾದ ವಸ್ತು ಒಡವೆಗಳನ್ನು ಪೂರೈಸುತ್ತಿದ್ದ ವ್ಯಾಪಾರಿಯ ಹೆಸರು ಗುಣಪಾಲ ಸೆಟ್ಟಿ. ಗುಣಪಾಲ ಸೆಟ್ಟಿ ಹೆಸರಿಗೆ ತಕ್ಕಂತೆ ಗುಣವಂತ; ಮಾತ್ರವಲ್ಲ ಧನವಂತನೂ ಆಗಿದ್ದನು. ಗುಣಪಾಲನಿಗೆ ಅಚ್ಚುಮೆಚ್ಚಿನವಳಾಗಿ ಧನಶ್ರೀ ಎಂಬ ಮಡದಿಯಿದ್ದಳು. ಆ ಗಂಡ ಹೆಂಡತಿಯರಿಗೆ ಸುಬಂಧುಶ್ರೀ ಎಂಬ ಪ್ರೀತಿಯ ಮಗಳಿದ್ದಳು. ಅವಳೂ ತನ್ನ ತಂದೆ ತಾಯಂದಿರಂತೆ ರೂಪವತಿ, ಗುಣವಂತೆ.

ಒಮ್ಮೆ ಗುಣಪಾಲ ಸೆಟ್ಟಿಯ ಹೆಂಡತಿ ಧನಶ್ರೀ ಕನಸಿನಲ್ಲಿ ಸೂರ್ಯ ಚಂದ್ರರನ್ನೂ ದೇವಲೋಕದ ಆನೆಯನ್ನೂ ಕಂಡಳು. ಕನಸಿನ ಸುದಿಯನ್ನು ಗಂಡನಿಗೆ ತಿಳಿಸಿದಳು. ಆ ಮೇಲೆ ಆ ಗಂಡ ಹೆಂಡತಿಯರು ಕನಸಿನ ಫಲವನ್ನು ಕೇಳಲೆಂದು ಬಸದಿಗೆ ನಡೆದರು. ಅಲ್ಲಿ ದೇವದರ್ಶನ ಮಾಡಿ, ಅಲ್ಲಿದ್ದ ಋಷಿಗಳಿಗೆ ವಂದಿಸಿ, ಕನಸಿನ ವಿಷಯವನ್ನು ತಿಳಿಸಿ, ಕನಸಿನ ಫಲವೇನೆಂದು ಕೈಮುಗಿದು ಕೇಳಿಕೊಂಡರು.

ಆಗ ಋಷಿಗಳು "ನಿಮಗೆ ಒಬ್ಬ ಗಂಡು ಮಗ ಹುಟ್ಟುವನು. ಕನಸಿನಲ್ಲಿ ದೇವಲೋಕದ ಆನೆಯನ್ನು ಕಂಡುದರಿಂದ ಆ ಹುಡುಗನು ಜಿನಭಕ್ತನಾಗುವನು. ಚಂದ್ರನನ್ನು ಕಂಡುದರಿಂದ ಹುಟ್ಟುವ ಮಗನು ತತ್ವಜ್ಞಾನಿಯಾಗುವನು; ಸೂರ್ಯನನ್ನು ಕಂಡುದರಿಂದ ಜಿನಧರ್ಮವರ್ಧನನೂ ಧರಿತ್ರೀಪಾಲನೂ ಆಗುವನು" ಎಂದು ಸ್ವಪ್ನಫಲವನ್ನು ತಿಳಿಸಿದರು.

ಋಷಿಗಳು ಹೇಳಿದಂತೆ ಧನಶ್ರೀ ಗರ್ಭಿಣಿಯಾದಳು. ಇದೇ ಸಮಯದಲ್ಲಿ ಒಂದು ದಿನ ಧನಶ್ರೀಯ ಮಗಳು ಸುಬಂಧುಶ್ರೀ ತಮ್ಮ ಮನೆಯ ಬಳಿಯ ಉದ್ಯಾನದಲ್ಲಿ ಒಂದು ಮಾವಿನ ಮರದ ನೀಲ್ಗೊಂಬೆಯಲ್ಲಿ ಕುಳಿತು ಉಯ್ಯಾಲಾಡುತ್ತಿದ್ದಳು. ಆ ವೇಳೆಗೆ ಸರಿಯಾಗಿ ಆ ನಗರದ ಅರಸು ವಿಶ್ವಂಭರ ಮಹಾರಾಜನು ತನ್ನ ಪಟ್ಟದಾನೆಯನ್ನೇರಿ ವಿಹಾರ ಹೋಗುತ್ತ, ಆ ದಾರಿಯಾಗಿ ಬಂದನು; ಉದ್ಯಾನದಲ್ಲಿ ಉಯ್ಯಾಲಾಡುತ್ತಿದ್ದ ಸುಬಂಧುಶ್ರೀಯನ್ನು ಕಂಡನು. ಸುಬಂಧುಶ್ರೀಯ ರೂಪವನ್ನು ಕಂಡು ಅರಸನ ಮನಸ್ಸು ಅವಳಲ್ಲಿ ನೆಟ್ಟಿತು; ಅವಳನ್ನು ಮದುವೆಯಾಗಬೇಕೆಂದು ಆಸೆ ಹೆಚ್ಚಿತು. ಹಾಗೆಯೇ ಅರಸನು ಸುಬಂಧುಶ್ರೀಯನ್ನೇ ನೆನಸುತ್ತ ತನ್ನ ಅರಮನೆಗೆ ಹಿಂದಿರುಗಿದನು.

ಅರಮನೆಗೆ ಬಂದ ಅರಸು ತನ್ನ ಹೆಗ್ಗಡೆಗಳನ್ನು ಸೆಟ್ಟಿಯ ಮನೆಗೆ ಕಳುಹಿಸಿ, ಸೆಟ್ಟಿಯ ಮಗಳನ್ನು ತನಗೆ ಕೊಡಬೇಕೆಂದು ಕೇಳಿಸಿದನು. ಹೆಗ್ಗಡೆಗಳ ಮಾತು ಕೇಳಿದ ಗುಣಪಾಲ ಸೆಟ್ಟಿ ಬೆರಗುಗೊಂಡನು. "ಅರಸಿಗಿಲ್ಲದ ಕನ್ನೆ ಇನ್ನಾರಿಗೆ" ಎಂದು ಹೇಳಿ ಹೆಗ್ಗಡೆಗಳನ್ನು ಸನ್ಮಾನಿಸಿ ಕಳುಹಿಸಿದನು.

ಹೆಗ್ಗಡೆಗಳು ಹೋದ ಮೇಲೆ ಸೆಟ್ಟಿ "ನಾನು ಮಗಳನ್ನು ಜೈನ ಮತದವನಲ್ಲದ ಅರಸನಿಗೆ ಕೊಟ್ಟು, ಮಗಳನ್ನೂ ತನ್ನನ್ನೂ ಕೆಡಿಸಿಕೊಳ್ಳಲಾರೆನು. ಆದರೂ ಮಗಳ ಮನಸ್ಸು ಹೇಗಿದೆ ಎಂದು ವಿಚಾರಿಸಬೇಕು" ಎಂದು ಮನಸ್ಸಿನಲ್ಲಿ ಚಿಂತಿಸಿ, ಮಗಳನ್ನೂ ಹೆಂಡತಿಯನ್ನೂ ಬಳಿಗೆ ಕರೆದನು; ಅರಸನ ಇಚ್ಛೆಯನ್ನು ಮಗಳಿಗೂ ಹೆಂಡತಿಗೂ ತಿಳಿಸಿದನು. ಸೆಟ್ಟಿಯ ಹೆಂಡತಿ ಗಂಡನ ಮಾತು ಕೇಳಿ "ನಿಮ್ಮ ಬುದ್ಧಿಯೆಲ್ಲಾ ಎಲ್ಲಿ ಹೋಯಿತು? ಜಿನಧರ್ಮಿಯಲ್ಲದವನಿಗೆ ಮಗಳನ್ನು ಕೊಡುವುದೆಂದ

ರೇನು? ನನಗೇನೂ ಹೊಳೆಯದು. ಒಂದು ವೇಳೆ ನೀವು ನನ್ನ ಮಾತು ಮೀರಿ ಮಗಳನ್ನು ಅರಸನಿಗೆ ಕೊಡುವುದಾದರೆ ನನಗೆ ಈ ಸಂಸಾರ ಸಾಕು. ನಾನು ಮನೆ ಬಿಟ್ಟು ಬಸದಿಯನ್ನು ಸೇರುವೆನು" ಎಂದು ತನ್ನ ಮನದ ನಿಶ್ಚಯವನ್ನು ತಿಳಿಸಿದಳು. ತಾನು ಅರಸನ ಅರಸಿಯಾಗಬೇಕೆಂಬ ಮಾತು ಕೇಳಿ ಸುಬಂಧುಶ್ರೀ "ಅಪ್ಪಾ! ಕಂಚನ್ನು ಬಿಟ್ಟು ಓಡನ್ನು ಹಿಡಿವ, ನಂಟರನ್ನು ಬಿಟ್ಟು ಹಗೆಯನ್ನು ಸೇರುವ, ಕುದುರೆಯನ್ನು ಬಿಟ್ಟು ನಾಯ ಮೇಲೆ ಸವಾರಿ ಮಾಡುವ ಮರುಳರಂತೆ, ನಾನು ಜಿನಧರ್ಮವನ್ನು ಬಿಟ್ಟು ಕುಧರ್ಮಿಯನ್ನು ಎಂದಿಗೂ ಮದುವೆಯಾಗಲಾರೆ" ಎಂದು ತನ್ನ ಮನದ ಅಭಿಪ್ರಾಯವನ್ನು ಖಂಡಿತವಾಗಿ ಉಸುರಿ ಬಿಟ್ಟಳು. ಸೆಟ್ಟಿಗೆ ಮಗಳ ಮಾತು ಕೇಳಿ ಬಹಳ ಸಂತೋಷವಾಯಿತು.

ಇನ್ನು ತಾನು ಈ ನಗರದಲ್ಲಿದ್ದರೆ ಅರಸನಿಂದ ತೊಂದರೆ ತಪ್ಪದು ಎಂದು ಗುಣಪಾಲ ಸೆಟ್ಟಿ ತನ್ನ ಸಮಸ್ತ ವಸ್ತುವಾಹನ ಸಂಪತ್ತನ್ನೂ ತೊರೆದು, ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಊರನ್ನು ಬಿಡಬೇಕೆಂದು ನಿಶ್ಚಯಿಸಿದನು. ಆದರೆ ಹೆಂಡತಿ ತುಂಬಿದ ಗರ್ಭಿಣಿಯಲ್ಲವೇ? ಅವಳನ್ನು ಕರಕೊಂಡು ಹೋಗುವುದೆಲ್ಲಿಗೆ? ಅದಕ್ಕಾಗಿ ಹೆಂಡತಿಯನ್ನು ತನ್ನ ಗೆಳೆಯನಾದ ಶ್ರೀದತ್ತ ಸೆಟ್ಟಿಯ ಮನೆಯಲ್ಲಿ ಬಿಟ್ಟು, ತಾನು ಮಗಳನ್ನು ಕರಕೊಂಡು, ಹಲವು ದಿನಗಳ ಪ್ರಯಾಣ ಮಾಡಿ ಕೌಶಾಂಬೀಪುರವನ್ನು ಸೇರಿದನು.

ಗುಣಪಾಲ ಸೆಟ್ಟಿ ತನ್ನ ಸಕಲ ಸಂಪತ್ತನ್ನೂ ತೊರೆದು ಹೆಂಡತಿ ಮಕ್ಕಳೊಡನೆ ದೇಶಾಂತರಕ್ಕೆ ಹೋದನೆಂದು ಕೇಳಿ ವಿಶ್ವಂಭರ ಮಹಾರಾಜನು ಆಶ್ಚರ್ಯಗೊಂಡನು. ಸೆಟ್ಟಿಗೆ ಐಶ್ವರ್ಯಕ್ಕಿಂತ ಧರ್ಮವೇ ಮೇಲಾದುದರಿಂದ ಅವನು ಊರು ಬಿಟ್ಟು ಹೋದನೆಂದು ಮಂತ್ರಿಗಳು ಹೇಳಿದ ಮಾತು ಕೇಳಿ ಅರಸನು ಜಿನಧರ್ಮದ ಮಹತ್ವವಷ್ಟಿದೆಯಲ್ಲಾ ಎಂದು ವಿಸ್ಮಯಗೊಂಡನು. ಮತ್ತು ಸೆಟ್ಟಿಯ ಮನೆಗೂ ಐಶ್ವರ್ಯಕ್ಕೂ ಆಸ್ತಿಪಾಸ್ತಿಗೂ ಕಾವಲಿರಿಸಿ, ಸೆಟ್ಟಿಯನ್ನು ಹುಡುಕಿಕೊಂಡು ಬರಲು ದೂತರನ್ನು ಅಟ್ಟಿದನು.

ಗರ್ಭಿಣಿಯಾದ ಧನಶ್ರೀ ಶ್ರೀದತ್ತ ಸೆಟ್ಟಿಯ ಮನೆಯಲ್ಲಿ ಕಾಲ ಕಳೆಯುತ್ತಿದ್ದಾಗ ಒಂದು ದಿನ ಶಿವಗುಪ್ತರೆಂಬ ಆಚಾರ್ಯರು ಶ್ರೀಗುಪ್ತರೆಂಬ ಶಿಷ್ಯರೊಡನೆ ಶ್ರೀದತ್ತ ಸೆಟ್ಟಿಯ ಮನೆಗೆ ಬಂದರು. ಶ್ರೀದತ್ತನು ಆಚಾರ್ಯರನ್ನು ಭಕ್ತಿಯಿಂದ ಪೂಜಿಸಿ ಸತ್ಕರಿಸಿದನು. ಆಗ ಧನಶ್ರೀಯೂ ಅಲ್ಲಿ ಬಂದು ಆಚಾರ್ಯರಿಗೆ ವಂದಿಸಿ ಹರಕೆ ಪಡೆದು ಹೋದಳು. ಧನಶ್ರೀಯನ್ನು ಕಂಡ ಶಿಷ್ಯ ಶ್ರೀಗುಪ್ತರು "ಈ ಸ್ತ್ರೀ ಯಾರು? ಇವಳು ಈ ಮನೆಯವಳಂತೆ ಕಾಣುವುದಿಲ್ಲ. ಇವಳಿಲ್ಲಿಗೆ ಬರಲು ಕಾರಣವೇನು?" ಎಂದು ಗುರುಗಳಾದ ಶಿವಗುಪ್ತರನ್ನು ಕೇಳಿದರು. ಅದಕ್ಕೆ ಗುರು "ಈಕೆ ಗುಣಪಾಲ ಸೆಟ್ಟಿಯ ಹೆಂಡತಿ, ಜಿನಧರ್ಮಪರಾಯಣೆ, ಧರ್ಮಪಾಲನೆಗಾಗಿಯೇ ಈಕೆಯ ಗಂಡ ಇವಳನ್ನಿಲ್ಲಿ ಬಿಟ್ಟು ಹೋಗಿದ್ದಾನೆ. ಇವಳು ಹೆರುವ ಮಗು ಈ ನಾಡಿನ ಆಳರಸನಾಗುವನು" ಎಂದು ಭವಿಷ್ಯ ನುಡಿದರು. ಈ ಮಾತು ಬಳಿಯಲ್ಲಿದ್ದ ಶ್ರೀದತ್ತ ಸೆಟ್ಟಿಯ ಕಿವಿಗೆ ಬಿತ್ತು. ಅವನು "ಪೂರ್ವ ವೈರದ ಕಾರಣದಿಂದ ಈಕೆ ಹೆರುವ ಮಗು ಎಂದೆಂದಿಗೂ ಈ ನಾಡಿನ ಅರಸಾಗದಂತೆ ನೋಡಿಕೊಳ್ಳಬೇಕೆ"ಂದು ಮನದಲ್ಲೇ ನಿಶ್ಚಯಿಸಿದನು.

ಪೂರ್ವವೈರ ಮನದಲ್ಲಿ ಬೆಳೆದ ಶ್ರೀದತ್ತ ಸೆಟ್ಟಿ ಧನಶ್ರೀಯ ಸೇವೆಗೆಂದು ನಿಂತ ದಾಸಿಯರಿಬ್ಬರನ್ನು ಬಳಿಗೆ ಕರೆದು ತನ್ನ ಮನೋಗತವನ್ನು ಅವರಿಗೆ ತಿಳಿಸಿ ಬೇಕಾದಷ್ಟು ಹಣ ಕೊಟ್ಟು, "ಧನಶ್ರೀ ಹೆತ್ತೊಡನೆ ಹುಟ್ಟಿದ ಮಗುವಿನ ವಿಚಾರವನ್ನು ಆಕೆಗೆ ತಿಳಿಸದೆ ತನಗೇ ತಿಳಿಸಬೇಕೆಂದು" ಹೇಳಿ ಅವರಿಂದ ಮಾತು ತೆಗೆದುಕೊಂಡನು.

ತಿಂಗಳು ತುಂಬಿ ಧನಶ್ರೀ ಗಂಡು ಮಗುವನ್ನು ಹೆತ್ತಳು. ದಾಸಿಯರು ಶ್ರೀದತ್ತನಿಗೆ ಈ ವಿಷಯವನ್ನು ತಿಳಿಸಿ, ಅವನ ಮಾತಿನಂತೆ, ಧನಶ್ರೀ ಹೆರುವಾಗಲೇ ಮಗುವಿಗೆ ಜೀವವಿರಲಿಲ್ಲವೆಂದು ಧನಶ್ರೀಗೆ ತಿಳಿಸಿದರು. ಧನಶ್ರೀ ದಾಸಿಯರ ಮಾತನ್ನು ನಂಬಿ ಮನದಲ್ಲೇ ಮರುಗಿದಳು. ಇಷ್ಟಾದ ಮೇಲೆ ಶ್ರೀದತ್ತ ಆ ಮಗುವನ್ನು ಒಬ್ಬ ಕಟುಕನ ಕೈಯಲ್ಲಿ ಕೊಟ್ಟು ಮಗುವನ್ನು ಎಲ್ಲಾದರೂ ಕೊಂಡು ಹೋಗಿ ಯಾರಿಗೂ ಅರಿಯದಂತೆ ಕೊಂದು ಬರಬೇಕೆಂದು ಹೇಳಿ, ಅವನ ಕೈಗೆ ತುಂಬಾ ಹಣ

ಸುರಿದು ಅವನನ್ನು ಕಳುಹಿಸಿ ಕೊಟ್ಟನು. ತಾನು ಸುಮ್ಮನೆ ಏನೂ ಅರಿಯದವನಂತೆ ಇದ್ದುಬಿಟ್ಟನು.

ಕಟುಕನು ಮಗುವನ್ನು ತೆಗೆದುಕೊಂಡು ಕಾಡಿಗೆ ಹೋದನು. ಅವನಾದರೂ ಮಕ್ಕಳನ್ನು ಕೊಲ್ಲುವಷ್ಟು ನೀಚನಾಗಿರಲಿಲ್ಲ. ಅವನು ಕಾಡಿನಲ್ಲಿ ಹರಿಯುತ್ತಿದ್ದ ಒಂದು ಹಳ್ಳದ ಬದಿಯಲ್ಲಿ ಎಳೆ ಚಿಗುರುಗಳನ್ನು ಹಾಸಿ, ಆ ಮಗುವನ್ನು ಅದರ ಮೇಲೆ ಮಲಗಿಸಿ, ಮಗುವಿನ ಅದೃಷ್ಟವಿದ್ದಂತಾಗಲಿ ಎಂದು ಊರಿಗೆ ಮರಳಿದನು. ಅದೇ ವೇಳೆಗೆ ಅಲ್ಲೇ ಸಮೀಪದಲ್ಲಿ ವ್ಯಾಪಾರಕ್ಕಾಗಿ ಪರದೇಶಕ್ಕೆ ಪ್ರಯಾಣ ಮಾಡುತ್ತಿದ್ದ ವ್ಯಾಪಾರಿಯೊಬ್ಬನು ಬೀಡುಬಿಟ್ಟಿದ್ದನು. ಹಳ್ಳದ ಬದಿಯಲ್ಲೇ ತಿರುಗಾಡುತ್ತ ಬಂದ ಸೆಟ್ಟಿಯ ಸೇವಕರಿಗೆ ಹೊಯಿಗೆಯ ಮೇಲೆ ಮಲಗಿ ಅಳುತ್ತಿದ್ದ ಮಗು ಕಾಣಿಸಿತು. ಆ ಸೇವಕರು ಮಗುವನ್ನೆತ್ತಿ ತಂದು ಸೆಟ್ಟಿಗೆ ಕೊಟ್ಟರು. ಮಕ್ಕಳಿಲ್ಲದ ಸೆಟ್ಟಿ ಮಗುವನ್ನು ಕಂಡು ನಿಧಿಯನ್ನು ಕಂಡ ಬಡವನಂತೆ ಆನಂದಪರವಶನಾದನು. ಮತ್ತು ತನಗೆ ದೇವರೇ ಮಗುವನ್ನು ಕೊಟ್ಟನೆಂದು ಯೋಚಿಸಿ ಮಗುವಿನ ಜನ್ಮೋತ್ಸವವನ್ನು ಬಹಳ ಸಂಭ್ರಮದಿಂದ ಆಚರಿಸಿದನು.

ಆ ಸೆಟ್ಟಿಯ ಹೆಂಡತಿ ಉಜ್ಜಯಿನಿಯ ಶ್ರೀದತ್ತ ಸೆಟ್ಟಿಯ ತಂಗಿ. ತನಗೆ ಪುತ್ರಲಾಭವಾದುದನ್ನು ಸೆಟ್ಟಿ ತನ್ನ ಭಾವ ಶ್ರೀದತ್ತ ಸೆಟ್ಟಿಗೂ ಹೇಳಿ ಕಳುಹಿಸಿದನು. ಈ ಸುದ್ದಿ ಕೇಳಿ ಶ್ರೀದತ್ತನಿಗೆ ತುಂಬಾ ಆಶ್ಚರ್ಯವಾಯಿತು. ತನ್ನ ತಂಗಿ ಗರ್ಭಿಣಿಯಾದ ಸಂಗತಿಯೊಂದೂ ಕೇಳಲಿಲ್ಲ. ಈಗ ಗಂಡು ಮಗುವಾಗಿದೆಯೆಂದರೇನೆಂದು ಶ್ರೀದತ್ತ ವಿಸ್ಮಿತನಾದ. ಹಾಗೆಯೇ ಕೂಡಲೇ ಹೊರಟು ಭಾವನ ಮನೆಗೆ ತಂಗಿಯನ್ನೂ ತಂಗಿಯ ಮಗುವನ್ನೂ ನೋಡಲೆಂದು ಹೊರಟು ಬಂದ. ತಂಗಿಯ ಮಗುವನ್ನು ನೋಡಿ ಶ್ರೀದತ್ತ ಸೆಟ್ಟಿಗೆ ಪರಮಾನಂದವಾಯಿತು. ಆದರೂ ಈ ಮಗು ನಿಜವಾಗಿಯೂ ತನ್ನ ತಂಗಿಯದೋ ಅಲ್ಲವೋ ಎಂಬ ಸಂಶಯ ಅವನಲ್ಲಿ ಮೂಡಿತು; ಮತ್ತು ಅವನು ವಿಚಾರಿಸಿದಾಗ ಆ ಮಗು ತಂಗಿಯ ನಿಜವಾದ ಮಗುವಲ್ಲವೆಂದೂ, ಕಾಡಿನ ಹಳ್ಳದ ಬದಿಯಲ್ಲಿ ಸೆಟ್ಟಿಗೆ ಸಿಕ್ಕಿತೆಂದೂ ಸತ್ಯ ಸಂಗತಿ ತಿಳಿಯಿತು. ಈ ವಿಷಯ

ತಿಳಿದ ಸೆಟ್ಟಿ ಬೇಸಗೆಯಲ್ಲಿ ಉಪ್ಪು ತಿಂದವರಂತೆ ಮಮ್ಮಲ ಮರುಗಿದನು. ಆದರೂ ಆ ಮರುಕವನ್ನು ಎದುರಿಗೆ ತೋರಿಸದೆ, ಭಾವನ ಒಪ್ಪಿಗೆ ಪಡೆದು ತಂಗಿಯನ್ನೂ ತಂಗಿಯ ಮಗುವನ್ನೂ ಕರಕೊಂಡು ಬಹಳ ಸಂಭ್ರಮದಿಂದ ಉಜ್ಜಯಿನಿಗೆ ತನ್ನ ಮನೆಗೆ ನಡೆದನು.

ತನ್ನ ಅಣ್ಣ ಶ್ರೀದತ್ತನ ಮನೆಯಲ್ಲಿ ರಾಧೆ ಮಗುವಿನೊಂದಿಗೆ ಸುಖವಾಗಿಯೇ ಇದ್ದಳು. ಅವಳಿಗೆ ಅಣ್ಣ ಶ್ರೀದತ್ತನ ಮರೆ ಮೋಸಗಳೊಂದೂ ತಿಳಿಯದು. ಶ್ರೀದತ್ತನು ತಂಗಿಯ ಮಗುವನ್ನು ನೋಡಿಕೊಳ್ಳಲು ಒಬ್ಬ ದಾದಿಯನ್ನು ನೇಮಿಸಿದ್ದನು. ಅವನು ದಾದಿಗೆ ಬೇಕಾದಷ್ಟು ಹಣಕೊಟ್ಟು, ಮಗು ರಾತ್ರಿ ಮೂರ್ಛೆ ರೋಗದಲ್ಲಿ ಸತ್ತು ಹೋಯಿತೆಂದು ಸುಳ್ಳು ಹೇಳಿಸಿ, ಮಗುವನ್ನೊಬ್ಬ ಮಾದಿಗನ ಕೈಯಲ್ಲಿ ಕೊಟ್ಟು, ಮಗುವನ್ನು ಕೊಂದು ಬಿಡೆಂದು ಹೇಳಿ, "ಮಗು ಸತ್ತು ಹೋಯಿತಲ್ಲಾ" ಎಂದು ಸುಮ್ಮಗೆ ಗೋಳೋ ಎಂದು ಅತ್ತನು. ತಂಗಿ ರಾಧೆಯೂ ಮಗು ನಿಜವಾಗಿಯೂ ಸತ್ತಿರಬೇಕೆಂದೇ ನಂಬಿ ದುಃಖವನ್ನು ತಡೆದುಕೊಂಡಳು.

ಮಗುವನ್ನು ಕೊಲ್ಲಲೆಂದು, ಮಗುವನ್ನು ಕಾಡಿಗೊಯ್ದ ಮಾದಿಗನಿಗೆ, ಮಗುವಿನ ಮೋರೆಯನ್ನು ಕಂಡು ಕನಿಕರವುಂಟಾಯಿತು; ಎದೆ ಒಸರಿತು. ಅವನು ಮಗುವನ್ನು ಕೊಲ್ಲಲಾರದೆ ಕಾಡಿನಲ್ಲಿ ಒಂದು ಕೆರೆಯ ಬಳಿ ಹುಲ್ಲುಹಾಸಿನ ಮೇಲೆ ಮಲಗಿಸಿ ಹೊರಟುಹೋದನು. ಕೆರೆಗೆ ನೀರು ಕುಡಿಸಲಿಕ್ಕೆ ದನಕರುಗಳನ್ನು ಹೊಡೆದುಕೊಂಡು ಬಂದ ಗೋಪಾಲಕರಿಗೆ ಆ ಮಗು ಸಿಕ್ಕಿತು. ಅವರು ಬಹಳ ಪ್ರೀತಿಯಿಂದ ಆ ಮಗುವನ್ನೆತ್ತಿಕೊಂಡು ತಮ್ಮ ಗೊಲ್ಲಹಳ್ಳಿಗೆ ಹೋಗಿ ತಮ್ಮ ಗುರಿಕಾರನ ಕೈಗೆ ಮಗುವನ್ನೊಪ್ಪಿಸಿದರು. ಗೊಲ್ಲರ ಗುರಿಕಾರನು ಮಗು ಸಿಕ್ಕಿದ ಸಂತೋಷಕ್ಕಾಗಿ ದೊಡ್ಡ ಹಬ್ಬ ಮಾಡಿದನು ಮತ್ತು ಮಗುವಿಗೆ ಧನಕೀರ್ತಿಯೆಂದು ನಾಮಕರಣ ಮಾಡಿದನು. ಧನಕೀರ್ತಿ ಗೊಲ್ಲರ ಹಳ್ಳಿಯಲ್ಲಿ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿದ್ದನು. ಧನಕೀರ್ತಿ ಬೆಳೆದು ಪ್ರಾಯಕ್ಕೆ ಬಂದನು. ಅವನು ಬಹಳ ಬುದ್ಧಿವಂತನೂ ಜಾಣನೂ ಆಗಿದ್ದನು. ಗುಣವಂತನಾದ ಆ ಧನಕೀರ್ತಿಯನ್ನು ಆ ಹಳ್ಳಿಯ ಗೊಲ್ಲರೆಲ್ಲ ಒಟ್ಟುಕೂಡಿ ತಮ್ಮ ಯಜಮಾನನನ್ನಾಗಿ ಸ್ವೀಕರಿಸಿದರು. ಹೀಗೆ ಧನಕೀರ್ತಿ ಗೊಲ್ಲಹಳ್ಳಿಯ ಗೋಪಾಲಕರಿಗೆ ಪ್ರೀತಿಪಾತ್ರನಾಗಿ ನಡೆಯುತ್ತಿದ್ದನು.

ಇಷ್ಟಾಗುವಲ್ಲಿ ಶ್ರೀ ದತ್ತಸೆಟ್ಟಿಯ ಮಗಳ ಮದುವೆಯ ದಿನ ಹತ್ತಿರ ಬಂದಿತು. ಮದುವೆಗೆ ತುಪ್ಪ ತರಲೆಂದು ಶ್ರೀದತ್ತಸೆಟ್ಟಿ ತಾನೇ ಸ್ವತಃ ಗೊಲ್ಲ ಹಳ್ಳಿಗೆ ನಡೆದನು. ಅಲ್ಲಿ ಗೊಲ್ಲರ ಒಡೆಯನಾದ ಧನಪಾಲನನ್ನು ಕಂಡನು. ಧನಪಾಲನನ್ನು ಕಂಡೊಡನೆ ಶ್ರೀದತ್ತಸೆಟ್ಟಿಯ ಮನದಲ್ಲಿ ಏನೋ ಸಂಶಯ ಬಂತು. ತಾನು ಕೊಲ್ಲಲು ಯೋಚಿಸಿದ ಬಾಲಕನೇ ಇವನೆಂಬ ಸಂಶಯ ಬಲವಾಯಿತು. ಶ್ರೀದತ್ತ ಆ ಸಂಶಯವನ್ನು ಎದುರಿಗೆ ತೋರಿಸದೆ, ಗೊಲ್ಲರ ಮುದುಕನನ್ನು ಕರೆದು "ಅಜ್ಜಾ! ನನಗೊಂದು ಅಗತ್ಯದ ಕೆಲಸವಿದೆ. ಆ ಕೆಲಸಕ್ಕೆ ನಿನ್ನ ಈ ಧನಪಾಲನೇ ಯೋಗ್ಯನು. ನನ್ನ ಒಂದು ಪತ್ರವನ್ನು ಮನೆಗೆ ಮುಟ್ಟಿಸಬೇಕಾಗಿದೆ" ಎಂದು ಹೇಳಿ, ಈ ಕಾಗದ ತರುವವನನ್ನು ಏನಾದರೂ ಉಪಾಯದಿಂದ ಕೊಂದುಬಿಡಬೇಕು ಎಂಬ ಅರ್ಥದ ಕಾಗದ ಬರೆದು ಧನಪಾಲನ ಕೈಯಲ್ಲಿ ಕೊಟ್ಟು, "ಬೇಗನೇ ಬಾ" ಎಂದು ಹೇಳಿ ಕಳುಹಿಸಿದನು. ಮತ್ತು ತಾನು ಕೆಲವು ದಿನಗಳ ವರೆಗೆ ಗೊಲ್ಲ ಹಳ್ಳಿಯಲ್ಲೇ ನಿಲ್ಲುವೆನೆಂದು ನಿಶ್ಚಯಿಸಿದನು.

ಧನಕೀರ್ತಿ ಗೊಲ್ಲರ ಹಳ್ಳಿಯಿಂದ ಉಜ್ಜಯಿನಿಗೆ ಪ್ರಯಾಣ ಬೆಳೆಸಿದನು. ಅವನು ಉಜ್ಜಯಿನಿಯ ಸಮೀಪದ ಕ್ಷಿಪ್ರಾನದಿಯ ತೀರಕ್ಕೆ ಬರುವಾಗ ಹೊತ್ತು ಮಧ್ಯಾಹ್ನವಾಗಿತ್ತು. ಅವನು ನದಿಗೆ ಇಳಿದು ಕೈಕಾಲು ತೊಳೆದು, ತಾನು ತಂದಿದ್ದ ಬುತ್ತಿಯನ್ನು ಉಂಡು, ಅಲ್ಲೇ ಒಂದು ಮರದ ಕೆಳಗೆ ತುಸು ವಿಶ್ರಮಿಸಿಕೊಂಡನು. ದಾರಿ ನಡೆದು ಬಳಲಿದ ಅವನಿಗೆ ನಿದ್ರೆ ಹತ್ತಿತು. ಅದೇ ವೇಳೆಗೆ ವೃಗಸೇನೆಯೆಂಬ ವಣಿಕೆಯೊಬ್ಬಳು ತನ್ನ ಸಖಿಯರೊಡನೆ ಸ್ನಾನಕ್ಕಾಗಿ ನದೀತೀರಕ್ಕೆ ಬಂದಿದ್ದಳು. ಅವಳು ಮರದ ಅಡಿಯಲ್ಲಿ ಮಲಗಿ ನಿದ್ರಿಸುತ್ತಿದ್ದ ಧನಕೀರ್ತಿಯನ್ನು ನೋಡಿದಳು. ಹಾಗೆ ನೋಡುತ್ತಿರುವಾಗ ಅವನು ಸೆರಗಿನಲ್ಲಿ ಕಟ್ಟಿಕೊಂಡಿದ್ದ ಪತ್ರ ಅವಳ ಕಣ್ಣಿಗೆ ಬಿತ್ತು. ಅವಳು ಆ ಪತ್ರವನ್ನೋದಿದಳು. ವಿಷಯ ಭಯಂಕರವಾಗಿತ್ತು. ಕೂಡಲೇ ಅವಳು ಆ ಪತ್ರವನ್ನು ಹರಿದು ಹಾಕಿ, ಇನ್ನೊಂದು ತಾಳೆಯೋಲೆಯನ್ನು ತೆಗೆದುಕೊಂಡು, ತನ್ನ ಕಣ್ಣಿಗೆ ಹಾಕುವ ಕಾಡಿಗೆಯಿಂದ "ಇವನು ಬಹಳ ಒಳ್ಳೆಯವನು. ಇವನಿಗೆ ನಿನ್ನ ತಂಗಿಯನ್ನು ನನ್ನ ಮಗಳನ್ನು ಕೊಟ್ಟು ಕೂಡಲೇ ಮದುವೆಮಾಡು" ಎಂದು ಗುಣಪಾಲ ಸೆಟ್ಟಿ

ತನ್ನ ಮಗನಿಗೆ ಕಾಗದ ಬರೆದುದೆಂಬ ಅರ್ಥ ಬರುವಂತೆ ಪತ್ರ ಬರೆದು ಧನಪಾಲನ ಸೆರಗಿನಲ್ಲಿ ಕಟ್ಟಿ ತನ್ನ ದಾರಿ ಹಿಡಿದಳು.

ಧನಕೀರ್ತಿ ಎಚ್ಚರಗೊಂಡು ನದಿಯಲ್ಲಿ ಮುಖ ತೊಳೆದು, ನೀರು ಕುಡಿದು ಪಟ್ಟಣದ ಒಳ ಹೊಕ್ಕು ಶ್ರೀದತ್ತ ಸೆಟ್ಟಿಯ ಮನೆಗೆ ಹೋದನು; ಮತ್ತು ತಾನು ತಂದ ಓಲೆಯನ್ನು ಶ್ರೀದತ್ತನ ಮಗನ ಕೈಗಿತ್ತನು. ತಂದೆ ಬರೆದ ಪತ್ರವನ್ನೋದಿ ಅವನಿಗೆ ತುಂಬಾ ಸಂತೋಷವಾಯಿತು; ಮಾತ್ರವಲ್ಲ ಅಲ್ಲೇ ಬಳಿ ಇದ್ದ ಜ್ಯೋತಿಷಿಗಳೊಡನೆ ವಿಚಾರಿಸಿದಾಗ ಅವರು ಆ ದಿನವೇ ಮದುವೆಗೆ ಸುದಿನವೆಂದು ಹೇಳಿದರು. ಜ್ಯೋತಿಷಿಗಳ ಮಾತಿನಂತೆ ಶ್ರೀದತ್ತನ ಮಗಳು ಶ್ರೀಮತಿಯನ್ನು ಧನಪಾಲನಿಗೆ ಮದುವೆಯಾಯಿತು. ಧನ ಪಾಲನು ಶ್ರೀದತ್ತನ ಮಗಳನ್ನು ಮದುವೆಯಾಗಿ ಸಂತೋಷಪರನಾದನು.

ಶ್ರೀದತ್ತನು ನಾಲ್ಕಾರು ದಿನ ಕಳೆದ ಮೇಲೆ ಊರಿಗೆ ಹಿಂದಿರುಗಿದನು. ಧನಪಾಲನನ್ನು ಉಪಾಯದಿಂದ ಕೊಲ್ಲಿಸಿದೆನೆಂದು ಸಂತೋಷದಿಂದಿದ್ದ ಅವನಿಗೆ ಮನೆಗೆ ಬಂದಾಗ ಸಿಡಿಲು ಬಡಿದಂತಾಯಿತು. ತಾನೊಂದು ನೆನೆದರೆ ದೈವ ಬೇರೊಂದು ನೆನೆದಿತ್ತು. ಕೆಟ್ಟುದನ್ನು ಕೆಳೆಯನಿಗೂ ತಿಳಿಸಬಾರದು, ಶ್ರೀಮತಿ ವಿಧವೆಯಾದರೂ ಚಿಂತೆಯಿಲ್ಲ, ಧನಪಾಲನನ್ನು ಕೊಂದೇ ತೀರಬೇಕೆಂದು ಅವನು ನಿಶ್ಚಯಿಸಿದನು ಮತ್ತು ಕಟುಕನನ್ನು ಕರೆದು, ಇಂದು ನಾಗಾಲಯಕ್ಕೆ ಚರು ತರುವವನನ್ನು ಹಿಂದೆ ಮುಂದೆ ವಿಚಾರಿಸದೆ ಕೊಂದು ಹಾಕಿ ಬಿಡೆಂದು ಹೇಳಿ, ಅವನ ಕೈ ಬೆಚ್ಚಗೆ ಮಾಡಿ ಕಳುಹಿಸಿ ಕೊಟ್ಟನು. ಆ ಮೇಲೆ ಶ್ರೀದತ್ತನನ್ನು ಒಳಗೆ ಕರೆದು 'ಮದುವೆಯಾದ ನಿನಗೂ ಶ್ರೀಮತಿಗೂ ಎಂದೆಂದಿಗೂ ಸುಖವಾಗಿರುವಂತೆ, ನೀನು ಇಂದಿನಿರುಳು ನಾಗಾಲಯಕ್ಕೆ ಹೋಗಿ ನಾಗನಿಗೆ ಚರುವಿಟ್ಟು ಬರಬೇಕು. ಇದು ನಮ್ಮ ಕುಲದ ಕಟ್ಟಳೆ' ಎಂದು ಹೇಳಿದನು. ಧನಕೀರ್ತಿಯೂ ಮಾವನ ಮಾತನ್ನೊಪ್ಪಿಕೊಂಡನು.

ಸಂಜೆಯಾಯಿತು ಧನಕೀರ್ತಿ ಚರುವನ್ನು ಹಿಡಿದುಕೊಂಡು ನಾಗಾಲಯಕ್ಕೆ ಹೊರಟನು. ದಾರಿಯಲ್ಲಿ ಹೆಂಡತಿಯ ಅಣ್ಣ ಮಹಾಬಲನು ಎದುರು ಸಿಕ್ಕಿದನು. ಅವನು ಹೊಸತಾಗಿ ಮದುವೆಯಾದವನು ಒಬ್ಬನೇ ನಾಗಾಲಯಕ್ಕೆ ಹೋಗುವುದು ಉಚಿತವಲ್ಲವೆಂದು ಯೋಚಿಸಿ, ತಾನೇ

ಚರುವಿಟ್ಟು ಬರುವೆನೆಂದು ಹೇಳಿ ಧನಪಾಲನ ಕೈಯಿಂದ ಚರುವನ್ನು ತೆಕ್ಕೊಂಡು, ಅವನನ್ನು ಹಿಂದೆ ಮನೆಗೆ ಕಳುಹಿಸಿ, ತಾನೊಬ್ಬನೇ ನಾಗಾಲಯಕ್ಕೆ ಹೊರಟನು. ಮಹಾಬಲನು ಚರು ಹಿಡಿದುಕೊಂಡು ನಾಗಾಲಯದ ಒಳ ಹೊಕ್ಕುದೇ ತಡ, ಅಲ್ಲಿ ಕಾದು ಕುಳಿತಿದ್ದ ಕಟುಕನು ಹಿಂದೆ ಮುಂದೆ ವಿಚಾರಿಸದೆ ಮಹಾಬಲನನ್ನು ಕೊಂದೇ ಹಾಕಿದನು. ಹೀಗೆ ತಂದೆಯ ಮೋಸಕ್ಕೆ ಮಗನು ತಲೆ ಕೊಡಬೇಕಾಯಿತು.

ಧನಕೀರ್ತಿ ರಾತ್ರಿ ಎರಡು ಗಳಿಗೆಯಾಗುವಾಗ ಅಲ್ಲಿ ಇಲ್ಲಿ ತಿರುಗಾಡಿ ಮಾವನ ಮನೆಗೆ ಹಿಂದಿರುಗಿದನು. ಇದನ್ನು ಕಂಡ ಶ್ರೀದತ್ತ ಸೆಟ್ಟಿ ಬೆಚ್ಚಿ ಬಿದ್ದನು. ಆದರೂ ಅದನ್ನು ಹೊರಗೆ ತೋರಿಸಿಕೊಳ್ಳದೆ, "ನಾಗಾಲಯಕ್ಕೆ ಹೋಗಿ ಬಂದೆಯಾ" ಎಂದು ಅಳಿಯನನ್ನು ವಿಚಾರಿಸಿದನು. ಅದಕ್ಕೆ ಧನಕೀರ್ತಿ ಮಹಾಬಲನು ನಾಗಾಲಯಕ್ಕೆ ಹೋದ ಸಂಗತಿಯನ್ನೆಲ್ಲಾ ವಿವರಿಸಿ ಹೇಳಿದನು. ಈ ಮಾತು ಕೇಳಿ ಶ್ರೀದತ್ತನಿಗೆ ಸಿಡಿಲು ಬಡಿದಂತಾಯಿತು. ಅವನು ಕೂಡಲೇ ನಾಗಾಲಯಕ್ಕೆ ಓಡಿ ಬಂದು ಅಲ್ಲಿ ಸತ್ತು ಬಿದ್ದಿದ್ದ ಮಗನನ್ನು ಕಂಡು ಹಲವು ಹಂಬಲಿಸಿ, ತನ್ನ ಮಗನನ್ನು ಯಾರೋ ನೀಚರು ಕೊಂದು ಹಾಕಿದರೆಂದು ಗೋಳಿಟ್ಟು ಅತ್ತನು.

ಮಗನು ಸತ್ತರೂ ಶ್ರೀದತ್ತನಿಗೆ ಧನಕೀರ್ತಿಯ ಮೇಲಿನ ಹಗೆ ತಣಿಯಲಿಲ್ಲ. ಅವನು ಧನಕೀರ್ತಿಯನ್ನು ಹೇಗಾದರೂ ಮಾಡಿ ಕೊಲ್ಲಲೇ ಬೇಕೆಂದು ಬಗೆದನು. ಅಂತೆಯೇ ತನ್ನ ದುರಾಸೆಯನ್ನು ಹೆಂಡತಿಗೆ ತಿಳಿಸಿ, ಹೇಗಾದರೂ ಮಾಡಿ ಅವನನ್ನು ಕೊಲ್ಲಲೇ ಬೇಕೆಂದು ಅವಳನ್ನು ಒಡಂಬಡಿಸಿದನು. ವಿಷಕೊಟ್ಟು ಧನಕೀರ್ತಿಯನ್ನು ಮುಗಿಸಿ ಬಿಡುವುದೆಂದು ಆ ಗಂಡ ಹೆಂಡತಿ ನಿರ್ಧರಿಸಿದರು.

ಶ್ರೀದತ್ತನ ಹೆಂಡತಿ ವಿಶಾಖೆ ವಿಷ ಬೆರಸಿದ ಲಡ್ಡುಗೆಗಳನ್ನು ತಯಾರಿಸಿದಳು ಮತ್ತು ಮಗಳನ್ನು ಕರೆದು ನಿನ್ನ ಗಂಡನು ಸಂಜೆ ಬಂದಾಗ ಫಲಾಹಾರಕ್ಕೆಂದು ಲಡ್ಡು ತಯಾರಿಸಿದ್ದೇನೆಂದು ಹೇಳಿ ಮಗಳ ಕೈಯಲ್ಲಿ ವಿಷದ ಲಡ್ಡುಗೆಗಳನ್ನಿತ್ತಳು. ಆ ದಿನ ಧನಕೀರ್ತಿ ಹೊರಗೆ ತಿರುಗಾಡಲು ಹೋದವನು ಬರುವ ಮುಂಚೆ ಶ್ರೀದತ್ತನು ಮನೆಗೆ ಬಂದನು. ಮನೆಯಲ್ಲಿ ಶ್ರೀದತ್ತನ ಹೆಂಡತಿಯಿರಲಿಲ್ಲ. ತಂದೆ ಮನೆಗೆ ಬಂದಾಗ ಮಗಳು ಗಂಡನಿ

ಗೆಂದು ಇರಿಸಿದ್ದ ಲಡ್ಡುಗೆಗಳನ್ನು ತಂದೆಗೆ ಕೊಟ್ಟಳು. ಲಡ್ಡುಗೆಗಳನ್ನು ತಿಂದು ನೀರು ಕುಡಿದ ಶ್ರೀದತ್ತ ಆಗಲೇ ವಿಷವೇರಿ ಮೂರ್ಛೆ ಹೋದನು. ಮಗಳು ಶ್ರೀಮತಿ ಇದನ್ನು ಕಂಡು ಗೋಳೋ ಎಂದು ಅಳತೊಡಗಿದಳು. ಆಗ ಧನಕೀರ್ತಿಯೂ ಇದೇನೆಂದು ಬಂದ. ನೆರೆಮನೆಯಲ್ಲಿದ್ದ ವಿಶಾಖೆ ಅಳಿಯ ಸತ್ತನೆಂದು ಯೋಚಿಸಿ ಹೊರಗೆ ತೋರಿಸದೆ ಮನೆಗೆ ಓಡಿ ಬಂದಳು. ಬಂದು ನೋಡುತ್ತಾಳೆ! ಅಳಿಯನಲ್ಲ; ಗಂಡ ನೆಲದ ಮೇಲೆ ಮೂರ್ಛೆ ಹೋಗಿ ಬಿದ್ದಿದ್ದಾನೆ! ವಿಶಾಖೆ ಇದನ್ನು ಕಂಡು ಎದೆಗೆ ಬಡಿಯುತ್ತಾ ತನ್ನ ಗಂಡನು ಮಾಡಿದ ನೀಚಕೃತ್ಯಗಳನ್ನೆಲ್ಲಾ ಹೇಳಿ ಹೇಳಿ ಅತ್ತಳು; ಅಷ್ಟೇ ಅಲ್ಲ, ಅಲ್ಲಿ ಉಳಿದಿದ್ದ ವಿಷದ ಲಡ್ಡುಗೆಯನ್ನು ತೆಗೆದುಕೊಂಡು ತಾನೂ ತಿಂದು ಗಂಡನ ದಾರಿಯನ್ನು ಹಿಡಿದಳು. ಧನಕೀರ್ತಿ ಮತ್ತು ಶ್ರೀಮತಿಯರು ಜಿನಧರ್ಮದ ಮಹಿಮೆಯಿಂದ ಬದುಕಿಕೊಂಡರು.

ಧನಕೀರ್ತಿಯ ಜಿನಧರ್ಮ ಪರಾಯಣತೆಯ ವೃತ್ತಾಂತ ಮಾಲವ ರಾಜನ ಕಿವಿಗೆ ಬಿತ್ತು. ಅವನು ಧನಕೀರ್ತಿಯನ್ನು ಅರಮನೆಗೆ ಬರಮಾಡಿಕೊಂಡನು. ಧನಕೀರ್ತಿ ಗುಣಪಾಲ ಸೆಟ್ಟಿಯ ಮಗನೆಂಬುದು ಮೊದಲೇ ಊರಿಗೆಲ್ಲಾ ತಿಳಿದಿತ್ತು. ತನ್ನ ಸೆಟ್ಟಿಯ ಮಗನನ್ನು ಕಂಡು ಮಾಲವ ರಾಜನಿಗೆ ತುಂಬಾ ಸಂತೋಷವಾಯಿತೆಂದು ಬೇರೆ ಹೇಳಬೇಕಾಗಿಲ್ಲವಷ್ಟೇ?

ಧನಕೀರ್ತಿಯ ಗುಣಗಳಿಗೆ ಮನಸೋತ ಮಾಲವ ರಾಜನು ತನ್ನ ಮಗಳಾದ ವಿಶ್ವಾವತಿಯನ್ನು ಅವನಿಗೆ ಮದುವೆ ಮಾಡಿಕೊಡಬೇಕೆಂದು ನಿಶ್ಚಯ ಮಾಡಿದನು. ಆ ವೇಳೆಗೆ ಸರಿಯಾಗಿ ಕೌಶಾಂಬಿಯಿಂದ ದೂತನೊಬ್ಬನು ಬಂದು ಗುಣಪಾಲ ಸೆಟ್ಟಿ ಕೌಶಾಂಬಿಯಲ್ಲಿರುವ ವೃತ್ತಾಂತವನ್ನು ತಿಳಿಸಿದನು. ಇದನ್ನು ಕೇಳಿದ ಮಾಲವ ರಾಜನು ಕೂಡಲೇ ದೂತರನ್ನು ಕೌಶಾಂಬಿಗೆ ಕಳುಹಿಸಿ, ಗುಣಪಾಲ ಸೆಟ್ಟಿಯನ್ನು ಬರಮಾಡಿಕೊಂಡನು; ಮತ್ತು ತಾನು ಜಾಗ್ರತೆಯಾಗಿ ಇರಿಸಿದ್ದ ಗುಣಪಾಲ ಸೆಟ್ಟಿಯ ಸಂಪತ್ತನ್ನೆಲ್ಲಾ ಅವನಿಗೆ ಕೊಟ್ಟು, ನೀನು ನನ್ನ ಗೆಳೆಯನಾಗಿಯೇ ಹಲವು ಕಾಲ ಬಾಳೆಂದು ಹೇಳಿದನು. ಗುಣಪಾಲನೂ ಅದನ್ನು ಸಂತೋಷದಿಂದ ಒಪ್ಪಿಕೊಂಡು ತನ್ನ ಮೊದಲಿನ ಮನೆಯಲ್ಲಿ ಹೆಂಡತಿಮಕ್ಕಳೊಡನೆ ವಾಸ

ಮಾಡತೊಡಗಿದನು. ಆ ಮೇಲೆ ಅರಸು ಮಗಳು ವಿಶ್ವಾನತಿಗೂ ಧನ ಕೀರ್ತಿಗೂ ಸಂಭ್ರಮದಿಂದ ವಿವಾಹ ಮಂಗಲವು ನೆರವೇರಿತು. ಮಾಲವ ರಾಜ ವಿಶ್ವಂಭರ ಮಹಾ ರಾಜನು ಮಗಳೊಡನೆ ಅರ್ಧರಾಜ್ಯವನ್ನು ಧನ ಕೀರ್ತಿಗೆ ಬಳುವಳಿಯಾಗಿ ಕೊಟ್ಟನು.

ಹೀಗಿರುವಾಗ ಒಮ್ಮೆ ಯಶೋಧರರೆಂಬ ಏಕ ವಿಹಾರಿಗಳು ಮಾಲವ ರಾಜನ ಮನೆಗೆ ಬಂದರು. ಗುಣಪಾಲ ಸೆಟ್ಟಿಯೇ ಮೊದಲಾದ ಸಕಲ ಶ್ರಾವಕರೂ ಮುನಿಗಳನ್ನು ಎದುರುಗೊಂಡು ಪೂಜಿಸಿದರು. ಮುನಿಗಳು ಸುಖಾಸೀನರಾದಾಗ ಗುಣಪಾಲ ಸೆಟ್ಟಿ ಮುನಿಗಳಿಗೆ ಕೈಮುಗಿದು, ಧನ ಕೀರ್ತಿಗೆ ಶ್ರೀವತ್ತ ಸೆಟ್ಟಿ ಅನ್ಯಾಯಗಳನ್ನು ಬಗೆಯಲು ಕಾರಣವೇನೆಂದು ನಿರೂಪಿಸಬೇಕೆಂದು ಕೇಳಿಕೊಂಡನು. ಅದಕ್ಕೆ ಮುನಿಗಳು ಹೀಗೆಂದು ಹೇಳಿದರು:—

ಶಿರಿಷ್ಯವೆಂಬ ಗ್ರಾಮದಲ್ಲಿ ಮೃಗಸೇನನೆಂಬ ಮೀಂಗುಲಿಗನು ಘಂಟೆ ಯೆಂಬ ಹೆಂಡತಿಯೊಡನೆ ವಾಸಮಾಡುತ್ತಿದ್ದನು. ಅವನು ಒಂದು ದಿನ ಮೀನು ಹಿಡಿಯಲೆಂದು ನದಿಗೆ ಹೋಗುತ್ತಿದ್ದಾಗ, ದಾರಿಯಲ್ಲಿ ಧರ್ಮ ಬೋಧೆ ಮಾಡುತ್ತಿದ್ದ ಋಷಿಗಳೊಬ್ಬರನ್ನು ಕಂಡನು. ತಾನು ಕ್ಷಣ ಹೊತ್ತು ಅಲ್ಲಿ ನಿಂತು ಧರ್ಮಶ್ರವಣ ಮಾಡಿದನು. ಅಲ್ಲಿ ನೆರೆದಿದ್ದ ಶ್ರಾವ ಕರೆಲ್ಲಾ ಧರ್ಮಶ್ರವಣ ಮುಗಿದು, ವ್ರತಗಳನ್ನು ಕೈಕೊಂಡು ತಂತಮ್ಮ ದಾರಿ ಹಿಡಿದು ಹೋದರು. ಆಗ ಮೃಗಸೇನನು ಋಷಿಗಳಿಗೆ ವಂದಿಸಿ ತನಗೂ ಒಂದು ವ್ರತವನ್ನು ಉಪದೇಶಿಸಬೇಕೆಂದು ಬೇಡಿಕೊಂಡನು. ಅದಕ್ಕೆ ಋಷಿಗಳು ಈ ಬೆಸ್ತನಿಂದ ಕಠಿನ ವ್ರತಗಳನ್ನಾಚರಿಸಲು ಸಾಧ್ಯ ವಿಲ್ಲವೆಂದು ಯೋಚಿಸಿ, "ನಿನಗೆ ಮೊದಲು ಸಿಕ್ಕಿದ ಮೀನನ್ನು ಕೊಲ್ಲದೆ ಬಿಟ್ಟು ಬಿಡು" ಎಂದು ಒಂದು ವ್ರತವನ್ನು ಕೊಟ್ಟರು.

ಬೆಸ್ತ ಮೃಗಸೇನನು ಋಷಿಗಳಿಗೆ ವಂದಿಸಿ ಮೀನು ಹಿಡಿಯಲು ನದಿಗೆ ಹೋದನು. ಅಲ್ಲಿ ಬಲೆ ಬೀಸಿದಾಗ ಬಲೆಯಲ್ಲಿ ಒಂದೇ ಒಂದು ಮೀನು ಬಂತು. ಅವನು ಆ ಮೀನನ್ನು ಅಲ್ಲೇ ಬಿಟ್ಟು, ತುಸು ಮುಂದೆ ಹೋಗಿ ಬಲೆ ಬೀಸಿದನು. ಅಲ್ಲಿಯೂ ಮೊದಲ ಮೀನೇ ಬಲೆಯಲ್ಲಿ ಸಿಕ್ಕಿಕೊಂಡಿತು. ಹೀಗೆ ಐದು ಬಾರಿ ಬಲೆ ಬೀಸಿಯೂ ಮೊದಲ ಮೀನೇ

ಬಂದುದರಿಂದ ಆ ದಿನ ವಿಶ್ರಾಸಿಲ್ಲದೆ ಬರಿಗೈಯಲ್ಲೇ ಮನೆಗೆ ಹಿಂದಿರುಗಿದನು. ಗಂಡನು ಬರಿಗೈಯಲ್ಲಿ ಮನೆಗೆ ಮರಳಿದುದನ್ನು ಕಂಡು ಹೆಂಡತಿ ಘಂಟಿ ಗಂಡನನ್ನು ಬಾಯಿಗೆ ಬಂದಂತೆ ಬಯ್ದು ಮನೆಯಿಂದ ಹೊರಗೆ ಅಟ್ಟಿದಳು. ಮೃಗಸೇನನು ಋಷಿಗಳ ಉಪದೇಶವನ್ನೇ ನೆನಸುತ್ತಾ ತನ್ನ ಗುಡಿಸಲ ಹೊರಗೆ ಬಂದು ಮರದ ಕೆಳಗೆ ಕುಳಿತನು. ನಡುರಾತ್ರಿಯಾದಾಗ ಆತನ ಕಾಲ ತೀರಿತೋ ಎನ್ನುವಂತೆ ಒಂದು ಸರ್ಪ ಬಂದು ಮೃಗಸೇನನನ್ನು ಕಚ್ಚಿತು; ಸರ್ಪದ ವಿಷವೇರಿ ಮೃಗಸೇನನು ಮಡಿದನು. ಆ ಮೃಗಸೇನನೇ ಈ ಧನಕೀರ್ತಿ ಆದಕಾರಣವೇ ಐದು ಕಂಟಕಗಳಿಂದ ಪಾರಾದುದು."

"ಅಷ್ಟೇ ಅಲ್ಲ; ಗಂಡನು ವಿಷವೇರಿ ಸತ್ತುದನ್ನು ಕಂಡು ಗಂಡನ ವ್ರತವನ್ನು ತಿಳಿದು ತಾನೂ ಪ್ರಾಣ ಬಿಟ್ಟು, ಸೆಟ್ಟಿಗೆ ಮಗಳಾಗಿ ಧನಕೀರ್ತಿಯ ಹೆಂಡತಿಯಾದಳು. ಆ ವಿಷಾನು ಮೃಗಸೇನೆ ಎಂಬ ಗಣಿಕೆಯಾಗಿ ಹುಟ್ಟಿ, ಸಿಂಪಾನದಿಯ ತೀರದಲ್ಲಿ ಮರೆದೊರಗಿದ್ದ ಧನಕೀರ್ತಿಯ ಬಳಿಯಿದ್ದ ಪತ್ರವನ್ನು ಬದಲಾಯಿಸಿ, ಪೂರ್ವದ ಉಪಕಾರಕ್ಕೆ ಪ್ರತ್ಯುಪಕಾರಗೈದಳು" ಎಂದು ಮೂವರ ಪೂರ್ವಭವದ ಕತೆಯನ್ನು ವಿವರಿಸಿದರು.

ಸತ್ಯವ್ರತ

ವೆಂಗಿ ಮಂಡಲ ಹೂತೋಟಗಳಿಂದಲೂ, ಕೈಹೊಲಗಳಿಂದಲೂ, ತಿಳಿಕೊಳಗಳಿಂದಲೂ ಮನೋಹರವಾಗಿ ತೋರುವುದು. ಆ ವೆಂಗಿ ಮಂಡಲದ ಪ್ರಧಾನಪುರ ಪ್ರತಿಪಾಲಪುರ. ಧನದನೆಂಬ ಅರಸು ಪ್ರತಿಪಾಲಪುರದ ಒಡೆಯ; ಜಿನಧರ್ಮಪರಾಯಣ.

ಪ್ರತಿಪಾಲಪುರದಲ್ಲಿ ಸಂಘಶ್ರೀ ಎಂಬ ಬೌದ್ಧಧಾರ್ಮಿಕನಿದ್ದನು. ಅವನಿಗೆ ಪರಮಸುಂದರಿಯಾದ ಕಮಲಶ್ರೀ ಎಂಬ ಮಗಳು. ಕಮಲಶ್ರೀಯ ರೂಪವೈಭವದ ಸುದ್ದಿ ಅರಸನ ಕಿವಿಹೊಕ್ಕಿತು. ಅರಸು ಧನದ ಒಂದು ದಿನ ತನ್ನ ಹೆಗ್ಗಡೆಗಳನ್ನು ಸಂಘಶ್ರೀಯ ಮನೆಗೆ ಕಮಲಶ್ರೀ

ಯನ್ನು ತನಗೆ ಕೊಡಬೇಕೆಂದು ಕೇಳಿ, ಹೇಳಿ ಕಳುಹಿಸಿದನು. ಅರಸನ ಮಾತಿಗೆ ಸಮ್ಮತಿಸಿ ಸಂಘಶ್ರೀ ಕಮಲಶ್ರೀಯನ್ನು ಅರಸನಿಗೊಪ್ಪಿಸಿದನು.

ತಾನು ಜಿನಧರ್ಮಾವಲಂಬಿಯಾಗಿದ್ದು ಅನ್ಯ ಧರ್ಮಾವಲಂಬಿಯಾದವಳನ್ನು ಮದುವೆಯಾಗಿರುವುದು ನೀತಿವಿರುದ್ಧವೆಂದು ಯೋಚಿಸಿ, ಧನದ ರಾಜನು ಕಮಲಶ್ರೀಗೆ ಆಗಾಗ ಜಿನಧರ್ಮವನ್ನು ಬೋಧಿಸಿ, ಅವಳ ಮನಸ್ಸನ್ನು ಸದ್ಧರ್ಮದ ಕಡೆಗೆ ತಿರುಗಿಸಿದನು. ಅರಸು ಅಷ್ಟಕ್ಕೇ ನಿಲ್ಲಿಸದೆ, ತನ್ನ ಪ್ರಿಯೆಯ ತಂದೆಯನ್ನು ತನ್ನ ಧರ್ಮಕ್ಕೇ ತಿರುಗಿಸಬೇಕೆಂದೂ ಯೋಚಿಸಿದನು.

ಹಾಗೆಯೇ ಧನದ ರಾಜನು ಹಲವು ಬಗೆಯಲ್ಲಿ ತನ್ನ ಮಾವನಿಗೆ ಸದ್ಧರ್ಮವನ್ನು ಉಪದೇಶಿಸಿದರೂ ಅದರಿಂದೇನೂ ಪ್ರಯೋಜನವಾಗಲಿಲ್ಲ; ಹೀಗಿರಲೊಮ್ಮೆ ಪರಮ ತಪೋಧನರಾದ ಚಾರಣ ಋಷಿಗಳು ಆಕಾಶಮಾರ್ಗವಾಗಿ ನಗರದ ಮೇಲೆ ಸಂಚರಿಸುತ್ತಿದ್ದರು. ಅದನ್ನು ಕಂಡು ಧನದ ರಾಜನು ಇದೀಗ ತಪಸ್ಸಿನ ಫಲ; ಸದ್ಧರ್ಮದ ಪ್ರಭಾವ ಎಂದು ಹೇಳುತ್ತಾ ಆಕಾಶಚಾರಿಗಳಾದ ಋಷಿಗಳಿಗೆ ಕೈಮುಗಿದನು. ಇದನ್ನು ನೋಡಿದ ಸಂಘಶ್ರೀಯ ಮನಸ್ಸು ಚಲಿಸಿತು; ಅವನ ಮನಸ್ಸು ಸದ್ಧರ್ಮದ ಕಡೆಗೆ ಒಲಿಯಿತು. ಅಂದಿನಿಂದ ಸಂಘಶ್ರೀ ಧನದ ಮಹಾರಾಜನ ಪರಮಮಿತ್ರನಾಗಿ ಆಸ್ಥಾನದಲ್ಲಿರತೊಡಗಿದನು.

ಒಮ್ಮೆ ಅರಸು ಒಡ್ಡೋಲಗದಲ್ಲಿ ಕುಳಿತಿದ್ದಾಗ ಸಂಘಶ್ರೀ ಅರಸನ ಕುಲಪರಂಪರೆಯನ್ನು ತಿಳಿಯಲು ಅಪೇಕ್ಷಿಸಿದನು. ಆಗ ಅರಸನ ಅಪ್ಪಣೆಯಂತೆ ಹಿರಿಯ ಹೆಗ್ಗಡೆ ಅರಸುಪರಂಪರೆಯನ್ನು ಹೀಗೆ ವಿವರಿಸಿದನು—ವಾಸುಪೂಜ್ಯ ಜಿನರ ತೀರ್ಥಕಾಲದಲ್ಲಿ ನಮ್ಮ ಅರಸರ ಪೂರ್ವಜನಾದ ಇಕ್ಷ್ವಾಕುವಂಶದ ಯಶೋಧರನೆಂಬ ಅರಸು ಸೌಂದರಿಯೆಂಬ ಅರಸಿಯೊಡನೆ ಚಂಪಾಪುರವನ್ನು ಆಳುತಿದ್ದನು. ಅನಂತವೀರ್ಯ ಪ್ರಿಯಬಲರೆಂಬವರು ಯಶೋಧರ ಸೌಂದರಿಯರ ಸುಪುತ್ರರು.

ಒಮ್ಮೆ ಅರಸು ಯಶೋಧರ ಶತ್ರುಪ್ರದೇಶದಲ್ಲಿಯೂ ಸದ್ಧರ್ಮವನ್ನು ಪ್ರಸಾರಿಸಬೇಕೆಂಬ ಅಪೇಕ್ಷೆಯಿಂದ ಸೈನ್ಯಸಮೇತನಾಗಿ ಹೊರಟು, ದಿಗ್ವಿಜಯಿಯಾಗಿ, ಮಗಧ ಮಾಳವಾದಿ ದೇಶಗಳನ್ನು ಗೆದ್ದು ಈ ವೆಂಗಿ ಮಂಡ

ಲಕ್ಕೆ ಬಂದನು. ಈ ವೆಂಗಿ ಮಂಡಲದ ಶೋಭಾರಾಶಿಯನ್ನು ಕಂಡು ಅರಸನ ಮನಸೋತಿತು. ಹಾಗೆಯೇ ಅರಸು ಯಶೋಧರ ಇಲ್ಲಿಯೇ ಈ ಪ್ರತಿಪಾಲಪುರವನ್ನು ಕಟ್ಟಿಸಿ ಜಿನಧರ್ಮನಿರತನಾಗಿ ಕಾಲ ಕಳೆಯತೊಡಗಿದನು.

ಒಮ್ಮೆ ಯಶೋಧರ ಮಹಾರಾಜ ಪರಿವಾರ ಸಮೇತ ಊರ ಹೊರ ನಡೆದನು. ಅವನು ಹಾಗೆ ಹೋಗುವಾಗ ದಾರಿಯಲ್ಲೊಂದು ಮಾವಿನ ಮರ ಸೊಗಸಾಗಿ ಚಿಗುರಿ ನಳನಳಿಸುತ್ತಿತ್ತು. ಅರಸು ವಿಹಾರದಿಂದ ಹಿಂದಿರುಗುವಾಗ ಆ ಮಾವಿನ ಮರದ ಚಿಗುರನ್ನೆಲ್ಲಾ ಯಾರೋ ಕತ್ತರಿಸಿ ಹಾಕಿದ್ದರು. ಮರವು ತನ್ನ ಸೊಬಗನ್ನು ಕಳೆದುಕೊಂಡು ಬೋಳಾಗಿ ನಿಂತಿತು. ಇದನ್ನು ಕಂಡ ಅರಸನ ಮನಸ್ಸು ನೊಂದಿತು. ಎರಡು ಗಳಿಗೆಗಳಿಗೆ ಮೊದಲು ಸೊಗಸಿನ ಬೀಡಾಗಿದ್ದ ಈ ಮರಕ್ಕೆ ಇಂತಹ ಅವಸ್ಥೆ ಒದಗಿತೆಂದರೆ ನರರ ಬಾಳಿನ ಪಾಡೇನು? ಎಂದು ಅರಸು ಯೋಚನಾಪರನಾದನು. ಹಾಗೆ ಆ ಯೋಚನೆಯಲ್ಲೇ ಅರಮನೆಯನ್ನು ಸೇರಿದನು.

ಯಶೋಧರ ಮಹಾರಾಜನು ತನ್ನ ಹಿರಿಯ ಮಗನನ್ನು ಕರೆದು ತಾನಿನ್ನು ರಾಜ್ಯದಲ್ಲಿ ನಿಲ್ಲುವುದಿಲ್ಲವೆಂದೂ, ತಪಸ್ಸಿಗೆ ನಡೆಯುವೆನೆಂದೂ, ಆದುದರಿಂದ ನೀನು ರಾಜ್ಯಭಾರವನ್ನು ವಹಿಸಬೇಕೆಂದೂ ಕೇಳಿಕೊಂಡನು. ಅದಕ್ಕೆ ಹಿರಿಯ ಮಗನು ತನಗೂ ತಪಸ್ಸಿಗೆ ಬರುವ ಯೋಚನೆಯಿದೆಯೆಂದೂ, ಆದುದರಿಂದ ತನಗೆ ರಾಜ್ಯಭಾರದ ಗೊಡವೆ ಬೇಡವೆಂದೂ ರಾಜ್ಯಭಾರವನ್ನು ನಿರಾಕರಿಸಿದನು. ಆ ಮೇಲೆ ಅರಸು ಎರಡನೆಯ ಮಗನನ್ನು ಕರೆದು ಕೇಳಲು ಅವನು ಮೊದಲನೆಯ ಮಗನಂತೆಯೇ ನಿರಾಕರಿಸಿದನು. ಅನಂತರ ಮೂರನೆಯ ಮಗ ಪ್ರಿಯಬಂಧು ಕುಮಾರನಿಗೆ ರಾಜ್ಯವನ್ನೊಪ್ಪಿಸಿ, ತನ್ನ ಇಬ್ಬರು ಮಕ್ಕಳೊಡನೆ ಮನೆ ಬಿಟ್ಟು, ವಿಶ್ವಸೇನಾಚಾರ್ಯರ ಬಳಿ ಸೇರಿ ದೀಕ್ಷೆ ಪಡೆದನು. ತಪಸ್ವಿಯಾಗಿ ಶ್ರೀಧರ ಮುನಿಯೆಂಬ ಹೆಸರಿನಿಂದ ಪ್ರಸಿದ್ಧಿ ಪಡೆದನು.

ಒಮ್ಮೆ ವಸಂತ ಋತುವಿನಲ್ಲಿ ದೇಶಸಂಚಾರ ಮಾಡುತ್ತ ಯಶೋಧರ ಮುನಿ ಪ್ರತಿಪಾಲನ ಪುರದ ಬಳಿಯ ಜಟಾಶಿಖರವೆಂಬ ಪರ್ವತದಲ್ಲಿ ಬಂದಿಳಿದರು. ಅದೇ ಕಾಲದಲ್ಲಿ ಜಲವಿಹಾರಕ್ಕಾಗಿ ಹೋಗಿದ್ದ ಪ್ರತಿಪಾಲನ

ಪುರದ ಅರಸು ಪ್ರಿಯಬಂಧು ರಾಜನನ್ನು ಒಂದು ಸರ್ಪ ಕಚ್ಚಿಯಿತು. ಅರಸು ತಾನು ಇನ್ನು ಬದುಕುವುದಿಲ್ಲವೆಂದು ಯೋಚಿಸಿ ಜಿನಭಜನೆ ಮಾಡುತ್ತ ವಿಷವೇರಿ ಪ್ರಾಣ ಬಿಟ್ಟನು. ಆಗ ಅಲ್ಲೇ ಇದ್ದ ಮಂತ್ರಿ ಇಂದ್ರಪ್ರಭನು ಅರಸು ಸತ್ತ ಸುದ್ದಿ ಊರಲ್ಲಿ ಹಬ್ಬಿದರೆ ಅನರ್ಥವಾಗುವುದೆಂದು ಚಿಂತಿಸಿ, ಅರಸು ಸತ್ತ ಸುದ್ದಿಯನ್ನು ಗುಟ್ಟಾಗಿರಿಸಿ, ಅರಸನನ್ನು ಅರಮನೆಗೆ ಗುಟ್ಟಿನಲ್ಲಿ ರಾತ್ರಿಕಾಲದಲ್ಲಿ ತಂದು ಆಗಬೇಕಾದ ಸಂಸ್ಕಾರಗಳನ್ನೆಲ್ಲಾ ಮಾಡಿಬಿಟ್ಟನು.

ಮರುದಿನ ಮಂತ್ರಿ ತನ್ನ ಮಗನೊಡನೆ ಅರಮನೆಯನ್ನು ನೋಡಿಕೊಳ್ಳಲು ಹೇಳಿ, ತಾನು ಅರಸನ ಅಪ್ಪಣೆಯಂತೆ ದಿಗ್ವಿಜಯಕ್ಕೆ ಹೊರಡುವೆನೆಂದು ಡಂಗುರ ಸಾರಿಸಿ, ಸೈನ್ಯ ಸಮೇತನಾಗಿ ಅರಮನೆಯಿಂದ ಹೊರಟು ಜಟಾ ಪರ್ವತದ ಬಳಿ ಬಂದು ಬೀಡು ಬಿಟ್ಟನು. ಮತ್ತು ಕೆಲವೇ ಮಂದಿ ಪರಿಜನರನ್ನು ಕರಕೊಂಡು ಜಟಾಪರ್ವತವನ್ನೇರಿ ಯಶೋಧರ ಮುನಿಯನ್ನು ಕಂಡು ವಂದಿಸಿ ಧರ್ಮಶ್ರವಣ ಮಾಡಿದನು. ಆ ಮೇಲೆ ಮಂತ್ರಿ "ಮುನೀಶ್ವರಾ! ವೆಂಗಿ ಮಂಡಲದ ಹಲವು ಜನರು ಅವರಲ್ಲಿ ಹೆಚ್ಚಿನವರು ಮುದುಕರು ತಮ್ಮ ದರ್ಶನ ಮಾಡಬೇಕೆಂದು ಬಂದು, ಈ ಪರ್ವತವನ್ನೇರಲಾರದೆ ಕೆಳಗೆ ಪರ್ವತದ ಬುಡದಲ್ಲಿ ಬೀಡು ಬಿಟ್ಟಿರುವರು. ನೀವು ಅವರ ಮೇಲೆ ದಯೆದೋರಿ ನಾಳೆ ಮಧ್ಯಾಹ್ನಕ್ಕೆ ನಮ್ಮಲ್ಲಿಗೆ ಚರಿಗೆಗೆ ಬರಬೇಕೆ"ಂದು ಬೇಡಿಕೊಂಡನು. ಮುನಿಗಳು ಮಂತ್ರಿಯ ಮಾತಿಗೆ ಸಮ್ಮತಿಸಲು, ಮಂತ್ರಿ ಅಪ್ಪಣೆ ಪಡೆದು ಪರ್ವತವಿಳಿದು ಬೀಡಿಗೆ ಬಂದನು.

ಮರುದಿನ ಮಧ್ಯಾಹ್ನ ಯಶೋಧರ ಮುನಿ ಚರಿಗೆಗೆಂದು ಪರ್ವತ ಇಳಿದು ಮಂತ್ರಿಯ ಬೀಡಿಗೆ ಬಂದರು. ಮಂತ್ರಿ ಮುನಿಗಳನ್ನು ವಿನಯಪೂರ್ವಕ ಬರಮಾಡಿಕೊಂಡು ಭಕ್ತಿಪೂರ್ವಕ ಪೂಜಿಸಿ ಮೃಷ್ಟಾನ್ನವನ್ನು ಬಡಿಸಿದನು. ಆದರೆ ಆ ಅನ್ನವನ್ನು ಉಂಡ ಕೂಡಲೇ ನಿದ್ದೆ ಬೀಳುವಂತೆ ಸೊಕ್ಕಿನ ಮದ್ದನ್ನು ಅನ್ನದಲ್ಲಿ ಬೆರಸಿದ್ದನು. ಮುನಿ ಉಂಡುದೇ ತಡ ಅಲ್ಲೇ ಒರಗಿದರು. ಮಂತ್ರಿ ಕೂಡಲೇ ಸೇವಕರನ್ನು ಕರೆದು ಮುನಿಯನ್ನು ಪಲ್ಲಕ್ಕಿಯಲ್ಲಿ ಮಲಗಿಸಿ ಅರಮನೆಗೆ ಕರಕೊಂಡು ಬಂದು, ಅರಸು ಮಂಚ

ದಲ್ಲಿ ಮಲಗಿಸಿದನು. ಮುನಿ ಮದ್ದಿನ ಮದದಲ್ಲಿದ್ದಾಗಲೇ ಅರಸರ ಉಡಿಗೆ ತೊಡಿಗೆಗಳನ್ನು ತೊಡಿಸಿದನು. ಕೆಲ ಹೊತ್ತು ಕಳೆದು ಮುನಿ ಎಚ್ಚರಗೊಂಡು ನೋಡುತ್ತಾರೆ! ತಾನು ಅರಸು ತೊಡಪಿನಲ್ಲಿದ್ದಾರೆ! ಇದೇನು? ಮುನಿಗೆ ಕೋಪ ಬಂತು. ಮಂತ್ರಿಯೊಡನೆ "ಇದೇನು ಅನಾಹುತ!"ವೆಂದು ಕೇಳಿದರು.

"ಪ್ರಭು! ಅರಸಿಲ್ಲದೆ ರಾಜ್ಯ ಹಾಳಾಯಿತು. ಅರಸುಮಣೆಗೆ ಒಬ್ಬ ಹಕ್ಕುದಾರರು ಹುಟ್ಟುವ ವರೆಗೆ ರಾಜ್ಯವಾಳಿ" ಎಂದು ಮಂತ್ರಿಪರಿವಾರದವರೆಲ್ಲ ಒಕ್ಕೊರಲಿನಿಂದ ಬೇಡಿಕೊಂಡರು. ಗೂಡಿನಲ್ಲಿ ಬಿದ್ದ ಸಿಂಹದಂತೆ ಬೇರೆ ಉಪಾಯ ಕಾಣದೆ ಮುನಿ ಅರಸೊತ್ತಿಗೆಯನ್ನು ಸ್ವೀಕರಿಸಿ ಮೊದಲಿನಂತೆ ತನ್ನ ಮಡದಿಯೊಡನೆ ರಾಜ್ಯವಾಳತೊಡಗಿದರು.

ಕೆಲ ಕಾಲ ಕಳೆದಾಗ ಅರಸು ಶ್ರೀಧರ ಮುನಿಗೆ ತನ್ನ ಮಡದಿಯಲ್ಲಿ ಗಂಡುಕೂಸು ಹುಟ್ಟಿತು. ಮಗು ಹುಟ್ಟಿದುದೇ ತಡ! ಮಗನಿಗೆ ಯಶೋಧರ ಕುಮಾರನೆಂದು ಹೆಸರಿಟ್ಟು, ರಾಜ್ಯ ಪಟ್ಟಕಟ್ಟಿ ಅರಸು ಯಶೋಧರ ಮುನಿ ಸಂಸಾರ ಬಿಟ್ಟು ಜಿನದೀಕ್ಷೆಯಾಂತು ತಪಸ್ವಿಯಾಗಿ ಶ್ರೀಪರ್ವತದ ಸಿದ್ಧವಟದ ಮೂಲದಲ್ಲಿ ಮುಕ್ತಿಗೆ ಸಂದರು. ಮುನಿಯ ಕುಲದಲ್ಲಿ ಹುಟ್ಟಿದವರಾದುದರಿಂದ ಶ್ರೀಧರ ಮುನಿಯ ಮುಂದಿನ ಪೀಳಿಗೆಗೆ ಮುಂಡಾಯ ವಂಶವೆಂದು ಹೆಸರಾಯಿತು ಎಂದು ಬುದ್ಧಿಸಾಗರ ಮಂತ್ರಿ ಧನದ ರಾಜನ ವಂಶಚರಿತ್ರೆಯನ್ನು ವಿವರಿಸಿ ವಿರಮಿಸಿದನು. ಈ ಕತೆಯನ್ನು ಕೇಳಿ ಸಂಘಶ್ರೀಗೆ ಜಿನ ಧರ್ಮದಲ್ಲಿದ್ದ ವಿಶ್ವಾಸ ಮತ್ತಷ್ಟು ದೃಢವಾಯಿತು.

ಒಮ್ಮೆ ಬುದ್ಧಶ್ರೀ ಎಂಬ ಬೌದ್ಧ ಭಿಕ್ಷು ಸಂಘಶ್ರೀಯ ಮನೆಗೆ ಬಂದನು. ಸಂಘಶ್ರೀ ಜಿನಧರ್ಮಾವಲಂಬಿಯಾದುದನ್ನು ಕೇಳಿ ತುಂಬಾ ಬೇಸರಗೊಂಡು ಏನಾದರೂ ಉಪಾಯದಿಂದ ಆತನನ್ನು ಪುನಃ ಬೌದ್ಧ ಧರ್ಮಕ್ಕೆ ತಿರುಗಿಸಬೇಕೆಂದು ಹಲವು ಬಗೆಯ ಮಾತುಗಳಿಂದ ಪ್ರಯತ್ನಿಸಿದನು. ಹೇಗೂ ಬುದ್ಧಶ್ರೀಯ ಪ್ರಯತ್ನ ಫಲಿಸಿತು. ಸಂಘಶ್ರೀ ಜಿನ ಧರ್ಮವಿಮುಖನಾಗಿ ಮತ್ತೊಮ್ಮೆ ಬೌದ್ಧ ಧರ್ಮಕ್ಕೆ ಮನಸ್ಸು ತಿರುಗಿಸಿದನು. ಬುದ್ಧಶ್ರೀ ತನ್ನ ಪ್ರಯತ್ನ ಫಲಿಸಿತೆಂದು ಸಂತಸಗೊಂಡು ತನ್ನ ದಾರಿ ಹಿಡಿದು ನಡೆದನು.

ತನ್ನ ಮಾವ ಸಂಘಶ್ರೀ ಮಿಥ್ಯಾದೃಷ್ಟಿಯಾದನೆಂಬ ಸುದ್ದಿ ಧನದ ರಾಜನ ಕಿವಿಗೂ ಮುಟ್ಟಿತು. ಅವನು ಸಂಘಶ್ರೀಯನ್ನು ಬಹಳ ವಿನಯದಿಂದ ತನ್ನ ಬಳಿಗೆ ಬರಮಾಡಿಕೊಂಡನು. ಮತ್ತೊಮ್ಮೆ ಅವನನ್ನು ಸದ್ಧರ್ಮಕ್ಕೆ ತಿರುಗಿಸಬೇಕೆಂದು ಯತ್ನಿಸಿ, "ಚಾರಣ ಋಷಿಗಳು ಧರ್ಮದ ಮಹಿಮೆಯಿಂದ ಆಕಾಶಚಾರಿಗಳಾಗಿ ಸಂಚರಿಸುವುದನ್ನು ನೋಡಿಲ್ಲವೆ?" ಎಂದು ಕೇಳಿದನು. ಸಂಘಶ್ರೀ ಮಿಥ್ಯಾದೃಷ್ಟಿಯಾಗಿ ತಾನು ಋಷಿಗಳು ಆಕಾಶಚಾರಿಗಳಾಗಿರುವುದನ್ನು ಕಾಣಲೇ ಇಲ್ಲವೆಂದು ಸುಳ್ಳೇ ಹೇಳಿಬಿಟ್ಟನು. ಆತನು ಹಾಗೆ ಸುಳ್ಳು ಹೇಳಿದುದೇ ತಡ ನಗರ ದೇವತೆಗಳು ಬಂದು ಅವನ ಕಣ್ಣುಗಳೆರಡನ್ನೂ ಕುಕ್ಕಿ ತೆಗೆದೇ ಬಿಟ್ಟುವು. ಸುಳ್ಳು ಹೇಳಿದುದರ ಫಲವೇನೆಂದು ಅಲ್ಲಿ ಕೂಡಿದವರಿಗೆಲ್ಲಾ ಪ್ರತ್ಯಕ್ಷವಾಗಿ ತಿಳಿದು ಬಂತು. ಮುಂದೆ ಸಂಘಶ್ರೀಯ ವಂಶದಲ್ಲಿ ಏಳು ತಲೆಗಳ ವರೆಗೂ ಕುರುಡರೇ ಹುಟ್ಟಿದರಂತೆ.

ಜಿನದತ್ತ ಸೆಟ್ಟಿ
(ಅಸ್ತೇಯ ವ್ರತ ಕಥೆ)

ಅವಂತಿನಾಡು ಸಂಪತ್ತಿನಿಂದ ತುಂಬಿ ತುಳುಕುತ್ತಿದ್ದ ನಾಡು. ಅಲ್ಲಿ ಜಿನದತ್ತ ಸೆಟ್ಟಿ ದೊಡ್ಡ ವ್ಯಾಪಾರಿ. ಅವನ ಮಡದಿ ಜಿನೇಂದ್ರ ದಾಸಿ. ಅವರ ಹಿರಿಯ ಮಗ ಜಿನದಾಸ.

ಒಮ್ಮೆ ಜಿನಪಾಲಿತರೆಂಬ ಮುನಿ ಜಿನದತ್ತ ಸೆಟ್ಟಿಯ ಮನೆಗೆ ಬಂದರು. ಸೆಟ್ಟಿ ಮನೆಗೆ ಬಂದ ಮುನಿಯನ್ನು ಭಕ್ತಿಯಿಂದ ಬರಮಾಡಿ ಕೊಂಡು, ಪ್ರೀತಿಯಿಂದ ಸತ್ಕರಿಸಿದ. ಜಿನೇಂದ್ರ ದಾಸಿಯೂ ಮುನಿ ಪರಿಚರ್ಯೆಯಲ್ಲಿ ಭಾಗವಹಿಸಿದಳು. ಹಲವು ದಿನಗಳ ವರೆಗೆ ಜಿನಪಾಲಿತ ಮುನಿ ಸೆಟ್ಟಿಯ ಮನೆಯಲ್ಲಿ ಕಳೆದರು; ಆ ಮೇಲೆ ಬಂದು ಜಿನ ಸೆಟ್ಟಿಯ ಒಪ್ಪಿಗೆ ಪಡೆದು ಬೇರೊಂದು ಊರಿಗೆ ಹೊರಟರು. ಜಿನದತ್ತನೂ ಮುನಿಯನ್ನು ಹಿಂಬಾಲಿಸಿದನು. ಅದೇ ಸಮಯವನ್ನು ಹಾರೈಸಿ ಕುಳಿತಿದ್ದ ಸೆಟ್ಟಿಯ

ಹಿರಿಯ ಮಗ ಜಿನದಾಸ ಸೆಟ್ಟಿಯು ಉಗ್ರಾಣದ ಬಾಗಿಲು ತೆಗೆದು ಒಳ ಹೊಕ್ಕು ಬಂಗಾರದ ಕೆಲವು ಗಟ್ಟಿಗಳಿಗೆ ಕೈಕೊಟ್ಟನು. ಸೆಟ್ಟಿ ಮುನಿಗಳನ್ನು ಬೀಳ್ಕೊಟ್ಟು ಮನೆಗೆ ಹಿಂತಿರುಗಿದಾಗ ಉಗ್ರಾಣದ ಬಾಗಿಲು ತೆರೆದಿತ್ತು. ಒಳಹೊಕ್ಕು ನೋಡಿದಾಗ ಬಂಗಾರದ ಕೆಲವು ಗಟ್ಟಿಗಳು ಮಾಯವಾಗಿದ್ದವು! “ಅರೇ! ಬಂಗಾರವೇನಾಯಿತು! ಮುನಿ ಕೈ ಕೊಟ್ಟನೋ?” ಎಂಬ ಸಂಶಯ ಪಿಶಾಚಿ ಜಿನದತ್ತನನ್ನು ಪೀಡಿಸಿತು.

ಜಿನದತ್ತ ಕೂಡಲೇ ಜಿನಪಾಲಿತ ಮುನಿಯ ಬೆನ್ನು ಹಿಡಿದ. ಮುನಿಯನ್ನು ಕಂಡು, “ಇನ್ನೊಮ್ಮೆ ದಯಮಾಡಿ ನಮ್ಮ ಮನೆಗೆ ಬರಬೇಕೆ”ಂದು ಬೇಡಿಕೊಂಡು ಅಂತೆಯೇ ಮುನಿಗಳನ್ನು ಮನೆಗೆ ಕರಕೊಂಡು ಬಂದ; ಉಪಚರಿಸಿದ “ಬಂಗಾರದ ಗಟ್ಟಿ ಕಾಣೆಯಾಗಿದೆ—ಎಂದು ಹೇಳುವುದಾದರೂ ಹೇಗೆ?” ಎಂದು ಯೋಚಿಸಿ ಕಡೆಗೆ ಒಂದು ಕತೆ ಹೇಳಿದ. ಅದಕ್ಕೆ ಉತ್ತರವಾಗಿ ಮುನಿ ಒಂದು ಎದುರು ಹೇಳಿದರು. ಹೀಗೆ ಕತೆ ಎದುರು ಕತೆಗಳನ್ನು ಸೆಟ್ಟಿಯ ಮಗ ಆತಗಿ ಕೂತು ಕೇಳಿದ. ಕಡೇಗೆ ತಾನು ಬಂಗಾರಕ್ಕೆ ಕೈಕೊಟ್ಟುದು ತಪ್ಪಾಯಿತೆಂದು ತಿಳಿದು, ಮುನಿಗಳ ಮುಂದೆ ಬಂದು ತನ್ನ ತಪ್ಪನ್ನು ಒಪ್ಪಿಕೊಂಡ.

ಜಿನದತ್ತ ಹೇಳಿದ ಕತೆ ೧

ಹುಲಿಯೂರು ಎಂಬುದೊಂದು ಊರು. ಅಲ್ಲಿ ಕರಾಳನೆಂಬ ಒಬ್ಬ ಮನುಷ್ಯನಿದ್ದನು. ಅವನು ದುಷ್ಟರ ಸಂಗದಿಂದ ಕೆಟ್ಟು ಕೇಡಿಗನಾಗಿದ್ದ. ಕೇಡಿಗ ಕರಾಳ ಒಮ್ಮೆ ಒಂದು ಅರಮನೆಗೆ ಕನ್ನವಿಕ್ಕಿ, ಉಗ್ರಾಣವನ್ನು ಹೊಕ್ಕು, ಹೊನ್ನರಾಶಿಯನ್ನು ಕೈತುಂಬಾ ಬಾಚಿಕೊಂಡು ಹೊರಬಿದ್ದ. ಹಾಗೆ ಹೊರಬಿದ್ದ ಕಳ್ಳ ಕರಾಳನನ್ನು ಊರ ತಳಾರನು ಬೆನ್ನು ಹಿಡಿದನು. ಕಳ್ಳನ ಮೇಲೆ ಕಲ್ಲುಗುಂಡುಗಳ ಮಳೆ ಸುರಿಸಿದನು. ಕರಾಳನು ತಳಾರನಿಗೆ ಹೆದರಿ, ಓಡಿ ಹೋಗಿ ಒಬ್ಬ ಸೆಟ್ಟಿಯ ಮನೆಹೊಕ್ಕನು. ಸೆಟ್ಟಿ “ಕಳ್ಳನು ಒಳ್ಳಿದನಲ್ಲ; ನಾಯಿ ಮೌನಿಯಲ್ಲ” ಎಂಬ ಮಾತನ್ನು ಯೋಚಿಸದೆ, ಕರಾಳನಿಗೆ ಆಶ್ರಯವಿತ್ತನು. ತಳಾರನು ಸೆಟ್ಟಿಯ ಮನೆ ವರೆಗೆ ಬಂದು ಕಳ್ಳನ ತುಬ್ಬಾಗದೆ, ಬಂದ ಹಾಗೆ ಹಿಂದೆ ಹೋದನು. “ಬೀಸಿದ ಕೈ ತಪ್ಪಿದರೆ ಸಹಸ್ರಕಾಲ” ಎಂಬುದನ್ನು ಮನಸ್ಸಿಗೆ ತಾರದೆ, “ಹುಲಿಯನ್ನು ಬಿಟ್ಟರೆ

ಕ್ರೂರರಿಲ್ಲ" ಎಂಬ ಮಾತನ್ನು ನಿಜ ಮಾಡಲೆಂಬಂತೆ, ಮನೆಯಲ್ಲಿ ಒಬ್ಬನೇ ಇದ್ದ ಸೆಟ್ಟಿಯನ್ನು ಕೊರಳು ಹಿಸುಕಿ ಕೊಂದ; ಅಲ್ಲಿದ್ದ ಬೆಳ್ಳಿ ಬಂಗಾರಗಳನ್ನು ದೋಚಿಕೊಂಡು ತನ್ನ ದಾರಿ ಹಿಡಿದ. ಹೀಗೆ ಕೆಲವರು ಮಾಡಿದ ಉಪಕಾರಕ್ಕೆ ಅಪಕಾರವೆನ್ನೆಸಗುವರು.

ಸೆಟ್ಟಿ ಹೇಳಿದ ಕತೆಗೆ ಜಿನಪಾಲಿತ ಮುನಿ ಹೇಳಿದ ಎದುರು ಕತೆ ೨

ದ್ವಾರಾವತೀ ನಗರವನ್ನು ಅರ್ಧಚಕ್ರಿ ನಾರಾಯಣನು ಆಳುತ್ತಿದ್ದನು. ಆಗ ಜಮ್ಮದಂತಕರೆಂಬ ಋಷಿ ಅರಮನೆಗೆ ಬಂದರು. ಚಕ್ರಿ ಋಷಿಗಳನ್ನು ಅರಮನೆಯಲ್ಲಿ ಇರಿಸಿಕೊಂಡು ಉಪಚರಿಸಿದ. ಋಷಿಗೆ ಯಾವುದೋ ಒಂದು ರೋಗ ಪೀಡಿಸುತ್ತಿತ್ತು. ಮದ್ದು ತೆಗೆದುಕೊಳ್ಳಬೇಕೆಂದರೆ ಋಷಿ ಕೇಳರು.

ಚಕ್ರಿ ಇದಕ್ಕೇನು ಮಾಡುವುದೆಂದು ಯೋಚಿಸಿ, ರಾಜವೈದ್ಯನನ್ನು ಕರೆಸಿ, ಅವನೊಡನೆ ವಿಚಾರಿಸಿದನು. ಅದಕ್ಕೆ ರಾಜವೈದ್ಯನು ತಾನೊಂದು ಮೂಲಿಕೆಯನ್ನು ಕೊಡುತ್ತೇನೆಂದೂ ಅದನ್ನು ನವಣೆಯ ಹಿಟ್ಟಿನೊಡನೆ ಸೇರಿಸಿ, ಉಂಡೆ ಮಾಡಿ ಋಷಿಗಳಿಗೆ ತಿನ್ನಿಸಬೇಕೆಂದೂ ಹೇಳಿದನು. ಚಕ್ರಿ ಅಂತೆಯೇ ಮಾಡಲು, ಕೆಲವೇ ದಿನಗಳಲ್ಲಿ ಋಷಿಗಳ ರೋಗ ಗುಣವಾಯಿತು. ಇದನ್ನು ಕಂಡು ರಾಜವೈದ್ಯನಿಗೆ ಒಂದು ಬಗೆಯ ಹೆಮ್ಮೆ. ಒಂದು ದಿನ ಋಷಿಗಳೂ, ಚಕ್ರಿಯೂ ಮಾತನಾಡುತ್ತ ಕುಳಿತಿದ್ದರು. ಅಲ್ಲಿಗೆ ರಾಜವೈದ್ಯನೂ ಬಂದನು. ಏನೋ ರೋಗ; ರೋಗ ಚಿಕಿತ್ಸೆಯ ಮಾತು ಬಂತು. ಆಗ ಆ ರಾಜವೈದ್ಯ "ಅಸಾಧ್ಯವಾದ ರೋಗದಿಂದ ಪೀಡಿತರಾಗಿದ್ದ ಋಷಿಗಳಿಗೆ ರೋಗ ಮುಕ್ತರಾಗಿರುವುದು ಬಹಳ ಸಂತೋಷ!" ಎಂದು ಋಷಿಗಳಿಗೆ ಕೈಮುಗಿದನು. "ಕರ್ಮವೇ ಕಾರಣವಾಗಿ ದುಃಖಪ್ರಾಪ್ತಿಯಾಗುವುದು. ಕರ್ಮ ನಾಶವಾದಾಗ ದುಃಖ ನಾಶವಾಗುವುದು." ಎಂದು ಋಷಿ ಹೇಳಿ ಸುಮ್ಮನಾದರು. "ನನ್ನ ಮದ್ದಿನಿಂದ ರೋಗ ಗುಣವಾಯಿತು. ಈಗ ಕರ್ಮವಂತೆ! ಇದಕ್ಕೇನೆನ್ನಬೇಕು?" ಎಂದು ವೈದ್ಯನ ಮನಸ್ಸಿನಲ್ಲಿ ಹಗೆಯ ಹೊಗೆಯಾಡಿತು. ಹಾಗೆಯೇ ಹಗೆಯ ನಂಜೇರಿ ವೈದ್ಯ ಪ್ರಾಣ ಬಿಟ್ಟ; ಮುಂದೆ ಕೋಡಗನಾಗಿ ಹುಟ್ಟಿದ.

ಕೆಲವು ಕಾಲ ಕಳೆದ ಮೇಲೆ ಋಷಿ ದ್ವಾರಾವತಿಯನ್ನು ಬಿಟ್ಟು ದೇಶ ಸಂಚಾರಕ್ಕೆ ಹೊರಟರು. ಹೀಗೆ ಸಂಚರಿಸುತ್ತ ಒಮ್ಮೆ ಮಾರ್ಗದ ಬಳಿ ಒಂದು ಮರದ ಬುಡದಲ್ಲಿ ಕುಳಿತರು. ಮೊದಲ ಹುಟ್ಟಿನಲ್ಲಿ ವೈದ್ಯನಾಗಿದ್ದ ಆ ಕೋಡಗ ಅದೇ ಮರದ ಮೇಲೆ ಕುಳಿತಿತ್ತು. ಅದು ಮರದ ಕೆಳಗೆ ಕುಳಿತಿದ್ದ ಋಷಿಯನ್ನು ಕಂಡು ಮೊದಲಿನ ಹಗೆಯನ್ನು ನೆನೆದು, ಒಂದು ಮಾವಿನ ಗೆಲ್ಲನ್ನು ಮುರಿದು ಸಮಾಧಿಸ್ಥರರಾದ ಋಷಿಗಳ ಕಡೆಗೆ ಎಸೆಯಿತು. ಗೆಲ್ಲಿನ ಚೂಪಾದ ಕಡೆ ಋಷಿಗಳ ತೊಡೆಯನ್ನು ಹೊಕ್ಕಿತು. ಸಮಾಧಿಸ್ಥರ ರಾದ ಋಷಿ ಈ ನೋವಿಗೆ ಅಳುಕದೆ ಕುಳಿತಿದ್ದರು. ಕಂಡ ಕೋಡಗನಿಗೆ ಋಷಿಯ ಮಹತ್ವದ ಅರಿವಾಯಿತು. ಅದು ಕೂಡಲೇ ಕೆಳಗೆ ಇಳಿದು ಬಂದು, ತನ್ನ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡಿತು. ಆ ಕಪಿ ವ್ರತಗಳನ್ನಾಚರಿಸಿ, ದೇಹ ಬಿಟ್ಟು ದೇವಗತಿಯನ್ನೈದಿತು. ಹೀಗೆ ಮೂರ್ಖ ರಾದವರು ಸಜ್ಜನರನ್ನು ಬರಿದೆ ಕಾಡುವರು.

ಸೆಟ್ಟಿ ಹೇಳಿದ ಕತೆ ೩

ಭಾನುಪುರವೆಂಬ ಪಟ್ಟಣದಲ್ಲಿ: ಕಪಿಲನೆಂಬ ಬ್ರಾಹ್ಮಣನಿದ್ದನು. ಹಲವು ವಿದ್ಯೆಗಳಲ್ಲಿ ಪಾರಂಗತನಾಗಿದ್ದ ಕಪಿಲನಿಗೆ ತಾನು ಗಾರುಡ ವಿದ್ಯೆ ಯಲ್ಲಿಯೂ ಪಾರಂಗತನಾಗಬೇಕೆಂಬ ಆಸೆ ಹುಟ್ಟಿತು. ಹಾಗೆಯೇ ಅವನು ಮನೆ ಬಿಟ್ಟು, ಮೂಡುಕಡೆಗೆ ಪಯಣ ಬೆಳೆಸಿದನು. ಅಲ್ಲೊಂದು ಹಳ್ಳಿ ಯಲ್ಲಿ ಒಬ್ಬ ಮಂತ್ರವಾದಿ ಇದ್ದನು. ಕಪಿಲನು ಆ ಮಂತ್ರವಾದಿಯ ಬಳಿ ಸೇರಿ, ತನಗೆ ಗಾರುಡವಿದ್ಯೆಯನ್ನು ಕಲಿಸಬೇಕೆಂದು ಕೇಳಿಕೊಂಡನು. ಹಲವು ದಿನಗಳ ವರೆಗೆ ಅಲ್ಲಿದ್ದು, ಗಾರುಡ ವಿದ್ಯೆಯನ್ನು ಕಲಿತು ಊರಿಗೆ ಹಿಂದಿರುಗಿದನು.

ಕಪಿಲನು ಊರಿಗೆ ಮರಳಿ ಬರುತಿದ್ದಾಗ ದಾರಿಯಲ್ಲೊಂದು ಹುಲಿ ಸತ್ತು ಬಿದ್ದಿತ್ತು. ಅದು ಹಾವಿನ ವಿಷವೇರಿ ಸತ್ತುದಾಗಿತ್ತು. ಕಪಿಲನು ಅದನ್ನು ಪರೀಕ್ಷಿಸಿ, ತನ್ನ ವಿದ್ಯೆಯ ಬಲದಿಂದ ಹುಲಿಯನ್ನು ಬದುಕಿಸಿ ದನು. ಹುಲಿ ವಿಷವಿಳಿದು, ಚೇತರಿಸಿಕೊಂಡು, ಬಿದ್ದಲ್ಲಿಂದ ಎದ್ದು ನಿಂತಿತು; ಎದುರಿಗಿದ್ದ ಬ್ರಾಹ್ಮಣನನ್ನು ಕಣ್ಣು ಕೆರಳಿಸಿ ನೋಡಿತು. ಇವನು ತನ್ನ ಜೀವವನ್ನು ಬದುಕಿಸಿದವನೆಂಬ ಯೋಚನೆಯನ್ನೂ ಕೂಡ ಮಾಡದೆ,

ಒಂದೇ ಬಾರಿಗೆ ಬ್ರಾಹ್ಮಣನ ಮೇಲೆ ಹಾರಿ, ಅವನನ್ನು ಕೊಂದೇ ಬಿಟ್ಟಿತು. ಹೀಗಿದೆ ವ್ಯಾಘ್ರನೀತಿ.

ಮುನಿ ಹೇಳಿದ ಕತೆ ೪

ಕೇಸರಿಪುರವೆಂಬ ಪಟ್ಟಣದಲ್ಲಿ ಅಮಲನೆಂಬ ಸೆಟ್ಟಿ ಇದ್ದನು. ಅವನ ಮನೆ ತುಂಬಾ ಬದುಕು. ಅವನಿಗೆ ಒಂದೇ ಒಂದು ಗಂಡುಮಗು. ಮಗುವಿಗೆ ನಾಲ್ಕು ವರ್ಷ ಪ್ರಾಯ. ಮಗುವಿಗೆ ಮೈತುಂಬಾ ಆಭರಣ; ಕಿವಿಗೆ ಕುಂಡಲ; ಕೈಗೆ ಬಳೆ; ಕಾಲಿಗೆ ಕಡಗ; ಸೊಂಟಕ್ಕೆ ಗೆಜ್ಜೆಸರ; ಹೀಗಿತ್ತು ಆಭರಣ. ಮಗುವನ್ನು ನೋಡಲಿಕ್ಕೆ ಒಬ್ಬ ಬಡ ಹೆಂಗಸು. ಸೆಟ್ಟಿ ಹೆಂಗಸಿಗೆ ಸರಿಯಾಗಿ ಸಂಬಳ ಕೊಡುತ್ತಿರಲಿಲ್ಲ; ಅವಳಿಗೆ ಹೊಟ್ಟೆಗೆ ಬಟ್ಟೆಗೆ ಕೂಡ ಸರಿಯಾಗಿ ಕೊಡುತ್ತಿರಲಿಲ್ಲ. ಅದೇ ಕಾರಣವಾಗಿ ಅವಳಿಗೆ ಮಗುವಿನ ಆಭರಣಗಳ ಮೇಲೆ ಆಸೆ ಹುಟ್ಟಿತು; ಅವು ತನಗೆ ಸಿಕ್ಕಿದರಾಗದೇ ಎಂದು ಅವಳು ಯೋಚಿಸಿದಳು.

ಕೆಟ್ಟ ಯೋಚನೆ ಮನಸ್ಸಿಗೆ ಬಂದ ಮೇಲೆ, ಅದೂ ಬಡತನದ ಬೇಗೆ ಯಲ್ಲಿ ಏನಾದೀತು. ಏನಾಗದು ಎಂದು ಹೇಳಲಿಕ್ಕೆ ಬರುವುದಿಲ್ಲ. ಹೆಂಗಸು ಒಂದು ದಿನ ಮನೆಯಲ್ಲಿ ಯಾರೂ ಇಲ್ಲದಾಗ ಮಗುವನ್ನು ತನ್ನ ಮನೆಗೆ ಕರಕೊಂಡು ಹೋಗಿ ಮಗುವನ್ನು ಕೊರಳು ಹಿಸುಕಿ ಕೊಂದು, ಮಗುವಿನ ಮೈಮೇಲಿದ್ದ ಆಭರಣಗಳನ್ನೆಲ್ಲಾ ತೆಗೆದಿಟ್ಟಳು. ಮಗುವಿನ ಹೆಣವನ್ನೇನು ಮಾಡುವುದು? ಅದೇ ಬೀದಿಯಲ್ಲಿ ಒಂದು ಸಾಧು ಬಸವ ತಿರುಗುತ್ತಿತ್ತು. ಹೆಂಗಸು ಮಗುವಿನ ಹೆಣವನ್ನು ಬಸವನ ಚೂಪಾದ ಕೋಡುಗಳಿಗೆ ಯಾರೂ ಕಾಣದಂತೆ ಸಿಕ್ಕಿಸಿ ಬಿಟ್ಟಳು. ಬಸವ ಮಗುವನ್ನು ಇರಿದು ಕೊಂದಿತೆಂದು ಜನರು ಯೋಚಿಸಲಿ ಎಂದು ಅವಳ ಯೋಚನೆ.

ಸಂಜೆ ಸೆಟ್ಟಿ ಮನೆಗೆ ಬಂದು ಮಗುವನ್ನು ಕರೆದಾಗ ಮಗು ಮನೆ ಯಲ್ಲಿರಲಿಲ್ಲ; ಮಗುವೆಲ್ಲಿ ಎಂದು ಮನೆಯೆಲ್ಲೆಲ್ಲಾ ಗಲಾಟೆ. ಇಷ್ಟಾಗುವಾಗ ಬಸವ ಕೋಡುಗಳಿಗೆ ಮಗುವಿನ ಹೆಣವನ್ನು ಸಿಕ್ಕಿಸಿಕೊಂಡು ಅಲ್ಲೇ ಬೀದಿ ಯಲ್ಲಿ ಬಂತು. ಬಸವನ ಹಿಂದೆ ಕೆಲವು ಮಂದಿ ಜನರು ಕೂಡಿದರು. ಬಸವ ಮಗುವನ್ನು ಕೊಂದಿತೆಂದು, ನಿರಪರಾಧಿಯಾದ ಆ ಬಸವನನ್ನು ಕಲ್ಲು ಕೊರಡುಗಳಿಂದ ಹೊಡೆಯ ತೊಡಗಿದರು.

ಬಸವ ಪೆಟ್ಟು ಸಹಿಸಲಾರದೆ ಒಂದು ಕಮ್ಮಾರನ ಸಾಲೆಗೆ ನುಗ್ಗಿತು. ಅಲ್ಲಿ ಕುಲುಮೆಯಲ್ಲಿದ್ದ ಕಾದ ಕಬ್ಬಿಣದ ತುಂಡೊಂದನ್ನು ಬಾಯಲ್ಲಿ ಕಚ್ಚಿ ಕೊಂಡು, ತಾನೀ ಪಾಪವನ್ನು ಮಾಡಿದವನಲ್ಲವೆಂದು ಪ್ರಮಾಣ ಮಾಡಿ ತೋರಿಸಲೋ ಎಂಬಂತೆ ಹೊರಬಂದಿತು. ಅಲ್ಲಿದ್ದ ಜನ ಇದನ್ನು ನೋಡಿ ಬೆಕ್ಕಸ ಬೆರಗಾದರು. "ಮಗುವನ್ನು ಕೊಂದದ್ದು ಬಸವನಲ್ಲ; ಬಸವನ ಬಾಯಿ ಸುಟ್ಟು ಹೋಗುತ್ತಿತ್ತು. ಮಗುವನ್ನು ಕೊಂದವರು ಬೇರೆ ಯಾರೋ ಯಾರೋ ಇರಬೇಕು" ಎಂದು ಅಲ್ಲಿ ನೆರೆದವರು ಕೂಗಿ ಹೇಳಿದರು.

ಇಷ್ಟಾಗುವುದರೊಳಗೆ ಊರ ತಳಾರರು ಕೊಲೆಗಡುಕರ ಪತ್ತೆಹಚ್ಚಲು ಬೀದಿ ಬೀದಿಯಲ್ಲಿ ಸುತ್ತಾಡಿದರು; ಸುಳಿದಾಡಿದರು. ಮಗುವನ್ನು ನೋಡಿ ಕೊಳ್ಳುತ್ತಿದ್ದ ಹೆಂಗುಸಿನ ಮನೆ ನುಗ್ಗಿದರು; ಅಲ್ಲಿ ಸತ್ತ ಮಗುವಿನ ಆಭರಣ ಸಿಕ್ಕಿತು. ಕೊಲೆಗಾರ್ತಿ ಹೆಂಗುಸನ್ನು ಹೆಡೆಮುಡಿ ಕಟ್ಟಿ ತಂದು ಊರ ಜನರಿಗೆ ಒಪ್ಪಿಸಿದರು; ಹೆಂಗುಸಿಗೆ ತಕ್ಕ ಶಿಕ್ಷೆಯಾಯಿತು. ಬಸವನಿಗೆ ಹೊಡೆದ ಊರ ಜನರು "ತಾವು ಅನ್ಯಾಯವಾಗಿ ವಿಚಾರವಿಲ್ಲದೆ ಬಸವನಿಗೆ ಹೊಡೆದೆವೆಲ್ಲಾ" ಎಂದು ಪಶ್ಚಾತ್ತಾಪಪಟ್ಟರು. ಆದುದರಿಂದ ವಿಚಾರ ಮಾಡದೆ ಯಾವ ಕೆಲಸವನ್ನೂ ಮಾಡಬಾರದು.

ಸೆಟ್ಟಿ ಹೇಳಿದ ಕತೆ ೫

ಭಾರತೀ ನದೀ ತೀರದಲ್ಲಿ ಒಬ್ಬ ಕಾಪಾಲಿಕನಿದ್ದನು. ಅವನು ಅಲ್ಲೊಂದು ಗುಡಿಸಲಲ್ಲಿ ವಾಸಿಸುತ್ತಿದ್ದನು. ಒಮ್ಮೆ ಬೇಸಿಗೆಯ ಕಡೆಯಲ್ಲಿ ಒಂದು ದಿನ ಬಲವಾದ ಮೋಡ ಕವಿದು, ಗುಡುಗಿ ಮಿಂಚಿ, ಮಳೆ ಸುರಿ ಯಿತು. ನದಿ ಉಕ್ಕಿ ಹರಿಯಿತು. ಹೊಲ ನೆಲಗಳೆಲ್ಲಾ ನೀರಿನಿಂದ ತುಂಬಿ ಹೋಯಿತು. ಕಾಪಾಲಿಕನು ಒಂದು ಎತ್ತರದ ದಿಣ್ಣೆಯಲ್ಲಿ ನಿಂತುಕೊಂಡು, ತುಂಬಿ ಹರಿಯುತ್ತಿದ್ದ ಹೊಳೆಯನ್ನೇ ನೋಡುತ್ತಿದ್ದನು. ಆಗ ನೀರಿನ ಪ್ರವಾಹದಲ್ಲಿ ಒಂದು ಆನೆಮರಿ ಮುಳುಗುತ್ತಾ ಏಳುತ್ತಾ ತೇಲಿ ಹೋಗು ವುದು ಕಂಡುಬಂತು. ಕಾಪಾಲಿಕನು ಕನಿಕರದಿಂದ ಹರಿವ ಹಳ್ಳಕ್ಕೆ ಹಾರಿ ನೆರೆಯಲ್ಲಿ ಕೊಚ್ಚಿ ಹೋಗುತ್ತಿದ್ದ ಆನೆಮರಿಯನ್ನು ಹಿಡಿದು ದಡಕ್ಕೆ ತಂದನು.

ಕಾಪಾಲಿಕನೂ ಅವನ ಶಿಷ್ಯನೂ ಆನೆಮರಿಯನ್ನು ಬಹಳ ಪ್ರೀತಿ ಯಿಂದ ಸಾಕಿದರು. ಆನೆಮರಿ ದಿನದಿಂದ ದಿನಕ್ಕೆ ಸೊಗಸಾಗಿ ಬೆಳೆಯಿತು.

ಅದರ ಬುದ್ಧಿವಂತಿಕೆಗೆ, ಗುಣಕ್ಕೆ, ನಡತೆಗೆ ಊರಿಗೆ ಊರೇ ಬೆರಗಾಯಿತು. ಈ ಸುದ್ದಿ ಊರ ಅರಸನ ಕಿವಿಗೆ ಬಿತ್ತು. "ಕಾಪಾಲಿಕನಿಗೇಕೆ ಆನೆ? ಅದನ್ನು ಹಿಡಿದು ತನ್ನಿರಿ" ಎಂದು ಅರಸು ಸೇವಕರಿಗೆ ಅಪ್ಪಣೆಯಿತ್ತನು. ಅರಸಾಳುಗಳು ಕಾಪಾಲಿಕನ ಗುಡಿಸಲಿಗೆ ಬಂದು ಆನೆಯನ್ನು ಒಯ್ದರು. ಕಾಪಾಲಿಕನಿಗೆ ಆನೆಯನ್ನು ಬಿಡುವ ಮನಸ್ಸಿರಲಿಲ್ಲ, ಆದರೆ ಅರಸಾಳುಗಳನ್ನು ತಡೆಯುವ ಧೈರ್ಯವಾದರೂ ಅವನಿಗೆ ಎಲ್ಲಿಂದ ಬರಬೇಕು?

ಆನೆಯನ್ನೇನೋ ಅರಮನೆಗೆ ತಂದರು. ಆನೆಗೆ ಮಾತ್ರ ಅರಮನೆ ಸೊಗಯಿಸಲಿಲ್ಲ. ಅದಕ್ಕೆ ಕಾಪಾಲಿಕನ ಗುಡಿಸಲಿನದೇ ಯೋಚನೆ. ಒಂದು ದಿನ ಕಟ್ಟಿದ ಕಟ್ಟನ್ನು ಕಡಿದು ಕಾಪಾಲಿಕನ ಗುಡಿಸಲ ಕಡೆಗೆ ಓಡಿತು. ಅರಸನು ಆಳು ಕಳುಹಿಸಿ ಆನೆಯನ್ನು ಹಿಡಿದು ತರಿಸಿ ಬಲವಾದ ಸಂಕಲೆಗಳಿಂದ ಮತ್ತೊಮ್ಮೆ ಕಟ್ಟಿಸಿದನು. ಆನೆ ಮತ್ತೊಮ್ಮೆ ಕಟ್ಟು ಕಡಿದು ಓಡಿ ಹೋಯಿತು. ಹೀಗೆ ಹಲವು ಬಾರಿ ನಡೆಯಿತು. ಕಡೆಗೊಮ್ಮೆ ಸಾಧುವೇ ಆನೆಯನ್ನು ಹಿಡಿದು ಅರಸನಿಗೊಪ್ಪಿಸಿದ. ಆನೆಗೆ ಕಾಪಾಲಿಯ ಮೇಲೆ ಸಿಟ್ಟೇರಿತು. ನೀರಲ್ಲಿ ತೇಕುಮುಳ್ಕಾಗುತ್ತಿದ್ದ ತನ್ನನ್ನು ಕಾಪಾಡಿದ ಕಾಪಾಲಿಯ ಉಪಕಾರವನ್ನು ನೆನಸದೇ ಕೊಂದೇ ಬಿಟ್ಟಿತು. ಹೀಗೆ ಮಾಡಿದ ಉಪಕಾರವನ್ನು ಮರೆಯುವ, ಉಪಕಾರಕ್ಕೆ ಅಪಕಾರ ಮಾಡುವ ಅಧಮರು ಲೋಕದಲ್ಲಿ ಹಲವರಿರುವರು.

ಮುನಿ ಹೇಳಿದ ಕತೆ ೬

ದಂತಿಪುರದಲ್ಲಿ ಅನಂತಶ್ರೀ ಎಂಬ ಸುಂದರಿಯೊಬ್ಬಳಿದ್ದಳು. ಅವಳಿಗೆ ಒಂದು ಕೆಟ್ಟ ಅಭ್ಯಾಸ; ಕಳ್ಳು ಕುಡಿಯುವುದು. ಅನಂತಶ್ರೀಯ ಗೆಳತಿ ವಾಸವದತ್ತೆ. ವಾಸವದತ್ತೆ ಒಂದು ಚೆಲುವಾದ ಗಿಳಿಯನ್ನು ಅನಂತಶ್ರೀಗೆ ಕಾಣ್ಕೆ ಕೊಟ್ಟಿದ್ದಳು. ಅನಂತಶ್ರೀ ಗಿಳಿಯನ್ನು ಪ್ರೀತಿಯಿಂದ ಸಾಕಿದಳು; ಗಿಳಿಗೆ ಹಲವು ಮಾತುಗಳನ್ನು ಕಲಿಸಿದಳು.

ಅನಂತಶ್ರೀಗೆ ತನ್ನಷ್ಟು ಸುಂದರಿಯರು, ಐಶ್ವರ್ಯವಂತರು ಯಾರೂ ಇಲ್ಲವೆಂಬ ಹೆಮ್ಮೆ. ಅವಳಿಗೆ ಊರಿನ ಇತರ ಹೆಂಗುಸರನ್ನು ಕಂಡರಾಗದು; ಉಳಿದ ಹೆಂಗುಸರಿಗೂ ಹಾಗೆ ಅನಂತಶ್ರೀಯೊಡನೆ ಅಷ್ಟಷ್ಟೆ. ಅನಂತಶ್ರೀಗೆ ಆಗದ ಕೆಲಮಂದಿ ಹೆಂಗುಸರು ಅವಳ ಗೆಳತಿಯಾದ ವಾಸವದತ್ತೆಯ ಗೆಳೆ

ತನ ಮಾಡಿದರು; ಮತ್ತು ಅವಳಿಗೆ ದುಡ್ಡಿನ ಆಸೆ ತೋರಿಸಿ, ಮದ್ಯಕ್ಕೆ ವಿಷ ಬೆರಸಿ ಅನಂತಶ್ರೀಗೆ ಕೊಟ್ಟರು. ವಾಸವದತ್ತೆ ತಾನೂ ಏನೂ ಅರಿಯದವಳಂತೆ ವಿಷ ಬೆರಸಿದ ಮದ್ಯವನ್ನು ಅನಂತಶ್ರೀಗೆ ತಂದುಕೊಟ್ಟು ಹಿಂದಿರುಗಿದಳು.

ಅನಂತಶ್ರೀ ಮದ್ಯವನ್ನು ಆಗಲೇ ಕುಡಿಯದೆ, ಒಂದು ಬಟ್ಟಲಲ್ಲಿ ಸುರಿಸಿಟ್ಟು ಮಂಚದ ಮೇಲೆ ಮಲಗಿ ನಿದ್ದೆಹೋದಳು. ಆಗ ಆ ಮದ್ಯದ ಬಟ್ಟಲಿಗೆ ನೊಣಗಳು ಮುತ್ತಿದುವು; ಮುತ್ತಿದಂತೆ ಸತ್ತು ಬಿದ್ದುವು. ಇದನ್ನು ಅಲ್ಲೇ ಇದ್ದ ಗಿಳಿ ಕಂಡಿತು. "ಮದ್ಯದಲ್ಲೇನೋ ದೋಷವಿದೆ. ಇದನ್ನು ಕುಡಿದರೆ ಯಜಮಾನಿಗೆ ಅಪಾಯ ಬರಬಹುದು" ಎಂದು ಯೋಚಿಸಿತು. ಹಾಗೆಯೇ ಬಟ್ಟಲಿನ ಮೇಲೆ ಹಾರಿ ಬಟ್ಟಲನ್ನು ಮಗುಚಿ ಹಾಕಿತು. ಅದು ಗಾಜಿನ ಬಟ್ಟಲು. ನೆಲಕ್ಕೆ ಬಿದ್ದು ಚೂರುಚೂರಾಯಿತು; ಮದ್ಯವೆಲ್ಲಾ ನೆಲದ ಮೇಲೆ ಚೆಲ್ಲಿ ಹೋಯಿತು.

ಬಟ್ಟಲು ಬಿದ್ದು ಒಡೆದ ಶಬ್ದಕ್ಕೆ ಅನಂತಶ್ರೀಗೆ ಎಚ್ಚರವಾಯಿತು. ಗಿಳಿ ಬಟ್ಟಲು ಒಡೆದು ಹಾಕಿತೆಂದು ಗಿಳಿಯ ಮೇಲೆ ಸಿಟ್ಟೇರಿದಳು, ಒಂದೇ ಹೊಡೆತಕ್ಕೆ ಗಿಳಿಯನ್ನು ಕೊಂದೇ ಬಿಟ್ಟಳು. ಗಿಳಿ ಕೆಳಗೆ ಬಿದ್ದು ಪ್ರಾಣ ಬಿಟ್ಟಿತು. ಅನಂತಶ್ರೀಗೆ ಸಿಟ್ಟಿಳಿಯಿತು. ತಾನು ಮಾಡಿದ ತಪ್ಪಿನ ಅರಿವು ಅವಳಿಗಾಯಿತು. ಆದರೆ ಕೆಲಸ ಕೈಮೀರಿ ಹೋಗಿತ್ತು. ಮಾಡುವುದೇನು? ಮದ್ಯಪಾಯಿಯಾದ ಅನಂತಶ್ರೀಯಂತೆ ವರ್ತಿಸಿದರೆ ಯಾರಾದರೂ ಅನರ್ಥಕ್ಕೆ ಕಾರಣರಾಗಬೇಕು.

ಸೆಟ್ಟಿ ಹೇಳಿದ ಕತೆ ೭

ಅವನೀಭೂಷಣವೆಂಬ ಪಟ್ಟಣದಲ್ಲಿ ಒಬ್ಬ ಬಡಗಿಯಿದ್ದ. ಬಹು ಬುದ್ಧಿವಂತ. ಒಮ್ಮೆ ಮರ ಕಡಿಯಲೆಂದು ಬಡಗಿ ಕಾಡಿಗೆ ನಡೆದ. ಯಾವ ಮರವನ್ನು ಕಡಿಯುವುದೆಂದು ಹಾಗೆ ಆಚೆ ಈಚೆ ನೋಡುತ್ತಿದ್ದಾಗ ಒಂದು ಆನೆ ಬಡಗಿಯನ್ನು ಓಡಿಸಿಕೊಂಡು ಬಂತು. ಬಡಗಿ ಕೂಡಲೇ ಹತ್ತಿರವಿದ್ದ ಒಂದು ಹೆಮ್ಮರವನ್ನೇರಿದನು. ಆನೆ ಮರದ ಬುಡಕ್ಕೆ ಬಂತು. ಆಚೆ ಈಚೆ ನೋಡಿತು. ಮರವನ್ನು ಮುರಿದು ಹಾಕಲು ಪ್ರಯತ್ನಿಸಿತು; ಅದು

ಸಾಧ್ಯವಾಗಲಿಲ್ಲ. ಆನೆ ಬೇರೆ ಉಪಾಯ ಕಾಣದೆ ಅಲ್ಲಿಂದ ಹೊರಟು ಹೋಯಿತು.

ಆನೆ ಹೊರಟು ಹೋದ ಮೇಲೆ ಬಡಗಿ ಮರದಿಂದ ಕೆಳಗಿಳಿದ. ಆನೆ ಅಟ್ಟಿಕೊಂಡು ಬಂದಾಗ ಈ ಮರವೇ ತನ್ನನ್ನು ಕಾಪಾಡಿತೆಂಬುದನ್ನು ಮನಸ್ಸಿಗೆ ತಾರದೆ ಆ ಹೆಮ್ಮರವನ್ನೇ ಕಡಿದು ಹಾಕಿದ. ಹೀಗೆ ಲೋಕದಲ್ಲಿ ವಿಚಾರಶೂನ್ಯರಾದ ಉಪಕಾರ ಹೀನರು ಹಲವರಿರುವರು.

ಮುನಿ ಹೇಳಿದ ಕತೆ ೮

ಅಮರಖೇಡ ಎಂಬ ಊರು. ಅಲ್ಲಿ ಯಜ್ಞದತ್ತೆಯೆಂಬ ಬ್ರಾಹ್ಮಣಿಯೊಡನೆ ಚಂದ್ರದತ್ತನೆಂಬ ಬ್ರಾಹ್ಮಣ ವಾಸಿಸುತ್ತಿದ್ದನು. ಅವರಿಗೊಂದು ಗಂಡು ಮಗು. ಆ ಬ್ರಾಹ್ಮಣ ಒಂದು ಮುಂಗಸಿಯನ್ನು ಸಾಕಿದ್ದ. ಮುಂಗಸಿಯೆಂದರೆ ಆ ಗಂಡ ಹೆಂಡತಿಗೆ ತುಂಬಾ ಪ್ರೀತಿ.

ಒಂದು ದಿನ ಯಜ್ಞದತ್ತೆ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಎಲ್ಲಿಯೋ ನೆರೆಮನೆಗೆ ತಿರುಗಾಟಕ್ಕೆ ಹೋದಳು. ಮನೆಯೊಳಗೆ ತೊಟ್ಟಿಲಲ್ಲಿ ಮಗು; ಜಗಲಿಯಲ್ಲಿ ಮುಂಗಸಿ ಮಾತ್ರವಲ್ಲದೆ ಬೇರೆ ಯಾರೂ ಇರಲಿಲ್ಲ. ಆ ವೇಳೆಯಲ್ಲಿ ಒಂದು ನಾಗರಹಾವು ಕಂಡಿಯ ಮೂಲಕ ಮಗು ಮಲಗಿದ್ದ ಕೋಣೆಗೆ ನುಗ್ಗಿತು. ಹೊರಜಗಲಿಯಲ್ಲಿ ಮಗುವಿನ ತೊಟ್ಟಿಲು ಕಟ್ಟಿದ್ದ ಕೋಣೆಯ ಹೊರಬಾಗಿಲಲ್ಲಿ ಕುಳಿತಿದ್ದ ಮುಂಗಸಿಗೆ ಹಾವು ಕಂಡಿತು. ಹಾವನ್ನು ಕಂಡ ಮುಂಗಸಿ ಸುಮ್ಮಗಿರುತ್ತದೆಯೇ? ಅದು ಒಂದೇ ನೆಗೆತಕ್ಕೆ ಹಾವಿನ ಕಡೆಗೆ ಹಾರಿ ಹಾವನ್ನು ತುಂಡು ತುಂಡು ಮಾಡಿಬಿಟ್ಟಿತು. ಹಾವಿನ ನೆತ್ತರು ಮುಂಗಸಿಯ ಮುಸುಡಿಗೆ ಅಂಟಿಕೊಂಡಿತು. ನೆತ್ತರು ಮುಸುಡಿನ ಮುಂಗಸಿ ಜಗಲಿಯಲ್ಲಿ ಬ್ರಾಹ್ಮಣಿಯ ಬರವನ್ನೇ ಹಾರೈಸಿ ಕುಳಿತಿತ್ತು.

ಬ್ರಾಹ್ಮಣಿ ನೆರೆಮನೆಯಿಂದ ಮರಳಿದಳು. ಮುಂಗಸಿ ಬ್ರಾಹ್ಮಣಿಯ ಬಳಿಗೋಡಿ, ಬ್ರಾಹ್ಮಣಿಯ ಪಾದಮೂಲದಲ್ಲಿ ಸಂತಸದಿಂದ ಹೊರಳಾಡಿತು. ಮುಂಗಸಿಯ ಮುಸುಡಲ್ಲಿ ನೆತ್ತರನ್ನು ಕಂಡು ಬ್ರಾಹ್ಮಣಿ ನಡುಗಿದಳು. ಕೋಪದಿಂದ ಕೆಂಪಾದಳು. ಬಳಿಯಲ್ಲಿದ್ದ ಕಲ್ಲುಗುಂಡನ್ನು ಎತ್ತಿ ಮುಂಗ

ಸಿಯ ತಲೆಗೆ ಗುರಿಯಿಟ್ಟಳು. ಮುಂಗಸಿ ಒಂದೇ ಏಟಿಗೆ ತಲೆಯೊಡೆದು ಪ್ರಾಣ ಬಿಟ್ಟಿತು.

"ಅಯ್ಯೋ! ನನ್ನ ಮಗುವಿಗೇನಾಯಿತೋ" ಎಂದು ಅಳುತ್ತಾ ತೊಟ್ಟಿಲ ಬಳಿಗೋಡಿದಳು. ಮಗು ತೊಟ್ಟಿಲಲ್ಲಿ ಹಾಯಾಗಿ ನಿದ್ದೆ ಮಾಡು ತ್ತಿತ್ತು. ತೊಟ್ಟಿಲ ಬಳಿ ನೆಲದಲ್ಲಿ ಹಾವು ತುಂಡುತುಂಡಾಗಿ ಸತ್ತು ಬಿದ್ದಿತ್ತು.

ಅದನ್ನು ಕಂಡು ಹೆಂಗುಸಿಗೆ ತಾನು ಮಾಡಿದ ತಪ್ಪಿನ ಅರಿವಾಯಿತು. ಅವಿಚಾರದಿಂದ ಮಾಡಿದ ಅಕಾರ್ಯಕ್ಕಾಗಿ ಅವಳು ಹಳಹಳಿಸಿದಳು. ಆದುದರಿಂದ ವಿಚಾರಿಸಿ ಕಾರ್ಯ ಮಾಡಬೇಕು.

ಸೆಟ್ಟಿ ಹೇಳಿದ ಕತೆ ೯

ಕಾಮ್ಯಕವೆಂಬ ಕಾಡಿನಲ್ಲಿ ಒಂದು ಹಳೆ ಬಾವಿ. ಒಮ್ಮೆ ಆ ಬಾವಿ ಯಲ್ಲಿ ಒಂದು ನಾಗರಹಾವು; ಒಂದು ಹುಲಿ; ಒಂದು ಕಪಿ; ಒಬ್ಬ ಅಕ್ಕ ಸಾಲೆ ಹೀಗೆ ನಾಲ್ಕು ಜೀವಿಗಳು ದಾರಿತಪ್ಪಿ ಬಿದ್ದು ಬಿಟ್ಟವು. ಆ ನಾಲ್ಕು ಜೀವಿಗಳೂ ಹೇಗಾದರೂ ಮೇಲೆ ಬರಬೇಕೆಂದು ಚಡಪಡಿಸುತ್ತಿದ್ದುವು.

ಆ ವೇಳೆಗೆ ಸರಿಯಾಗಿ ಕಾಶಿಯಾತ್ರೆಗೆ ಹೋಗುತ್ತಿದ್ದ ಕೌಶಿಕನೆಂಬ ಬ್ರಾಹ್ಮಣನು ಆ ಕಾಡಿನ ದಾರಿಯಾಗಿ ಆ ಬಾವಿಯ ಬಳಿಗೆ ಬಂದನು. ಅವನು ಬಾಯಾರಿ ಕಂಗಾಲಾಗಿದ್ದನು. ಅವನು ತನ್ನ ಬಳಿಯಿದ್ದ ಚೆಂಬಿಗೆ ಹಗ್ಗ ಕಟ್ಟಿ ಬಾವಿಗೆ ಇಳಿಸಿ ನೀರು ತುಂಬಿತೆಂದು ತಿಳಿದು ಚೆಂಬನ್ನು ಮೇಲ ಕ್ಕೆತ್ತಿದನು. ಮೇಲಕ್ಕೆಳೆಯುತ್ತಾನೆ! ಚೆಂಬನ್ನು ಹಿಡಿದುಕೊಂಡು ಹಗ್ಗ ದಲ್ಲಿ ನೇತಾಡಿಕೊಂಡು ಒಂದು ಹುಲಿ ಮೇಲೆ ಬಂತು! ಬ್ರಾಹ್ಮಣ ಹೆದರಿ ಹಿಪ್ಪೆಯಾದ. ಆದರೆ ಹುಲಿ ಮಾತ್ರ ಬ್ರಾಹ್ಮಣನಿಗೆ ಯಾವ ಬಗೆಯ ಪೀಡೆ ಯನ್ನು ಕೊಡಲಿಲ್ಲ. ಬದಲಾಗಿ "ಬ್ರಾಹ್ಮಣಾ! ಬಾವಿಯಲ್ಲಿ ಬಿದ್ದು ಸಾಯು ತ್ತಿದ್ದ ನನ್ನನ್ನು ನೀನು ಬದುಕಿಸಿದೆ. ಅದಕ್ಕಾಗಿ ನಿನ್ನ ಉಪಕಾರವನ್ನು ನಾನು ಎಂದಿಗೂ ಮರೆಯೆನು" ಎಂದು ಬ್ರಾಹ್ಮಣನಿಗೆ ಅಡ್ಡಬಿದ್ದು ಹೊರಟು ಹೋಯಿತು.

ಬ್ರಾಹ್ಮಣನು ಮತ್ತೊಮ್ಮೆ ಹಗ್ಗವನ್ನು ಬಾವಿಗಿಳಿಸಿದನು; ಈ ಸಲ ಹಗ್ಗವನ್ನೆಳೆದಾಗ ಒಂದು ಹಾವು ಬರಬೇಕೇ? ಹಾವನ್ನು ಕಂಡು ಬ್ರಾಹ್ಮಣ

ಹೆದರಿದ. ಹಾವು ಬ್ರಾಹ್ಮಣನಿಗೇನೂ ಕೇಡು ಮಾಡಲಿಲ್ಲ; ಬದಲಾಗಿ, "ನೀನು ನಿನ್ನ ಪ್ರಾಣ ಉಳಿಸಿದೆ. ನಿನ್ನ ಉಪಕಾರವನ್ನು ನಾನೆಂದಿಗೂ ಮರೆಯಲಾರೆ. ನಿನಗೇನಾದರೂ ಆಪತ್ತು ಬಂದಾಗ ನನ್ನನ್ನು ನೆನಸು" ಎಂದು ಹೇಳಿ ಹೊರಟುಹೋಯಿತು.

ಬ್ರಾಹ್ಮಣ ಮೂರನೆಯ ಬಾರಿ ಹಗ್ಗ ಇಳಿಸಿ ಮೇಲಕ್ಕೆ ಎಳೆದಾಗ ಒಂದು ಕಪಿ ಬಳ್ಳಿ ಹಿಡಿದು, ಮೇಲೆ ಬಂತು. ಆ ಕಪಿಯೂ ಬ್ರಾಹ್ಮಣನಿಗೆ ಕೈಮುಗಿದು, "ನೀನು ಯಾತ್ರೆ ಮುಗಿಸಿ ಹಿಂದಿರುಗಿ ಬರುವಾಗ ನಾನು ವಾಸಮಾಡುವ ವನಕ್ಕೆ ಬಂದು ಹೋಗಬೇಕು" ಎಂದು ಹೇಳಿ ಹೊರಟು ಹೋಯಿತು.

ನಾಲ್ಕನೆಯ ಬಾರಿ ಬ್ರಾಹ್ಮಣ ಹಗ್ಗವಿಳಿಸಿ, ನೀರು ಸೆಳೆದ. ಆಗ ಒಬ್ಬ ಅಕ್ಕಸಾಲೆ ಮೇಲೆ ಬಂದ. "ನೀನಿಲ್ಲದಿದ್ದರೆ ನಾನು ಬಾವಿಯಲ್ಲೇ ಸಾಯ ಬೇಕಿತ್ತು. ನಿನ್ನಿಂದಾಗಿ ನಾನು ಬದುಕಿದೆ. ನಿನ್ನ ಉಪಕಾರ ಹಿರಿದು. ನೀನು ಯಾತ್ರೆಯಿಂದ ಹಿಂದಿರುಗುವಾಗ ನನ್ನ ಗುಡಿಸಲಿಗೆ ದಯಮಾಡಿಸ ಬೇಕು" ಎಂದು ಹೇಳಿ ಹೊರಟು ಹೋದನು.

ಕೌಶಿಕನು ಯಾತ್ರೆ ಮುಗಿಸಿ ಕಾಮ್ಯಕವನದ ದಾರಿಯಾಗಿ ಹಿಂದಿರು ಗಿದನು; ತಾನು ಬಾವಿಯಿಂದ ಮೇಲಕ್ಕೆತ್ತಿದ್ದ ಕಪಿ ವಾಸಿಸುತ್ತಿದ್ದ ವನಕ್ಕೆ ನಡೆದನು. ಕಪಿ ಬ್ರಾಹ್ಮಣನನ್ನು ಆದರದಿಂದ ಬರಮಾಡಿಕೊಂಡು, ರುಚಿ ರುಚಿಯಾದ ಹಣ್ಣುಹಂಪಲುಗಳನ್ನು ಬ್ರಾಹ್ಮಣನ ಮುಂದಿಟ್ಟು ಉಪಚರಿ ಸಿತು.

ಬ್ರಾಹ್ಮಣನು ಕಪಿ ನಿವಾಸದಿಂದ ಹೊರಟು ಹುಲಿಯ ಗುಹೆಗೆ ಬಂದನು. ಹುಲಿ ಕೂಡ ಬ್ರಾಹ್ಮಣನಿಗೆ ಮರ್ಯಾದೆ ಮಾಡಿ, ಹಲವು ಬಗೆಯ ಆಭರಣಗಳನ್ನು ಬ್ರಾಹ್ಮಣನಿಗೆ ಕಾಣಿಕೆಯಿತ್ತು ಆದರಿಸಿತು.

ಹುಲಿ ಕೊಟ್ಟ ಚಿನ್ನಾಭರಣಗಳನ್ನು ಹಿಡಿದುಕೊಂಡು ಬ್ರಾಹ್ಮಣ ಅಕ್ಕಸಾಲೆಯ ಗುಡಿಸಲಿಗೆ ನಡೆದನು. ಅಕ್ಕಸಾಲೆ ಬ್ರಾಹ್ಮಣನನ್ನು ಅನೇಕ ತರದಲ್ಲಿ ಉಪಚರಿಸಿ ಬ್ರಾಹ್ಮಣನು ಅಕ್ಕಸಾಲೆಯ ಕೈಯಲ್ಲಿ ತನ್ನ ಬಳಿ ಯಿದ್ದ ಚಿನ್ನಾಭರಣಗಳನ್ನು ಕೊಟ್ಟು "ಇವನ್ನೆಲ್ಲಾ ಕರಗಿಸಿ ಒಂದೇ ಗಟ್ಟಿ ಮಾಡಿ ಕೊಡು" ಎಂದು ಹೇಳಿದನು. ಅಕ್ಕಸಾಲೆಗೆ ಬಂಗಾರ ಕಂಡು

ಬಾಯಲ್ಲಿ ನೀರೂರಿತು. ಈ ಬಡ ಬ್ರಾಹ್ಮಣನಿಗೇಕೆ? ನಾಸಿದನ್ನು ನಾಡೊಡೆಯನಿಗೊಪ್ಪಿಸಿದರೆ, ನನಗೆ ತುಂಬಾ ಬಹುಮಾನ ದೊರಕುವುದೆಂದು ಯೋಚಿಸಿದನು. ಹಾಗೆಯೇ ಆಭರಣಗಳನ್ನು ಊರ ಒಡೆಯನಿಗೊಪ್ಪಿಸಿ, ಯಾರೋ ಬಡಬ್ರಾಹ್ಮಣ ಕಳವು ಮಾಡಿ ತಂದ ಒಡವೆಯಿದೆಂದು ಚಾಡಿ ಹೇಳಿದನು. ಅರಸು ವಿಚಾರ ಮಾಡದೆ, ಕೂಡಲೇ ಆ ಬ್ರಾಹ್ಮಣನನ್ನು ಸೆರೆಯಲ್ಲಿರಿಸಲು ದೂತರಿಗೆ ಅಪ್ಪಣೆಯಿತ್ತನು.

ಕೌಶಿಕ ಬ್ರಾಹ್ಮಣನಿಗೆ ಅರಸು ತನ್ನನ್ನೇಕೆ ಸೆರೆಯಲ್ಲಿರಿಸಿದನೆಂಬ ವಿಚಾರವೇ ಹೊಳೆಯಲಿಲ್ಲ. ಅವನಿಗೆ ಸೆರೆಮನೆಯಲ್ಲಿದ್ದಾಗ ತಾನು ಬಾವಿಯಿಂದೆತ್ತಿದ ಸರ್ಪದ ನೆನಪಾಯಿತು. ಅವನು ಸರ್ಪವನ್ನು ನೆನೆದನು. ಕೂಡಲೇ ಸರ್ಪವು ಬ್ರಾಹ್ಮಣನ ಎದುರು ಪ್ರತ್ಯಕ್ಷವಾಯಿತು. ನೆನಸಿದ ಕಾರಣವೇನೆಂದು ಕೇಳಿತು. ಬ್ರಾಹ್ಮಣನು ನಡೆದ ಸಂಗತಿಯನ್ನೆಲ್ಲಾ ಸರ್ಪಕ್ಕೆ ತಿಳಿಸಿದನು. ಸರ್ಪವು ಬ್ರಾಹ್ಮಣನ ಹತ್ತಿರ ಏನೋ ಗುಟ್ಟು ತಿಳಿಸಿ ಹೊರಟುಹೋಯಿತು.

ಸೆರೆಮನೆಯಿಂದ ಹೊರಟು ಹೋದ ಸರ್ಪ ಅಂಗಳದಲ್ಲಿ ಆಡುತ್ತಿದ್ದ ಅರಸು ಮಗನಿಗೆ ಕಚ್ಚಿತು. ಅರಸು ಮಗನು ವಿಷವೇರಿ ಬಿದ್ದುಬಿಟ್ಟನು. ಅರಮನೆಯಲ್ಲಿ ಬೊಬ್ಬೆಯೇ ಬೊಬ್ಬೆ. ಈ ಬೊಬ್ಬೆ ಸೆರೆಮನೆಯಲ್ಲಿದ್ದ ಬ್ರಾಹ್ಮಣನಿಗೂ ಕೇಳಿಸಿತು.

ಬ್ರಾಹ್ಮಣನು ಸೆರೆಮನೆಯ ಕಾವಲುಗಾರರೊಡನೆ ತನಗೆ ವಿಷ ಚಿಕಿತ್ಸೆ ಗೊತ್ತಿದೆಯೆಂದು ಹೇಳಿದನು. ಅವರು ಅದನ್ನು ಅರಸನಿಗೆ ತಿಳಿಸಿದರು. ಅರಸು ಕೂಡಲೇ ಬ್ರಾಹ್ಮಣನನ್ನು ಕರೆಸಿದನು. ಬ್ರಾಹ್ಮಣನು ಸರ್ಪ ವಿಷಕ್ಕೆ ಚಿಕಿತ್ಸೆ ಮಾಡಿ ಅರಸು ಮಗನನ್ನು ಬದುಕಿಸಿದನು. ಅರಸನಿಗೆ ಸಂತೋಷವಾಯಿತೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ! ಬ್ರಾಹ್ಮಣನಿಗೆ ಅಕ್ಕಸಾಲೆ ಮಾಡಿದ ಮೋಸ ತಿಳಿದು ಅರಸು ಅಕ್ಕಸಾಲೆಯನ್ನು ಶಿಕ್ಷಿಸಿದನು. ಬ್ರಾಹ್ಮಣನನ್ನು ಸನ್ಮಾನಿಸಿ ಬೀಳ್ಕೊಟ್ಟನು.

ಮುನಿ ಹೇಳಿದ ಕತೆ ೧೦

ಉಜ್ಜಯಿನೀ ಪಟ್ಟಣವನ್ನು ಮಹೇಂದ್ರರಾಜನು ಆಳುತ್ತಿದ್ದನು. ಆ ರಾಜನ ರಾಜಶ್ರೇಷ್ಠಿ ಕುಬೇರನೆಂಬಾತನು ಒಮ್ಮೆ ದ್ವೀಪಾಂತರಕ್ಕೆ ವ್ಯಾಪಾರ

ಕ್ಕಾಗಿ ಹೋಗಿ ಹಿಂದೆ ಬರುವಾಗ ಒಂದು ಮಾವಿನ ಹಣ್ಣನ್ನು ತಂದು, ರಾಜನಿಗೆ ಕಾಣಿಕೆ ಇತ್ತನು. ಆ ಹಣ್ಣನ್ನು ತಿಂದರೆ ಸಕಲ ರೋಗಗಳೂ ನಾಶವಾಗುವುವು. ಸಕಲ ರುಜಾಪಹಾರವೆಂದು ಆ ಹಣ್ಣಿನ ಹೆಸರು. ತಾನೊಬ್ಬನೇ ಆ ಹಣ್ಣನ್ನೇಕೆ ತಿನ್ನಬೇಕು? ಇದು ಅರಸಿಗೆ ಯೋಗ್ಯವೆಂದು ಯೋಚಿಸಿ ಅರಸನಿಗಿತ್ತನು. ಅರಸನೂ ಹಾಗೆಯೇ ಹಣ್ಣಿನ ಉಪ ಯೋಗವನ್ನು ಸಕಲರೂ ಪಡೆಯಲಿ" ಎಂದು ಚಿಂತಿಸಿ, ಅರಮನೆಯ ನಂದನ ದಲ್ಲಿ ಆ ಹಣ್ಣನ್ನು ನೆಡಿಸಿದನು.

ಮಾವಿನಗಿಡ ಮರವಾಗಿ ಹೂಬಿಟ್ಟು ಕಾಯಾಗಿ ಹಣ್ಣಾಯಿತು. ಮರ ಹಣ್ಣುಗಳಿಂದ ತುಳುಕುತ್ತಿದ್ದಾಗ ಒಂದು ಗರುಡಪಕ್ಷಿ ಒಂದು ವಿಷಸರ್ಪ ವನ್ನೆತ್ತಿಕೊಂಡು ಬಂದು ಮಾವಿನಮರದ ಮೇಲೆ ಕುಳಿತಿತು. ಸರ್ಪದ ವಿಷ ಒಂದು ಹಣ್ಣಿಗೆ ತಗಲಿತು. ಅದೇ ಹಣ್ಣು ಕಳಿತು ಮೊದಲಬಾರಿಗೆ ಕೆಳಗುರುಳಿತು. ತೋಟದ ಯಜಮಾನನು ಹಣ್ಣನ್ನು ತಂದು ಅರಸನಿಗೆ ಕೊಟ್ಟನು. ಅರಸು ಆ ಹಣ್ಣನ್ನು ತಿಂದ ಕೂಡಲೆ ಕಾಯ ಬಿಟ್ಟು ಕೈಲಾ ಸಕ್ಕೆ ಸಂದನು.

ಇದನ್ನು ಕಂಡು ಅರಸನಿಗೆ ದುಃಖ ಕೋಪಗಳೆರಡೂ ಏಕಕಾಲ ಕ್ಕೇರಿದುವು. "ಆ ಮರವನ್ನು ಕೂಡಲೇ ಕಡಿದು ಹಾಕಿ ಬಿಡಿ" ಎಂದು ಆಳುಗಳಿಗೆ ಅಪ್ಪಣೆಯಿತ್ತನು. ಕುಬೇರ ಸೆಟ್ಟಿಗೂ ಬೇಕಾದಷ್ಟು ಬೈಗಳು ಸಿಕ್ಕಿತು. ಅರಸಾಳುಗಳು ಮಾತ್ರ ಆ ಮರವನ್ನು ಕಡಿದು ಹಾಕಲು ಹೊತ್ತುಗಳೆದರು, ಅಷ್ಟರಲ್ಲಿ ಒಬ್ಬ ಕುಷ್ಟರೋಗಿ ತಾನು ಈ ವಿಷದ ಹಣ್ಣನ್ನು ತಿಂದು ಸಾಯುವೆನೆಂದು ಅಲ್ಲಿಗೆ ಬಂದನು. ಹಣ್ಣನ್ನೊಂದನ್ನು ಹೆಕ್ಕಿ ಕಚ್ಚಿ ಕಚ್ಚಿ ತಿಂದನು. ಹೇಳುವುದೇನು? ನೋಡುವುದೇನು? ಒಂದೇ ಒಂದು ಕ್ಷಣದಲ್ಲಿ ಅವನ ರೋಗಗಳೆಲ್ಲಾ ಮಾಯವಾಗಿ ಅವನ ಮೈ ಬಂಗಾರದ ಬಣ್ಣಕ್ಕೆ ತಿರುಗಿತು. ಆಗ ಆ ಊರಿನಲ್ಲಿದ್ದ ರೋಗಿಗಳೂ, ಕುಂಟರೂ, ಕುರುಡರೂ ಅಲ್ಲಿ ಬಂದು ಹಣ್ಣು ತಿಂದು ಸುಖಿಗಳಾದರು. ಆದುದರಿಂದ ಯಾರೂ ಅವಿವೇಕಿಗಳಾಗಿ ವರ್ತಿಸಬಾರದು.

ಸೆಟ್ಟಿ ಹೇಳಿದ ಕತೆ ೧೧

ನಂದಗಿರಿಯೆಂಬ ಪಟ್ಟಣದಲ್ಲಿ ಸಾನಂದನೆಂಬ ಬೇಡನು ವಾಸಿಸುತ್ತಿದ್ದನು. ಒಮ್ಮೆ ಆ ಬೇಡನು ದೈತ್ಯವನವೆಂಬ ಒಂದು ಅರಣ್ಯಕ್ಕೆ ಹೋದನು.

ದೈತ್ಯವನದಲ್ಲಿ ಸುತ್ತಾಡಿ ಸುಳಿದಾಡಿ ಬೇಡನು ಬಳಲಿ ಬೆಂಡಾದನು. ಬಾಯಾರಿ ಗಂಟಲಾರಿತು. ನೀರು ಹುಡುಕುತ್ತ ಎಲ್ಲಿಯೂ ನೀರು ಸಿಗದೆ ನಿರಾಶನಾಗಿ ಒಂದೆಡೆ ಕುಳಿತನು. ಇದನ್ನು ಒಂದು ಕಪಿ ಕಂಡಿತು. ಅದು ಸಾನಂದನ ಮೇಲೆ ದಯಗೊಂಡು ನೀರಿರುವ ಸ್ಥಳವನ್ನು ತೋರಿಸಿತು. ಬೇಡನು ನೀರು ಕುಡಿದು ದಣಿವಾರಿಸಿದನು.

"ಈಗ ನಾನು ಬಹುದೂರ ನಡೆಯಬೇಕು. ದಾರಿಯಲ್ಲಿ ಬಾಯಾರಿದರೆ ಮಾಡುವುದೇನು? ಅದಕ್ಕಾಗಿ ಈ ಕಪಿಯನ್ನು ಕೊಂದು ಇದರ ಚರ್ಮದಿಂದ ಚೀಲ ಮಾಡಿ ಅದರಲ್ಲಿ ನೀರು ತುಂಬಿಸಿಕೊಂಡು ಹೋಗಬೇಕು" ಎಂದು ಯೋಚಿಸಿದನು; ಮತ್ತು ಬಳಿಯಲ್ಲಿದ್ದ ಬಿಲ್ಲನ್ನೆತ್ತಿ ಬಾಣ ಹೂಡಿ ಕಪಿಯನ್ನು ಕೊಂದು, ಚರ್ಮ ಸುಲಿದೇ ಬಿಟ್ಟನು. ಹೀಗೆ ಹಲವರು ಉಪಕಾರಶೂನ್ಯರಿದ್ದಾರೆ.

ಮುನಿ ಹೇಳಿದ ಕತೆ ೧೨

ಕೌಶಾಂಬಿ ಎಂಬ ನಗರದಲ್ಲಿ ವಿಶಾಖಾನಂದನನೆಂಬ ವ್ಯಾಪಾರಿಯಿದ್ದನು. ಆತನ ಮಗ ಅಂಗಾರಕ. ಅಂಗಾರಕಕುಮಾರ ಒಮ್ಮೆ ಹಲವು ರತ್ನಗಳನ್ನು ಒಂದು ತಟ್ಟೆಯಲ್ಲಿಟ್ಟು ಹೊರಜಗಲಿಯ ಮೇಲೆ ಕುಳಿತು ಅವುಗಳನ್ನು ಪರೀಕ್ಷಿಸುತ್ತಿದ್ದನು.

ಅದೇ ಕಾಲದಲ್ಲಿ ಮೇಧಾವಿ ಎಂಬ ಮುನಿಗಳು ಆ ವ್ಯಾಪಾರಿಯ ಮನೆಗೆ ಚರಿಗೆಗೆ ಬಂದರು. ಮುನಿಗಳನ್ನು ಕಂಡು ಅಂಗಾರಕನು ಕುಳಿತಲ್ಲಿಂದ ಎದ್ದು ಮುನಿಗಳನ್ನೆದುರುಗೊಳ್ಳಲು ಮುಂದುವರಿದನು. ಅದೇ ಸಮಯದಲ್ಲಿ ಅಂಗಳದಲ್ಲಾಡುತ್ತಿದ್ದ ನವಿಲೊಂದು ಜಗಲಿಯನ್ನೇರಿ ತಟ್ಟೆಯಲ್ಲಿದ್ದ ರತ್ನವೊಂದನ್ನು ಕಚ್ಚಿಕೊಂಡು ನುಂಗಿಬಿಟ್ಟಿತು.

ಮುನಿಗಳು ಅಂಗಾರಕನ ಆತಿಥ್ಯ ಪಡೆದು ಹಿಂದಿರುಗಿದರು. ಅಂಗಾರಕನಿಗೆ ರತ್ನಗಳ ನೆನಪಾಯಿತು. ಬಂದು ನೋಡುತ್ತಾನೆ, ತಟ್ಟೆಯಲ್ಲಿ ಒಂದು

ರತ್ನವಿಲ್ಲ. "ಅರೇ! ರತ್ನವೇನಾಯಿತು?" ಎಂದು ಯೋಚಿಸುತ್ತ ಮುನಿಗಳ ಬೆನ್ನು ಹತ್ತಿದನು. ಮುನಿಗಳ ಬಳಿಗೈದಿ ಮುನಿಗಳನ್ನು ಬೇಡಿಕೊಂಡು ಮತ್ತೊಮ್ಮೆ ಮನೆಗೆ ಕರಕೊಂಡು ಬಂದನು. ಮುನಿಗಳನ್ನು ಆಸನದಲ್ಲಿ ಕುಳ್ಳಿರಿಸಿ, "ಮುನಿಗಳೇ! ನಿಮಗೇಕೆ ಆ ರತ್ನ? ದಯಮಾಡಿ ಹಿಂದೆ ಕೊಡ ಬಾರದೇ?" ಎಂದು ಕೇಳಿಕೊಂಡನು.

ಅಂಗಾರಕನ ಮಾತು ಕೇಳಿ ಮುನಿಗಳಿಗೆ ಆಶ್ಚರ್ಯ. "ಈಗೇನು ಮಾಡಲಿ? ರತ್ನವಿಲ್ಲೆಂದರೆ ಇವನು ನಂಬಲಾರ. ಈಗ ನನಗೆ ಅರ್ಹತ್ಪದವೇ ಶರಣು" ಎಂದು ಧ್ಯಾನಮಗ್ನರಾದರು.

ಮುನಿ ಮೌನಿಯಾದುದನ್ನು ಕಂಡು ಅಂಗಾರಕ ಸಿಟ್ಟಿನಿಂದ ಕಿಡಿಕಿಡಿಯಾದನು. ಬಳಿಯಲ್ಲಿದ್ದ ಕಟ್ಟಿಗೆಯ ತುಂಡೊಂದನ್ನು ತೆಗೆದು ಸೊಪ್ಪುಸೊವಡಾಗುವಂತೆ ಮುನಿಗೆ ಬಡಿದನು. ಮುನಿ ಹಂದಾಡಲಿಲ್ಲ. ಹಾಗೆ ಹೊಡೆಯುತ್ತಿದ್ದಾಗ ಹೊಡೆಯಲು ಉಪಯೋಗಿಸಿದ್ದ ಕಟ್ಟಿಗೆಯ ಚೂರೊಂದು ಸಿಡಿದು ಹಾರಿ ಅಂಗಳದಲ್ಲಿದ್ದ ನವಿಲಿನ ಕೊರಳನ್ನು ತುಂಡರಿಸಿತು. ನವಿಲಿನ ಕುತ್ತಿಗೆ ತುಂಡಾಗಿ ಅದು ನುಂಗಿದ್ದ ರತ್ನ ಹೊರಬಿತ್ತು. ಅದನ್ನು ಕಂಡ ಅಂಗಾರಕ ಸೆಟ್ಟಿ, ನೀರು ಮುಟ್ಟಿದ ಅಂಗಾರಕದಂತಾದನು. ತನ್ನ ತಪ್ಪಿನ ಅರಿವಾಗಿ ಮುನಿಗಳ ಕ್ಷಮೆ ಬೇಡಿ ತಾನೂ ಜಿನದೀಕ್ಷೆ ಹೊಂದಿದನು.

ಹೀಗೆ ಕಳ್ಳರು ಕಳ್ಳರಲ್ಲದವರನ್ನು ಕಾಡುವರು.

ಪ್ರಮಾಥಿಕುಮಾರ ಚರಿತ

(ಬ್ರಹ್ಮಚರ್ಯ)

ಜಂಬೂದ್ವೀಪದ ಭರತಕ್ಷೇತ್ರದ ವತ್ಸಕಾವತೀ ದೇಶದ ರಾಜಧಾನಿ ಕೌಶಾಂಬೀ ನಗರ. ಆ ನಗರದ ಅರಸು ದಂತಿಬಲ ಮಹಾರಾಜನು ಪಟ್ಟದರಸಿ ಧಾರಿಣೀದೇವಿಯೊಡನೆ ಪ್ರಜೆಗಳನ್ನು ಮಕ್ಕಳಂತೆ ಪರಿಪಾಲಿಸುತ್ತಾ ಸುಖಸಂಕಥಾವಿನೋದದಿಂದ ಕಾಲ ಕಳೆಯುತ್ತಿದ್ದನು. ಆ ರಾಜದಂಪತಿ

ಗಳಿಗೆ ಸಕಲ ಸದ್ಗುಣಗಳಿಂದ ಕೂಡಿದವನೂ, ಪರಮ ಜಿನಭಕ್ತನೂ ಆದ ಪ್ರಮಾಥಿಯೆಂಬ ಮಗನು. ಅರಸುಮಗ ಪ್ರಮಾಥಿಯ ಸದ್ಗುಣಗಳಿಗೆ ನಾಡಿನ ಪ್ರಜೆಗಳು ಮನಸೋತು ಮನವಾರೆ ಹೊಗಳುತ್ತಿದ್ದರಿಂದ ಮೇಲೆ ರಾಜಕುಮಾರನ ಗುಣಗಳನ್ನು ಬೇರೆ ವರ್ಣಿಸಬೇಕಾಗಿಲ್ಲವಷ್ಟೆ!

ವಸಂತಕಾಲದಲ್ಲಿ ಒಂದು ದಿನ ವನಪಾಲಕನು ದಂತಿಬಲ ಮಹಾ ರಾಜನ ಆಸ್ಥಾನಕ್ಕೆ ಬಂದು ಅರಸನನ್ನು ಕಾಣಿಸಿಕೊಂಡು, "ಮಹಾರಾಜ! ರಾಜೋದ್ಯಾನವು ನಾನಾ ವಿಧದ ಫಲಪುಷ್ಪಭರಿತವಾಗಿ ಮನೋಹರವಾಗಿ ಕಂಗೊಳಿಸತೊಡಗಿದೆ. ಮಹಾರಾಜರು ಪರಿವಾರ ಸಮೇತರಾಗಿ ವನಕ್ರೀಡೆಗೆ ಆಗಮಿಸುವ ಕೃಪೆ ಮಾಡಬೇಕು" ಎಂದು ಬೇಡಿಕೊಂಡನು. ಕೂಡಲೇ ಮಹಾರಾಜನು ವನಪಾಲಕನಿಗೆ ಊಟ ಉಡುಗೊರೆಗಳನ್ನು ಕೊಡಿಸಿ, "ಮರು ದಿನ ಪ್ರಾತಃಕಾಲದಲ್ಲಿ ರಾಜ ಪರಿವಾರದವರೆಲ್ಲರೂ ವನಕೇಳಿಗೆ ಹೊರಡಲು ಸಿದ್ಧರಾಗಿರಬೇಕೆ"ಂದು ಡಂಗುರ ಸಾರಿಸಿದನು.

ಮರುದಿನ ಸೂರ್ಯೋದಯಕ್ಕೆ ಸರಿಯಾಗಿ ದಂತಿಬಲ ಮಹಾರಾಜನು ತನ್ನ ಪಟ್ಟದರಾಣಿ ಧಾರಿಣೀದೇವಿ, ಮಗ ಪ್ರಮಾಥಿಕುಮಾರ, ಸೊಸೆ ಸೌಂದರದೇವಿ, ಮಂತ್ರಿಪರಿವಾರಗಳೊಂದಿಗೆ ಬಹಳ ಸಂಭ್ರಮದಿಂದ ವನಕ್ಕೆ ಹೊರಟನು. ಆ ರಾಜಪರಿವಾರದವರು ಆನೆ, ಕುದುರೆ, ಪಾಲಕಿ, ಲಾಲಕಿ ಮೊದಲಾದ ಹಲವು ಬಗೆಯ ವಾಹನಗಳನ್ನೇರಿ ಸಂತಸದಿಂದ ಗಲಭೆ ಮಾಡುತ್ತಾ, ಹೊತ್ತು ನೆತ್ತಿಗೇರುವ ಮೊದಲೇ ವನವನ್ನು ಸೇರಿದರು. ಅಲ್ಲಿ ಅವರು ತಂತಮ್ಮ ಇಷ್ಟದಂತೆ ವಿನೋದವಿಹಾರದಲ್ಲಿ ಮಗ್ನರಾದರು. ರಾಜನು ತನ್ನ ಪಟ್ಟದ ರಾಣಿಯೊಡನೆ ವನವನ್ನು ಸಂಚರಿಸುತ್ತಾ ತನ್ನ ಮನಃಪ್ರಿಯೆಗೆ ವನದ ಶೋಭೆಯನ್ನು ವರ್ಣಿಸುತ್ತಿದ್ದನು. "ಗಾಳಿ ಬೀಸಿದಾಗ ಒಂದ ಕ್ಕೊಂದು ತಾಗಿ ಶಬ್ದಿಸುವ ಕೆಂದಳಿರುಗಳ ಶಬ್ದ ಮದ್ದಳೆಯ ಶಬ್ದದಂತೆ, ಹಾಡುತ್ತಿರುವ ತುಂಬಿಗಳ ಸ್ವರ ಮಂಗಳಗೀತದಂತೆ, ಕೆಂಪಾದ ಚಿಗುರು ಗಳಿಂದ ನಳನಳಿಸುವ ಈ ಮಾವಿನಮರಗಳು ವಿವಾಹಮಂಟಪದಂತೆ ಶೋಭಿ ಸುವುದಲ್ಲವೆ?" ಹೀಗೆ ಹಲವು ವಿಧಗಳಲ್ಲಿ ವರ್ಣಿಸಿ ಸ್ವತಃ ಮಹಾರಾಜನೇ ಹಲವು ಬಗೆಯ ಹೂಗಳನ್ನು ಕೊಯಿದು ತನ್ನ ಪರಿವಾರದವರಿಗೆ ಕೊಟ್ಟು ತಾನೂ ಅವರಿಂದ ಕೊಂಡು ನಲಿದಾಡಿ ನಲಿಸಿದನು. ಹೀಗೆ ರಾಜಪರಿವಾರ

ಮಧ್ಯಾಹ್ನದ ವರೆಗೂ ವನದಲ್ಲಿ ಇಷ್ಟಬಂದಂತೆ ಸುತ್ತಾಡಿ ಜಲಕ್ರೀಡೆಯಾಡಿ, ಆ ಮೇಲೆ ಒಂದೆಡೆ ಕುಳಿತು ಮಧ್ಯಾಹ್ನದ ಆಹಾರ ಮುಗಿಸಿ ತಂತಮಗೆ ಇಷ್ಟ ಬಂದಲ್ಲಿ ತಂತಮ್ಮ ಪ್ರಿಯ ಪತ್ನಿಯರೊಡನೆ ವಿಶ್ರಮಿಸಿದರು.

ಪ್ರಮಾಥಿಕುಮಾರನೂ ಅವನ ಪತ್ನಿ ಸೌಂದರದೇವಿಯೂ ವನಕ್ರೀಡೆ ಜಲಕ್ರೀಡೆಗಳಿಂದ ತುಂಬಾ ಆನಂದಗೊಂಡು ಮೈಮರೆಯುವಂತಾಗಿದ್ದರು. ಆ ದಂಪತಿಗಳು ವನದ ಒಂದು ಮೂಲೆಯಲ್ಲಿ ಬಂದು ಅತಿ ಸೊಗಸಾದ ಕಂಕೇಲೀ ಮರದ ಕೆಳಗೆ ಎಳೆ ಚಿಗುರ, ಹೂಗಳ ಹಾಸಿನಲ್ಲಿ ವಿಶ್ರಮಿಸಿ ಕೊಂಡರು. ಆ ಚಿಗುರ ಹೂವಿನ ಹಾಸಿಗೆಯ ಮೇಲೆ ಆ ದಂಪತಿಗಳು ಇಂದ್ರ ರಂಭೆಯರಂತೆ, ರತಿಕಾಮರಂತೆ, ಶೋಭಿಸುತ್ತಿದ್ದರು. ಬಳಲಿ ಕುಳಿತಿದ್ದ ಆ ಸೌಂದರದೇವಿಗೆ ಹಕ್ಕಿಗಳ ಕಲಕಲವನ್ನೂ, ತುಂಬಿಗಳ ಝುಂಕಾರ ವನ್ನೂ ಕೇಳಿ, ವನಕೇಳಿ ಜಲಕೇಳಿಗಳಿಂದ ಆಯಾಸಗೊಂಡದ್ದೂ ಕಾರಣ ವಾಗಿ ಮೆಲ್ಲಗೆ ಕಣ್ಣಿಗೆ ನಿದ್ದೆ ಹತ್ತಿತು. ಆಕೆ ಪ್ರಿಯನ ತೊಡೆಯ ಮೇಲೆ ತಲೆಯಿಟ್ಟು ಮೆಲ್ಲಗೆ ನಿದ್ರಿಸತೊಡಗಿದಳು. ಹಾಗೆ ನಿದ್ರಿಸುತ್ತಿದ್ದ ಪ್ರಿಯ ಸತಿಯ ರೂಪನ್ನು ನೋಡಿ ಪ್ರಮಾಥಿಕುಮಾರನ ಸಂತಸವಿಮ್ಮಡಿಸಿತು. ಆತನು ತುಸುಹೊತ್ತು ಪ್ರಿಯತಮೆಯ ಅಂಗಸೌಂದರ್ಯವನ್ನು ನೋಡು ತ್ತಿದ್ದು ಮತ್ತೆ ಮೆಲ್ಲಗೆ ಆಕೆಯನ್ನು ಅಲ್ಲೇ ಚಿಗುರ ಹಾಸಿನ ಮೇಲೆ ಮಲಗಿಸಿ, ಆಚೆ ಈಚೆ ವನದ ಸೊಬಗನ್ನು ನೋಡತೊಡಗಿದನು.

ಆಗ ವಸಂತನೆಂಬ ಸಾಮಂತಪುತ್ರನೊಬ್ಬನು ತನ್ನ ಬಿಲ್ಲ ಬಲ್ಮೆಯನ್ನು ತನ್ನ ಮಡದಿಗೆ ತೋರಿಸಲೋಸುಗ ಮಾವಿನಕಾಯ್ಗಳ ಗೊಂಚಲಿಗೆ ಪುಂಖಾನುಪುಂಖವಾಗಿ ಬಾಣ ಬಿಟ್ಟು ಮಾವಿನ ಗೊಂಚಲನ್ನು ನೆಲಕ್ಕೆ ಬೀಳ ಬಿಡದೆ ಬಾಣದ ತುದಿಯಿಂದ ಹೆಕ್ಕಿ ತನ್ನ ಮಡದಿಗೆ ಕೊಡುತ್ತಿದ್ದನು. ಇದನ್ನು ಪ್ರಮಾಥಿಕುಮಾರನು ನೋಡಿ ಆಶ್ಚರ್ಯಗೊಂಡು, ಈ ವಸಂತ ಕುಮಾರನು ಬಿಲ್ಲುವಿದ್ಯೆಯಲ್ಲಿ ಜಾಣನು. ಇವನ ಈ ಕೈಚಳಕವನ್ನು ನನ್ನ ಮಡದಿ ಕಂಡರೆ "ನೀನೂ ನಿನ್ನ ಕೈಚಳಕವನ್ನು ತೋರಿಸೆಂದು" ಒತ್ತಾಯ ಪಡಿಸದಿರಳು. ಆದುದರಿಂದ ನಾನು ಕೂಡ ಈ ವಿದ್ಯೆಯನ್ನು ಕಲಿಯ ಬೇಕು. ಅದಕ್ಕಾಗಿ ಇವಳು ಎಚ್ಚರಗೊಳ್ಳುವ ಮೊದಲೇ ನಾನು ಇಲ್ಲಿಂದ ಹೊರಟು, ಬಿಲ್ಲ ಗುರುವೊಬ್ಬನನ್ನು ಅರಸಿ, ಬಿಲ್ಲು ವಿದ್ಯೆ ಕಲಿತು, ಬಿಲ್ಜಾಣ

ನಾಗಬೇಕು. ಅಷ್ಟರ ವರೆಗೆ ನನ್ನ ಈ ಪ್ರಿಯತಮೆ ಅರಮನೆಯಲ್ಲಿ ಸ್ವಲ್ಪ ಕಾಲ ಬೇಸರದಿಂದ ಇರಬೇಕಾದರೂ ಮುಂದೆ ನನ್ನ ಬಿಲ್ಜಾಣಿಕೆಯನ್ನು ಕಂಡು ಆಕೆಗೆ ಅದರಿಂದ ಸಂತಸವಾಗದೆ ಇರದು" ಎಂದು ಮನಸ್ಸಿನಲ್ಲಿ ನಿಶ್ಚಯ ಮಾಡಿದನು. ಮತ್ತು ಯಾರಿಗೂ ತನ್ನ ವಿಚಾರವನ್ನು ತಿಳಿಸದೆ ಆಗಲೇ ಅಲ್ಲಿಂದಲೇ ಹೊರಟು ಬಿಲ್ಲುವಿದ್ಯೆಗೆ ಹೆಸರಾದ ಪಾಟಲಿಪುತ್ರನಗರವನ್ನು ಸೇರಿದನು.

ಆ ಕಾಲದಲ್ಲಿ ಪಾಟಲೀಪುತ್ರ ನಗರದಲ್ಲಿ ಬಿಲ್ಲೋಜದ್ರೋಣರೆಂಬವರು ಪ್ರಸಿದ್ಧರಾಗಿದ್ದರು. ಪ್ರಮಾಥಿಕುಮಾರನು ದ್ರೋಣಾಚಾರ್ಯರನ್ನು ಕಂಡು, ಸಾಷ್ಟಾಂಗ ವಂದನೆ ಮಾಡಿ, ತಾನು ಬಂದ ಉದ್ದೇಶವನ್ನು ತಿಳಿಸಿದನು. ದ್ರೋಣರು ಪ್ರಮಾಥಿಕುಮಾರನನ್ನು ಬಳಿಯಲ್ಲಿ ಕುಳ್ಳಿರಿಸಿ ಮಾತನಾಡಿಸಿ, ಅವನ ನಡೆನುಡಿಗಳಿಗೆ ಮೆಚ್ಚಿ "ಶುದ್ಧ ಕ್ಷತ್ರಿಯ ವಂಶಜನೂ, ಪರಮ ಜಿನಭಕ್ತನೂ ಆದ ನಿನಗಲ್ಲದೆ ಇನ್ನಾರಿಗೆ ವಿದ್ಯೆ ಕಲಿಸಲಿ" ಎಂದು ಹೇಳಿ ತನ್ನ ಇತರ ಶಿಷ್ಯರನ್ನು ಬಳಿಗೆ ಕರೆದು ಪ್ರಮಾಥಿಕುಮಾರನನ್ನು ಅವರಿಗೆ ಪರಿಚಯ ಮಾಡಿಸಿ ಕೊಟ್ಟು ತನ್ನ ಮನೆಯಲ್ಲೇ ಇರಿಸಿಕೊಂಡು ಬಿಲ್ಲು ವಿದ್ಯೆಯನ್ನು ಕಲಿಸತೊಡಗಿದನು.

ಪ್ರಮಾಥಿಕುಮಾರನು ಶುಭದಿನದಲ್ಲಿ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿದನು. ಅವನು ತನ್ನ ಉದರಪೋಷಣೆಗಾಗಿ ದ್ರೋಣಾಚಾರ್ಯರನ್ನೇ ಆಶ್ರಯಿಸಲಿಲ್ಲ. "ಒಂದೇ ಕಡೆ ಕುಳಿತು, ಇನ್ನೊಬ್ಬರು ಹಾಕಿದ ಅನ್ನವನ್ನುಂಡು ಕಾಲ ಕಳೆದರೆ, ಅದರಿಂದ ಆಲಸ್ಯವುಂಟಾಗುವುದು. ಆಲಸ್ಯದಿಂದ ವಿದ್ಯೆಗೆ ಹಾನಿ, ಆದುದರಿಂದ ಭಿಕ್ಷಾನ್ನದಿಂದ ಜೀವಿಸುವುದೇ ಲೇಸು" ಎಂದು ಮನದಲ್ಲಿ ನಿಶ್ಚಯಿಸಿ ಭಿಕ್ಷಾನ್ನದಿಂದ ಉದರಪೋಷಣೆ ಮಾಡಿ, ಕೆಲವೇ ದಿನಗಳಲ್ಲಿ ಗುರುವಿನ ಪ್ರೀತಿಗೆ ಪಾತ್ರನಾಗಿ ಬಿಲ್ಜಾಣನಾದನು. ದ್ರೋಣರು ಕೂಡ "ಎನ್ನ ಚಟ್ಟರೊಳೆಲ್ಲಮೀತನೆ ಬಿಲ್ಲ ಬಲ್ಮೆಗೆ ಜಾಣನ । ತ್ಯುನ್ನತಂ ಕಡುವೀರನುತ್ತಮ ಜೈನನೂರ್ಜಿತ ತೇಜನು । ತ್ರಪ್ನಬುದ್ಧಿ ವಿವೇಕಿ ಧೈರ್ಯಪರಂ ಜಿನಸ್ತುತನೆಂದು ತಾಂ । ತನ್ನ ಚಿತ್ತದೊಳಾಗಳುಂ ಕಡುಗೂರ್ಮೆಯಿಂ ದ್ವಿಜವಂದಿತಂ ॥" ಎಂದು ಹೊಗಳುತ್ತಾ ಪುತ್ರನಂತೆ ನೋಡಿಕೊಳ್ಳುತ್ತಿದ್ದನು.

ಒಮ್ಮೆ ಒಂದು ದಿನ ದ್ರೋಣರು ತನ್ನ ಶಿಷ್ಯರೊಡಗೂಡಿ ನಗರದ ಹೊರಗಣ ವನದತ್ತ ಸಂಚಾರ ಹೊರಟಿದ್ದರು. ಅದೇ ಸಮಯದಲ್ಲಿ ಆ ನಗರದ ಅರಸು ಸಿಂಹಸೇನಮಹಾರಾಜನ ಪುತ್ರಿ ಚಂದ್ರಲೇಖೆಯೆಂಬವಳು ತನ್ನ ಸಖೀ ಪರಿವಾರದೊಡನೆ ಊರಹೊರಗಣ ಸಹಸ್ರಕೂಟ ಜಿನಾಲಯಕ್ಕೆ ಹೋಗಿ ದರ್ಶನಶುದ್ಧಿಯಾಗಿ ಹಿಂದಿರುಗಿ ಬರುತ್ತಿದ್ದಳು. ಇಷ್ಟರಲ್ಲಿ ಅರಮನೆಯ ಲಾಯದಲ್ಲಿದ್ದ ಮದ್ದಾನೆಯೊಂದು ಸಂಕಲೆಗಳನ್ನು ಮುರಿದು ಹಾನಾಹಾನಿಮಾಡುತ್ತ ಜನರನ್ನು ದಿಕ್ಕುದಿಕ್ಕಿಗೆ ಓಡಿಸುತ್ತಾ ಮಹಾರುದ್ರ ರೂಪವನ್ನು ತಾಳಿ ಅವರ ಕಡೆಗೆ ಓಡಿಬರುತ್ತಿತ್ತು. ಮಾರಿಯ ಮೂರಿಯಂತೆ ಮಾರ್ಗದಲ್ಲಿ ಓಡಾಡುತ್ತಿದ್ದ ಆ ಸೊಕ್ಕಿದ ಆನೆಯನ್ನು ಕಂಡು, ವೀರರು ಹಾರಿಹೋದರು; ಬಂಟರು ಗೆಂಟಾದರು, ಚಂದ್ರಲೇಖೆ ಕುಳಿತಿದ್ದ ಪಾಲಕಿಯನ್ನು ಹೊತ್ತುಕೊಂಡಿದ್ದ ಸೇವಕರು ಪಾಲಕಿಯನ್ನು ಅಲ್ಲೇ ನಡುಮಾರ್ಗದಲ್ಲಿ ಇರಿಸಿ ಕಾಲಿಗೆ ಬುದ್ಧಿಹೇಳಿದರು. ಆಗ ಚಂದ್ರಲೇಖೆ ಯೇನು ಮಾಡಿದಳು? ಅವಳು ಬೆಚ್ಚಲಿಲ್ಲ, ಬೆದರಲಿಲ್ಲ. ಅವಳು "ಪರಮ ಜಿನೇಂದ್ರ ಪಾದ ಪದುಮದ್ವಯಮಂ ಹೃದಯಾಂಬುಜಾತದೊಳ್ ಧರಿಯಿಸಿ, ಈ ಗಜೇಂದ್ರ ನಿಷ್ಠುರದ ಉಪಸರ್ಗವೊರ್ನೊದಲೆ ಪಿಂಗು ದಿನಂತನು ತನ್ನ ದಲ್ಲವೆಂದು ಪೆರ್ಮೆಯಂ ತೊರೆದು ಪಂಚಪದಗಳನ್ನು" ಧ್ಯಾನಿಸುತ್ತಿದ್ದಳು.

ಇದೆಲ್ಲಾ ವನಸಂಚಾರಕ್ಕೆ ಹೊರಟಿದ್ದ ದ್ರೋಣ ಶಿಷ್ಯರ ಕಣ್ಣ ಮುಂದೆ ಮಿಂಚಿನಂತೆ ಕಂಡಿತು. ಅವರಲ್ಲಿ ಪ್ರಮಾಥಿ ಕುಮಾರನು ಚಂದ್ರಲೇಖೆಯ ಜಿನಭಕ್ತಿಗೂ ಮನಸ್ಸಿನ ಧೈರ್ಯಕ್ಕೂ ಆಶ್ಚರ್ಯಪಟ್ಟು, ರಾಜ ಕುಮಾರಿಗೆ ಎದುರಾಗಿ ಓಡಿಬರುತ್ತಿದ್ದ ಮದ್ದಾನೆಗೆ ಎದುರಾಗಿ ಹೋಗಿ, ಪರಮ ಜಿನರನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಹೇಗೋ ಮಾಡಿ ಆ ಮದ್ದಾನೆಯ ಬೆನ್ನಮೇಲೇರಿ ಕುಳಿತುಬಿಟ್ಟನು; ಪ್ರಮಾಥಿ ಕುಮಾರನ ಬಲಕ್ಕೆ ಆನೆಯ ಬಲಕುಗ್ಗಿ ಹೋಯಿತು. ಆ ಮದ್ದಾನೆ ಸಾಕಿದ ನಾಯ ಹಾಗೆ ರಾಜಕುಮಾರನು ಹೇಳಿದ ಹಾಗೆ ತಿರುಗಿತು. ಅವನು ಆನೆಯ ಮೇಲೆ ಕುಳಿತುಕೊಂಡೇ ರಾಜಕುಮಾರಿಯ ಬಳಿಗೆ ಬಂದು, "ರಾಜಕುಮಾರಿ, ನಿನ್ನಂತಹ ಜಿನಭಕ್ತೆ ಯರನ್ನು ನಾನು ಕಂಡಿಲ್ಲ. ಮತ್ತಮಾತಂಗದಿಂದಾದ ಉಪಸರ್ಗ ಹಿಂಗಿತು. ಸ್ವಸ್ಥಚಿತ್ತಳಾಗಿ ಅರಮನೆಗೆ ನಡೆ" ಎಂದು ನಿವೇದಿಸಿಕೊಂಡನು. ಧ್ಯಾನಾ ಸಕ್ತಳಾಗಿದ್ದ ಚಂದ್ರಲೇಖೆ ಪ್ರಮಾಥಿ ಕುಮಾರನ ಮಾತನ್ನು ಕೇಳಿ ಕಣ್ಣು

ತೆರೆದು ಬಳಿಯಲ್ಲಿ ನಿಂತಿದ್ದ ಕುಮಾರನನ್ನು ನೋಡಿ "ಈ ಕುಮಾರನು ಪರಮಜಿನಭಕ್ತನಾಗಿರಬೇಕು. ಈ ಜನ್ಮದಲ್ಲಿ ಈತನೇ ನನಗೆ ಪತಿಯಾಗಬೇಕು" ಎಂದು ಮನಸ್ಸಿನಲ್ಲೇ ನಿಶ್ಚಯಿಸಿ, ರಾಜಕುಮಾರನಿಗೆ ಉಪಕಾರ ಸ್ಮರಣೆಹೇಳಿ, ಆಗಲೇ ಅಲ್ಲಿ ನೆರೆದಿದ್ದ ಪರಿವಾರದವರೊಡನೆ ಅರಮನೆಗೆ ತೆರಳಿದಳು. ಪ್ರಮಾಥಿ ಕುಮಾರನು ಆನೆಯನ್ನು ಲಾಯಕ್ಕೆ ಕೊಂಡು ಹೋಗಿ ಸಂಕಲೆಗಳಿಂದ ಬಿಗಿದು, ರಾಜನಿಂದ ಸನ್ಮಾನ ಪಡೆದು ಗುರುಮನೆಗೆ ಹಿಂದಿರುಗಿದನು. ದ್ರೋಣರೂ ತನ್ನ ಶಿಷ್ಯನ ಸಾಹಸಕ್ಕೆ ಅತ್ಯಾನಂದಗೊಂಡು ಹೊಗಳಿ ಹರಸಿದರು.

ಪ್ರಮಾಥಿ ಕುಮಾರನ ಧೈರ್ಯ ಸಾಹಸಗಳನ್ನು ಅವನಿಗೆ ದೊರೆತ ಸನ್ಮಾನವನ್ನು ಕಂಡು ದ್ರೋಣಾಚಾರ್ಯರ ಉಳಿದ ಶಿಷ್ಯರಲ್ಲಿ ಮತ್ಸರವು ಮರುಕೊಳಿಸಿತು; ಕಿಚ್ಚುರೊಚ್ಚಿಗೆದ್ದಿತು. ತನ್ನ ಶಿಷ್ಯರ ಮಾತ್ಸರ್ಯ ವೃತ್ತಿ ದ್ರೋಣರಿಗೂ ತಿಳಿಯದಿರಲಿಲ್ಲ. "ಈ ನನ್ನ ಶಿಷ್ಯರಿಗೆ ನಿಜಸ್ಥಿತಿಯು ಅರಿವಿಲ್ಲದೆ ಪ್ರಮಾಥಿ ಕುಮಾರನೊಡನೆ ಮತ್ಸರಿಸುತ್ತಿರುವರು. ಇವರಿಗೆ ವಿದ್ಯೆಯ ನಿಜವಾದ ಮಹತ್ವದ ಅರಿವಾಗಬೇಕು. ಇವರ ಅಹಂಕಾರವನ್ನು ಈಗಲೇ ಅಡಗಿಸಬೇಕು" ಎಂದು ಮನದಲ್ಲೇ ಚಿಂತಿಸಿ, ತಮ್ಮ ಶಿಷ್ಯರನ್ನೆಲ್ಲಾ ಬಳಿಗೆ ಕರೆದು, "ನಾಳೆ ನೀವೆಲ್ಲರೂ ನೀವು ಕಲಿತ ಬಿಲ್ಲಾಣಿಕೆಯನ್ನು ನನಗೆ ತೋರಿಸಬೇಕು. ಅದಕ್ಕಾಗಿ ನಾಳೆ ಸೂರ್ಯೋದಯಕ್ಕೆ ನಾವೆಲ್ಲರೂ ಊರ ಹೊರಗಿನ ಉದ್ಯಾನಕ್ಕೆ ಹೋಗಬೇಕು" ಎಂದು ಅಪ್ಪಣೆಯಿತ್ತರು.

ಮರುದಿನ ಸೂರ್ಯೋದಯಕ್ಕೆ ಸರಿಯಾಗಿ ದ್ರೋಣರೂ ದ್ರೋಣ ಶಿಷ್ಯರೂ ಊರಹೊರಗಿನ ಉದ್ಯಾನವನ್ನು ಸೇರಿದರು. ದ್ರೋಣರು ಶಿಷ್ಯರನ್ನೆಲ್ಲಾ ತನ್ನ ಬಳಿ ನಿಲ್ಲಿಸಿಕೊಂಡು, "ನಿಮ್ಮಲ್ಲಿ ಪ್ರತಿಯೊಬ್ಬನೂ ಅಲ್ಲಿ ತೋರುತ್ತಿರುವ ಮರಗಳಲ್ಲಿದ್ದ ತೆಂಗಿನಕಾಯಿಗಳಲ್ಲಿ ಒಂದೊಂದನ್ನೂ ನೆಲಕ್ಕೆ ಬೀಳಲೀಯದೆ ನನಗೆ ತಂದುಕೊಟ್ಟು ನಿಮ್ಮ ನಿಮ್ಮ ಬಿಲ್ಲಾಣಿಕೆಯನ್ನು ತೋರ್ಪಡಿಸಿರಿ" ಎಂದು ಅಪ್ಪಣೆಯಿತ್ತರು. ಆಗಲೇ ಆ ಶಿಷ್ಯರು ನಾನು ತಾನೆಂದು ಮುಂದೆ ಬಂದು ದ್ರೋಣರ ಪಾದಕ್ಕೆರಗಿ ಹರಕೆಗೊಂಡು ಬಿಲ್ಲು ಬಾಣಗಳನ್ನು ಕೊಂಡು ತೆಂಗಿನಕಾಯಿಗಳಿಗೆ ಗುರಿ ಇಟ್ಟರಾದರೂ ಒಂದೇ ಒಂದು ಕಾಯನ್ನಾದರೂ ನೆಲಕ್ಕೆ ಬೀಳದಂತೆ ತರಲಾಗಲಿಲ್ಲ. ಇದರಿಂದ

ಆ ಶಿಷ್ಯರ ಸ್ಥಿತಿ ರಾಹುಹಿಡಿದ ಚಂದ್ರನ ಸ್ಥಿತಿಯಾಯಿತು. ದ್ರೋಣರು ಇದನ್ನೆಲ್ಲಾ ಕಂಡು ಮನಸ್ಸಿನಲ್ಲೇ ನಗಾಡಿ, ಜಿನಭಕ್ತನಾದ ಪ್ರಮಾಥಿ ಕುಮಾರನನ್ನು ಬಳಿಗೆ ಕರೆದು "ನೀನು ತೆಂಗಿನಕಾಯ್ಗಳು ನೆಲಕ್ಕೆ ಬೀಳದಂತೆ ಕೊಂಡುಬಾ" ಎಂದು ಅಪ್ಪಣೆಯಿತ್ತರು. ಪ್ರಮಾಥಿ ಕುಮಾರನು ದ್ರೋಣರ ಹರಕೆಗೊಂಡು, ಪರಮಜಿನರನ್ನು ಮನದಲ್ಲಿ ಭಾವಿಸಿ, ಶಾಂತಚಿತ್ತನಾಗಿ ಪುಂಖಾನುಪುಂಖವಾಗಿ ಶರಸಂಧಾನಮಾಡಿ ತೆಂಗಿನಕಾಯಿಗಳು ನೆಲಕ್ಕೆ ಬೀಳದಂತೆ ಕೈಗೆ ಕೊಂಡು ದ್ರೋಣರ ಮುಂದೆ ತಂದಿರಿಸಿದನು. ಇದನ್ನು ಕಂಡು ಅಲ್ಲಿ ನೆರೆದ ದ್ರೋಣರೇ ಮೊದಲಾದ ಹಲವು ಮಂದಿ ಪ್ರಮಾಥಿ ಕುಮಾರನನ್ನು "ಭಾಪು ಭಾಪೆ"ಂದು ಹೊಗಳಿದರಾದರೂ, ಆ ದ್ರೋಣ ಶಿಷ್ಯರ ಮನಸ್ಸಿನ ಮತ್ಸರ ಹಿಂಗಲಿಲ್ಲ.

ಮತ್ಸರಿಗಳಾದ ಆ ಶಿಷ್ಯರು ಏನಾದರೂ ಮಾಡಿ ಈ ಪ್ರಮಾಥಿ ಕುಮಾರನನ್ನು ಸೋಲಿಸಬೇಕೆಂಬ ಮತ್ಸರದಿಂದ ಸಮಯಕಾಯುತ್ತಿದ್ದು ಅವನೊಡನೆ ಸ್ನೇಹಿತನಂತೆ ವರ್ತಿಸುತ್ತಿದ್ದರು. ಆ ಮತ್ಸರಿಗಳಾದ ಶಿಷ್ಯರು ಉಪಾಯಮಾಡಿ ಒಮ್ಮೆ ಉದ್ಯಾನಕ್ರೀಡೆಗೆ ತೆರಳಿದರು. ಅಲ್ಲಿ ಮೊದಲೇ ಗುಟ್ಟಿನ ಏರ್ಪಾಡಿನಂತೆ ಮದ್ದಾನೆಯೊಂದನ್ನು ಪ್ರಮಾಥಿ ಕುಮಾರನ ಮೇಲೆ ಬಿಡಿಸಿದರು. ಪ್ರಮಾಥಿ ಕುಮಾರನು ತನಗೆದುರಾಗಿ ಬರುತ್ತಿದ್ದ ಮದ್ದಾನೆಗೆ ಅಳುಕುವನೇ? ಒಂದೇ ಬಾಣದಿಂದ ಆನೆ ಕೀರಿಡುವಂತೆ ಮಾಡಿ ಬಿಟ್ಟನು. ಬಾಣದ ಬೇನೆಗೆ ಬೆಂಡಾದ ಆನೆ ನಾಯಂತಾಯಿತು. ಇದನ್ನು ಕಂಡ ಶಿಷ್ಯರ ಮತ್ಸರದ ಮದವೆಲ್ಲ ಇಳಿದುಹೋಯಿತು. ಅವರಿಗೆ ತಮ್ಮ ತಪ್ಪಿನ ಅರಿವಾಯಿತು. ಅವರು ತಾವು ಮತ್ಸರದಿಂದ ಮಾಡಿದ ಕುಹಕವನ್ನು ಒಪ್ಪಿಕೊಂಡು ಪ್ರಮಾಥಿ ಕುಮಾರನ ಮತ್ತು ದ್ರೋಣರ ಕ್ಷಮೆ ಕೇಳಿದರು. ದ್ರೋಣಾಚಾರ್ಯರೂ ತಮ್ಮ ಶಿಷ್ಯನ ಮೇಲ್ಮೆಯನ್ನು ಶಿಷ್ಯರಿಂದಲೇ ಕೇಳಿ ಆನಂದಿತರಾದರು. ಅವರು "ಉದಯಕಾಲದಿಂದ ತೊಡಗಿ ನೇಸರು ಮುಳುಗುವವರೆಗೆ ಊರವರು ಕೊಡಗಳಿಂದ ಮೊಗೆದರೂ, ತೊಂಬು ಬಿಟ್ಟು ಹೊಲಗಳಿಗೆ ಹಾಯಿಸಿದರೂ, ಪಶುಪಕ್ಷಿಗಳೇ ಮೊದಲಾದ ಅನೇಕ ಪ್ರಾಣಿಗಳು ಕುಡಿದರೂ ಕೆರೆಯನೀರು ಮಳೆಯನೀರು ಇರುವವರೆಗೂ ಬತ್ತಲಾರದು. ಮಳೆಯನೀರು ಮಾಯವಾದಂದು ನೀರಾರುವುದು. ಪುಣ್ಯವಂತನಾದ

ಮಹಾತ್ಮನಿಗೆ, ಒಳ್ಳೆಯ ಬುದ್ಧಿಯೂ ಸದ್ವಿದ್ಯೆಗಳೂ, ಧನಕನಕ ವಸ್ತ್ರ ವಾಹನಗಳೂ ತಾವಾಗಿ ಬಂದು ಕೈಸೇರುವುವು. ಆದುದರಿಂದ ಮಾತ್ಸರ್ಯ ರಹಿತರಾಗಿ ಧರ್ಮಮಾರ್ಗಿಗಳಾಗಬೇಕು" ಎಂದು ಉಪದೇಶಿಸಿದರು. ಅಂದಿನಿಂದ ಆ ಶಿಷ್ಯರೆಲ್ಲರೂ ಪರಮ ಮಿತ್ರರಾಗಿ ದ್ರೋಣರಲ್ಲಿ ವಿದ್ಯಾಭ್ಯಾಸ ವನ್ನು ಮುಂದುವರಿಸಿದರು.

ಇತ್ತ ಸಿಂಹಸೇನ ಮಹಾರಾಜನು ಮಗಳು ಚಂದ್ರಲೇಖೆಯ ಸ್ವಯಂವರ ದಿನವನ್ನು ನಿಶ್ಚಯಿಸಿ, ಸ್ವಯಂವರಕ್ಕೆ ಪಣವಾಗಿ ಚಂದ್ರವೇಧಕ ನೆಂಬ ಯಂತ್ರವನ್ನಿಟ್ಟು, "ಚಂದ್ರವೇಧಕವನ್ನು ಗುರಿಯಿಟ್ಟು ಹೊಡೆಯು ವವರಿಗೆ ಚಂದ್ರಲೇಖೆ ಮಾಲೆ ಹಾಕುವಳೆ"ಂದು ಡಂಗುರ ಸಾರಿಸಿದನು. ರಾಜದೂತರು ಡಂಗುರ ಸಾರಿದಾಗ ಪ್ರಮಾಥಿಕುಮಾರನು ಭಿಕ್ಷಾನ್ನ ವನ್ನುಂಡು ನಗರದ ನಡುವೆ ಹರಿಯುತ್ತಿದ್ದ ನದೀ ತೀರದಲ್ಲಿ ವಿಶ್ರಮಿಸು ತ್ತಿದ್ದನು. ಅವನು ಡಂಗುರದ ವಿಷಯವನ್ನು ಕೇಳಿ ಆ ರಾಜದೂತರ ಬಳಿಗೆ ಬಂದು, "ಚಂದ್ರವೇಧಕವನ್ನು ನಾನು ಗುರಿಯಿಟ್ಟು ಹೊಡೆಯು ವೆನು. ಇದನ್ನು ನಿಮ್ಮ ಅರಸನಿಗೆ ತಿಳಿಸಿರಿ" ಎಂದು ಹೇಳಿ ಕಳುಹಿಸಿ ಗುರುಗಳಾದ ದ್ರೋಣರ ಅಪ್ಪಣೆ ಪಡೆದು ಅರಮನೆಗೆ ನಡೆದನು.

ಅರಮನೆಯಲ್ಲಿ ಸಿಂಹಸೇನ ಮಹಾರಾಜನು ಪ್ರಮಾಥಿಕುಮಾರನನ್ನು ಸಂಭ್ರಮದಿಂದ ಬರಮಾಡಿಕೊಂಡು ಬಳಿಯಲ್ಲಿ ಕುಳ್ಳಿರಿಸಿ ಮಾತನಾಡಿಸಿ, ಇವನೇ ತನ್ನ ಮಗಳಿಗೆ ಯೋಗ್ಯ ವರನೆಂದು ಮನದಲ್ಲೇ ನಿಶ್ಚಯಿಸಿ, ಅವ ನನ್ನು ಅರಮನೆಯಲ್ಲೇ ಇರಿಸಿಕೊಂಡು ಮಜ್ಜನ ಭೋಜನ ತಾಂಬೂಲ ವಸ್ತ್ರ ಆಭರಣಗಳಿಂದ ಸಂತೋಷಪಡಿಸಿದನು. ಮತ್ತೆ ಮರುದಿನ ಬೆಳಗಾ ದೊಡನೆಯೇ ದ್ರೋಣರೇ ಮೊದಲಾದ ಹಲವಾರು ವಿದ್ವಾಂಸರನ್ನು ಆಸ್ಥಾ ನಕ್ಕೆ ಕರೆಸಿ ಯೋಗ್ಯ ಸತ್ಕಾರಗಳಿಂದ ಸತ್ಕರಿಸಿ, "ಈ ಪ್ರಮಾಥಿಕುಮಾರನು ಚಂದ್ರವೇಧಕವನ್ನಿಡುವನಂತೆ. ಅದಕ್ಕೆ ನೀವೇ ಸಾಕ್ಷಿ" ಎಂದು ಹೇಳಿ ಚಂದ್ರವೇಧಕಕ್ಕೆ ಗುರಿಯಿಡುವಂತೆ ರಾಜಕುಮಾರನಿಗೆ ಸನ್ನೆ ಮಾಡಿದನು. ಪ್ರಮಾಥಿಕುಮಾರನು ಬಿಲ್ಲು ಅಂಬುಗಳನ್ನು ಕೈಯಲ್ಲಿ ಕೊಂಡು ಗುರು ಗಳನ್ನೂ ಪರಮುಜನರನ್ನೂ ಮನದಲ್ಲೇ ವಂದಿಸಿ ಸಭಿಕರ ಕಡೆಗೊಮ್ಮೆ ದೃಷ್ಟಿ ಬೀರಿ ಚಂದ್ರವೇಧಕ್ಕೆ ಗುರಿಯಿಟ್ಟು ಹೊಡೆದನು. ರಾಜಕುಮಾರನ

ಕೈಚಳಕವನ್ನು ಕಂಡು ದ್ರೋಣರೂ ಮಹಾರಾಜನೂ ಉಳಿದ ಇತರ ಸಭಿಕರೂ ಸಂತೋಷದಲ್ಲಿ ನಲಿದಾಡಿದರೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಚಂದ್ರಲೇಖೆಗಂತು ಅವಳ ಮನಸ್ಸಿಗೊಪ್ಪಿದ ವರನೇ ದೊರಕಿದನು. ಸಿಂಹಸೇನ ಮಹಾರಾಜನು ಅದೇ ಸುಮುಹೂರ್ತದಲ್ಲಿ ಚಂದ್ರಲೇಖೆಯನ್ನು ಮದುವೆ ಮಾಡಿಕೊಟ್ಟು ತನ್ನ ಅರ್ಧ ರಾಜ್ಯಕ್ಕೆ ಅವನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದನು. ಪ್ರಮಾಥಿಕುಮಾರನು ಚಂದ್ರಲೇಖೆಯನ್ನು ಮದುವೆಯಾಗಿ ಸುಖಸಂಕಥಾವಿನೋದದಿಂದ ಕಾಲ ಕಳೆಯುತ್ತಿದ್ದನು.

ಇಷ್ಟಾಗುವಾಗ ಕೌಶಾಂಬೀಪುರವನ್ನು ಶತ್ರುಗಳು ಬಂದು ಮುತ್ತಿದರು. ದಂತಿಬಲ ಮಹಾರಾಜನು ಕೋಟೆಯನ್ನು ಬಲಿದು ಮಹಾಪ್ರತಾಪದಿಂದ ಶತ್ರುಗಳೊಡನೆ ಹೋರಾಡತೊಡಗಿದನು. ಆದರೂ ಹಗೆಗಳು ಮೆದಿಯಲಿಲ್ಲ. ಇದನ್ನು ಕಂಡು ದೂತನೊಬ್ಬನು ಪಾಟಲೀಪುತ್ರಕ್ಕೆ ಬಂದು ಸಿಂಹಸೇನ ಮಹಾರಾಜನನ್ನು ಕಂಡು "ಮಹಾರಾಜ, ಕೌಶಾಂಬೀಪುರವನ್ನು ಶತ್ರುಗಳು ಮುತ್ತಿರುವರು. ದಂತಿಬಲ ಮಹಾರಾಜರು ಧೈರ್ಯದಿಂದ ಶತ್ರುಗಳನ್ನೆದುರಿಸುತ್ತಿರುವರಾದರೂ ಶತ್ರುಗಳು ಮೆದಿಯಲಿಲ್ಲ." ಎಂದು ನಿವೇದಿಸಿಕೊಂಡನು. ಇದನ್ನು ಅಲ್ಲೇ ಕುಳಿತಿದ್ದ ಪ್ರಮಾಥಿಕುಮಾರನು ಕೇಳಿದನು; ತನ್ನ ರಾಜ್ಯವನ್ನು ಶತ್ರುಗಳು ಮುತ್ತಿರುವರೆಂದು ಕೇಳಿ ಕೋಪದಿಂದ ಕಿಡಿಕಿಡಿಯಾದನು. ಆಗಲೇ ರಾಜ್ಯಕ್ಕೆ ಹೊರಡಬೇಕೆಂದು ನಿಶ್ಚಯಿಸಿದನು. ಆದರೆ ಆಗತಾನೇ ಮದುವೆಯಾದ ತನ್ನನ್ನು ಮಾವನು ಹೋಗಗೊಡನೆಂದು ಯೋಚಿಸಿ ಸುಮ್ಮನಾದನು. ಮತ್ತೆ ರಾಜನ ಆಸ್ಥಾನದಿಂದ ಹೊರಟು ಅಂತಃಪುರಕ್ಕೆ ಹೋಗಿ ತನ್ನ ಪ್ರಿಯಪತ್ನಿಯೊಡನೆ ತನ್ನ ಮನದ ಅಭಿಪ್ರಾಯವನ್ನು ತಿಳಿಸಿ, ಅಂದಿನ ರಾತ್ರಿ ಮಡದಿಯೊಂದಿಗೆ ಕೌಶಾಂಬಿಗೆ ಹೊರಡುವುದೆಂದು ನಿಶ್ಚಯ ಮಾಡಿದನು.

ಅಂದು ನೇಸರು ಮುಳುಗಿ ಕತ್ತಲಾಗಲು, ರಾಜಕುಮಾರನು ರಾಜಕುಮಾರಿಯೊಡನೆ ತನಗೆ ಗೊತ್ತಿದ್ದ ಅಂಜನವಿದ್ಯೆಯ ಬಲದಿಂದ ಅರಮನೆಯವರಿಗೂ ಪಟ್ಟಣಿಗರಿಗೂ ಅರಿಯದಂತೆ ಹೊರಟು ಭೀಮವನವೆಂಬ ಕಾಡಿನ ದಾರಿಯಾಗಿ ತನ್ನ ನಾಡಿನ ಕಡೆಗೆ ನಡೆದನು. ಪ್ರಮಾಥಿಕುಮಾರನು ಕಾಡದಾರಿಯಲ್ಲಿ ತಮಗೆದುರಾದ ಒಂದೊಂದು ಜಾತಿಯ ಕ್ರೂರಮೃಗ

ಗಳನ್ನು ಒಂದೊಂದು ಬಗೆಯ ಬಾಣದಿಂದ ನಾಶಗೈಯುತ್ತಾ ತನ್ನ ಬಿಲ್ಲಾ ಣಿಕೆಯನ್ನು ನುಡದಿಗೆ ತೋರಿಸುತ್ತಾ ಮುಂದುವರಿದನು.

ಆ ಕಾಲದಲ್ಲಿ ಸುವೇಗನೆಂಬ ರಾಜಕುಮಾರನು ದುರ್ಮಾರ್ಗ ಪ್ರವೃತ್ತನಾಗಿ ತನ್ನ ರಾಜ್ಯವನ್ನು ಕಳಕೊಂಡು ಅರಣ್ಯವನ್ನು ಹೊಕ್ಕು ಕಳ್ಳರ ಗುಂಪಿಗೆ ನಾಯಕನಾಗಿ ನೀಚ ವೃತ್ತಿಯಿಂದ ಜೀವಿಸುತ್ತಿದ್ದನು. ಆದರೂ ಕೂಡ ಬಿಲ್ಲುವಿದ್ಯೆಯನ್ನು ಕಲಿಯಬೇಕೆಂಬ ಆತುರದಿಂದ ದ್ರೋಣರ ಮಣ್ಣ ಬೊಂಬೆಮಾಡಿ ಆ ಬೊಂಬೆಯನ್ನೇ ತನ್ನ ಗುರುವಾಗೆಣಿಸಿ ತನ್ನ ಕಲಿಯುವಿಕೆ ಯನ್ನು ಮುಂದುವರಿಸುತ್ತಿದ್ದನು. ಆ ಸುವೇಗನು ಪ್ರಮಾಥಿ ಕುಮಾರ ನನ್ನೂ ಅವನ ಒಟ್ಟಿಗೆ ಹೋಗುತ್ತಿದ್ದ ಚಂದ್ರಲೇಖೆಯನ್ನೂ ಕಂಡನು. ಚಂದ್ರಲೇಖೆಯ ರೂಪವನ್ನು ಕಂಡು ಅವನ ಮನಸ್ಸು ಗಲಿಬಿಲಿಗೊಂಡಿತು; ಅವನು ಕಾಮವಶನಾಗಿ ವಿಕಾರಗೊಂಡನು, ಗಾಳಿ ಮುಟ್ಟಿದ ಹತ್ತಿಯಂತೆ, ನಡುಗಿದನು, ಗ್ರಹಹಿಡಿದ ಮನುಷ್ಯನಂತೆ ಪರವಶನಾದನು; ವಿರಹಾನಲವು ಅವನನ್ನು ಸುಟ್ಟು ಸೂರೆಗೊಂಡಿತು. "ಇವಳ ಕಟಾಕ್ಷಮೆನ್ನೆರ್ದೆಯ ನುರ್ಚಿದಪುದು. ಈಕೆಯ ರೂಪುದಾಳಿಯೊಳ್ ಕವಿದಪುದು. ಎತ್ತಲುಂ ಈ ಸತಿಯ ಜವ್ವನಂ ಎನ್ನನಡರ್ತು ಕಾಡುವುದು" ಎಂದು ಮಮ್ಮಲ ಮರುಗಿದನು.

ಮತ್ತೆ ಆ ಸುವೇಗನು, ಈ ರಾಜಕುಮಾರನನ್ನು ಕೊಂದಾದರೂ ಈ ರಮಣಿಯನ್ನು ಪಡೆಯದಿರೆನೆಂದು ದೃಢನಿಶ್ಚಯ ಮಾಡಿ, "ಈ ಸಾಮಾನ್ಯ ನನ್ನು ಸೋಲಿಸಲು ನಾನೇಕೆ ಹೋಗಬೇಕು? ನನ್ನ ಕೈಕೆಳಗಿನ ನಾಯಕ ನೊಬ್ಬನು ಸಾಲದೇ?" ಎಂದುಕೊಂಡು, ತನ್ನ ಕೈಕೆಳಗಿನ ನಾಯಕನೊಬ್ಬ ನನ್ನು ಕರೆದು "ಈಗ ಇದೇ ಕಾಡಿನ ದಾರಿಯಲ್ಲಿ ಮುಂದುವರಿಯುತ್ತಿರುವ ರಾಜಕುಮಾರನನ್ನು ಕೊಂದು ಅವನ ಬಳಿ ನಡೆಯುತ್ತಿರುವ ಆ ಯುವತಿ ಯನ್ನು ನನ್ನ ಬಳಿಗೆ ಕೊಂಡು ಬಾ" ಎಂದು ಅಪ್ಪಣೆ ಕೊಟ್ಟು ಕಳುಹಿಸಿ ದನು. ಆ ನಾಯಕನು ತನ್ನೊಡೆಯನ ಅಪ್ಪಣೆಯಂತೆ ತನ್ನ ಬೆಂಬಲಿಗ ರೊಡಗೂಡಿ ಹೋಗಿ ಪ್ರಮಾಥಿಕುಮಾರನನ್ನು ತಾಗಿ "ನಿನ್ನ ಪ್ರಿಯಪತ್ನಿ ಯನ್ನೀಗಲೇ ನಮಗೊಪ್ಪಿಸು, ಇಲ್ಲವಾದರೆ ಯಮಲೋಕದ ದಾರಿ ಹಿಡಿ" ಎಂದು ಗಜರಿ ಗರ್ಜಿಸಿದನು. ಪ್ರಮಾಥಿಕುಮಾರನು ಕಾಡಬೇಡನ ಕೆಡು

ನುಡಿಗೆ ಕೆಡುವನೆ? ಅವನು ಜಿನಪಾದಪದ್ಮಗಳನ್ನು ನೆನೆಯುತ್ತ ಶತ್ರುಗಳ ಮೇಲೆ ಬಾಣವರ್ಷವನ್ನು ಸುರಿಸಿ, ಶತ್ರುಗಳನ್ನು ನೆಲಕ್ಕೊರಗಿಸಿ, ತನ್ನ ಪರಾಕ್ರಮದಿಂದ ಪ್ರಾಣವಲ್ಲಭೆಯನ್ನು ಸಂತಸಗೊಳಿಸಿದನು. ಅಷ್ಟರಲ್ಲೇ ಪ್ರಮಾಥಿಕುಮಾರನ ಬಾಣದಿಂದ ತಪ್ಪಿಸಿಕೊಂಡ ದೂತನೊಬ್ಬನು ಸುವೇಗ ನಲ್ಲಿಗೆ ಬಂದು ತಮಗಾದ ಪರಾಭವವನ್ನು ತಗ್ಗಿದ ತಲೆಯಿಂದ ನಿವೇದಿಸಿ ಕೊಂಡನು.

ದೂರಿಕೊಂಡ ದೂತನ ಮಾತು ಕೇಳಿ ಸುವೇಗನು ಕಿಡಿಕಿಡಿಯಾದನು. ತನ್ನ ದಳದ ನಾಯಕರೆಲ್ಲರನ್ನೂ ಬಳಿಗೆ ಕರೆದನು. "ಬೆಟ್ಟವನ್ನು ಗುಂಗುರು ಕಾಡಿತೆಂಬ, ಆನೆಯನ್ನು ನರಿ ನುಂಗಿತೆಂಬ, ಸಿಂಹವನ್ನು ನಾಯಿ ಕೆಣಕಿತೆಂಬ ಮಾತಿನಂತೆ ದಾರಿಹೋಕನೊಬ್ಬನು ನನ್ನ ನಾಯಕನನ್ನೂ ನಾಯಕ ಪಡೆ ಯನ್ನೂ ನೆಲಕ್ಕೊರಗಿಸಿದನೆಂದರೆ ಏನೆನ್ನಬೇಕು? ನಾವೀಗಲೇ ಹೋಗಿ ಆ ದಾರಿಹೋಕನನ್ನು ಕೂಡಲೆ ಕಟ್ಟುಕಟ್ಟಿ ಇಲ್ಲಿ ತರಬೇಕು. ಇಲ್ಲವೇ ಯಮಪುರಿಗೆ ಕಳುಹಿಸಬೇಕು" ಎಂದು ನಾಯಕ ಮಂಡಳಿಗೆ ರಣವೀಳ್ಯ ವನ್ನು ಕೊಟ್ಟು, ತಾನೂ ಯುದ್ಧಸನ್ನದ್ಧನಾದನು. ಅಂತು ಆ ಬೇಡ ಪಡೆ ಪ್ರಮಾಥಿಕುಮಾರನನ್ನು ಸುತ್ತುಗಟ್ಟಿ ಮುಂದುವರಿಯಿತು; ಪ್ರಿಯಪತ್ನಿ ಯೊಡನೆ ನಿಶ್ಚಿಂತನಾಗಿ ಮುಂದುವರಿಯುತ್ತಿದ್ದ ಪ್ರಮಾಥಿಕುಮಾರನ ದಾರಿ ಯನ್ನು ಅಡ್ಡಗಟ್ಟಿತು.

ಬೇಡಪಡೆ ಅಡ್ಡಗಟ್ಟಿದ್ದನ್ನು ಕಂಡು ಪ್ರಮಾಥಿಕುಮಾರನ ಉತ್ಸಾಹವು ಇಮ್ಮಡಿಸಿತು. ಚಂದ್ರಲೇಖೆ ನಗಾಡಿದಳು. ಅವಳು ತನ್ನ ಪ್ರಿಯನೊಡನೆ "ದೇವ, ನಿನಗಿವರ್‍ದೊರೆಯಲ್ಲ. ನಿನ್ನ ಪ್ರತಾಪವನ್ನು ನೋಡಿದರೆ, ಸಿಂಹದ ನಾಯು; ಕರಿಯು ನರಿಯು, ಹುಲಿಯು ಹುಲ್ಲೆಯು ಬಲಾಬಲಗಳನ್ನು ಹೋಲಿಸಿ ದಂತೆ. ಇವರು ಹಿಂದಿರುಗಿ ಹೋಗಲು ನಾಚಿಕೊಂಡು ನಿಮ್ಮ ಬಾಣಗಳಿಗೆ ಬಲಿಯಾಗಲು ಬಂದಿರುವರು. ಮತ್ತು ಈ ಹೇಡಿಗಳನ್ನು ಕೊಂದು ನಮಗೆ ಸಿಕ್ಕುವ ಲಾಭವಾದರೂ ಏನು? ಆದುದರಿಂದ ಇವರನ್ನು ನಿದ್ರಾ ಬಾಣದಿಂದ ನೆಲಕ್ಕೊರಗಿಸಿ, ಮುಂದುವರಿಯುವ" ಎಂದಳು. ರಾಜಕುಮಾ ರನು ನಲ್ಲಳ ಮಾತಿಗೆ ಕಿವಿಗೊಟ್ಟು ಆಕೆಯ ಕಾರುಣ್ಯಬುದ್ಧಿಗೆ ಮೆಚ್ಚಿ ಗೊಂಡು, ಸುವೇಗನನ್ನೊಬ್ಬನನ್ನು ಬಿಟ್ಟು ಉಳಿದವರನ್ನೆಲ್ಲಾ ನಿದ್ರಾಬಾಣ

ದಿಂದ ನೆಲಕ್ಕೊರಗಿಸಿದನು. ಬಡಿಗೊಂಡ ನೆಲ್ಲಿಯಂತೆ ನೆಲಕ್ಕುರುಳಿದ ಪರಿವಾರದವರನ್ನು ಕಂಡು ಸುವೇಗನು "ಪರಸ್ತ್ರೀಯು ನೋಟ ಯಮನ ಕಾಟ, ಹೆರರ ಹೆಂಡಿರ ಚೆಲ್ವು ಎದೆಗೆ ಶೂಲ"ವೆಂಬ ಬುದ್ಧಿವಾದವನ್ನು ಮರೆತು, ಬಿಲ್ಲು ಬಾಣಗಳನ್ನು ಹಿಡಿದುಕೊಂಡು ತಾನೇ ಯುದ್ಧಕ್ಕೆ ಮುಂದಾದನು.

ಸುವೇಗನೂ ಸಾಮಾನ್ಯನಲ್ಲ. ಅವನೂ ಬಿಲ್ಲುವಿದ್ಯೆಯಲ್ಲಿ ಜಾಣನಾಗಿದ್ದನು; ದ್ರೋಣರನ್ನೇ ಗುರುವಾಗಿ ಸ್ವೀಕರಿಸಿದವನಲ್ಲವೆ? ಬಿಲ್ಜಾಣಿಕೆಯಿಲ್ಲದೆ ಎಲ್ಲಿ ಹೋಗುವುದು? ಇಬ್ಬರು ಕುಮಾರರೂ ಭಯಂಕರವಾದ ಕಾಳಗವೆಸಗಿದರು; ಪ್ರಮಾಥಿಕುಮಾರನೂ ಸುವೇಗನೂ ತಂತಮ್ಮ ಕೈಚಳಕವನ್ನು ಮೆರೆದರು. ಚಂದ್ರಲೇಖೆ ಆಶ್ಚರ್ಯಮುಗ್ಧಳಾಗಿ ಆ ದ್ವಂದ್ವ ಯುದ್ಧವನ್ನು ನೋಡುತ್ತ ನಿಂತಿದ್ದಳು. ಅಷ್ಟರಲ್ಲಿ ಪ್ರಮಾಥಿಕುಮಾರನ ಬಳಿಯಿದ್ದ ಬಾಣಗಳು ತೀರುತ್ತ ಬಂದುವು. ಇನ್ನು ಎರಡೇ ಎರಡು ಬಾಣಗಳು ಉಳಿದಿದ್ದುವು. ಶತ್ರುವಿನ ಆಟೋಪ ಕಡಮೆಯಾಗಿರಲಿಲ್ಲ. ಇದನ್ನು ಕಂಡ ಚಂದ್ರಲೇಖೆ ಬೆರಗಾಗಿ, "ಹಲ್ಲಿಲ್ಲದ ಹುಲಿಯೂ ಉಗುರಿಲ್ಲದ ಸಿಂಹವೂ ಎಷ್ಟು ಬಲವುಳ್ಳುದಾದರೂ ಏನು ಮಾಡೀತು?" ಎಂದು, ಚಿಂತಾಕ್ರಾಂತೆಯಾದಳು. "॥ ಪತಿಯಂ ಬಿಟ್ಟು, ಪರತ್ರೆಗೆಟ್ಟು, ಕುಲಮಂ ಕಿತ್ತಿಕ್ಕಿ, ನಾಯಾಗಿ, ದುರ್ಮತಿಯಿಂ ದುರ್ಜನರೊಳ್ ದುರಾಚರಿತರೊಳ್ ನಿರ್ಧರ್ಮರೊಳ್ ಕೂಡಿ ಸನ್ಮತಮಂ ಬಿಟ್ಟು, ಪತಿವ್ರತಾ ಗುಣಮನುಳಿಕ್ಕು ಆನಂದದಿಂದಿರ್ಪ ಸಂಸೃತಿ ಸೌಖ್ಯೋನ್ನತಿಯಿಂ ಮಹಾಮಹಿಮೆಯಿಂ ಸಾವೇಂಕರಂಪೊಲ್ಲದೇ? ॥" ಎಂದು ಪತಿವ್ರತಾ ಧರ್ಮಕ್ಕಿಂತ ಮೇಲಾದ ಧರ್ಮವಿಲ್ಲವೆಂದು ಚಿಂತಿಸಿ ತನ್ನ ಪತಿವ್ರತಾಗುಣಕ್ಕೂ ದರ್ಶನಶುದ್ಧಿಗೂ ಹಾನಿಯಾಗದಂತೆ ಶರೀರವನ್ನು ತೊರೆಯುವುದೇ ಲೇಸೆಂದು ನಿಂತಿತ ಮಾಡಿದಳು; ಶರೀರದ ಆಸೆ ತೊರೆದು ಪಂಚಪರಮೇಷ್ಠಿಗಳನ್ನು ಹೃತ್ಕಮಲದಲ್ಲಿರಿಸಿ, ಪಂಚನಮಸ್ಕಾರಗಳನ್ನು ಉಚ್ಚರಿಸುತ್ತಾ, ಸುವೇಗನ ಬಾಣಕ್ಕೆದುರಾಗಿ ತನ್ನ ಪತಿಗೆ ಅಡ್ಡ ನಿಂತಳು. ತನಗೆದುರಾಗಿ ನಿಂತ ಚಂದ್ರಲೇಖೆಯನ್ನು ಕಂಡ ಸುವೇಗನ ಮನಸ್ಸು ಗಲಿಬಿಲಿಯಾಯಿತು. ಅವನು ತೊಟ್ಟ ಬಾಣವನ್ನಲ್ಲೆ ಬಿಟ್ಟು ಮರಗಟ್ಟಿದವನಂತೆ ಆಕೆಯ ಮೊಗವನ್ನೇ ದಿಟ್ಟಿಸಿದನು. ಅದೇ ಸಮಯವೆಂದು ಪ್ರಮಾಥಿಕುಮಾರನು ಹರಿತವಾದ ಬಾಣವೊಂದನ್ನ

ಸೆದು ಸುವೇಗನ ರುಂಡವನ್ನು ಮುಂಡದಿಂದ ಬೇರೆ ಮಾಡಿದನು. ಪರ ವನಿತೆಗೆ ಆಸೆಗೊಂಡ ಸುವೇಗನು ಅಸುವನ್ನೇ ಕಳಕೊಂಡನು; ಪರಸತಿಗೆ ಆಸೆಗೊಂಡ ಫಲವಾಗಿ ನರಕದ ದಾರಿ ಹಿಡಿದನು.

ಬಂದ ವಿಪತ್ತು ಪರಿಹಾರವಾದುದನ್ನು ಕಂಡು ಆ ದಂಪತಿಗಳು ಜಿನೇಂದ್ರರನ್ನು ಹಾಡಿ ಹೊಗಳಿದರು; ಅವರಿಗೂ ಆಗಲೇ ಬ್ರಹ್ಮಚರ್ಯ ವ್ರತದ ಮಹಿಮೆಯು ಅರಿವಾಯಿತು. ಪ್ರಮಾಥಿಕುಮಾರನು ತನ್ನ ನಿದ್ರಾ ಬಾಣದಿಂದ ನೆಲದ ಮೇಲೆ ಒರಗಿದ ಬೇಡಪಡೆಯನ್ನು ಎಚ್ಚರಗೊಳಿಸಿ, ತನ್ನ ಪ್ರಿಯಪತ್ನಿಯೊಡನೆ ಕೌಶಾಂಬೀ ನಗರವನ್ನು ಸೇರಿ ತನ್ನ ತಂದೆ ದಂತಿ ಬಲ ಮಹಾರಾಜನನ್ನು ಕಂಡು ತಾನೂ ಪ್ರಿಯಪತ್ನಿಯೂ ಆತನ ಪಾದಗಳಿ ಗೆರಗಿ ಅರಮನೆಯವರಿಗೆಲ್ಲಾ ಆನಂದವನ್ನುಂಟುಮಾಡಿದನು. ಪ್ರಮಾಥಿ ಕುಮಾರನ ಮೊದಲ ಹೆಂಡತಿ ಸೌಂದರದೇವಿಯೂ ಅಷ್ಟುಕಾಲ ಬ್ರಹ್ಮ ಚಾರಿಣಿಯಾಗಿದ್ದು ತನ್ನ ಪ್ರಿಯನನ್ನು ಪಡೆದು ಆನಂದಪರವಶಳಾದಳು; ಚಂದ್ರಲೇಖೆಯನ್ನು ಸವತಿಯೆಂದು ಮತ್ಸರಿಸದೆ, ಪ್ರೀತಿಯ ತಂಗಿಯಂತೆ ಅಪ್ಪಿಕೊಂಡು ಉಪಚರಿಸಿದಳು. ಮಗನು ಸೊಸೆಯೊಡನೆ ಮರಳಿ ಮನೆಗೆ ಬಂದ ಸಂತೋಷಕ್ಕಾಗಿ ಮಹಾರಾಜನು ಜಿನಾಭಿಷೇಕ ಪೂಜೆಗಳನ್ನು ಮಾಡಿಸಿ ಉತ್ಸವವನ್ನಾಚರಿಸಿದನು. ಪ್ರಮಾಥಿಕುಮಾರನು ಬಂದ ಸುದ್ಧಿ ಕೇಳಿ ನಗರಕ್ಕೆ ಮುತ್ತಿದ್ದ ಶತ್ರುಗಳು ಆಗಲೇ ಪಲಾಯನಗೈದಿದ್ದರು. ಪ್ರಮಾಥಿಗೆ ಶತ್ರುಗಳೊಡನೆ ಹೋರಾಡುವ ಸಂದರ್ಭವೇ ಸಿಕ್ಕಲಿಲ್ಲ. ಇದರಿಂದ ರಾಜ ನಿಗೂ ಪ್ರಜೆಗಳಿಗೂ ಪರಮ ಸಂತೋಷವಾಯಿತೆಂದು ಬೇರೆ ಹೇಳಬೇಕಾ ಗಿಲ್ಲವಷ್ಟೆ!

ದಂತಿಬಲ ಮಹಾರಾಜನು ತನ್ನ ಮಗನ ಪರಾಕ್ರಮಕ್ಕೂ ಸೌಮ್ಯ ತೆಗೂ ಮೆಚ್ಚಿ ಮಗನಿಗೆ ಯುವರಾಜ ಪಟ್ಟಗಟ್ಟಿದನು. ಪ್ರಮಾಥಿಕುಮಾ ರನು ಯುವರಾಜನಾಗಿ ರಾಜ್ಯಭರಣ ಕ್ರಮವನ್ನರಿತ ಕೂಡಲೇ ರಾಜ್ಯಭರಣ ಭಾರವನ್ನು ಮಗನಿಗೊಪ್ಪಿಸಿ ತಾನು ಜಿನೇಂದ್ರಪದಸೇವನೆಯಲ್ಲಿ ಕಾಲ ಕಳೆಯ ತೊಡಗಿದನು. ಪ್ರಮಾಥಿಕುಮಾರನೂ ಸೌಂದರಮಹಾದೇವಿ ಚಂದ್ರಲೇಖಾದೇವಿಯರೊಡನೆ ಸುಖಸಂಕಥಾ ವಿನೋದದಿಂದ ಕಾಲಕಳೆ ಯುತ್ತಾ ಪ್ರಜೆಗಳನ್ನು ಮಕ್ಕಳಂತೆ ಪರಿಪಾಲಿಸುತ್ತಿದ್ದನು.

ಹೀಗಿರಲು ಒಂದು ದಿನ ಧರ್ಮಘೋಷಭಟ್ಟಾರಕರೆಂಬ ಮಹಾ ಋಷಿಗಳು ಕೌಶಾಂಬಿಗೆ ಬಂದರು. ಮುನಿಗಳ ಬರವನ್ನರಿತ ಪ್ರಮಾಥಿ ಕುಮಾರ ಮಹಾರಾಜನು ಪತ್ನೀ ಪ್ರಜೆ ಪರಿವಾರ ಸಮೇತನಾಗಿ ಮುನಿಗಳ ಬಳಿಗೈದಿ ಸತ್ ಭಕ್ತಿಪೂರ್ವಕವಾಗಿ ಮುನಿಗಳಿಗೆ ವಂದಿಸಿ ಬಳಿಯಲ್ಲಿ ಕೈ ಮುಗಿದುಕೊಂಡು ಕುಳಿತು, ಜಿನಧರ್ಮವನ್ನು ಕೇಳುತ್ತಾ, "ಪರಸ್ತ್ರೀಗಾಸೆ ಪಟ್ಟು ಜೀವಬಿಟ್ಟ ಸುವೇಗನ ವಿಚಾರವನ್ನು ಮನದಲ್ಲೇ ಒಮ್ಮೆ ನೆನಸಿ ದನು." ಆಗ ಮುನಿಗಳು "ಮಹಾರಾಜ! ನಿನ್ನ ಮನದ ಯೋಚನೆಯ ನ್ನರಿತೆನು. ಆ ಸುವೇಗನು ನಿನ್ನ ಮಡದಿಗೆ ಆಸೆಪಟ್ಟ ಪಾಪದ ಫಲವಾಗಿ ಸತ್ತು ನರಕದಲ್ಲಿ ನವೆಯುತ್ತಿರುವನು. ಅದರಲ್ಲಿ ಮತ್ತೇನೂ ಇಲ್ಲ" ಎಂದು ಉಸುರಿದರು. "ಸಂಸಾರದ ಅಲ್ಪಸುಖಕ್ಕಾಸೆಪಟ್ಟು ಮುಂದೆ ದೊರಕುವ ಮಹಾಸುಖವನ್ನು ಕಳೆದುಕೊಳ್ಳುವವರು ಮೂರ್ಖರಲ್ಲವೇ?" ಎಂದು ಮನದಲ್ಲೇ ನೆನೆದು ಪ್ರಮಾಥಿ ಮಹಾರಾಜನು ಪರಿವಾರ ಸಮೇತನಾಗಿ ಮುನಿಗಳಿಗೆ ವಂದಿಸಿ ಅರಮನೆಗೆ ಹಿಂದಿರುಗಿದನು.

ಮುಂದೆ ಪ್ರಮಾಥಿ ಮಹಾರಾಜನು ಪರನಾರೀ ಸೋದರನಾಗಿ ಜಿನ ಪದಾಂಬುಜಭೃಂಗನಾಗಿ ಹಲವು ಕಾಲ ರಾಜ್ಯವಾಳಿ ಒಮ್ಮೆ ತನ್ನ ತಲೆಯ ನರೆಕೂದಲನ್ನು ಕಂಡು, ವೈರಾಗ್ಯ ಪರವಶನಾಗಿ, ತನ್ನ ಹಿರಿಯ ಮಗನಾದ ವಿಮಲಕೀರ್ತಿಗೆ ಪಟ್ಟಗಟ್ಟಿ ಸಮಾಧಿಮರಣದಿಂದ ದೇಹಬಿಟ್ಟು ಬ್ರಹ್ಮ ಚರ್ಯದ ಮಹಿಮೆಯಿಂದ ದೇವಗತಿಯನ್ನು ಪಡೆದು, ಆರಣವೆಂಬ ಹದಿ ನೈದನೆಯ ಸ್ವರ್ಗದಲ್ಲಿ ಕೀರ್ತಿಧರನೆಂಬ ದೇವನಾಗಿ ಹುಟ್ಟಿದನು. ಇಂತಿದು ಬ್ರಹ್ಮಚರ್ಯದ ಮಹತ್ತು.

ಉಪರಿಚರ ಮಹಾರಾಜ ಚರಿತ

(ಅಪರಿಗ್ರಹ)

ಕುರುಜಾಂಗಣ ದೇಶದ ಶ್ರಾವಂತೀಪುರವನ್ನಾಳುತ್ತಿದ್ದ ಉಪರಿಚರ ಮಹಾರಾಜನು ಪದ್ಮಾವತಿ, ಪ್ರಭಾವತಿ, ಸುಪ್ರಭೆ, ಕನಕಪ್ರಭೆಯೆಂಬ ನಾಲ್ವರು ಪಟ್ಟದ ರಾಣಿಯರೊಡನೆ, ಪದ್ಮಾವತಿಯ ಮಗನಾದ ಅನಂತ

ವೀರ್ಯನೇ ಮೊದಲಾದ ಹಲವಾರು ಮಕ್ಕಳೊಡನೆ ಒಮ್ಮೆ ಮಂತ್ರಿಸಾಮಂತ ಪರಿವಾರ ಸಮೇತನಾಗಿ ಒಡ್ಡೋಲಗಗೊಟ್ಟು ವಿನೋದವಿಲಾಸಿಯಾಗಿದ್ದನು. ಆಗ ವನಪಾಲಕನೊಬ್ಬನು ಸುರಗಿ, ಸಂಪಗೆ, ಹೊನ್ನೆ, ಜಾಜಿ ಮೊದಲಾದ ಹಲವು ಬಗೆಯ ಹೂಮೊಗ್ಗೆಗಳನ್ನು ಮಾವಿನಮಿಡಿಗಳ ಗೊಂಚಲುಗಳನ್ನು ತೆಗೆದುಕೊಂಡು ಬಂದು ರಾಜನ ಮುಂದಿಟ್ಟು, "ದೇವಾ! ವಸಂತನ ಪ್ರವೇಶದಿಂದ ವನದೇವಿ ರಮ್ಯವಾಗಿ ಶೋಭಿಸುತ್ತಿರುವಳು" ಎಂದು ಬಿನ್ನವಿಸಿಕೊಂಡನು. ವನಪಾಲಕನ ಬಿನ್ನಹವನ್ನು ಕೇಳಿ ಸಂತಸಗೊಂಡ ಉಪರಿಚರ ಮಹಾರಾಜನು ಆ ವನಪಾಲಕನಿಗೆ ಉಚಿತ ಉಡುಗೊರೆಗಳನ್ನು ಕೊಟ್ಟು, "ನಾಳೆಯೇ ವನಕ್ರೀಡೆಗೆ ಬರುವೆವು" ಎಂದು ಅಪ್ಪಣೆಯಿತ್ತು ಕಳುಹಿಸಿದನು. ಮಂತ್ರಿ ಪರಿವಾರದವರಿಗೆ ಮರುದಿನ ವನಕ್ರೀಡೆಗೆ ಹೊರಡಲು ಅಣಿಯಾಗಿರಬೇಕೆಂದು ಆಜ್ಞೆ ಮಾಡಿದನು.

ಮರುದಿನ ನೆಸರುದಿಸುವ ಮೊದಲೇ ರಾಜಪರಿವಾರದವರೆಲ್ಲರೂ ವನಕ್ಕೆ ಹೊರಡಲು ಅಣಿಯಾದರು, ವಾದ್ಯಗಳು ಮೊಳಗಲು ರಾಜನೂ ರಾಜಪರಿವಾರದವರೂ ಆನೆ ಕುದುರೆ ಮೊದಲಾದ ವಾಹನಗಳನ್ನೇರಿ ಕ್ರೀಡಾವನವನ್ನು ಸೇರಿದರು. ಮಹಾರಾಜನು ತನ್ನ ಮಕ್ಕಳು ಮಂತ್ರಿಗಳು ಮೊದಲಾದ ಪರಿವಾರದವರಿಗೆ ಅವರವರ ಇಷ್ಟದಂತೆ ವನದಲ್ಲಿ ವಿಹರಿಸಲು ಅಪ್ಪಣೆಯಿತ್ತನು.

ಮತ್ತೆ ಮಹಾರಾಜನು ತನ್ನ ನಾಲ್ವರು ಪಟ್ಟದರಸಿಯರೊಡನೆ, ಚಂದನ ಕರ್ಪೂರಾದಿ ಸುಗಂಧ ದ್ರವ್ಯಗಳಿಂದ ಪರಿಮಳಿತವಾಗಿ ಮಾಡಿರಿಸಿದ್ದ ಸುದರ್ಶನವೆಂಬ ಕೊಳದ ಬಳಿಗೆ ಬಂದನು. ಜಲಪಕ್ಷಿಗಳಿಂದಲೂ, ಜಲಪುಷ್ಪಗಳಿಂದಲೂ ಶೋಭಿಸುವ ಕೊಳದಲ್ಲಿ ಮಹಾರಾಜನು ಮಹಾರಾಣಿಯರೊಡನೆ ನೀರಾಟಕ್ಕೆ ಇಳಿದನು. "ಅರಸಂ ಸರಸಿರುಹಾನನೆ । ಯರಮೇಲೆ ತುಳುಂಕೆ ರಾಗದಿಂದಂ ನೋಡು । ತ್ತಿರೆ ಬಿಡವೆ ವಾರಿಜಾನನೆ । ಯರುಮರಸನ ಮೇಲೆ ಸೂಸೆ ಜಲಮಂ ನಗುತುಂ ॥" ಜಲಕೇಳಿಯಲ್ಲಿ ಮೈಮರೆತರು.

ಮಹಾರಾಜನು ಮಹಾರಾಣಿಯರೊಡನೆ ಜಲಕೇಳಿಯಲ್ಲಿ ಮಗ್ನನಾಗಿ ಮೈಮರೆತಿದ್ದಾಗ, ವಿಜಯಾರ್ಧ ಪರ್ವತದ ಉತ್ತರಶ್ರೇಣಿಯ ಅಲಕಾಪುರಿಗೆ ಅಧಿಪತಿಯಾದ ಖೇಚರರಾಜನಾದ ವಜ್ರದಾಡನು ತನ್ನ ಪಟ್ಟದರಸಿಯಾದ

ಮದನವೇಗೆಯೊಡನೆ ವಿಮಾನವನ್ನೇರಿ ಸೃಷ್ಟಿಯ ಸೊಬಗನೀಕ್ಷಿಸುತ್ತಾ ಆ ವನದ ಬಳಿ ಆಕಾಶಮಾರ್ಗವಾಗಿ ಬಂದನು. ವನದಲ್ಲಿ ಜಲಕ್ರೀಡೆಯನ್ನಾಡುತ್ತಿದ್ದ ರಾಜನನ್ನೂ ರಾಜಪರಿವಾರವನ್ನೂ ನೋಡಲೋಸುಗ ತನ್ನ ವಿಮಾನವನ್ನು ಅಂತರಿಕ್ಷದಲ್ಲೇ ನಿಲ್ಲಿಸಿದನು. ಪ್ರಿಯಪತ್ನಿ ಮದನವೇಗೆಯೊಡನೆ ಅವರ ಜಲಕೇಳಿಯನ್ನೇ ನೋಡುತ್ತಾ ನಿಂತನು. ಉಪರಿಚರ ಮಹಾರಾಜನ ಜಲಕೇಳಿಯನ್ನು ಕಂಡ ಮದನವೇಗೆ ತನ್ನ ಪ್ರಿಯನೊಡನೆ "ಪ್ರಿಯಾ, ನಾವೇನೋ ಕಾಗೆಗಳಂತೆ ಅಂತರಿಕ್ಷದಲ್ಲಿ ಹಾರಾಡಬಲ್ಲೆವೇನೋ ನಿಜ, ಆದರೆ ಈ ಉಪರಿಚರ ಮಹಾರಾಜನಷ್ಟು ಸುಖಿಗಳಲ್ಲವೆಂದೇ ನನ್ನ ಭಾವನೆ" ಎಂದು ಹೇಳಿದಳು. ಪ್ರಿಯ ಪತ್ನಿಯ ಮಾತನ್ನು ಕೇಳಿ ವಜ್ರದಾಡನಿಗೆ ಉಪರಿಚರ ಮಹಾಜನ ಮೇಲೆ ಮತ್ಸರ ಹುಟ್ಟಿತು; ಅವನು ಕೂಡಲೇ ಪ್ರಿಯಪತ್ನಿಯೊಡನೆ ತನ್ನ ಅರಮನೆಗೆ ಹೋಗಿ ಆಕೆಯನ್ನು ಅಲ್ಲಿ ಬಿಟ್ಟು ಹಿಂತಿರುಗಿ ಉದ್ಯಾನದ ಕಡೆಗೆ ಬಂದು, ಅತಿ ವಿಶಾಲವಾದ ಒಂದು ಹಾಸುಕಲ್ಲನ್ನೆತ್ತಿ ತಂದು ಉಪರಿಚರನೂ ಆತನ ಪತ್ನಿಯರೂ ಜಲಕೇಳಿಯಾಡುತ್ತಿದ್ದ ಕೊಳದ ಮೇಲೆ ಮುಚ್ಚಿ ಬಿಟ್ಟು ಕೊಳವೇ ಕಾಣಿಸದಂತೆ ಮಾಡಿದನು.

ಅಕಸ್ಮಾತ್ತಾಗಿ ತಮ್ಮ ಮೇಲೆ ಕವಿದ ವಿಪತ್ತನ್ನು ಕಂಡು ರಾಜನು ಗಲಿಬಿಲಿಗೊಂಡನು. ಆವಿಯ ಕಿಚ್ಚಿನಂತೆ ಬೇಗುದಿಗೊಂಡನು. ಯಾರು ಅರಿಯನ್ನು ಮುಚ್ಚಿದರೆಂಬುದೇ ಅರಿಯದಾಯ್ತು. ಅರಸನ ರಾಣಿಯರು ಮಾತ್ರ ಇದನ್ನು ಕಂಡು ಬೆಚ್ಚಲಿಲ್ಲ; ಬೆದರಲಿಲ್ಲ. ಅವರು "ಇದು ಕರ್ಮದೇಳ್ಗೆಯಿಂದಾ । ಯ್ತಿದಕ್ಕೆ ನಾವಲಸಿ ಮರುಗಿ ಮನದಳಲಿಂದಂ ॥ ಕುದಿದೊಡೆ ಪೋಕುಮೆ ಪೋಗದು । ಬಿದಿ ಬರೆದಕ್ಕರಮನೊರಸಿ ಕಳೆದವರೊಳರೇ ॥" ಎಂದು ಭಾವಿಸಿ ಶಾಂತಚಿತ್ತರಾಗಿ, ರಾಜ್ಯಾಭಿಲಾಷೆಯುಳ್ಳವನೂ ಭೋಗಲಾಲಸಿಯೂ ಆಗಿ ಆಪತ್ತಿಗೆ ಅರೆಬೆಂದ ಮಹಾರಾಜನಿಗೆ ಧರ್ಮಮಾರ್ಗವಾವುದೆಂದು ವಿವರಿಸಿ, "ಬಿಡು ರಾಜ್ಯದ ಮೋಹಮನೆಡೆ । ಯುಡುಗದೆ ನೆನೆ ಜೈನಧರ್ಮಮಂ ಕಿಡುವ ಪರಿ ॥ ಗ್ರಹಯುಗಮಂ ಪಿಡಿಯದೆ ಬಿಡು । ಪಡಿಮಾತೇಂ ಬಿಟ್ಟೊಡೈಯ್ದುವೈ ಶುಭಗತಿಯಂ ॥" ಎನ್ನುವಂತೆ ಬಾಹ್ಯಾಭ್ಯಂತರ ಪರಿಗ್ರಹಗಳನ್ನು ಬಿಟ್ಟು ಏಕಮಾನಸರಾಗಿ ಜಿನಪಾದಪದ್ಮಗಳನ್ನು ನೆನೆಯುತ್ತಿರಿ" ಎಂದು ರಾಜನನ್ನು ಸಂತಯಿಸಿದರು. ಮತ್ತೆ ಆ

ರಾಣಿಯರು ತಮ್ಮಲ್ಲಿದ್ದ ಪರಿಗ್ರಹಗಳನ್ನೆಲ್ಲಾ ಬಿಟ್ಟು ಪರಮಜಿನರನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ದೇಹ ಬಿಟ್ಟು ಸ್ವಸ್ತಿಕಾವರ್ತ ವಿಮಾನದಲ್ಲಿ ಆನಂದ, ಕಾಂತ, ಸುಕಾಂತ, ಅಮಿತಕಾಂತರೆಂಬ ದೇವರಾಗಿ ಹುಟ್ಟಿದರು.

ಉಪರಿಚರ ಮಹಾರಾಜನು ಮಾತ್ರ ತನ್ನ ಧನಕನಕ ವಸ್ತುವಾಹನಾದಿಗಳಿಗೂ ಸ್ತ್ರೀಸುಖಕ್ಕೂ ಆಸೆಪಟ್ಟು ಪರಿಗ್ರಹಕಾಂಕ್ಷೆಯಿಂದ ಕುದಿವ ನೀರಂತೆ ಮರುಗಿ ತರಿದಿಕ್ಕಿದ ತಳಿರಂತೆ ಕಂದಿ ಮಾಗಿಯ ತೊರೆಯಂತೆ ಕುಂದಿ ವಿಧಿಯನ್ನು ಬೈದು ಆರ್ತಧ್ಯಾನದಿಂದ ದೇಹ ಬಿಟ್ಟು ಮನೋಹರವೆಂಬ ಉದ್ಯಾನದಲ್ಲಿ ಸರ್ಪಾಶ್ರಯವೆಂಬ ಗುಹೆಯಲ್ಲಿ ಹೆಬ್ಬಾವಾಗಿ ಹುಟ್ಟಿದನು.

ಉಪರಿಚರ ಮಹಾರಾಜನ ಮಗನಾದ ಅನಂತವೀರ್ಯ ಮೊದಲಾದ ಮಂತ್ರಿ ಪರಿವಾರದವರು ಈ ಕೊಳದ ಮೇಲೆ ಈ ಹಾಸರೆಯನ್ನು ಯಾರು ತಂದಿಕ್ಕಿದರೋ ರಾಜರಾಣಿಯರಿಗೆ ಎಂತಹ ದುರವಸ್ಥೆ ಒದಗಿತೋ ಎಂದು ಚಿಂತಿಸುತ್ತಾ ಕೊಳದ ಮೇಲೆ ಮುಚ್ಚಿದ್ದ ಹಾಸರೆಯನ್ನೆತ್ತಲಾರದೆ ವ್ಯಸನಾಕುಲರಾಗಿ ಅರಮನೆಗೆ ಹಿಂದಿರುಗಿದರು. ದುಃಖಾಕ್ರಾಂತರಾಗಿ ಅರಮನೆಗೆ ಹಿಂದಿರುಗಿದ ಪರಿವಾರದವರ ದುಃಖವನ್ನು ಬುದ್ಧಿವಂತರು ಧರ್ಮಶ್ರವಣದಿಂದ ಮಾಣಿಸಿದರು. ಮಂತ್ರಿ ಸಾಮಂತರೇ ಮೊದಲಾದವರು ಒಟ್ಟುಗೂಡಿ ಅನಂತವೀರ್ಯನಿಗೆ ಅರಸು ಪಟ್ಟಕಟ್ಟಿದರು.

ಅನಂತವೀರ್ಯನು ಅರಸನಾದ ಕೆಲವೇ ದಿನಗಳಲ್ಲಿ ಸಾರಸ್ವತರೆಂಬ ಅವಧಿಜ್ಞಾನಿಗಳಾದ ಆಚಾರ್ಯರು ಐನೂರ್ವರು ಶಿಷ್ಯರೊಡನೆ ಬಂದು, ಶ್ರಾವಂತಿಪುರದ ಹೊರಗಣ ಉದ್ಯಾನದಲ್ಲಿ ಉಳಕೊಂಡರು. ಕೂಡಲೇ ಅನಂತವೀರ್ಯನು ಮಂತ್ರಿ ಪರಿವಾರ ಸಮೇತನಾಗಿ ಪೂಜಾದ್ರವ್ಯಗಳನ್ನು ತೆಗೆದುಕೊಂಡು ಉದ್ಯಾನಕ್ಕೆ ಹೋಗಿ ಸಾರಸ್ವತಾಚಾರ್ಯರನ್ನು ಕಂಡು ವಂದಿಸಿ ಅಷ್ಟವಿಧ ಅರ್ಚನೆಗಳಿಂದ ಅರ್ಚಿಸಿ ವಿನಯಪೂರ್ವಕ ವಂದಿಸಿ ಆಚಾರ್ಯರ ಬಳಿ ಕುಳಿತು ಧರ್ಮವನ್ನು ಕೇಳಿ ನಿರ್ಮಲಚಿತ್ತನಾಗಿ ತನ್ನ ತಂದೆ ಉಪರಿಚರ ಮಹಾರಾಜನಿಗೂ ತಾಯಂದಿರಿಗೂ ಯಾವ ಗತಿಯಾಗಿರಬಹುದೆಂದು ಕರುಣಿಸಿ ಹೇಳಬೇಕೆಂದು ಕೇಳಿಕೊಂಡನು. ಆಗ ಅವಧಿಜ್ಞಾನಿಗಳಾದ ಸಾರಸ್ವತಾಚಾರ್ಯರು ಉಪರಿಚರನಿಗೂ ಅವನ ರಾಣಿಯರಿಗೂ ಒದಗಿದ ದುರ್ಗತಿ ಸುಗತಿಗಳನ್ನು ಕಣ್ಣಲ್ಲಿ ಕಂಡಂತೆ ಪರಿಗ್ರಹ ಅಪರಿಗ್ರಹಗಳ ಪರಿಣಾಮವಿದೆಂದು ವಿವರಿಸಿ ಹೇಳಿದರು.

ತನ್ನ ತಂದೆಗೊದಗಿದ ದುರ್ಗತಿಯನ್ನು ಕೇಳಿದ ಅನಂತವೀರ್ಯನು ಚಿಂತಾಕ್ರಾಂತನಾಗಿ "ಆಚಾರ್ಯ, ದುರಾಗ್ರಹಿಯಾಗಿ ದುರ್ಗತಿಯನ್ನು ಪಡೆದ ನಮ್ಮ ತಂದೆಗೆ ಸದ್ಗತಿಯಾಗಬಹುದೋ ಎಂಬುದನ್ನು ದಯವಿಟ್ಟು ತಿಳಿಸಬೇಕು" ಎಂದು ಬೇಡಿಕೊಳ್ಳಲು, ಆಚಾರ್ಯರು "ನೀನು ಹೋಗಿ ಆ ಹೆಬ್ಬಾವಿಗೆ ಕೇಳಿಸುವಂತೆ ಧರ್ಮವನ್ನು ಹೇಳಬೇಕು. ಆಗ ಅದಕ್ಕೆ ಜಾತಿಸ್ಮರಣೆಯುಂಟಾಗಿ, ಮೊದಲ ಜನ್ಮದ ಅರಿವಾಗಿ ಧರ್ಮವನ್ನು ಕೈ ಕೊಳ್ಳುವುದು. ಆಗಲೇ ದೇವಲೋಕದಲ್ಲಿ ದೇವತೆಗಳಾಗಿ ಹುಟ್ಟಿದ ನಿನ್ನ ನಾಲ್ವರು ಜನನಿಯರು ಅಲ್ಲಿ ಬಂದು, ಜಿನಧರ್ಮದ ಮಹಿಮೆಯನ್ನೂ ಅಪರಿಗ್ರಹದಿಂದುಂಟಾದ ಮೇಲ್ಮೆಯನ್ನೂ ವಿವರಿಸಿ ಹೇಳುವರು" ಎಂದು ಉತ್ತರಿಸಿ ಅನಂತವೀರ್ಯನನ್ನು ಸಮಾಧಾನಪಡಿಸಿದರು.

ಅನಂತರ ಅನಂತವೀರ್ಯನು ಮುನಿಗಳಿಗೆ ವಂದಿಸಿ ಹೆಬ್ಬಾವು ವಾಸವಾಗಿದ್ದ ಗುಹೆಯ ಬಳಿಗೆ ಬಂದನು. ಅನಂತವೀರ್ಯನು ಬಂದ ಕೂಡಲೇ ಆ ಹೆಬ್ಬಾವು ಬುಸುಗುಟ್ಟುತ್ತಾ ಗುಹೆಯ ಬಾಗಿಲಲ್ಲಿ ಬಿದ್ದುಕೊಂಡಿತು. "ಹೆಂಗುಸರಾದರೂ ನನ್ನ ತಾಯಂದಿರು ಧೈರ್ಯದಿಂದ ಸಕಲ ಸಂಗ ಪರಿತ್ಯಾಗ ಮಾಡಿ ದೇವನಿವಾಸವನ್ನೈದಿದರು. ನನ್ನ ತಂದೆಯಾದ ನೀನು ವಿಾಸೆ ಹೊತ್ತ ಗಂಡುಸಾಗಿಯೂ ಪರಿಗ್ರಹ ಪರಿಪೀಡಿತನಾಗಿ ಹೆಬ್ಬಾವಾಗಿ ನವೆಯುವಂತಾಯಿತಲ್ಲವೇ? ಪರಿಗ್ರಹದಲ್ಲಿ ತೊಡಕಿ ಜಿನಪಾದಸೇವೆಯನ್ನು ಬಿಟ್ಟು ಪಾಪದ ಫಲದಿಂದ ಹಾವಾಗಿ ಹುಟ್ಟಿದೆಯಲ್ಲಾ! ಈಗಲಾದರೂ ಭೋಗದ ಮೋಹವನ್ನು ಬಿಟ್ಟು, ನಿರ್ಮಲಚಿತ್ತನಾಗು. ವಿಷಯಗಳ ಮೇಲಣ ಆಸೆಯಿಂದ ನೀನು ವಿಷಧರನಾದೆ. ಇನ್ನು ವಿಷವನ್ನೇ ಧರಿಸಿ ಕೊಂಡು ನರಕಭಾಜನನಾಗಬೇಡ" ಎಂದು ಅನಂತವೀರ್ಯನು ಹೇಳಿದ ಮಾತುಗಳನ್ನು ಮೊದಲ ಜನ್ಮದಲ್ಲಿ ಉಪರಿಚರನಾಗಿದ್ದ ಆ ಹೆಬ್ಬಾವು ಕಿವಿಗೊಟ್ಟು ಕೇಳಿತು. ಕೇಳಿ ಜಾತಿಸ್ಮರಣೆಯುಂಟಾಯಿತು. ಆಗ ದೇವಲೋಕದಲ್ಲಿ ದೇವತೆಗಳಾಗಿ ಹುಟ್ಟಿದ ಉಪರಿಚರ ಮಹಾರಾಜನ ಪತ್ನಿಯರು ಹೆಬ್ಬಾವಾಗಿ ಹುಟ್ಟಿದ್ದ ತಮ್ಮ ಪೂರ್ವಜನ್ಮದ ಪತಿರಾಜನಿಗೆ ಜಾತಿಸ್ಮರಣವಾದುದನ್ನು ಅವಧಿಜ್ಞಾನದಿಂದ ಅರಿತು, ಹೆಬ್ಬಾವಾಗಿ ಬಿದ್ದಿದ್ದ ರಾಜನಿಗೆ ಧರ್ಮವನ್ನು ತಿಳಿಸಲೆಂದು, ದೇವಲೋಕದಿಂದ ಹೊರಟು ತಮ್ಮ ಮೊದಲ ರೂಪ

ವನ್ನೇ ಧರಿಸಿ ಮನೋಹರೋದ್ಯಾನಕ್ಕೆ ಬಂದು ಹೆಬ್ಬಾವಾಗಿ ಬಿದ್ದಿದ್ದ ತಮ್ಮ ಪತಿಗೆ ಧರ್ಮತತ್ವವನ್ನು ಹೀಗೆ ತಿಳಿಸಿದರು:—“ತೊರೆವುದು ದುಃಪ್ಪರಿಗ್ರಹಮನೆಂದು ಜಿನೋಕ್ತಿಯಿನೆಮ್ಮ ಪೇಳ್ದುದಂ । ಮರೆದು ಪರಿಗ್ರಹಕ್ಕೆರಗಿ ದುರ್ಮತಿಯಿಂ ಮರಣಕ್ಕೆ ಗೂಡುಗೊಂ । ಡರಿತಮನೊಕ್ಕು ಸತ್ತುದುಃರಿತೋದಯದಿಂ ಫಣಿಯಾಗಿ ಪುಟ್ಟಿದೈ । ಕುರಿ ಪೆರರಾರೋ ನೀನೇ ಕುರಿ ನೀನೆ ಜಡಾತ್ಮನೆ ನೀನೆಗಾಂಪನೈ ॥” “ಮಹಾರಾಜ, ಮೊದಲು ನಾವು ಹೇಳಿದ ಧರ್ಮವನ್ನು ಕೇಳದೆ ನರಕಭಾಜನನಾದೆಯಲ್ಲಾ! ಜಿನಪಾದಪದ್ಮಗಳನ್ನು ತೊರೆದುದರಿಂದಲ್ಲವೇ ನಿನಗೀ ಅವಸ್ಥೆ ಬಂದುದು? ತೆರಳಿಯ ಹುಳುವಿನಂತೆ ಕಾರಣವಿಲ್ಲದೆ ನಿನ್ನನ್ನು ನೀನೇ ದುಷ್ಪರಿಣಾಮದಲ್ಲಿ ಸುತ್ತಿಕೊಂಡೆ. ಇನ್ನಾದರೂ, ಕಳವುವೋದ ಮನೆಯಂತೆ, ತುಡುಗಿತಿಂಬ ತೊತ್ತಿನಂತೆ ಕೊಲ್ಲದ ವ್ರತಕ್ಕೆ ಅಲಿಸಿ ನಡುಗದೆ, ಮೊದಲ್ಗೆಟ್ಟ ಹರದನಂತೆ ಗಳಿಗೆಗೊಂದನ್ನು ನೆನಸದೆ, ವನಿತೆಗೆ ಆಸೆಪಟ್ಟ ಋಷಿಯಂತೆ, ಶುಭಧ್ಯಾನದಿಂದ ಕೆಡದೆ, ಕಾಲೂರ ಸೂಳೆಯಂತೆ ದುರ್ಮತಕ್ಕೆ ತೊನೆಯದೆ, ಸನ್ಮಾರ್ಗಗಾಮಿಯಾಗಿ ಮೊದಲಿನ ಅವಗುಣಗಳನ್ನೆಲ್ಲಾ ಬಿಟ್ಟು, ನಿರ್ಮಲಚಿತ್ತದಿಂದ ಧರ್ಮದಲ್ಲಿ ಕೂಡಿ, ಜಿನಪಾದಸೇವೆ ಮಾಡಿ ಸ್ವರ್ಗಾಪವರ್ಗ ಸುಖಕ್ಕೆ ಭಾಜನನಾಗು” ಎಂದು ಧರ್ಮವನ್ನು ಬೋಧಿಸಿ ದೇವರೂಪವನ್ನು ಧರಿಸಿ ವಿಮಾನವೇರಿ ದೇವಲೋಕಕ್ಕೆ ತೆರಳಿದರು.

ಇದನ್ನೆಲ್ಲಾ ಕಂಡು ಅನಂತವೀರ್ಯ ಮಹಾರಾಜನೂ ಅವನ ಪರಿವಾರದವರೂ ಆಶ್ಚರ್ಯ ಆನಂದಗಳಲ್ಲಿ ತೇಲಾಡಿದರು; ಜಿನಪಾದಸೇವೆಯ ಮಹಿಮೆಯನ್ನು ಹೊಗಳುತ್ತಾ ಸಾರಸ್ವತ ಮುನಿಗಳ ಬಳಿಗೆ ಬಂದು ಮನೋಹರೋದ್ಯಾನದಲ್ಲಿ ನಡೆದ ವಿಷಯವನ್ನೆಲ್ಲಾ ಒಂದೂ ಬಿಡದೆ ವಿವರಿಸಿ ನಿವೇದಿಸಿದರು. ಇದನ್ನು ಕೇಳಿ ಸಾರಸ್ವತ ಮುನಿಗಳು “ಮಹಾರಾಜ, ನಿನ್ನ ತಂದೆಗೆ ಇನ್ನು ಹದಿನೈದು ದಿನಗಳ ವರೆಗೆ ಸರ್ಪಜೀವನವಿರುವುದು. ಆದುದರಿಂದ ನಾವೀಗಲೇ ಅಲ್ಲಿಗೆ ಹೋಗಿ ಆತನಿಗೆ ಧರ್ಮೋಪದೇಶ ಮಾಡುವೆವು” ಎಂದು ಹೇಳಿ ಸಾರಸ್ವತ ಮುನಿಗಳು ತನ್ನ ಐನೂರ್ವರು ಶಿಷ್ಯರನ್ನು ಕೂಡಿಕೊಂಡು ಅನಂತವೀರ್ಯನೊಡನೆ ಮನೋಹರೋದ್ಯಾನದ ಸರ್ಪಾಶ್ರಯ ಗುಹೆಯ ಬಳಿಗೆ ಬಂದರು.

"ಎಲೈ ಸರ್ಪ! ನಿನಗಿನ್ನು ಹದಿನೈದು ದಿನಗಳ ಆಯುಷ್ಯವಿದೆ. ಹಿಂದಿನ ಜನ್ಮದಲ್ಲಿ ರಾಜನಾಗಿದ್ದ ನೀನು ಪರಿಗ್ರಹಪರೀತನಾಗಿ ಐಶ್ವರ್ಯಕ್ಕೆ ಆಸೆ ಪಟ್ಟು ಜಡಾತ್ಮನಾದ ಸರ್ಪಜನ್ಮವನ್ನು ಪಡೆದೆ. ಜಿನಪಾದಪದ್ಮಸ್ಮರಣೆಯಿಂದ ನಿನ್ನ ಪತ್ನಿಯರು ಎಂತಹ ಸುಗತಿಯನ್ನೈದಿದರೆಂಬುದು ನಿನಗರಿಯದುದಲ್ಲ. ಆದುದರಿಂದ, "ಜಿನರೂಪಸ್ಮರಣೆಯೆ ಜೀ । ವನಿಕಾಯಕ್ಕಾರ್ಯಂ ಆತ್ಮ ಹಿತಂ ಅಘಹರಣಂ। ಜಿನನುತಮುಪವರ್ಗ ಶ್ರೀ । ವನಿತೆಯ ಕೊಡವಮರ ಪತಿಯ ಲಕ್ಷ್ಮಿಯ ತಿಲಕಂ ॥" ಎಂದು ಹೇಳಿ ಪಂಚಾಣುವ್ರತಗಳನ್ನು ಉಪ ದೇಶಿಸಿದರು. ಇನ್ನು ಸನ್ಯಾಸಧರ್ಮದ ಮಹತ್ವವೆಂತೆಂದರೆ; "ಸನ್ಯಾಸ ವನ್ನು ಕೈಕೊಂಡ ಮಹಾತ್ಮನ ಕರ್ಮವು ಕಿಚ್ಚು ಹಿಡಿದ ಕೆಂಡದಂತೆ ಬೂದಿ ಯಾದೀತು, ಸಿಡಿಲು ತಾಗಿದ ಬೆಟ್ಟದಂತೆ ನುಚ್ಚುನೂರಾದೀತು, ಸೂರ್ಯರಶ್ಮಿ ತಾಗಿದ ಮಂಜಿನಂತೆ ಕರಗಿ ಹೋದೀತು." ಎಂದು ಮೊದಲಾಗಿ ಧರ್ಮೋಪ ದೇಶಂಗೈದರು. ಅನಂತವೀರ್ಯ ಮಹಾರಾಜನು ಆ ಹದಿನೈದು ದಿನಗಳ ವರೆಗೆ ಜಿನಪೂಜಾದಿ ಧರ್ಮಕಾರ್ಯಗಳನ್ನು ಗೈಯುತ್ತಿದ್ದನು. ಹೆಬ್ಬಾ ವಾಗಿದ್ದ ಉಪರಿಚರನು ಧರ್ಮಶ್ರವಣ ಮಾಡುತ್ತ ವಜ್ರದಾಡನು ತನಗೆಗೈದ ಕೇಡನ್ನು ನೆನೆಯುತ್ತಾ ಆಚಾರ್ಯರು ಹೇಳಿದ ದಿನಕ್ಕೆ ಸರಿಯಾಗಿ ದೇಹ ಬಿಟ್ಟು ವ್ಯಂತರಕುಲದಲ್ಲಿ ವಿಮಲನೆಂಬ ದೇವನಾಗಿ ಹುಟ್ಟಿದನು.

ಅನಂತವೀರ್ಯ ಮಹಾರಾಜನು ಅವಧಿಜ್ಞಾನಿಗಳಾದ ಸಾರಸ್ವತ ಮುನಿಗಳನ್ನು ಮತ್ತೊಮ್ಮೆ ಕಂಡು ಹೆಬ್ಬಾವಾಗಿ ಸತ್ತ ತನ್ನ ತಂದೆಯು ಯಾವ ಗತಿಯನ್ನೈದಿದನೆಂದು ವಿಚಾರಿಸಿದನು. ಅದಕ್ಕಾ ಮುನಿಗಳು, "ಉಪರಿಚರ ಮಹಾರಾಜನು ಭವನವಾಸಿಗಲೋಕದಲ್ಲಿ ವ್ಯಂತರದೇವನಾಗಿ ಹುಟ್ಟಿರುವನೆಂದೂ, ಆತನು ತಾನು ದೇಹಬಿಡುವ ಕಾಲದಲ್ಲಿ ವಜ್ರದಾಡನ ಮೇಲೆ ದ್ವೇಷವಿರಿಸಿದುದೇ ಕಾರಣವೆಂದೂ ಹೇಳಿದರು. ಇದನ್ನು ಕೇಳಿ ಅನಂತವೀರ್ಯ ಮಹಾರಾಜನು ಆಶ್ಚರ್ಯಗೊಂಡವನಾಗಿ, ತನ್ನ ಮಗ ಸುಬಾಹುಕುಮಾರನಿಗೆ ಪಟ್ಟಕಟ್ಟಿ ಜಿನದೀಕ್ಷೆ ಪಡೆದು ಮುಂದೆ ಅತಿ ಉಗ್ರ ವಾದ ತಪಸ್ಸು ಮಾಡಿ ಸಮ್ಮೇದಶಿಖರದಲ್ಲಿ ನಿರ್ವಾಣಪದವಿಯನ್ನೈದಿದನು.

ಉಪರಿಚರ ಮಹಾರಾಜನು ಭವನವಾಸಿಗನಾಗಿ ವಿಮಲದೇವನೆಂಬ ಹೆಸರಿನಿಂದ ಜನ್ಮವೆತ್ತಿದ್ದನಷ್ಟೆ! ಅವನು ಒಮ್ಮೆ ತನ್ನ ಪೂರ್ವವೈರಿಯಾದ

ವಜ್ರದಾಡನನ್ನು ಕಂಡಾಗ ವಿಭಂಗಜ್ಞಾನದಿಂದ ಪೂರ್ವವೈರಿಯೆಂದು ತಿಳಿದು ಆ ಪೂರ್ವವೈರವನ್ನು ನೆನೆದು ವಜ್ರದಾಡನನ್ನು ಹಿಡಿದು ಹೆಡೆಮುರಿ ಕಟ್ಟಿ, ಅವನ ಅರಸಿಯರನ್ನು ಸೆರೆ ಹಿಡಿದು, "ದುಷ್ಟನೇ, ನೀನು ನನ್ನನ್ನೂ ನನ್ನ ಅರಸಿಯರನ್ನೂ ಮತ್ಸರದಿಂದ ಕೊಂದಂತೆ ಈಗ ನಿನ್ನನ್ನೂ ನಿನ್ನ ಅರಸಿಯರನ್ನೂ ಕೊಲ್ಲದೆ ಬಿಡುವೆನೇ?" ಎನ್ನುತ್ತಾ ಸಮುದ್ರದಲ್ಲಿ ಮುಳುಗಿಸಿ ಮುಳುಗಿಸಿ ಕೊಂದನು. ವಜ್ರದಾಡನು ರೌದ್ರಧ್ಯಾನದಿಂದ ಸತ್ತು ನರಕಗತಿಯನ್ನು ಪಡೆದನು.

ಆ ಕಾಲದಲ್ಲಿ ಹಸ್ತಿನಾಪುರವನ್ನು ಜಯದತ್ತ ಮಹಾರಾಜನು ಆಳುತ್ತಿದ್ದನು. ಅವನಿಗೆ ಮಕ್ಕಳಿರಲಿಲ್ಲ; ಒಂದು ದಿನ ಅವನ ಪಟ್ಟದರಸಿ ವಿಜಯ ಮಹಾದೇವಿ ಗುರುದತ್ತ ಭಟ್ಟಾರಕರನ್ನು ವಂದಿಸಿ ಪುತ್ರಸಂತಾನವನ್ನು ಬೇಡಿದಳು. ಆಗ ಗುರುಗಳು "ಮಗಳೆ, ನಿನಗೆ ಜಿನಧರ್ಮಪರನಾದ ಸತ್ಪುತ್ರನು ಹುಟ್ಟಲಿರುವನು" ಎಂದು ಹರಸಿ ಕಳುಹಿಸಿದರು. ಇದಾದ ಕೆಲವು ತಿಂಗಳಲ್ಲಿ ಭವನವಾಸಿಗನಾದ ವಿಮಲದೇವನು ವಿಜಯ ಮಹಾದೇವಿಗೆ ಮಗನಾಗಿ ಜನಿಸಿದನು. ಗುರುದತ್ತ ಭಟ್ಟಾರಕರ ಆಶೀರ್ವಾದದಿಂದ ಹುಟ್ಟಿದ ಮಗನಿಗೆ ಜಯದತ್ತ ಮಹಾರಾಜನು ಗುರುದತ್ತನೆಂದು ನಾಮಕರಣ ಮಾಡಿದನು. ಗುರುದತ್ತನು ದಿನದಿಂದ ದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಗೊಳ್ಳುತ್ತಾ ಪರಮ ಜಿನಭಕ್ತನೂ ಸಕಲಶಾಸ್ತ್ರ ಪರಿಣತನೂ ಆದನು. ಪ್ರಾಯಕ್ಕೆ ಬಂದ ಬುದ್ಧಿವಂತನಾದ ಮಗನಿಗೆ ವಿಜಯದತ್ತನು ರಾಜ್ಯಾಭಿಷೇಕ ಮಾಡಿ, ತಾನು ಸುಧರ್ಮ ಭಟ್ಟಾರಕರಲ್ಲಿ ಜಿನದೀಕ್ಷೆಯನ್ನು ಕೈಕೊಂಡನು.

ಹಸ್ತಿನಾಪುರದ ಪಟ್ಟವನ್ನೇರಿ ಪ್ರಜೆಗಳನ್ನು ಉತ್ತಮ ರೀತಿಯಿಂದ ಪಾಲಿಸುತ್ತಿದ್ದ ಗುರುದತ್ತ ಮಹಾರಾಜನು ಚಂಪಾಪುರದ ಧಾತ್ರೀವಾಹನನ ಮಗಳು ಅಭಯಮತಿಯನ್ನು ಮದುವೆಯಾಗಲೆಳಸಿ, ಕನ್ಯೆಯನ್ನು ಬೇಡಿ ಹೆಗ್ಗಡೆಗಳನ್ನಟ್ಟಿದನು. ಧಾತ್ರೀವಾಹನನು ಈ ಬೇಡಿಕೆಗೆ ಕಿವಿಗೊಡಲಿಲ್ಲ. ಇದನ್ನು ಕೇಳಿ ಸಿಟ್ಟಿಗೆದ್ದ ಗುರುದತ್ತನು ಸೈನ್ಯ ಸಮೇತನಾಗಿ ಹೋಗಿ ಚಂಪಾಪುರಕ್ಕೆ ಮುತ್ತಿಗೆ ಹಾಕಿದನು. ತನಗಾಗಿ ರಾಜ್ಯಕ್ಕೆ ಸಂಕಟ ಬಂತೆಂದು ತಿಳಿದ ಅಭಯಮತಿ ಜಿನಧರ್ಮಪರಾಯಣನಾದ ಗುರುದತ್ತನನ್ನಲ್ಲದೆ ತಾನು

ಇತರರನ್ನು ಮದುವೆಯಾಗುವುದಿಲ್ಲ. ನನಗಾಗಿ ಯುದ್ಧ ಬೇಡ" ಎಂದು ತನ್ನ ತಂದೆಗೆ ತಿಳಿಸಿದಳು. ಮಗಳ ಮಾತನ್ನು ಕೇಳಿ ಸಂತಸಗೊಂಡ ಧಾತ್ರೀವಾಹನನು ಗುರುದತ್ತ ಮಹಾರಾಜನನ್ನು ಸಂಭ್ರಮದಿಂದ ಬರಮಾಡಿ ಕೊಂಡು ಮಗಳನ್ನು ಕೊಟ್ಟು ಮದುವೆ ಮಾಡಿದನು. ಗುರುದತ್ತ ಮಹಾ ರಾಜನು ಅಭಯಮತಿಯನ್ನು ಪಟ್ಟದರಸಿಯನ್ನಾಗಿ ಮಾಡಿ, ಹಸ್ತಿನಾಪುರಕ್ಕೆ ಬಂದು ಸುಖದಿಂದ ರಾಜ್ಯವಾಳುತ್ತಿದ್ದನು.

ನರಕಗತಿಯನ್ನು ಹೊಂದಿದ ವಜ್ರದಾಡನು ಕುರುಜಾಂಗಣದ ನೀಲ ಗಿರಿ ಎಂಬ ಪರ್ವತದಲ್ಲಿ ತನ್ನ ಕರ್ಮವೇ ಕಾರಣವಾಗಿ ಹುಲಿಯಾಗಿ ಹುಟ್ಟಿ ಸುತ್ತಮುತ್ತಲಿನ ನಾಡವರಿಗೆ ಉಪಟಳ ಕೊಡತೊಡಗಿದನು. ಹುಲಿಯ ಉಪಟಳ ಸಹಿಸಲಾರದ ನಾಡವರು ಗುರುದತ್ತ ಮಹಾರಾಜನಲ್ಲಿಗೆ ಬಂದು ದೂರಿಕೊಂಡರು. ಮಹಾರಾಜನೂ ಪೂರ್ವ ವೈರವನ್ನು ನೆನೆದು ಬೇಡ ಪಡೆಯೊಡನೆ ನೀಲಗಿರಿಗೆ ಹೋಗಿ ಹುಲಿಯಿದ್ದ ಗುಹೆಗೆ ಕಸಕಡ್ಡಿ ತುಂಬಿ ಕಿಚ್ಚೊಟ್ಟಿದನು. ಹುಲಿ ಗುಹೆಯೊಳಗೆ ಉಸಿರು ಕಟ್ಟಿ ಬೆಂದು ಸತ್ತು, ಪಳ್ಳಿಖೇಟ ಎಂಬ ಊರಲ್ಲಿ ಇಳಾಭರಣನೆಂಬ ಬ್ರಾಹ್ಮಣನಿಗೆ ಹಲಮುಖನೆಂಬ ಮಗನಾಗಿ ಹುಟ್ಟಿತು.

ಒಮ್ಮೆ ಅಮೃತಾಶ್ರಯರೆಂಬ ಮುನಿಗಳು ಗುರುದತ್ತ ಮಹಾರಾಜನ ಪುರಕ್ಕೆ ಆಗಮಿಸಿದರು. ಆಗ ಮಹಾರಾಜನು ಮುನಿಗಳನ್ನು ಕಂಡು ವಂದಿಸಿ, ಧರ್ಮವನ್ನು ಕೇಳಿ ತನ್ನ ಪೂರ್ವಭವದ ವೃತ್ತಾಂತಗಳನ್ನೂ ಕೇಳಿ ದನು. ಗುರುದತ್ತ ಮುನಿಗಳು ಹಿಂದಣ ನಾಲ್ಕು ಜನ್ಮಗಳ ವೃತ್ತಾಂತ ವನ್ನೂ ಅರುಹಿದರು. ಆ ಮೇಲೆ ಅಭಯಮತಿದೇವಿಯೂ ತನ್ನ ಪೂರ್ವ ಭವಗಳ ಚರಿತೆಯನ್ನು ನಿರೂಪಿಸಬೇಕೆಂದು ಮುನಿಗಳನ್ನು ಕೇಳಿಕೊಂಡರು. ಅದಕ್ಕೆ ಮುನಿಗಳು ಕೊಟ್ಟ ಉತ್ತರವಿಂತಿತ್ತು:—

"ಚಂಪಾಪುರದಲ್ಲಿ ಗರುಡವೇಗನೆಂಬ ಒಬ್ಬ ಬೇಡನಿದ್ದನು. ಅವನ ಮಡದಿ ಗೋಮುಖಿ ಎಂಬಾಕೆ ಒಮ್ಮೆ ಶ್ರಾವಕ ಜನರು ಸಮಾಧಿಗುಪ್ತಾ ಚಾರ್ಯರ ಬಳಿಗೈದಿ ವ್ರತಗಳನ್ನು ಕೈಕೊಳ್ಳುವುದನ್ನು ಕಂಡು ತಾನೂ ಗುರುಗಳಿಗೆರಗಿ ಪಂಚಾಣುವ್ರತಗಳನ್ನು ಕೈಕೊಂಡು ಮನೆಗೆ ಹಿಂದಿರುಗಿ ಬಂದಳು. ಮನೆಯಲ್ಲಿ ತನ್ನ ಪತಿ ಬಲೆ ಬೀಸಿ ತಂದಿಟ್ಟಿದ್ದ ಹಕ್ಕಿಗಳ ನ್ನೆಲ್ಲಾ ಹೋಗಬಿಟ್ಟಳು. ಇದನ್ನು ಕಂಡ ಗರುಡವೇಗನು ಕೋಪಗೊಂಡು

ಹೆಂಡತಿಗೆ ಬಡಿಯಲು, ಆಕೆ ಗಂಡನ ಮನೆ ಬಿಟ್ಟು ನೆಂಟರ ಮನೆಯಲ್ಲಿ ವಾಸಿಸತೊಡಗಿದಳು. ಒಮ್ಮೆ ಆಕೆ ಧಾತ್ರೀವಾಹನನ ಐಶ್ವರ್ಯ ವಿಭವ ವನ್ನು ಕಂಡು ಆ ವಿಭವದ ಮೇಲೆ ಆಸೆಗೊಂಡು ಕೆಲವೇ ದಿನಗಳಲ್ಲಿ ದೇಹಬಿಟ್ಟಳು. ಪಂಚಾಣು ವ್ರತದ ಫಲವಾಗಿ ಪೂರ್ವಜನ್ಮದಲ್ಲಿ ಆ ಬೇಡತಿ ಯಾದ ನೀನು ಧಾತ್ರೀವಾಹನನ ಮಗಳಾಗಿ ಜನಿಸಿದೆ" ಎಂದು ಮುನಿ ಗಳು ಪತಿಪತ್ನಿಯರ ಪೂರ್ವಭವ ವೃತ್ತಾಂತಗಳನ್ನು ತಿಳಿಸಿದರು.

ತಂತಮ್ಮ ಪೂರ್ವಭವದ ವೃತ್ತಾಂತಗಳನ್ನು ಕೇಳಿ ಸಂಸಾರದಲ್ಲಿ ವಿರಕ್ತಿ ಹೊಂದಿದ ಆ ರಾಜದಂಪತಿಗಳು ಮುನಿಗಳಿಗೆ ವಂದಿಸಿ, ಆಶೀರ್ವಾದ ಪಡೆದು ಅರಮನೆಗೆ ಹಿಂದಿರುಗಿದರು. ಗುರುದತ್ತ ಮಹಾರಾಜನು ಕೂಡಲೇ ತನ್ನ ಹಿರಿಯ ಮಗನಾದ ಶ್ರೀದತ್ತನಿಗೆ ರಾಜ್ಯಭಾರವನ್ನೊಪ್ಪಿಸಿ, ಅಮೃತಾಸ್ರವ ಭಟ್ಟಾರಕರಿಂದ ಜಿನದೀಕ್ಷೆ ಪಡೆದು ಗುರುದತ್ತ ಭಟಾರರೆಂಬ ಹೆಸರು ಪಡೆದು ಏಕವಿಹಾರಿಗಳಾದರು. ಅಭಯಮತಿ ರಾಣಿ ಸುವ್ರತಗಂತಿಯ ರಿಂದ ಜಿನದೀಕ್ಷೆ ಪಡೆದು ತಪಸ್ವಿನಿಯಾಗಿ ಸಮಾಧಿಮರಣದಿಂದ ದೇಹ ಬಿಟ್ಟು ಕಾಪಿಥವೆಂಬ ಎಂಟನೆಯ ಕಲ್ಪದಲ್ಲಿ ಮಿತಕಾಂತನೆಂಬ ದೇವನಾಗಿ ಹುಟ್ಟಿದಳು.

ಇತ್ತ ಗುರುದತ್ತ ಭಟಾರರು ಏಕವಿಹಾರಿಗಳಾಗಿ ಸಂಚರಿಸುತ್ತಾ ಒಮ್ಮೆ ಪಳ್ಳಿಖೇಡಕ್ಕೆ ಬಂದರು. ಬಂದು ಯತ್ರಾಸ್ತಮಿತವಾಸಿಗಳಪ್ಪುದ ರಿಂದ ಊರಹೊರಗಣ ಹೊಲಕ್ಕೆ ಬರುವಷ್ಟರಲ್ಲಿ ಸೂರ್ಯಾಸ್ತವಾದುದರಿಂದ ಮುಂದೆ ಹೋಗದೆ, ಅಲ್ಲೆ ಪ್ರತಿಮಾಯೋಗದಲ್ಲಿ ನಿಂತುಬಿಟ್ಟರು. ಮರು ದಿನ ಬೆಳಗಾದಾಗ ಹಿರಿದಾದ ಮಳೆ ಪ್ರಾರಂಭವಾಗಲು ಮುಂದುವರಿಯದೆ ಅಲ್ಲೇ ಸೂರ್ಯ ಪ್ರತಿಮಾಯೋಗದಲ್ಲಿ ನಿಂತರು. ಆಗ ಹಲಮುಖನು ಹೊಲವನ್ನುಳಲೆಂದು ಮುನಿಗಳು ಪ್ರತಿಮಾಯೋಗದಲ್ಲಿ ನಿಂತಿದ್ದ ಹೊಲಕ್ಕೆ ಬರಲಾಗಿ ಮಳೆಯಿಂದ ಆ ಮೂಡಣ ಹೊಲ ತುಂಬಿ ಹೋಗಿ ಹೊಲವನ್ನುಳ ಲಾರದೆ, ಪಡುವಣ ಹೊಲಕ್ಕೆ ಹೊರಟು, ತನ್ನ ಹೆಂಡತಿ ಅನ್ನ ತಂದರೆ ಪಡುವಣ ಹೊಲಕ್ಕೆ ತರಲು ಹೇಳಿರೆಂದು ಮುನಿಗಳ ಬಳಿ ಹೇಳಿ ಪಡು ವಣ ಹೊಲಕ್ಕೆ ಹೊರಟು ಹೋದನು. ಹಲಮುಖನು ಹೊತ್ತು ನೆತ್ತಿಗೇರುವ ವರೆಗೂ ಹೊಲವನ್ನು ಉತ್ತು, ಹೆಂಡತಿ ಅನ್ನ ತಾರದುದನ್ನು ಕಂಡು ಹಸಿವೆ ಯಿಂದಲೂ ಸಿಟ್ಟಿನಿಂದಲೂ ಉರಿಯುತ್ತಾ ಮನೆಗೆ ಬಂದು ಅನ್ನ ತಂದಿಲ್ಲವೇ ಕೆಂದು ಆಕೆಗೆ ಬಡಿದು, "ನಾನು ಪಡುವಣ ಹೊಲದಲ್ಲಿದ್ದೆನೆಂದು ಮುನಿ ಹೇಳ

ಲಿಲ್ಲವೇ?" ಎಂದು ವಿಚಾರಿಸಿದನು. ಅದಕ್ಕಾಕೆ ಗಂಡನಿಗೆ ಹೆದರಿ ಮ
ಹೇಳಲಿಲ್ಲವೆಂದಿಷ್ಟೇ ಹೇಳಿ ಸುಮ್ಮಗಾದಳು.

ಹೆಂಡತಿಯು ಮಾತು ಕೇಳಿದೊಡನೆಯೇ ಹಲಮುಖನಲ್ಲಿ ಪೂ
ವೈರ ಉರಿದೆದ್ದಿತು. ಅವನು ಈಗಲೇ ಈ ಮುನಿಯನ್ನು ಸುಟ್ಟು ಬಿಡ
ನೆಂದು ನಿಶ್ಚಯಿಸಿ, ಹರಕು ಚಿಂದಿಗಳನ್ನು ಎಣ್ಣೆಯಲ್ಲದ್ದಿ ತಂದು ಪ್ರತಿಮ
ಯೋಗದಲ್ಲಿ ನಿಂತಿದ್ದ ಮುನಿಯ ಮೈಗೆ ಸುತ್ತಿ ಕಿಚ್ಚೊಟ್ಟಿದನು! ಮೈಸು
ತೆಂದು ಗುರುದತ್ತ ಭಟಾರರು ಬೆಚ್ಚಿದರೆ! ಚೆದರಿದರೆ! ಪೂರ್ವ ವೈರವ
ದರೂ ನೆನೆದರೆ! ಒಂದೂ ಇಲ್ಲ. "ಇದೆಲ್ಲಾ ಕರ್ಮಫಲ, ಈ ಕರ
ವನ್ನೆ ಕರಗಿಸಬೇಕು" ಎಂದು ಮುಗಿಲು ತುಂಬಿದ ಮದುವೆ, ಮಣ್ಣು ಬ
ಸಿದ ನೀರು, ಗಸಿ ಬೆರೆತ ಎಣ್ಣೆ, ನೀರು ಬೆರಸಿದ ಹಾಲು ಹೇಗೆ ಲೇಸಲ್ಲವೊ
ಹಾಗೆಯೇ ಶರೀರದ ಪರಿಗ್ರಹದ ಮೋಹದಿಂದ ಕೂಡಿದ ಧ್ಯಾನವ
ಲೇಸಲ್ಲ. ಮತ್ತೆ, "ಮುಳ್ಳಿಗಾಗಿ ಮೆಟ್ಟನ್ನೂ, ಮಗಳಿಗಾಗಿ ಅಳಿಯನನ್ನ
ಕೆಲಸಕ್ಕಾಗಿ ಸೇವಕನನ್ನೂ ಪರಿಗ್ರಹಿಸುವಂತೆ ಶರೀರ ಬದುಕಲು ಬೇಕ
ದಷ್ಟು ಮಾತ್ರ ಪರಿಗ್ರಹವಿರಬೇಕು. ರಸ ಬಂದ ಮೇಲೆ ತಾಂಬೂಲವನ್ನೂ
ಬೆಳಸು ಬಂದ ಮೇಲೆ ನೆಲವನ್ನು ಬಿಡುವಂತೆ ತನ್ನ ಕಾರ್ಯ ತೀರಿದ ಕೂಡಲೆ
ತನ್ನ ಶರೀರವನ್ನೂ ಪರಿಗ್ರಹವನ್ನೂ ತ್ರಿಶುದ್ಧಿಯಿಂದ ಬಿಟ್ಟು ಪರಿಚ್ಛೇ
ಯಾಗುವುದು ನೀತಿ" ಎಂದು ಶರೀರವನ್ನು ಪರಿಗ್ರಹವನ್ನೂ ತೊರೆದ
ಶುಕ್ಲಧ್ಯಾನದಿಂದ ಘಾತಿಕರ್ಮಗಳನ್ನು ಕೆಡಿಸಿ ಕೇವಲಜ್ಞಾನಿಗಳಾದರು
ಆಗಲೇ ದೇವಾದಿದೇವತೆಗಳು ಬಂದು ಕೇವಲಿಪೂಜೆ ಮಾಡಿ ಅನೇಕ
ವಿಧದ ಸ್ತೋತ್ರಗಳಿಂದ ಸ್ತುತಿಸಿದರು. ಇದನ್ನು ಕಂಡು ಅವನು ಹ
ಮುಖನಲ್ಲಿ ಜ್ಞಾನೋದಯವಾಯಿತು. ಕೂಡಲೇ ಮುನಿಗಳಿಗೆರಗಿ ತನ
ಪೂರ್ವಭವವನ್ನು ಕೇಳಿ ಸಂಸಾರಕ್ಕೆ ಹೇಸಿ ವಿರಕ್ತನಾಗಿ ಜಿನದೀಕ್ಷೆಯನ್ನು
ಕೈ... ...ಯಾದನು. ಗುರುದತ್ತ ಭಟಾರಕರು ಅಲ್ಲೇ ಪಳ್ಳಿಬೇಡ
ದ... ...ಜಾತಿ ಜರಾಮರಣ ವರ್ಜಿತವಾದ ನಿರ್ವಾಣ
... ...ರಿಗ್ರಹಮಂ ಪಿಡಿ । ದಿರದೆ ಜಿನೇಂದ್ರಾ
... ...ಸಂಗೆ ತಡೆಯದಕ್ಷಯ ಸಿರಿಯ
ಕ್ಕ... ...ನಯಸೇನ ಮುನಿಕೃತ ಧರ್ಮಾ
ಮೃತದಲ್ಲಿ ... ...ಮುಗಿದುದು.

...ಶ್ರೀ